1954

ಶ್ರೀ ಸಂಗಮೇಶ ಪ್ರಕಾಶನ
ಹರಿಹರ


ಕೆದರಿದ ಕೆಂಡ
ಮರುಳಸಿದ್ಧ

" ಕೆ ದ ರಿ ದ ಕೆಂ ಡ . "

—()—

"ಮರುಳಸಿದ್ಧ"

ಪ್ರಕಾಶಕರು :

ಶ್ರೀ ಸಂಗಮೇಶ ಪ್ರಕಾಶನ, ಹರಿಹರ.

ಮೊದಲ ಮುದ್ರಣ ೧೯೫೪.

ಮುಖಚಿತ್ರ:
ರಾಮಚಂದ್ರರಾವ್ ನವಲೆ.

ರಕ್ಷಾಪತ್ರದ ಮುದ್ರಣ:
ಶಾರದಾ ಪ್ರೆಸ್, ಮಂಗಳೂರು ೧.

ಬೆಲೆ: ೦—೧೨—೦.

ಮುದ್ರಕರು:
ವಿದ್ಯಾರಣ್ಯ ಮುದ್ರಕರು ಮತ್ತು ಪ್ರಕಾಶಕರು ಲಿಮಿಟೆಡ್,
ಹ ರಿ ಹ ರ .

ಪ್ರಕಾಶಕರ ನುಡಿ.

ಇತ್ತೀಚೆಗೆ ಪ್ರಕಟವಾಗುತ್ತಿರುವ ಕೈ-ಹೊತ್ತಿಗೆಗಳಿಗೆ ಕನ್ನಡ ಜನತೆ ಇತ್ತಿರುವ ಪ್ರೋತ್ಸಾಹನದಿಂದಾಗಿ ಸ್ಫೂರ್ತಿಗೊಂಡು, ಉತ್ತಮ ಕೃತಿಗಳನ್ನು ಸುಲಭ ಬೆಲೆಗೆ ನೀಡಬೇಕೆಂಬ ಘನ ಉದ್ದೇಶದಿಂದ ನಾವೀಗ "ಶ್ರೀ ಸಂಗಮೇಶ ಪ್ರಕಾಶನ" ಸಂಸ್ಥೆಯನ್ನು ಪ್ರಾರಂಭಿದ್ದೇವೆ. "ಕೆದರಿದ ಕೆಂಡ" ವನ್ನು ನಮ್ಮ ಮೊದಲನೆಯ ಕೈ-ಹೊತ್ತಿಗೆಯಾಗಿ ಪ್ರಕಟಿಸಿದ್ದೇವೆ. ಉದಾರಶೀಲರಾದ ಕನ್ನಡಿಗರು ನಮ್ಮ ಈ ಪ್ರಕಟನೆಯನ್ನು ಆದರದಿಂದ ಸ್ವಾಗತಿಸುವುದರ ಮೂಲಕ ನಮ್ಮ ಮುಂದಿನ ಪ್ರಕಟನಾಕಾರ್ಯಕ್ಕೆ ಇನ್ನೂ ಹೆಚ್ಚಿನ ಸ್ಫೂರ್ತಿಯನ್ನು ನೀಡುವರಾಗಿ ನಂಬಿದ್ದೇವೆ.

ನಮ್ಮೀ ಪ್ರಕಾಶನ ಕಾರ್ಯಕ್ಕೆ ಪ್ರೊತ್ಸಾಹವನ್ನಿತ್ತ ಶ್ರೀ ಹೆಚ್. ದೇವೀರಪ್ಪ, ಎಂ.ಎ., ಮೈಸೂರು, ಶ್ರೀ ಬಸವರಾಜ ಕಟ್ಟೀಮನಿ, ಶ್ರೀ ಕೋ. ಚನ್ನಬಸಪ್ಪ ಬಳ್ಳಾರಿ, ಶ್ರೀ ಬಿ. ಜಿ. ಕೊಟ್ರಪ್ಪ ಅಡ್ವೊಕೇಟ್ ದಾವಣಗೆರೆ, ಹಿರಿಯೂರು ಕೃಷ್ಣಮೂರ್ತಿ ಇವರಿಗೆ ನಮ್ಮ ಕೃತಜ್ಞತೆಗಳನ್ನರ್ಪಿಸುತ್ತೇವೆ. ಕನ್ನಡ ಕೈ-ಹೊತ್ತಿಗೆಗಳನ್ನು ಪ್ರಚಾರಕ್ಕೆ ತಂದು ಕನ್ನಡ ಜನತೆಯಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಲು ಕಾರಣ ಕರ್ತರಾದ ವಾಹಿನಿ ಮತ್ತು ವಿದ್ಯಾನಿಧಿ ಪ್ರಕಟನಾ ಸಂಸ್ಥೆಗಳ ವ್ಯವಸ್ಥಾಪಕರನ್ನು ಈ ಸಂಧರ್ಭದಲ್ಲಿ ಸ್ಮರಿಸದೇ ಇರಲಾರೆವು.

ಉದಯೋನ್ಮುಖ ತರುಣ ಸಾಹಿತಿ ಶ್ರೀ "ಮರುಳಸಿದ್ಧ
ತಮ್ಮ "ಕೆದರಿದ ಕೆಂಡ"ವನ್ನು ನಮ್ಮ ಮೊದಲ ಕೈ-ಹೊ
ಯಾಗಿ ಪ್ರಕಟಿಸಲು ಅನುಮತಿಯನ್ನಿತ್ತುದಕ್ಕಾಗಿ ತುಂ
ಉಪಕೃತರಾಗಿದ್ದೇವೆ. ಆದಷ್ಟು ಕಡಿಮೆ ಬೆಲೆಗೆ ಈ ಕೈ-ಹೊ
ಯನ್ನು ಕೊಡಲು ನೆರವಾದ ಜಾಹೀರಾತುದಾರರದೂ ಒ
ಸಹಾಯವೆಂದೇ ಬಗೆದು ಅವರಿಗೂ ಹೃತ್ಪೂರ್ವಕ ವಂದನೆ
ನ್ನರ್ಪಿಸುತ್ತೇವೆ. ನಮ್ಮ ಕಾರ್ಯದಲ್ಲಿ ದಾರಿಯ ಬೆಳಕ
ಮಾರ್ಗದರ್ಶನಮಾಡಿರುವ "ಪ್ರಪಂಚ" ವಾರ ಪತ್ರಿಕೆ
ಸಂಪಾದಕರಾದ ಶ್ರೀ ಪಾಟೀಲ ಪುಟ್ಟಪ್ಪನವರಿಗೆ ನಾವು ಋ
ಋಣಿಗಳು.

ಅಂದವಾದ ಮುಖಚಿತ್ರವನ್ನು ಬರೆದುಕೊಟ್ಟ ದಾವಣಗ
ಇಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿ ಶ್ರೀ ರಾಮಚಂದ್ರರಾವ
ನವಲೆ, ಹರಿಹರ ಇವರಿಗೆ ವಂದನೆಗಳು.

ನಮ್ಮೀ ಉದ್ಯಮಕ್ಕೆ ಕನ್ನಡ ಓದುಗರೂ ಅಲ್ಲದೆ ಬರ
ಗಾರರು ನೆರವನ್ನಿತ್ತು ಪ್ರೋತ್ಸಾಹಿಸುವರಾಗಿ ಸಂಪೂರ್ಣ
ನಂಬಿರುತ್ತೇವೆ.

ಹರಿಹರ.

ಜುಲೈ ೧೫, ೧೯೫೪.

ಜಿ. ಮುನಿಯಪ್ಪ

ವ್ಯವಸ್ಥಾಪಕ:

Mr. K. Srinivasa Rao
Sundar Cafe Boarding House.

ಮುನ್ನುಡಿ.

ನನ್ನ ಉದ್ದೇಶ ಕತೆ ಹೇಳುವುದಲ್ಲ. ಆದರೆ, ಸಂತಪ್ತ ಮನಸ್ಸಿನ ವಿಭ್ರಮವೂ, ಅಪಕ್ವವೂ ಆದ ಭಾವನೆಯ ವಿಕಾರ ಸ್ವರೂಪವನ್ನು ಆದಷ್ಟು ಹಾಗೆ ಹಾಗೆಯೇ ಚಿತ್ರಿಸುವುದು. ಈ ಕತೆಯ ಮುಖ್ಯ ವ್ಯಕ್ತಿ ಅಳ್ಳೆದೆಯವನು. ಸ್ಥಿರ ಬುದ್ಧಿ, ದೃಢ ಮನೋಭಾವ, ಹಿಡಿದ ಆದರ್ಶವನ್ನು ಸಾಧಿಸುವ ಛಲ ಅವನ ದಲ್ಲ. ಅವನ ಮನಸ್ಸು ಹಳೆ-ಹೊಸ ವಿಚಾರಗಳ ರಣಕಣವೇ ಹೊರತು ಒಂದು ನಿರ್ಣಯದ ಫಲವೀಯುವ ಹೊಲವಲ್ಲ. ಅವನು ಹುಟ್ಟಿದ ಮನೆ ಹಾಗೂ ಸಮಾಜ, ಅವನು ಬೆಳೆದ ಪರಿಸ್ಥಿತಿ ಮತ್ತು ಅವನಿಗೆ ಒದಗಿದ ಸನ್ನಿವೇಶ, ಅವನದೇ ಆದ ವಿಶಿಷ್ಟ ಮಾನಸಿಕ ತುಡಿತ- ಇವುಗಳನ್ನನುಸರಿಸಿ ಕತೆಯನ್ನು ಮೂಡಿಸಲಾಗಿದೆ. ಅದೂ ಅಲ್ಲದೆ ಇಲ್ಲಿನ ಕಥಾ ನಿರೂಪಣೆಯ ಕಾಲ ಎರಡೂವರೆ ದಿನಗಳು; ಹಳೆಯ ಘಟನೆಗಳ ಹೊಸ ಅವತರಣ ಇಲ್ಲಿ ನಡೆದಿದೆ. ಈ ಕಾರಣದಿಂದ ತಕ್ಷಣ ತೋರಿಕೆಗೆ ಕತೆಯ ಬೆಳವಣಿಗೆಯಲ್ಲಿ ಅವಿಚ್ಛಿನ್ನತೆ ಕಾಣದಿದ್ದರೂ, ಅದಕ್ಕಿರುವ ಅದರದೇ ಆದೊಂದು ಐಕ್ಯತೆಯನ್ನು ರಸಜ್ಞರು ಕಾಣುತ್ತಾರೆಂದು ಭಾವಿಸುತ್ತೇನೆ.

ಆರಿಸಿಕೊಂಡ ವಸ್ತು, ಉಪಯೋಗಿಸಿರುವ ತಂತ್ರ, ಬಳಸಿರುವ ಭಾಷೆ ಮತ್ತು ಶೈಲಿ, ಕೊಟ್ಟಿರುವ ಅಧ್ಯಾಯ ಶಿರೋನಾಮೆಗಳು, ಚಿತ್ರಿಸಿರುವ ಮಾನಸಿಕ ವ್ಯಕ್ತಿಚಿತ್ರಗಳು ಓದುಗರಲ್ಲಿ ರಸಭಾವನೆ ಯನ್ನುಂಟುಮಾಡುವುದು ಅವರವರ ಕಲ್ಪನೆ, ಸಾವಧಾನಚಿತ್ತಸ್ಥಿತಿ

ಯನ್ನು ಅನುಸರಿಸಿದೆ. ಅಪೂರ್ಣವೆಂದು ಕಾಣುವ ಇಲ್ಲಿನ
ಅನುಕೂಲ ಅಗತ್ಯಗಳಮೇಲೆ ಮುಂದಿನ ಭಾಗದಲ್ಲಿ ಮುಕ್ತಾ
ವಾದೀತು. ಕನ್ನಡಿಗರು ಅಷ್ಟಕ್ಕೆ ಅವಕಾಶವೀಯುತ್ತಾರೆ
ಬಯಸುತ್ತೇನೆ

ಇದರ ಪ್ರಕಟಣೆ ಸಾಧ್ಯವಾದದ್ದು, ಶ್ರೀ ಎಚ್. ದೇವೀರ
ಎಂ. ಎ., ಮತ್ತು ಶ್ರೀ ಜಿ. ಮುನಿಯಪ್ಪ ಇವರಿಂದ. ಕರಡ
ತಿದ್ದುವಲ್ಲಿಯೂ ಮತ್ತಿತರ ರೀತಿಯಲ್ಲೂ ನೆರವಾದವ
ಗೆ. ಹಿರಿಯೂರು ಕೃಷ್ಣಮೂರ್ತಿ, ಇವರಿಗೆಲ್ಲ ನನ್ನ ಕೃತಜ್ಞತೆಗಳ
ನನ್ನ ಸರ್ವತೋಮುಖದ ಅಭಿವೃದ್ಧಿಗೆ ಹಿರಿಯ ನೆರಿಯಾ
ಆಶೀರ್ವಾದದ ಹಸ್ತವನ್ನಿತ್ತಿರುವ ಸುತ್ತೂರು ಸೂರ್ಯಸಿಂಹಾಸ
ಧೀಶ್ವರ ಶ್ರೀ ರಾಜೇಂದ್ರಸ್ವಾಮಿಗಳವರ ಅಡಿಗಳಲ್ಲಿ ಭಕ್ತಿಪೂರ್ಣ
ನಮಸ್ಕಾರಗಳು.

ಈ ಕಾದಂಬರಿಯನ್ನು ತಮ್ಮ ಮೊದಲ ಪ್ರಕಟಣೆಯಾ
ಸ್ವೀಕರಿಸಿದ ಶ್ರೀ ಸಂಗಮೇಶ ಪ್ರಕಾಶನ ಉತ್ತಮೋತ್ತಮವಾ
ಸಾಹಿತ್ಯ ಪ್ರಕಟಣ ಲೋಕದಲ್ಲಿ ಅಭಿವೃದ್ಧಿ ಹೊಂದಲೆಂದ
ಹಾರೈಸುತ್ತೇನೆ.

ಕನ್ನಡಕುಲ
ಮೈಸೂರು.
೭-೭-೫೪.

"ಮರುಳಸಿದ್ಧ"

- ಅ ರ್ಪಿ ತ. -

ನಿರಾಶಾವಾದಿಯಾಗುತ್ತಿರುವ ನನ್ನ ಎದೆಗೆ
ಆಶಾವಾದದ ಅಮೃತವನ್ನೆರೆಯುತ್ತಿರುವ
ಒಂದು ಸಹೃದಯಕ್ಕೆ.

ಗಡಿಯಾರ ಕೆಟ್ಟಿತು.

೧

ಶಂಕರ ತಲೆ ಎತ್ತಿದಾಗ ಗಡಿಯಾರ "ಟ್ರಿಣ್" ಎಂದಿತು. ಪ್ರತಿ ದಿನವೂ ಹಾಗೆಯೇ ನಡೆದಿದೆ. ತಾಯಿಯ ಪಾದಕ್ಕೆ ಹಣೆಯಿಟ್ಟು, ತಲೆ ಮೇಲೆತ್ತುವ ವೇಳೆ - ಬೆಳಗಿನ ಏಳೂವರೆ. ಗಂಟೆ ಏಳೂವರೆಯಾಯ್ತೆಂದರೆ, ಶಂಕರ ಮನೆಯಿಂದ ಹೊರಟನೆಂದೇ ಅರ್ಥ. ದಿನ ದಿನವೂ ಹಾಗೆಯೇ ಸಾಗಿ ಬಂದಿದ್ದಾನೆ, ಗಡಿಯಾರದೊಡನೆ. ಶಂಕರನೂ ಒಂದು ಗಡಿಯಾರವೇ ! ನಿಮಿಷ ನಿಮಿಷವೂ, ವ್ಯತ್ಯಾಸವಿಲ್ಲದೆ ತನ್ನ ಗಡಿಯಾರದೊಡನೆ ಸಾಗುತ್ತಿದ್ದಾನೆ. ಹತ್ತು ವರ್ಷಗಳ ಹಿಂದೆಯೇ ಯಾರೋ ಕೊಟ್ಟಿದ್ದ ಗಡಿಯಾರ ಇನ್ನೂ ಅವನ ಹತ್ತಿರವಿರುವುದು ಆ ಗಡಿಯಾರದ ಬಗ್ಗೆ ಅವನಿಗಿದ್ದ ಅತಿ ಪ್ರೇಮವೇ ಕಾರಣ. ಗಡಿಯಾರ ಎಂದೂ ಕೆಟ್ಟುದಿಲ್ಲ; ಎಂದೂ ಅವನಿಗೆ ಕೈಕೊಟ್ಟುದಿಲ್ಲ.

ಅಲಾರಂ ನಾಲ್ಕೂವರೆಗೆ ಇಟ್ಟು, ಹತ್ತು ಗಂಟೆಗೆ ಮಲಗಿದ ಶಂಕರ ನಾಲ್ಕುವರೆಗೇ ಎದ್ದುಬಿಡುತ್ತಾನೆ. ಈ ನಿಯಮ, ವರ್ಷವೊಂದನ್ನುಳಿದು, ಹತ್ತು ವರ್ಷದಿಂದಲೂ ನಡೆದು ಬಂದಿದೆ. ಶಂಕರನಿಗೆ ಯಾರಾರೋ ಗೆಳೆಯರಾಗಿ ಹೋಗಿದ್ದರೂ ಆ ಗಡಿಯಾರದಷ್ಟು ಹತ್ತಿರದವರಾರೂ ಆಗಿಲ್ಲವೆಂದು ಕಾಣುತ್ತೆ. ಒಂದು ಸುಂದರವಾದ ಪೆಟ್ಟಿಗೆಯಲ್ಲಿ, ದುಂಡನೆಯ ಮುಖ ಕಾಣುವಂತಿಟ್ಟು ಕೋಣೆಯ

ಗೋಡೆಗೆ ಬಡಿದ ಸ್ಟ್ಯಾಂಡಿನ ಮೇಲಿಟ್ಟಿದ್ದಾನೆ. ಅದರ ಬಲ
ಗಡೆಗೆ ಗಾಂಧೀಜಿ ಮತ್ತು ಒಬ್ಬ ಸ್ವಾಮಿಗಳ ಭಾವ ಚಿತ್ರ
ಮೇಲೆ, ಧೀರ ಗಂಭೀರವಾಗಿ, ಕೋಲೂರಿ ನಿಂತ, ಸ್ವ
ವಿವೇಕಾನಂದರ ದೊಡ್ಡ ಚಿತ್ರ: ತಲೆ ಬೋಳು; ಉಟ್ಟುದೊ
ಕಾವಿ ಪಂಚೆ; ಅದನ್ನೇ ಎಳೆದು ಮೈಮೇಲೆ ಹೊದ್ದುಕೊಂ
ಬಲಗೈಯಲ್ಲಿ ಕರಿಯ ದುಂಡನೆಯ ಕೋಲೂರಿ ನಿಂತ ಆ ಗಂ
ವ್ಯಕ್ತಿಯ ಚಿತ್ರವನ್ನು ಯಾರು ನೋಡಿದರೂ ಪರವಶರಾಗಬೇ
ಆ ಎರಡು ಪ್ರಜ್ವಲಿಸುವ ಕಣ್ಣುಗಳಲ್ಲಿ ಏನೋ ಒಂದು ದ
ತುಳುಕುತ್ತಿತ್ತು. ಅದೇ ಗೋಡೆಯನ್ನೇ ಹೊಂದಿಕೊಂಡು, ಆ
ಯಾರದ ಕೆಳಗೆ ಬರೆಯುವ ಮೇಜು; ಒಂದು ಕುರ್ಚಿ. ಆ ಕೋ
ಯನ್ನು ಹೊಕ್ಕೊಡನೆಯೇ ಕಾಣುವುದು ಮೊದಲು ವಿವೇಕಾನ
ಚಿತ್ರ; ನಂತರ ಗಡಿಯಾರ. ಅಂತಹ ಸ್ಥಾನ ಗಡಿಯಾರಕ್ಕೆ.

ಹತ್ತು ಅಡಿ ಉದ್ದ, ಎಂಟು ಅಡಿ ಅಗಲದ ಸುಂದರವ
ಕೋಣೆ. ಒಂದು ಬಾಗಿಲು. ಮೇಜಿಗೆ ಎಡಗಡೆಯಲ್ಲಿ, ಹ
ದಲ್ಲಿಯೇ ಒಂದು ಕಿಟಿಕಿ. ಆ ಕಿಟಿಕಿಯಲ್ಲಿ ಮಲ್ಲಿಗೆಯ ಬಳ್ಳಿ ಕ
ಚಾಚಿ ಒಳಬಂದು, ಕಟ್ಟಿದ ದಾರವನ್ನಪ್ಪಿ ಅಲುಗಾಡುತ್ತದೆ.
ಕಿಟಿಕಿಯಾಚೆ ನೋಡಿದರೆ, ಪಕ್ಕದ ಮನೆಯ ಕಿಟಿಕಿ ಕಾಣುತ್ತ
ಆದರೆ ಶಂಕರ ಆ ಕಿಟಿಕಿಯನ್ನು ಅಷ್ಟಾಗಿ ದಿಟ್ಟಿಸನೆಂದೇ ಅ
ಚರಿಯಿಂದ ಕಾಣುತ್ತದೆ. ಒಳ ಬಂದ ಮಲ್ಲಿಗೆಯ ಕುಡಿಯ
ನೇವರಿಸಿ, ಒಂದು ಮುದ್ದನ್ನಿತ್ತು, "ಆಹಾ! ನೀನೂ ಅಂತೆಂ
ಮೃದು" ಎನ್ನುತ್ತಾನೆ. ಆ ಕುಡಿಗೆ ಅವನ ಪ್ರೇಮ ಮು
ದಿನಕ್ಕೆರಡು ಸಾರಿ ದೊರೆಯುತ್ತದೆ. ಅದಕ್ಕೇಂದೇ ಇರಬೇಕು
ದಿನಕ್ಕೂ ಕುಡಿವರಿಯುತ್ತದೆ, ಮಲ್ಲಿಗೆ. ಇತ್ತೀಚೆಗೆ ಮೊಗ್ಗ
ಮೂಡುತ್ತಿದೆ. ಬಲಗೋಡೆಗೆ ಹೊಂದಿಕೊಂಡು ಒಂದು ಪುಸ್ತಕ
ಬೀರು. ಅದರ ತುಂಬ ಪುಸ್ತಕಗಳು. ಅದೂ ಅವನ ಹಲ

ವರ್ಷದ ಗೆಳೆಯ. ಬಾಗಿಲ ಗೋಡೆ, ಕುರ್ಚಿಯಲ್ಲಿ ಕುಳಿತರೆ, ಬೆನ್ನಿಗಾಗುತ್ತದೆ. ಬಾಗಿಲು ಯಾವಾಗಲೂ ಮುಚ್ಚಿಕೊಂಡಿರುತ್ತದೆ.

ಆಗಾಗ ಮೃದುವಾಗಿ ಮುದಿಬೆರಳು ಆ ಬಾಗಿಲನ್ನು ತಟ್ಟುವುದುಂಟು. "ಬಂದ್ಯವಮ್ಮಾ" ಎಂದು ಶಂಕರ ಕದ ತೆರೆದು, ಮತ್ತೆ ಮುಚ್ಚಿ, ಹೊರ ಹೋಗುತ್ತಾನೆ. ಆ ಕೋಣೆಯನ್ನು ಅವನಲ್ಲದೆ ಮತ್ತಾರೂ ಪ್ರವೇಶಿಸಿದಂತೆ ಕಾಣುವುದಿಲ್ಲ. ಅವನ ಕೋಣೆಯನ್ನು ಹೊಕ್ಕರೆ, ಏನೋ ಒಂದು ವಿಧವಾದ ಮೌನವಾತಾವರಣ. ಗಡಿಯಾರವೂ ಅಂತೆಯೇ ಮೌನ ಧರಿಸಿದೆ ಎನ್ನಲಾಗದು. ಅದೊಂದೇ ಟಿಕ್, ಟಿಕ್, ಎನ್ನುತ್ತದೆ. ಆದ್ದರಿಂದಲೇ ಮೌನ ನೂರ್ಮಡಿಯಾಗುತ್ತೆ. ದಿನಕ್ಕೆರಡು ಸಾರಿ ಅಲಾರಂ ಹೊಡೆದು, ಮತ್ತೆ ಗುಡುಗಾಡುತ್ತದೆ, ಮಿದುವಾಗಿ ನಯವಾಗಿ ಟಿಕ್, ಟಿಕ್ ಎಂದು.

'ಟ್ರಿಣ್' ಎಂದಿತು ಗಡಿಯಾರ, ಶಂಕರ ತನ್ನ ತಾಯ ಪಾದದಿಂದ ತಲೆ ಎತ್ತಿದಾನೆ. ಹೊತ್ತಾಯಿತೆಂಬ ಅವಸರವಿಲ್ಲ. ಸಾವಧಾನವಾಗಿ ಕೋಣೆಗೆ ಹೋಗಿ, ಒಂದೆರಡು ಪುಸ್ತಕಗಳನ್ನು ಚರ್ಮದ ಚೀಲದಲ್ಲಿಟ್ಟು, ಖಾದಿಯ ಪೈಜಾಮ, ಖಾದಿಯ ಜುಬ್ಬ ತೊಟ್ಟು ಮೇಲೊಂದು ವೇಸ್ಟ್ ಕೋಟು ಹಾಕಿಕೊಂಡು, ಗಾಂಧೀ ಟೋಪಿಯನ್ನಿಟ್ಟು, ಕನ್ನಡಿ ನೋಡಿಕೊಂಡು ಸಿದ್ಧನಾಗುತ್ತಾನೆ. ಇದಕ್ಕೆಲ್ಲಾ ಹೆಚ್ಚೆಂದರೆ ಐದು ನಿಮಿಷ ಬೇಕಾದೀತು.

ನಾಲ್ಕೂವರೆಗೆ ಎದ್ದವನು ಕಕ್ಕಸಕ್ಕೆ ಹೋಗಿಬಂದು ಹಲ್ಲುಜ್ಜಿ ತಣ್ಣೀರ ಸ್ನಾನ ಮಾಡಿ ಕೋಣೆಗೆ ಬಂದವನೇ ಮೊದಲು ನೇವರಿಸುತ್ತಿದ್ದುದು ಮಲ್ಲಿಗೆಯನ್ನು. ಅದನ್ನೊಮ್ಮೆ ಮುದ್ದಿಸಿದರೆ ಅವನಿಗೇನೋ ಸಂತೋಷ. ನಂತರ ಕಡ್ಡಿ ಚಾಪೆಯ ಮೇಲೆ ಕುಳಿತು ಪ್ರಾರ್ಥನೆಗೆ ಪ್ರಾರಂಭಿಸುತ್ತಾನೆ. "ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು" ಎಂದು ಹಾಡುತ್ತಾನೆ. ಆ ಮೇಲೆ: "ಮಾಡುವೆ, ಶರಣು ಮಾಡುವೆ; ನಮ್ಮ

ಕೂಡಲ ಸಂಗನ ಶರಣರ ಪಾದಕೆ, ಮಾಡುವೆ, ಶರಣು ಮಾ
ಎಂಬ ಪದವನ್ನು ಹಾಡುತ್ತಾನೆ. ಅನಂತರ ಕುವೆಂಪು
"ಅಗ್ನಿಹಂಸ"ದ ಒಂದೆರಡು ಪದ್ಯಗಳನ್ನು ಓದಿ, ತನ್ನ ಪ್ರಾರ್ಥ
ಕೊನೆಯ ಸಾಲನ್ನು ಹೇಳುತ್ತಾನೆ: "ಓಂ ಶಾಂತಿಃ ಶಾಂತಿಃ ಶಾಂ
ಎಂದು. ಈ ಕಾರ್ಯ ಮುಗಿಯುವ ವೇಳೆಗೆ ಐದೂವರೆ ಆ
ತ್ತದೆ. ಆಗಲೇ ಹೊರ ಪ್ರಪಂಚ ಗಜಬಿಜಿಗೆ ಪ್ರಾರಂಭಿಸುತ್
ಮಬ್ಬು ಬೆಳಕು ತಿಳಿಬೆಳಕನ್ನು ಹಡೆಯುತ್ತಿರುತ್ತದೆ.

ಶಂಕರ ಈಗ ಓದಲು ತೊಡಗುತ್ತಾನೆ. ಆ ಮೊ
ಇನ್ನೊಂದು ಕೋಣೆಗೆ ಹೋಗಿ ತನ್ನ ತಾಯಿಯನ್ನು ಎ
ಬಂದಿರುತ್ತಾನೆ. ಎದ್ದ ತಾಯಿ ಮುಖ ತೊಳೆದು ಲಿಂಗಪೂಜೆ ಮ
ಕೊಂಡು, ಮುಸುರೆ ತೊಳೆದು, ಒಲೆಗೆ ಬೆಂಕಿ ಹಾಕುತ್ತಾಳೆ.
ವೇಳೆಗೆ ಹಾಲಿನವನು "ಅಮ್ಮ, ಹಾಲು" ಎನ್ನುತ್ತಾನೆ. ಅ
ಸೇರು ಹಾಲು ಹಾಕಿಸಿಕೊಂಡು, ಹೊರ ಬಾಗಿಲನ್ನು ಮು
ಕೊಂಡು ಒಳಸೇರುತ್ತಾಳೆ. ಹಾಲು ಕಾಸಿ, ಅರ್ಧ ಪಾವಿನ
ಬಟ್ಟಲಿಗೆ ಹಾಕಿ, ತನ್ನ ಮಗನ ಕೋಣೆಯ ಕದವನ್ನು ಮಿದುವ
ತಟ್ಟುತ್ತಾಳೆ.

"ಬಂದೆನಮ್ಮಾ" ಎಂದು ಶಂಕರ ಎದ್ದು ಬಂದು ಕದ ತೆರೆ
ಹೊರ ಬಂದು, ಮತ್ತೆ ಮುಚ್ಚುತ್ತಾನೆ. ಆಗಲೇ ತಾಯಿ ಅಡು
ಮನೆ ಸೇರಿರುತ್ತಾಳೆ. ಬಾಗಿಲು ಮುಚ್ಚಿದ ಶಂಕರ, ಅಡುಗೆ ಮ
ಸೇರುತ್ತಾನೆ. ತಾಯಿ ಕೊಟ್ಟ ಹಾಲನ್ನು ಕುಡಿದು ಕೋಣೆ
ಮರಳುತ್ತಾನೆ; ಓದಲು ಕುಳಿತುಕೊಳ್ಳುತ್ತಾನೆ. ಇಲ್ಲಿಗೆ ಆರುಗ
ಯನ್ನು ತೋರಿಸುತ್ತದೆ, ಗಡಿಯಾರ. ಒಂದು ಗಂಟೆ ಓದು ಸಾ
ತ್ತದೆ. ಮತ್ತೆ ಮುದಿ ಬೆರಳು ಕದ ತಟ್ಟುತ್ತದೆ. "ಬಂದೆನಮಾ
ಎಂದು ಎದ್ದು ಹೋಗುತ್ತಾನೆ, ಶಂಕರ.

ಆಗ ತಾಯಿ ಏನಾದರೂ ಉಪಹಾರವನ್ನು ಸಿದ್ಧಮಾಡಿ

ತ್ತಾಳೆ. ಅದನ್ನು ತಿಂದು, ಹಾಲು ಕುಡಿದು, ಬಾಯಿ ತೊಳೆದು, ಮೇಲೆದ್ದು, ತಾಯ ಪಾದಕ್ಕೆ ಹಣೆ ಇಡುತ್ತಾನೆ. ತಾಯಿ ಮಮತೆ ಯಿಂದ ಅವನ ತಲೆಯ ಮೇಲೆ ಕೈಯಿಟ್ಟು ಹರಸುತ್ತಾಳೆ. ಒಂದು ಹನಿ ಕಣ್ಣೀರು ಅವಳ ಕೆನ್ನೆಗೆ ಇಳಿಯುತಿದ್ದಂತೆಯೇ ಅಲ್ಲಿಯೇ ಅದನ್ನು ಸೆರಗಿನಿಂದ ತೊಡೆಯುತ್ತಾಳೆ. ಶಂಕರ ತಲೆ ಎತ್ತಿದಾಗ ಗಡಿಯಾರ 'ಟ್ರಿಣ್' ಎನ್ನುತ್ತದೆ. ಏಳೂವರೆ ಆಯ್ತೆಂದು ಎಚ್ಚರಿಸುತ್ತದೆ. ನಾಲ್ಕುವರೆಗೆ ಎದ್ದವನು ಏಳೂವರೆಗೆ ಅಲಾರಂ ಇಟ್ಟ ಶಂಕರನ ಕೃತಿ ಸ್ವರವಾಗಿ, ಕರೆಯುತ್ತದೆ; ಎಚ್ಚರಿಸುತ್ತದೆ. ಕೋಣೆಗೆ ಬಂದು, ಕಾಲೇಜಿಗೆ ಹೋಗಲು ಸಿದ್ಧವಾಗುತ್ತಾನೆ.

ಈ ಕಾರ್ಯಕ್ರಮ ಒಂದು ವರ್ಷದಿಂದ ಸಂತತವಾಗಿ ನಡೆದು ಬಂದಿದೆ. ಒಂದು ದಿನವೂ ತಪ್ಪಿಲ್ಲ, ಒಂದು ನಿಮಿಷವೂ ತಪ್ಪಿಲ್ಲ. ರಜೆಯ ದಿನಗಳಲ್ಲಿ ಕಾಲೇಜಿಗೆ ಹೋಗದೆ, ಮನೆಯಲ್ಲುಳಿದರೂ ಆ ವೇಳೆಗೆ ಈ ಎಲ್ಲಾ ಕಾರ್ಯಕ್ರಮಗಳು ಗಡಿಯಾರದ ಟಿಕ್, ಟಿಕ್ ನೊಡನೆ ಸಾಗುತ್ತವೆ, ಹಾಗೆಯೇ ಸಾಗಿ ಬಂದಿದ್ದಾನೆ, ಶಂಕರ.

ಶಂಕರ ತಾಯ ಪಾದದಿಂದ ತಲೆ ಎತ್ತಿದಾಗ ಗಡಿಯಾರ 'ಟ್ರಿಣ್' ಎಂದಿತು. ಅವನು ಕೋಣೆಗೆ ಹೋಗಿ, ಉಡುಪು ಧರಿಸಿ, ಗಾಂಧಿ ಟೋಪಿಯನ್ನು ಮತ್ತೊಮ್ಮೆ ಕನ್ನಡಿ ಮುಂದೆ ಸರಿ ಮಾಡಿ ಕೊಂಡ. ಕೈ ಎತ್ತಿ ವಿವೇಕಾನಂದರ ಚಿತ್ರವನ್ನು ಮುಟ್ಟಿ ಕಣ್ಣಿಗೆ ಒತ್ತಿಕೊಂಡ, ದಿನದಂತೆ. ಗಾಂಧಿ, ಸ್ವಾಮಿಗಳ ಚಿತ್ರಗಳನ್ನು ಕರುಣಾಪೂರಿತ ದೃಷ್ಟಿಯಿಂದ ನೋಡಿದ, ದಿನದಂತೆ. ಕೈಗೆ ಚರ್ಮದ ಚೀಲ ತೆಗೆದುಕೊಂಡು, ಇನ್ನೇನು ಹೊರಡಬೇಕೆಂಬಾಗ, ಮೃದುವಾಗಿ ಕದ ತಟ್ಟಿದ ಶಬ್ದವಾಯ್ತು. ಈ ಸಮಯದಲ್ಲಿ ಕದ ತಟ್ಟುವವರಾರೂ ಇಲ್ಲ. ಇಂದೇಕೆ ? ಯಾರವರು ? ತಾಯಿಯೆ ? ಅವಳಿರಲಾರಳು. ಇಂದೇಕೆ ತಟ್ಟುತ್ತಾಳೆ ? ಏನಾದರೂ ಸಾಮಾನು ತರಬೇಕಾಗಿತ್ತೆ ? ಅದಕ್ಕಾಗಿ ಕದ ತಟ್ಟುತ್ತಿರುವಳೆ ? ಛೇ, ಇರಲಾ

ರದು. ತಿಂಡಿ ತಿನ್ನುವಾಗಲೇ ಹೇಳಿದ್ದಾಳೆ, ಏನೇನು ತರಬೇ
(ಮತ್ತಾರಿರಬೇಕು ?) ತಾಯಿ ಇಂದೇಕೋ ಒಂದು ತೆರನ
ಆಕೆಯ ಮುಖದಲ್ಲಿ ಕಾತರ, ತುಂಬಿ ತುಳುಕುತ್ತಿದೆ. ಏನೋ
ಬೇಕೆಂಬ ದುಗುಡವಿದ್ದಂತೆ ಕಾಣುತ್ತದೆ. ಮಂಜಿಗೆ ಸರಿಯು
ಕಣ್ಣುಗಳಲ್ಲಿ ಯಾವುದೋ ಆಶಾಕಿರಣ ಹೊಳೆದಂತೆ ಕಾಣ
ಮತ್ತೆ ಆ ಸುದ್ದಿಯನ್ನು ತೆರೆಯಲೆಂದೇ ಹಾಗಿದ್ದಾಳೆಯೆ ? ಅವ
ಕರೆಸಿದಾಗಲೇ ಹೇಳಿಯಾಗಿದೆ: ಇನ್ನು ಆ ವಿಚಾರ ಬೇಡ;
ಮನಸ್ಸು ಸುಟ್ಟು ಹೋಗಿದೆ-ಎಂದು. ಆಕೆ ಕಾಡಿ, ಬೇಡಿದು
ಆದರೆ ನನ್ನ ಮನಸ್ಸು ಹೇಗೆ ತಾನೇ ಒಪ್ಪೀತು ? 'ಆ ವಿಚಾರ ತೆ
ವುದಾದರೆ ... ಎನ್ನುವಾಗಲೇ ಆಕೆ ನಡುಗಿ, "ಬೇಡಪ್ಪಾ, ಬಿಡು
ಮನಸ್ಸು ಅಷ್ಟಿದ್ದರೆ, ಬೇಡ" ಎಂದು ಸುಮ್ಮನಾಗಿದ್ದಾಳೆ.
ನಿಂದ ಇಂದಿನ ವರಿವಿಗೂ ಆ ಸುದ್ದಿ ಎತ್ತಿಲ್ಲ. ಇನ್ನು ಆ ವ
ಒಣಗಿ ಹೋಯ್ತು; ಹಸಿಯಿಷ್ಟೂ ಇಲ್ಲ. ಆದರೆ ತಾಯಿ ಇಂದ
ಹೀಗೆ ? ಯೇಕೆ ? ಈಗ ಕದ ತಟ್ಟುತ್ತಿರುವವಳು ತಾಯಿಯೆ ?

ಇರಲಾರದು, ಹೀಗೆಲ್ಲಾ ಈ ಹೊತ್ತಿನಲ್ಲಿ ಬರಲಾ
ಈಗ ಮಾತನಾಡುತ್ತಾ ನಿಂತರೆ, ಬಸ್ಸು ತಪ್ಪೀತೆಂದು ಆಕೆಗೆ ಗೊ
ವೇನು ? ಕಾಲೇಜು ತಪ್ಪೀತೆಂದು ಆಕೆ ಅರಿಯಳೇನು ? ಆಕೆಯ
ತಾಯಿಯಲ್ಲ. ಹಾಗಾದರೆ, ಮತ್ತಾರು ? ಯಾರು ? ಇವಳೆ ?

ಥೇ ಇವಳೂ ಇರಲಿಕ್ಕಿಲ್ಲ. ಇಷ್ಟು ದಿನಗಳ ಮೇಲೆ
ಬರುತ್ತಾಳೆಯೆ ? ಅದೂ ತಾಯಿ ಇರುವಾಗ ? ಇಲ್ಲ; ಇಲ್ಲ. ಸಾ
ವಿಲ್ಲ ! ಇವಳಲ್ಲ ! ಇನ್ನಾರು ? ನನಗೆ ಸ್ನೇಹಿತರೆಂಬುವವರಾ
ಯಾರೂ ಇಲ್ಲ. ಅವಳು ಬಂದಳೇ ? ಇಲ್ಲ. ಅವಳಿಗೂ ಮ
ಬರಲು ಧೈರ್ಯವಿಲ್ಲ. ಧೈರ್ಯವೇಕೆ, ವಿಳಾಸವೇ ಗೊತ್ತಿ
ಗೊತ್ತಿದ್ದರೂ ಬರದವಳು ಆಕೆ ! ಹಾಗೆ ಬರುವವಳಲ್ಲ.
ಮೂರ್ತಿ ! ತನ್ನಲ್ಲಿಗೇ ಸೆಳೆವವಳು. ಇಲ್ಲ; ಇಲ್ಲ. ಅವಳೂ

ಇನ್ನಾರು ? ಯಾರು ಬಂದಿರಬೇಕು ? ಯಾರವರು ?
"ಯಾರವರು ?" ಶಂಕರ ಮೃದುವಾಗಿಯೇ ಪ್ರಶ್ನಿಸಿದ.

"ನಾನು.... ಮಗು !"

ತಾಯಿಯ ಸ್ವರ ! ಶಂಕರನಿಗೆ ಎಲ್ಲಿಲ್ಲದ ಆಶ್ಚರ್ಯ. ತಾಯಿ ಇಂದೇಕೆ ನನ್ನ ಕಾಣಬೇಕೆಂದು ಬಂದಿದ್ದಾಳೆ ? ಈ ಹೊತ್ತಿನಲ್ಲಿ ?

ಯೋಚನೆ ಮಾಡುತ್ತ ನಿಂತುಕೊಳ್ಳಲು ಹೊತ್ತಿಲ್ಲ. ಹೋಗಿ ಬಾಗಿಲು ತೆರೆದ. ತಾಯಿ ಅಲ್ಲೇ ನಿಂತಿದ್ದಳು. ಯಾವಾಗಲೂ ಕದ ತಟ್ಟಿ ತಾನು, "ಬಂದೆನಮ್ಮಾ" ಎಂದೊಡನೆಯೇ ಆಕೆ ಅಡುಗೆ ಮನೆ ಸೇರುತ್ತಿದ್ದಳು. ಆದರೆ ಈಗ ಅಲ್ಲಿಯೇ ಬಾಗಿಲಲ್ಲಿಯೇ ನಿಂತಿದ್ದಾಳೆ. ಶಂಕರನಿಗೆ ಇನ್ನೂ ಅಚ್ಚರಿ ಎನಿಸಿತು. ತಾಯಿಯ ಮುಖ ಇಂದು ಏನೋ ಒಂದು ತೆರನಾಗಿ ತೋರುತ್ತಿದೆ. ಇಂದೇಕೆ ಈ ರೀತಿ ? ಏನೆಂದು ಹೇಗೆ ಕೇಳುವುದು ? ಏನು ಹೇಳುತ್ತಾಳೋ ! ಏನೋ !

"ಯಾಕವ್ವಾ, ಏನು ?" ಎನ್ನುತ್ತ ಕದ ಮುಚ್ಚಿಕೊಂಡ, ಹೊರಬಂದು.

"ಯಾಕೆ ಮಗು ನಾನು ಕೋಣೆ ನೋಡುಬಾರ್ದೇನು ?" ಎಂದು ಇಲ್ಲದ ನಗೆ ತಂದುಕೊಂಡು ಕೇಳಿದಳು.

"ಯಾಕೆ ಮಗು ನಿನ್ನ ಕೋಣೆ ನಾನು ನೋಡುಬಾರ್ದೇನು ?"

ಹೌದು ಇವಳೇ ವರುಷನ್ನೊಂದರ ಹಿಂದೆ, ಮೊದಲು ಬಂದಾಗ ಹೀಗೆಯೇ ಕೇಳಿದ್ದಳು "ಈ ಕೋಣೆ ನನಗೆ, ಅದು ನಿನಗೆ. ಈ ಕೋಣೆಗೆ ನೀ ಬರಬೇಡ !" ಎಂದು ಹೇಳಿದ್ದ. ಅದಕ್ಕೆ ಆಕೆ ಆ ಮಾತನ್ನು ನೊಂದುಕೊಂಡು ಕೇಳಿದ್ದಳು.

"ಯಾಕೆ ಮಗು, ಮನೆಗೇ ಬಿಟ್ಕೊಂಡಿದ್ದೀ, ಇನ್ನ್ಯಾ ಕೋಣೆ ಗೇಕೆ ಬೇಡ ?" ಎಂದು ಕೇಳಿದ್ದಳು. ಆಕೆಗೆ ಏನು ಹೇಳಬೇಕೋ ತೋರದಾಗಿತ್ತು. ತನ್ನ ಕೋಣೆಗೆ ತನ್ನ ತಾಯಿ ಬಂದರೆ ಏನಾಗುತ್ತೆ ?

ಎಂದೂ ಒಂದು ಮನಸ್ಸು ಅವನನ್ನು ಪ್ರಶ್ನಿಸಿತ್ತು. ಆದರೆ ಇನ್ನೊಂದು ಮನಸ್ಸು ತಾಯಿಯೂ ಬೇರೆಯವಳೇ! ತನ್ನ ಮೌನಕ್ಕೆ ಅನ್ಯರು, ಅವರು ತಾಯಿಯೇ ಆಗಿರಲಿ, ಬಂದರೆ: ಭಂಗಬರುತ್ತದೆ. ತಾನು ಏಕಾಂಗಿಯಾಗಿರುವಾಸೆಯುಳ್ಳವನು. ತನ್ನ ಕೋಣೆಗೆ ಬೇರೆ ಯಾರು ಬಂದರೂ ಏನೋ ಪರಕೀಯತೆ. ಅದರಲ್ಲೂ ತನ್ನ ತಾಯಿ ಬೇರೆ ಯವಳಲ್ಲ ಎನಿಸಿದ್ದರೂ ಬೇರೆಯಾಗಿ ತೋರುತ್ತಿದ್ದಳು. ಅದಕ್ಕಾಗಿಯೇ ಹಾಗೆ ಅಂದು ಅಂದಿದ್ದ. ತಾಯಿ ನಸು ವ್ಯೆಸನ ಪೂರಿತಳಾಗಿ ಆಗ ಕಂಡಿದ್ದರೂ ಅಂದಿನಿಂದ ಇಂದಿನವರೆವಿಗೆ ಮತ್ತೆ ಕೋಣೆಯ ಸುದ್ದಿಯನ್ನೆತ್ತಿದ್ದವಳಲ್ಲ. ಆದರೆ ಇಂದೇಕೆ ?

"ಯಾಕೆ ಇವತ್ತು ನೋಡಂಗಾತೇನವ್ವಾ ?" ಮುಗುಳು ನಗುತ್ತ ಶಂಕರ ಕೇಳಿದ.

"ಅದರಲ್ಲಿ ನೀನು ಹೋಗಿಬಿಟ್ಟರೆ ಹೆದರಿಬಿಡುತ್ತೀಯೆ! ಹುಲಿ ಕರಡಿ ಏನೇನೋ ಅಲ್ಲಿವೆ!" ಸ್ವಲ್ಪ ಹಾಸ್ಯ ಮಾಡಬೇಕೆನ್ನಿಸಿತು, ಹೀಗಂದ.

"ಓ ಮಹಾ ಹುಲಿ ಕರಡಿ ಇದ್ದಾವು. ಎಲ್ಲಾ ತಮಾಷೆ. ನಾನೇನು ಉದ್ಗೀನಾ?" ಎನ್ನುತ್ತಾ ಬಾಗಿಲು ದೂಡಿ ತಾನೆ ಕಾಲಿಟ್ಟಳು, ತಾಯಿ.

ಚೇಷ್ಟೆಗೆ ಮಾತ್ರ ಕೋಣೆ ನೋಡಬೇಕೆನ್ನುತ್ತಾಳೆಂದುಕೊಂಡಿದ್ದ ಶಂಕರನಿಗೆ ಈಗ ತಾಯಿ ನಿಜವಾಗಿಯೂ ಕೋಣೆಯೊಳಗೆ ಕಾಲಿಟ್ಟಾಗ ಸ್ವಲ್ಪ ಅಂಜಿಕೆಯಾಯ್ತು. ಪ್ರತಿ ಶುಕ್ರವಾರವೂ ಹುಲಿ ಚರ್ಮವನ್ನು ಹಾಸಿಕೊಂಡು "ರಘುಪತಿ ರಾಘವ ರಾಜಾರಾಮ್, ಪತೀತ ಪಾವನ ಸೀತಾರಾಮ್" ಹಾಡುತ್ತಿದ್ದುದು ಶಂಕರನ, ವಾರದಲ್ಲಿಯ ಒಂದು ಕಾರ್ಯಕ್ರಮ. ಅದಕ್ಕೆಂದೇ ಒಂದೂವರೆ ವರ್ಷದ ಹಿಂದೆ ತನ್ನ ಪರ್ಯಟನ ಕಾಲದಲ್ಲಿ ಎಲ್ಲಿಯೋ ಸಂಪಾದಿಸಿಕೊಂಡು ಬಂದಿದ್ದ ಹುಲಿಯ ಚರ್ಮವನ್ನು: ಅದನ್ನು ಬೇರಾರೂ ನೋಡಿರಲಿಲ್ಲ.

ಮು ತಾಯಿ ನೋಡಿಬಿಟ್ಟರೆ ? ಇದೇನೆಂದು ಕೇಳಿದರೆ ? ಆಕೆ ಾದರೂ ಭಾವಿಸಿಕೊಂಡು ಕೊರಗಿದರೆ ? ಈಗ ಕೊರಗುತ್ತಿರು ೀ ಸಾಕು. ಈಗ ಏನೆಂದು ಆ ವಿಷಯ ವಿಪರ್ಯಾಸ ಡುವುದು ? ನನ್ನ ಸ್ನೇಹಿತನೊಬ್ಬ ಮಲೆನಾಡಿನವನು. ಅವನು ರಿ ಮಾಡುವುದರಲ್ಲಿ ಬಲು ಗಟ್ಟಿಗ. ಆ ಚರ್ಮವನ್ನು ತಾನೇ ಂದ ಹುಲಿಯಿಂದ ಸುಲಿದಿದ್ದನಂತೆ. ನಾನು ಪರೀಕ್ಷೆಯಲ್ಲಿ ಸ್ಟ ಕ್ಲಾಸ್ ಬಂದುದಕ್ಕೆ ಬಹುಮಾನ ಕೊಟ್ಟಿದ್ದಾನೆ- ಎಂದು ಳಲೇ ? “ನನಗೇಕೆ ಇದುವರಿವಿಗೂ ತೋರಿಸಲಿಲ್ಲ ?” ಎಂದು ಳಿದರೆ ? ಏನೆಂದು ಹೇಳುವುದು ?

ಶಂಕರ ಬಾಗಿಲಲ್ಲಿಯೇ ನಿಂತುಕೊಂಡ, ಯೋಚಿಸುತ್ತ. ಯಿ ಒಳಹೋಗಿ ಗೋಡೆಗೆ ನೇತುಹಾಕಿದ್ದ ಆ ಮೂರು ಫೋಟೋ ನ್ನೂ, ಗಡಿಯಾರವನ್ನೂ ನೋಡುತ್ತ ನಿಂತುದರ ಅರಿವೆಯೂ ವನಿಗಾಗಲಿಲ್ಲ.

“ಯಾಕೆ ಮಗು ಅಲ್ಲೇ ನಿಂತುಬಿಟ್ಟೆ ? ನಾನು ಕೋಣೆ ೀಡ್ಬಾರ್ದಾಗಿತ್ತೇನು ? ನೀನವತ್ತು ಏಳಿದ್ದನ್ದಿಂದ ಬರ್ಲಿಲ್ಲ. ಏನೋ ತ್ತು ನೋಡಂಗಾತು. ಬಿಡಪ್ಪ ನಿನಿಗಿಷ್ಟವಿಲ್ದ್ಮೇಲೆ, ತ್ತೀನಿ !” ಎಂದು ತಾಯಿ ಅಂದಾಗಲೇ ಎಚ್ಚರ. ತಾಯಿ ಂದು ನುಡಿದಳೆಂದು ಶಂಕರ ಅರಿತುಕೊಂಡ.

“ಇಲ್ಲಮ್ಮ ಸುಮ್ಮನೇ ನಿಂತುಕೊಂಡೆ” ಎನ್ನುತ್ತ ಕದ ಮುಚ್ಚಿ ಂಡು, ತಾಯಿ ಹತ್ತಿರಕ್ಕೆ ಹೋದ. ಅವನ ಕಣ್ಣು, ನೆಲ ಣಿಗೆ ತೂಗು ಹಾಕಿದ್ದ ಆ ಹುಲಿಚರ್ಮದ ಕಡೆಯೇ ಇತ್ತು. ಲ್ಲಿಯಾದರೂ ತಾಯಿಯ ಕಣ್ಣಿಗೆ ಬಿದ್ದೀತೆಂದು ಅವನಿಗೆ ಹೆದರಿಕೆ. ಯಿ ಸುಮ್ಮನೇ ನಿಂತಿದ್ದಳು, ಮಾತನಾಡದೆ.

ಗಡಿಯಾರ ಟಿಕ್, ಟಿಕ್, ಎನ್ನುತ್ತಲೇ ಇತ್ತು. ನಿಮಿಷ ಮಿಷ ಕಾಲ ಕಳೆದು ಹೋಗುತ್ತಿತ್ತು. ಹೀಗೆಯೇ ನಿಂತರೆ

ಬಸ್ಸು ತಪ್ಪುವುದೂ ಖಂಡಿತ; ಕಾಲೇಜು ತಪ್ಪುವುದೂ ಖಂಡಿತ. ಏಕೆ, ತಾಯಿ ಸುಮ್ಮನೇ ನಿಂತಳು ?

"ಏನಮ್ಮ ಮತ್ತೇನಾದರೂ ತರಬೇಕಾಗಿತ್ತೇನು ? ಕಾಲೇಜಿಗೆ ಹೊತ್ತಾಯ್ತು." ಶಂಕರನೇ ಮೌನ ಮುರಿಯಬೇಕಾಯ್ತು.

"ತರ್ತೀಯಾ ಮಗು?"

ತಾಯಿ ಕೇಳಿದ ಮಾತು ವಿಚಿತ್ರವಾಗಿತ್ತು. 'ತರ್ತೀಯಾ ಮಗು?' ಎಂತಹ ಮಾತು ! ನಾನು ಯಾವುದನ್ನು ತರುವುದಿಲ್ಲ ವೆಂದು ಹೇಳಿದ್ದೇನೆ ? ಇವಳು ಹೇಳಿದ್ದನ್ನೆಲ್ಲಾ ತಂದು ಕೊಡು ತ್ತಿದ್ದೇನೆ. ಏನೊಂದನ್ನೂ ತರದೆ ಬಿಟ್ಟಿಲ್ಲ. ಇಂತಾಗಿಯೂ ಈ ಪ್ರಶ್ನೆಯೇಕೆ ? ಮಧ್ಯಾಹ್ನ ಬರುವಾಗ ಸಕ್ಕರೆ, ನೀರುಳ್ಳಿ, ಮೆಣಸು ತರಲು ಹೇಳಿದ್ದಾಳೆ; ತರುತ್ತೇನೆ. ಈಗ ಇನ್ನೇನಾದರೂ ತರಲು ಹೇಳಿದರೆ, ತರುತ್ತೇನೆ. ಇದಕ್ಕಾಗಿ ಕೋಣೆಗೆ ಬಂದು ಹೀಗೆ ನಿಂತು 'ಏನಾದರೂ ತರ್ಬೇಕಾಗಿತ್ತೆನವ್ವಾ' ಎಂದುದಕ್ಕೆ 'ತರ್ತೀಯಾ ಮಗು?' ಎಂದು ಕೇಳಿದಳೇಕೆ ? ಏನೋ ವಿಶೇಷವಿರಬೇಕು. ಏನೆಂದು ನಾನರಿಯೆ. ಏನಿರಬಹುದು ? ಏನೋ ಹೇಳಬೇಕೆಂದು ಅವಳ ಮನಸ್ಸು ತುಡಿಯುತ್ತಿದ್ದಂತೆ ಕಾಣುತ್ತೆ. ಹೇಳಿದರೇನು ತಿಳಿದುಕೊಳ್ಳುತ್ತಾನೋ- ಎಂದು ಹೇಳದೆ ಹೀಗೆ ಇದ್ದಿರಬಹುದೆ ?

ತಡಿಯೊಂದನ್ನು ತಂದು ಕೊಡುತ್ತೇನೆಂದು ಹೇಳಿದರೂ ಬೇಡ ವೆಂದು ಬರಿಯ ಕಂಬಳಿಯ ಮೇಲೇ ಮಲಗುತ್ತಾಳೆ. ಈಗ ಮೈ ಒತ್ತುತ್ತಿರಬಹುದು. ಅದಕ್ಕೇ ತಡಿಗೆ ಹೇಳಬೇಕೆಂದು ಬಂದಿರಬಹುದೆ ? ತಡಿ ಬೇಡವೆಂದು ತಾನೇ ಮೊದಲು ಹೇಳಿ ಈಗ ತಾನೇ 'ತಾ' ಎಂದು ಹೇಳಿದರೆ ಹೇಗೆಂದು, ಸುಮ್ಮನಿದ್ದಾಳೆ. ಅಯ್ಯೋ ಪಾಪ. ಆಗಲೇ ಮುದುಕಿ. ಮೈ ಒತ್ತುತ್ತದೆ. ಈ ಐವತ್ತು ವರ್ಷದ ವರೆವಿಗೂ ದುಡಿದುಡಿದು ಹಣ್ಣಾದ ದೇಹ. ಬರಿಯ ನೆಲದ ಮೇಲೋ, ಹರುಕು ಕಂಬಳಿಯ ಮೇಲೋ

ಮಲಗಿ ಕಾಲ ತಳ್ಳಿದ ತನ್ನ ತಾಯಿ ಈಗಲೂ ಇನ್ನೂ ಅಂತಹ
ಹಾಸುಗೆಯ ಮೇಲೆ ಮಲಗಿ ದಿನ ದೂಡಬೇಕೆ? ತಾನು, ದುಡಿ
ಯುತ್ತಿರುವ ಮಗನಿರುವಾಗ ಹೀಗಿರುವುದೆಂದರೇನು? ಮೊದಲು
ದ್ದಿಲ್ಲ; ಸರಿ. ಈಗ ಇದೆ. ಈಗೇಕೆ ಕಷ್ಟ? ನನಗೀವರಿವಿಗೂ
ಈ ಯೋಚನೆ ಬಾರದಿತ್ತೇಕೆ? ಇವಳಿನ್ನು ಎಷ್ಟು ದಿನ ದುಡಿಯ
ಬೇಕು? ಅಡುಗೆಗೆ ಆಳಿಟ್ಟುಕೊಳ್ಳಬೇಕು. ಈ ಮಾತು ಹೇಳಿದರೆ
ಬೇಕು ಸಿಡಿದು ಬೀಳುತ್ತಾಳೆ.

"ಯಾಕೆ ಮಗು, ನನ್ನ ಕೈ ಅಡಿಗೆ ಚೆನ್ನಾಗಿರಲ್ವೆ? ಅಳ್ಳೀ
ಬುದ್ಧಿ ಏನು ಮಾಡಿಯಾಳು!- ಅಂತೀಯೇನಪ್ಪಾ? ಅದ್ಕೇ
ಳಿಟ್ಕೋಬೇಕು.- ಅಂತ ಏಳ್ತಿಯಲ್ವೆ?" ಎನ್ನುತ್ತಾಳೆ. ಕಡೆಗೆ
ಉಸುರೆ ತಿಕ್ಕುವವಳನ್ನಾದರೂ ಇಟ್ಟುಕೊಳ್ಳೋಣವೆಂದರೂ ಬೇಡ
ನ್ನುತ್ತಾಳೆ. ಹಾಗೆ ಅಂದಿದ್ದಳು; ಈಗ ಕೇಳಿದರೆ ಅಂತೆಯೇ
ನ್ನುತ್ತಾಳೆಯೇ? ಈಗ ಕೈ ಸೋಲುತ್ತಿರಬಹುದು, ಹಾಯಾಗಿ
ಲಕಳೆಯೋಣವೆಂದು ಬಯಸಿರಬಹುದು, ಮುದಿಜೀವ. ಅದಕ್ಕೇ
ಬ್ಬ ಅಡುಗೆ ಆಳನ್ನಿಟ್ಟುಕೊಳ್ಳೋಣವೆಂದು ಹೇಳಲು ಬಂದಿರ
ಹುದು. ಹಾಗೆಯೇ ಇದ್ದಿರಬಹುದೆ? ಒಂದು ಒಳ್ಳೆಯ ಹಾಸುಗೆ;
ಬ್ಬ ಅಡುಗೆ ಆಳು. ಹೌದು, ಇವೆರಡೂ ಮುಖ್ಯ, ಈಗ!
ಪಕ್ಕೆ ಬಂದಿದ್ದಾಳೆ. ಎಂದೂ ನನ್ನ ಕೋಣೆಗೆ ಬಾರದಿದ್ದವಳು
ಂದು ಬರಬೇಕೆಂದರೇನು? ಏನಾದರೂ ಸಾಮಾನು ತರುವುದಿದ್ದ
ರೆ ತಕ್ಷಣವೇ ಹೇಳುತ್ತಿದ್ದಳು, ಬೇಕಾದಾಗ. ಆದರೆ ಇಂದೇಕೆ
ನುಮಾನಿಸುತ್ತಾ ನಿಂತಿದ್ದಾಳೆ. ಪಾಪ ಮುದುಕಿ, ಅಭಿಮಾನಿ!

"ಏನವ್ವಾ, ತಡಿ ಬೇಕು. ಹೌದಲ್ಲೊ? ಅದ್ಕೇನವ್ವಾ
ರತ್ತೇ ತರ್ತಿನೇಳು. ಸಂಜೆಗೆ ಕಾಲೇಜ್ನಿಂದ ಬರ್ತಿನಲ್ಲಾ. ಆಗ
ಟಿಕಡೆ ಹೋಗಿ ಬರೋಣ! ಆಂ?" ಎಂದ ಶಂಕರ.

"ತರ್ತೀಯಾ ಮಗು? ಎಳ್ಡು ತಾಂಬಾ!"

ಓ ಹೋ! ನನ್ನ ಕೋಣೆಯಲ್ಲಿ ಬರಿಯ ಒಂದು ಕಡ್ಡಿ ಚಾಪೆ ಇರುವುದು ನೋಡಿ; ಬರಿಯ ಚಾಪೆಯ ಮೇಲೆ ಮಲಗು ತ್ತಾನೆ; ಇವನಿಗೊಂದು, ತನಗೊಂದು. ಹೀಗೆ ಎರಡು ತೆಗೆದು ಕೊಂಡುಬಾ- ಎನ್ನುತಿದ್ದಾಳೆ.

"ನನಗೇನು ಬ್ಯಾಡವ್ವಾ ನಾನೇನು ನಿನ್ನಂಗೆ ಮುದುಕ್ನಾ, ತಡೀವ್ಯಾಲೆ ಮಲಿಕೊಳ್ಳಿಕ್ಕೆ? ನಿನಗೊಂದೇ ಸಾಕು. ನನಗೆ ಚಾಪೇನೇ ಸಾಕು."

"ಅಯ್ಯೋ ನನಗ್ಯಾಕಪ್ಪಾ ನೀನಂತೂ, ಮುದ್ಕೀಗೆ! ಇವ ತ್ತಿಲ್ಲಿ, ನಾಳಲ್ಲಿ! ಎಳ್ಡೂ ನಿನ್ಗೇ...!" ಎಂದು ನಸು ನಕ್ಕಳು.

ಶಂಕರನಿಗೆ ಆಶ್ಚರ್ಯವಾಯ್ತು.

"ಯಾಕವ್ವಾ ನನಿಗೆಳ್ಡು? ನಾನೇನು ರಾಜ ಕುಮಾರ್ನೆ, ಎಳ್ಡೆಳ್ಡು ತಡಿ ಹಾಸ್ಕೊಂಡು ಮಲ್ಗಾಕೆ? ಇರ್ಲಿ ಆ ಮಾತು. ಹ್ಞಾಂ ನಿನಗೊಂದು ತಡಿ- ಆ ಮೇಲೆ....? ಎಂದು ಚರ್ಮದ ಚೀಲವನ್ನು ಕಂಕುಳಿಗೇರಿಸಿ ಬಲಗೈಯಿಂದ ಎಡಗೈ ಬೆರಳೊಂದನ್ನು ಮಡಿಚಿ, ಎರಡನೇಯದಕ್ಕೆ ಕೈಯಿಟ್ಟು, ತಾಯಿಯ ಕಡೆ ನೋಡಿದ. ಆಗಲೇ ಏನೋ ಲೆಕ್ಕ ಹಾಕುವವನಂತೆ ಯೋಚಿಸಿ, "ಅವ್ವಾ ಪಕ್ಕದ ಮನೆಯೋರು ನಿನ್ಗೆ ಗೊತ್ತೇನು?" ಎಂದು ಕೇಳಿದ.

"ಹ್ಞಾನಪ್ಪಾ. ಬಾಳಾ ಒಳ್ಳೇ ಜನ. ಎಲ್ಲಾ ಹಳ್ಳಿಯೋ ರಂಗೇನೇ! ಈ ಪೇಟೇಲಿ ಇಂತಾ ಮನೆ ಇರೋದಂದ್ರೆ ಸೋಜಿಗ್ವೇ!" ಎಂದಳು.

"ಹಂಗಾದ್ರೆ ಈ ಕೆಲ್ಸ ಮಾಡು. ಅವ್ರಿಗೆ ಹೇಳು: ನಮ ಗೊಬ್ಬ ಅಡ್ಗೆ ಆಳ್‌ಬೇಕು; ಎಲ್ಲಿಯಾದ್ರೂ ಒಳ್ಳೇವ್ನಿದ್ರೆ ಕಳ್‌ಸ್ರಿ- ಎಂದು." ಎನ್ನುತ್ತ, "ಇನ್ನೂ ನೀನೇ ಎಷ್ಟು ದಿನಾ ಅಂತ ಕಷ್ಟ ಪಡ್ತೀಯಾ?" ಎಂದು ಮುಗಿಸಿದ.

ಶಂಕರ ಗಡಿಯಾರದ ಕಡೆ ನೋಡಿದಾಗ ಆಗಲೇ ಏಳೂ

ಮುಕ್ಕಾಲು; ಟಿಕ್, ಟಿಕ್, ಸಾಗುತ್ತಲೇ ಇತ್ತು ಕಾಲ. ಈ ನ್ರೊಳಗೇ ತಾನು ಬಸ್ಸನ್ನೇರಿ ಸಾಗಬೇಕಿತ್ತು. ಬಸ್ಸು ತಪ್ಪಿ ಹೋಯ್ತು. ಈಗೇನು ಮಾಡುವುದು ? ಪ್ರತಿದಿನವೂ ಏಳೂ ಮುಕ್ಕಾಲಿಗೆ ಬಸ್ಸು ಹತ್ತಿ, ಎಂಟು ಗಂಟೆಗೆ ಬಸ್ಸು ಇಳಿಯುತ್ತಿದ್ದ. ಆಗಲೇ ಲಾ ಕಾಲೇಜಿನ ಮೊದಲಗಂಟೆ ಹೊಡೆಯುತ್ತಿದ್ದುದು. ಕಾಲೇಜಿನ ಮೆಟ್ಟಲನ್ನೇರಿ, ತನ್ನ ತರಗತಿಗೆ ಕಾಲಿಟ್ಟನೆಂದರೆ ಎರಡ ನೆಯ ಗಂಟೆ ಬಾರಿಸುವುದು. ಆದರೆ ಇಂದು ಬಸ್ಸು ತಪ್ಪಿ ಹೋಯ್ತು. ಓಡಿ ಹೋದರೂ ಸಾಧ್ಯವಿಲ್ಲ. ಬಸ್ಸು ಹೋಗಿರು ತ್ತದೆ. ಎರಡನೆಯ ಬಸ್ಸು ಬರುವುದು ತಡ. ಈಗೇನು ಮಾಡು ವುದು ? ಇಂದಿನ ಮೊದಲ ಪೀರಿಯಡ್ 'ನಮ್ಮ ಘಟನೆ' ಇತ್ತು. ಅದನ್ನು ತಿಳಿದುಕೊಳ್ಳುವುದು ಅಷ್ಟೇನೂ ಪ್ರಯಾಸವಲ್ಲದಿದ್ದರೂ ಆ ಬಗ್ಗೆ ತಾನು ಕ್ಲಾಸಿನಲ್ಲಿ ಒಂದು ಪುಟ್ಟ ಭಾಷಣ ಮಾಡಬೇ ಕಿತ್ತು. ಅದಕ್ಕಾಗಿಯೇ ಇಂದು ಜೂನಿಯರ್, ಸೀನಿಯರ್ ತರಗತಿ ಗಳನ್ನು ಸೇರಿಸಿದ್ದು, ನಿನ್ನೆ ಉಪಾಧ್ಯಾಯರು ಹೇಳಿದ್ದರು: ನಾಳೆ ನೀನು 'ನಮ್ಮ ಘಟನೆ'ಯ ಬಗ್ಗೆ ಹತ್ತು ನಿಮಿಷ ಮಾತನಾಡಬೇಕು-! ಎಂದು. ಅದಕ್ಕೆಂದೇ ರಾತ್ರಿ ಒಂದು ಗಂಟೆ ಹೆಚ್ಚು ಮೀಸಲಿಟ್ಟು ಭಾಷಣವನ್ನು ಸಿದ್ಧಮಾಡಿಕೊಂಡಿದ್ದ. ಈಗ ಏನು ಮಾಡಬೇಕು ? ಸೈಕಲ್ಲಿದ್ದಿದ್ದರೆ ? ಸೈಕಲ್ಲಿದ್ದಿದ್ದರೂ ಸಮಯಕ್ಕೆ ಸರಿಯಾಗಿ ಹೋಗಲಾಗುವುದಿಲ್ಲ. ಈಗೇನು ಮಾಡಬೇಕಾಯ್ತು ?- ಆ ಉಪಾಧ್ಯಾಯರು ಬಹಳ ಒಳ್ಳೆಯವರು ಆದರೆ ಮನುಷ್ಯ ಅಷ್ಟೇ ಶಿಸ್ತು. ನಿನ್ನೆ ಒಪ್ಪಿಕೊಂಡೂ ಇಂದು ಹೋಗದಿದ್ದರೆ ಹೇಗೆ ? ಅವರು ಎಷ್ಟು ಕೋಪಗೊಳ್ಳುತ್ತಾರೆ ! ಅದರಲ್ಲೂ ಎರಡು ತರಗತಿ ಗಳನ್ನೂ ಕೂಡಿಸಿದ ಸಮಯ. ತನ್ನ ಮೊದಲ ಭಾಷಣ, ಆ ಕಾಲೇಜಿನಲ್ಲಿ. ತರಗತಿಯಲ್ಲಿ ಆಗಾಗ ಪ್ರಶ್ನೆಗಳನ್ನು ಹಾಕುತ್ತಿ ದ್ದುದೂ, ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದುದೂ- ಅಷ್ಟೇ

ನಡೆಯುತಿದ್ದುದು. ಇಂದು ಭಾಷಣ ಮಾಡಬೇಕಾಗಿತ್ತು "ಹೆದರಿ ಬಿಟ್ಟಿದ್ದಾನೆ!" ಎನ್ನರೆ ? ಪ್ರೋಫೆಸರ್ ನಾರಾಯಣ್‌ರವರು ಕಿಡಿಕಿಡಿಯಾಗಲಿಕ್ಕಿಲ್ಲವೆ ? ಈಗೇನು ಮಾಡಲಿ ? ಹೇಗೆ ಮಾಡಲಿ ?

ಶಂಕರನಿಗೆ ಬಗೆ ಹರಿಯಲಿಲ್ಲ. ಮಂಕಾಗಿ ನಿಂತುಬಿಟ್ಟ. ಮೌನವಾಗಿಯೇ ಹಿಡಿದು ನಿಲ್ಲಿಸಿದ ತಾಯಿ, ಹೊತ್ತಾಯಿತೆಂದು ಟಿಕ್, ಟಿಕ್, ಎನ್ನುವ ಗಡಿಯಾರ- ಏನು ಮಾಡಲೂ ಅರಿಯ ದಾಯಿತು ಶಂಕರನಿಗೆ, ಕೀಲಿ ಕೊಡದ ಗಡಿಯಾರದಂತೆಯೇ ನಿಂತ; ಕಾಲ ತಪ್ಪಿ ನಡೆಯುವ ಗಡಿಯಾರದಂತೆ ನಿಂತ !

"ಇಲ್ಲ ಮಗು. ಎರಡು ತಡಿ ಬೇಕು ! ನಾ ಹೇಳಿದ್ರೆ ತರಲ್ವೆ?" ತಾಯಿ ಇದ್ದಕ್ಕಿದ್ದಂತೆಯೇ ಮೌನ ಮುರಿದಳು ಯಾಕೆ- ಎಂದು ಹೇಳದೇ, ಹೀಗೇಕೆ ತಾಯಿ ಹೇಳುವಳು ? 'ಆಗಲಿ' ಎನ್ನಲೇ ? ಎರಡು ತೆಗೆದುಕೊಂಡು ಏನು ಮಾಡುವುದು ? ತಾನಂತೂ ತಡಿ ಹಾಸಿಕೊಳ್ಳುವದಿಲ್ಲ. ತಾಯಿಗೊಂದಾದರೆ ಸಾಕಾ ದೀತು, ಇರಲಿ ಬಿಡು; ಎರಡೂ ತಂದು, ಒಂದರಮೇಲೊಂದು ಹಾಸಿ ಮಲಗಿಸಿದರಾಯ್ತು- ಎಂದು ಕಣ್ಣಿನಲ್ಲೇ ನಕ್ಕು, "ಆಗಲವ್ವಾ ಎಂದ. ತಾಯಿಗೆ ಎಷ್ಟೋ ಸಂತೋಷವಾದಂತಾಯ್ತು.

"ನನಗೆ ಕಾಲೇಜಿಗೆ ಹೊತ್ತಾಯ್ತು. ಈಗ ಎರಡನೇ ಬಸ್ಸಿ ಗಾದರೂ ಹೋಗ್ತೀನಿ. ಹಂಗೇ ಅಪ್ಪಿಗೆ ಹೇಳಿಬಿಡು: ಅಡಿಗೆ ಆಳು ಬೇಕೆಂದು. ನೀನು ಹೇಳಿದಂತೆ ನಾನು ಎರಡು ತಡಿ ತರ್‍ತೀನಿ; ನಾನು ಹೇಳಿದಂತೆ ನೀನು ಅಪ್ಗೆ ಅಳು ತರ್ಬೇಕು ! ಆಂ!" ಎಂದು ರಾಗವಾಗಿ ಹೇಳುತ್ತಾ, ತನ್ನ ಜಾಣ್ಮೆಗೆ ತಾನೇ ಹೆಮ್ಮೆಪಟ್ಟ. ಒಂದೇ ಏಟಿಗೆ ಎರಡು ಹಣ್ಣುಗಳನ್ನು ಕಳಚಿ ಪಡೆದಷ್ಟು ಸಂತೋಷ ವಾಯ್ತು. ಅವನ ಕಣ್ಣು ಬೇರೆಯ ಚಿತ್ರವೊಂದನ್ನೇ ಕಾಣುತ್ತಿತ್ತು:

ರಾತ್ರಿ ಒಂಭತ್ತು ಗಂಟೆಗೆ ಊಟವಾಯ್ತು. ತಾಯಿಯ ಕೋಣೆಯಲ್ಲಿ ಶಂಕರ ಎರಡು ತಡಿಗಳನ್ನು ಒಂದರಮೇಲೊಂದನ್ನು

ಹಾಸಿ, ದಿಂಬು ಸರಿಪಡಿಸಿದ. ಕೈ ತೊಳೆದುಕೊಂಡು ಎಲೆಅಡಕೆ ಅಗಿಯುತ್ತಾ ತಾಯಿ ಒಳಬಂದಳು. ಅವಳು ನಸು ಮುಗುಳು ನಕ್ಕಳು. "ಏನೋ ಮಗು ಇದೆಲ್ಲಾ!" ಎಂದಳು. ಶಂಕರ ನಗುತ್ತ ಕಂಬಳಿಯನ್ನು ಕೊಡವಿ, ಅದರೊಳಗೊಂದು ಹಚ್ಚಡ ವನ್ನು ಹೊಂದಿಸಿ, ಹಾಸುಗೆ ಕೊನೆಯಲ್ಲಿ ಸರಿಗೆಯಾಗಿಟ್ಟ. ತಾಯಿ ಹಾಸುಗೆಯಮೇಲೆ ಕುಳಿತಳು. ಹಾಗೆ ಮಲಗಿದಳು. ಶಂಕರ ಮೆಲ್ಲನೆ ಅವಳ ಕಾಲೊತ್ತುತ್ತ ಮಾತನಾಡಿದ. "ಬಿಡಪ್ಪಾ ನಾನೇನು ಮೊಪ್ಲಂಗೆ ಹೊಲ್ಕ್ಯೋಗಿ ದುಡ್ದು ಬಂದಿಲ್ಲ, ಕಾಲಿಚಿಸ್ಕೊಳ್ಳಾಕೆ!" ಎಂದು ನಸು ಸಿಡುಕುತ್ತಾಳೆ. ಶಂಕರ ನಗುತ್ತ, ತಾಯಿಗೆ ಕಂಬಳಿ ಹೊದಿಸಿ, ತನ್ನ ಕೋಣೆಗೆ ಬಂದ.

ಹತ್ತುಗಂಟೆಯಾಯ್ತು. ಓದುತ್ತಿದ್ದ ಪುಸ್ತಕ ಮುಚ್ಚಿ, ಗಡಿಯಾರಕ್ಕೆ 'ಆಹಾರ' ಹಾಕಿ, ನಾಲ್ಕೂವರೆಗೆ ಅಲಾರಂ ಇಟ್ಟು, ಮಲ್ಲಿಗೆ ಬಳ್ಳಿಯಕಡೆ ಹೋದ. ತಂಗಾಳಿ ತೀಡಿತು. ಮಲ್ಲಿಗೆಯ ಮುಖ ಅಲ್ಲಾಡಿ ಶಂಕರನ ಮುಖದಕಡೆಗೇ ಒಲಿದು ಬಂತು. ಅದನ್ನು ನವುರಾಗಿ ನೇವರಿಸಿ, ಮುತ್ತಿಟ್ಟು "ಆಹಾ ನೀನು ಅಂತೆಯೇ ಮೃದು!" ಎಂದು ತುಂಬು ಕಣ್ಣಿನಿಂದ ನೋಡಿ, ಹಿಂದಿರುಗಿದ. ಸ್ವಾಮಿ ವಿವೇಕಾನಂದ, ಗಾಂಧೀಜಿ, ಸ್ವಾಮಿಗಳಿಗೆ ಕೈ ಮುಗಿದ; ಕಡ್ಡಿಚಾಪೆ ಹಾಸಿಕೊಂಡು, ದೀಪ ಆರಿಸಿ, "ಓಂ ಶಂಭೋ ಶಂಕರ!" ಎಂದು ಮಲಗಿದ.

ಗಡಿಯಾರ 'ಟ್ರೀಣ್' ಎಂದಿತು. ಗಂಟೆ ನಾಲ್ಕೂವರೆ. ಶಂಕರ ಎದ್ದ. ಏಳೂವರೆಗೆ ಅಲಾರಂ ಇಟ್ಟು, ಹೊರ ಹೋಗಿ ಬೆಳಗಿನ ಕಾರ್ಯ ಮುಗಿಸಿಕೊಂಡು, ಸ್ನಾನ ಮಾಡಿ, ಕೋಣೆಗೆ ಬಂದ. ಕಿಟಕಿಯೆಡೆ ಸಾಗಿ ಮಲ್ಲಿಗೆಯನ್ನು ಮುದ್ದಿಸಿ, ಪ್ರಾರ್ಥ ನೆಗೆ ಕುಳಿತ. "ಕರುಣಾಳು ಬಾ ಬೆಳಕೆ"; "ಮಾಡುವೆ ಶರಣು ಮಾಡುವೆ!" ಹಾಡಿದ. ಪುಸ್ತಕ ತೆರೆದು: "ತೇನ ವಿನಾ, ತೇನ

ವಿನಾ. ತೃಣಮಪಿ ಜಲ ನ ಚಲತಿ. ತೇನ ವಿನ." ಓದಿದ, ಕಡೆಗೆ, "ಓಂ ಶಾಂತಿಃ ಶಾಂತಿಃ ಶಾಂತಿಃ" ಎಂದು, ಮೇಲೆದ್ದ.

"ಸ್ವಾಮಿ ಹಾಲು!" ಹಾಲಿನವನು ಕೂಗಿದ. ಹೊರ ಬಾಗಿಲು ತೆರೆದು ಹಾಲು ಹಾಕಿಸಿಕೊಂಡು ಬಂದು ಒಲೆಯ ಮೇಲಿಟ್ಟ. ಆಗಲೇ ಬಂದ ಅಡುಗೆ ಆಳು ಕಸಗುಡಿಸುತ್ತಿದ್ದುದನ್ನು ನೋಡಿ, ತನ್ನ ಕೋಣೆಗೆ ಬಂದ.

"ಸ್ವಾಮಿ" ಕದ ತಟ್ಟಿ ಅಡುಗೆ ಆಳು ಅಡುಗೆ ಮನೆಗೆ ತೆರಳಿದ. ಶಂಕರ ತಲೆ ಎತ್ತಿದ: ಗಂಟೆ ಐದೂ ಮುಕ್ಕಾಲು! ಎದ್ದು ಅಡುಗೆ ಮನೆಗೆ ಹೋಗಿ, ಎರಡು ಲೋಟಗಳಲ್ಲಿ ಹಾಲು ಹಾಕಿಸಿಕೊಂಡು, ತಾನೇ ಸಕ್ಕರೆ ಬೆರಸಿ, ತಾಯಿಯ ಕೋಣೆಗೆ ತೆಗೆದುಕೊಂಡು ಹೋದ. ತಾಯಿಯನ್ನು ಎಬ್ಬಿಸಿ, ಬಚ್ಚಲಿಗೆ ಕರೆದೊಯ್ದ.

"ಐ ಬಿಡಪ್ಪಾ ನೀನಂತೂ, ಸಕ್ತಿ ಇಲ್ದೋಳ್ ಮಾಡ್ದಂಗೆ ಮಾಡ್ತಿ. ನನ್ಗೇನು ಕೈಕಾಲಿಲ್ವಾ?" ಎಂದು ತಾಯಿ ಸಿಡುಕುತಿದ್ದರೂ, ತಾನೇ ಬಿಸಿ ನೀರನ್ನು ತುಂಬಿ ಕೊಟ್ಟ. ಮುಖ ತೊಳೆದಾದ ಮೇಲೆ ಕೋಣೆಗೆ ಕರೆದು ತಂದ. ಹಾಲು ಕೊಟ್ಟು, ತಾನೂ ಕುಡಿಯಲು ಕುಳಿತ.

"ನಾನೇನು ಅಸುಗೂಸೇನೋ ಮಗು. ಆಲು ಕುಡಿಯೋಕೆ? ನಂಗೆ ಬ್ಯಾಡಪ್ಪಾ!"

"ಹಂಗಾದ್ರೆ ನಾನು ಹಸುಗೂಸೇನು? ದಿನಾ ಹೀಗಂತಿಯಾ. ಸೇರ್ ಸೇರ್ ಕುಡಿತಿಯಾ!" ಎಂದು ನಗೆಯಾಡಿದ ಶಂಕರ.

"ಓ ನೀನೇನು ಅಸುಗೂಸಲ್ವೆ, ಮುದುಕನ್ನಾ? ಇಪ್ಪತ್ತೈದೋರ್ಸಕ್ಕೇ ಮುದ್ಕಾ ಆಗ್ತಾರೇನು?" ನೀನು ಮುದ್ಕ ಆದ್ರೂ ನನ್ಗೆ ನೀನು ಅಸುಮಗ್ನೇ!.... ನೀನು ಹಿಂಗೆ ಕುಡಿಸಿದ್ರೆ ಸೇರಲ್ಲ, ಪಂಚೇರೂ ಕುಡೀಬೌದು!" ಎಂದು ಲೋಟವನ್ನು ಬರಿದು

ಮಾಡಿ ಕೆಳಗಿಟ್ಟಳು, ತಾಯಿ.

"ನಾನು ಮುದ್ಕ ಆಗೋದ್ರೊಳ್ಗೆ ನೀನೆಲ್ಲಿರ್ತಿಯಾ!" ಎಂದು ಶಂಕರ ನಕ್ಕ.

"ನಾನು ಜಲ್ದಿ ಸಾಯ್‌ಬೇಕಂತ ನಿನ್‌ಗಿಷ್ಟ್ವೇನೋ; ಕಳ್ಳಾ....? ಒಂಬತ್ತು ತಿಂಗ್ಳೊತ್ತು, ಹೆತ್ತು, ಸಾಕಿ, ಸಲಯಿದ್ಕೇ ನೀನಂತೀಯಲ್ವೆ: 'ಜಲ್ದೀ ಸಾಯೀ' ಅಂತಾ?"

"ಸಾಯೋ ಮುದ್ಕ ಸಂಜೆ ಸೂರ್ಯ,

ನೆಗ್ತ ನಿಲ್ಲೋಕ್ ಇವ್‌ಗೇನ್ ಕಾರ್ಯ?" ಅಂತಾ ಕನ್ನಡ ಕವಿ ಒಬ್ರು ಹೇಳ್ತಾರವ್ವಾ....? ಎಂದು ಕಣ್ಣಿನಲ್ಲಿ ತುಂಟು ನಗೆ ನಕ್ಕ.

"ಸತ್ತೋದ್ ಸೂರ್ಯನ್ನ, ಕತ್ಲಾಗ್ ನೆನಿಸ್ಕೊಂಡು, ಯಾವಾಗ್ ಉಟ್ತೀಯೋ- ಅಂತ ಅಳಲ್ವೇನು, ಆಮೇಲೆ?" ಎಂದು ತಾಯಿ ಅಂದಳು. ಅವಳ ಮಾತಿನ ಅರ್ಥ ಶಂಕರ ಚನ್ನಾಗಿ ಗ್ರಹಿಸಿದ. ಇನ್ನೂ ಚೇಷ್ಟೆ ಮಾಡ್ಬೇಕೆನ್ನಿಸಿತು.

"ಸೂರ್ಯ ಇಲ್ದಿದ್ರೂ ಪರ್ವಾಗಿಲ್ಲ; ಎಲೆಕ್ಟ್ರಿಕ್ ದೀಪ ಐಯ್ತೆ" ಎಂದ, ತಾಯಿ ತನ್ನ ಮಾತಿಗೆ ದಂಗು ಬಡಿದು, ತನ್ನ ಮಗ ಎಷ್ಟು ಬುದ್ಧಿವಂತ!- ಎಂದು ಹೆಮ್ಮೆ ಪಡುತ್ತಾಳೆ- ಎಂದು.

"ಅದನ್ನ ಕೆಡಿಸ್ಕೊಂಡ್‌ಬಿಟ್ಟೆ. ಸರಿಮಾಡ್ಕೋ ಅಂದ್ರೆ ಬ್ಯಾಡ ಅಂತೀ" ಎಂದು ನಿಟ್ಟುಸಿರಿಟ್ಟಳು. ತಾಯಿಯ ಮಾತು ಶಂಕರನ ಹೃದಯಕ್ಕೆ ನಾಟಿ, ತಿರುವಿತು. ವಿಷಯ ಎಲ್ಲೆಲ್ಲಿಗೋ ಹೋಯ್ತೆಂದು, ಫಕ್ಕನೆ ಎಚ್ಚರಾದ, ಅದನ್ನು ತೊಡೆಯಲು.

"ಹಂಗಾದ್ರೆ ಸಾಯೊಲ್ಲಾನ್ನೂ!" ಎನ್ನುತ್ತ ಇಲ್ಲದ ನಗು ನಕ್ಕು, ಲೋಟಗಳನ್ನು ತೆಗೆದುಕೊಂಡು, ಅಡುಗೆ ಮನೆಯಲ್ಲಿ ಅವುಗಳನ್ನಿಟ್ಟು, ತನ್ನ ಕೋಣೆಗೆ ಮರಳಿದ; ಓದತೊಡಗಿದ. ಗಂಟೆ ಆರೂಕಾಲು!

ಆಳೂ ಕದ ತಟ್ಟಿ ಹೋದ. ಶಂಕರ ಹೋಗಿ ತಿಂಡಿಯ ತಟ್ಟೆಗಳನ್ನು ತೆಗೆದುಕೊಂಡು, ತಾಯಿಯ ಕೋಣೆಗೆ ಹೋದ. ಅಲ್ಲಿ ತಾಯಿಯೊಡನೆ ಮಾತನಾಡುತ್ತ ತಿಂಡಿ ತಿಂದು, ಹಾಲು ಕುಡಿದು, ಕೈ ತೊಳೆದುಕೊಂಡ. ಎದ್ದು ತಾಯಿಗೆ ನಮಸ್ಕಾರ ಮಾಡಿ, ತಲೆ ಎತ್ತಿದ.

ಗಡಿಯಾರ 'ಟ್ರಿಣ್' ಎಂದಿತು. ಶಂಕರ ಅತ್ತ ನೋಡಿದ. ಗಡಿಯಾರ ಟ್ರಿಣ್ ಎಂದು ಆಗಲೇ ಅರ್ಧಗಂಟೆಯಾಗಿದೆ. ಈಗ ಬರಿಯ ಟಿಕ್, ಟಿಕ್, ಎನ್ನುತ್ತಿದೆ. ತಾಯಿ ನಿಂತೇ ಇದ್ದಳು, ಎದುರಿಗೆ. ಓಹೋ ತಾನು ಹಗಲು ಕನಸು ಕಾಣುತ್ತಿದ್ದೇನೆಂದ ರಿತುಕೊಂಡ. ಗಂಟೆ ಎಂಟಾಗಿದೆ! ಆಯ್ತು ಇನ್ನು ಕಾಲೇಜಿಗೆ ಹೋದರೂ ಪ್ರಯೋಜನವಿಲ್ಲ. ಹೋದರೆ ಎರಡನೆಯ ಪೀರಿಯಡ್ ಸಿಕ್ಕೀತು. ಮುಖ್ಯವಾದ ಮೊದಲನೆಯ ಪೀರಿಯಡ್ಡೇ ಆಗಿ ಹೋದ ಮೇಲೆ ಹೋಗಿ ಏನು ಪ್ರಯೋಜನ? ಹೌದು. ಪ್ರೊಫೆಸರರ ಕ್ಷಮೆ ಕೇಳಿಕೊಳ್ಳಲಾದರೂ ಹೋಗೋಣ.

"ಹ್ಞೂ- ನಾನೀಗ ಕಾಲೇಜಿಗೆ ಹೋಗಿಬರ್ತೀನಿ. ಆಂ! ನಾನ್ ಬರ್ಲಾ?" ಎಂದು ಹೇಳಿ ತಾಯಿಯನ್ನು ತನ್ನ ಕೋಣೆಯಲ್ಲಿಯೇ ಬಿಟ್ಟು ಹೊರ ಹೊರಟ. ಹುಲಿ ಚರ್ಮ ಯಾವಾಗಲೋ ಮರೆತಿದ್ದ. ಅವನಿಗೆ ಅವಸರ ಬೆಂಕಿಯಾಗಿ ಸುತ್ತುವರಿದಿತ್ತು.

ತಾಯಿ, ಸುಂದರವಾಗಿ ಇಟ್ಟುಕೊಂಡಿರುವ ಕೋಣೆಯನ್ನು ನೋಡಿ, "ಒಳ್ಳೇ ಮಗು. ತನ್ನ ತಾಯಿ ಅಂದ್ರೆ ಸಾಯ್ತಾನೆ. ಆದ್ರೆ ಏನ್ಬಂತು!" ಎಂದು ನಿಟ್ಟುಸಿರಿಡುತ್ತಾ "ನಾನೀಗ ಅಂಗ್ ಮಾಡಿದ್ರೆ ಮತ್ತೆ ಎಲ್ಲಿಯಾದ್ರೂ ಮೊದಲಂಗೇ ಓಡಿ ಓಗಿ ಬಿಟ್ರೆ?" ಎಂದು ತನ್ನೊಳಗೇ ಗುಣಿಸಿಕೊಂಡಳು. ಎದೆ ಕಂಪಿಸಿತು. ಹಣೆಯ ಮೇಲೆ ನಾಲ್ಕು ಹನಿ ಬೆವರಿಳಿಯಿತು. ಹಿಂದಿರುಗಿ ಗಾಂಧೀಜಿಯವರ ಚಿತ್ರಕ್ಕೆ ಕೈ ಮುಗಿದು:

"ನಮ್ಮಪ್ಪಾ ಇವನ್ಗೆ ನೀನೇ ಬುದ್ದೀ ಕೊಡಪ್ಪ. ನಾನು ಮಾಡುವ ಕೆಲ್ಸದಲ್ಲಿ ಜಯ ದೊರೀವಂತೆ ನೀನೆ ಮಾಡಪ್ಪಾ" ಎಂದು ಮನಸ್ಸಿನಲ್ಲಿಯೇ ಕೇಳಿಕೊಂಡಳು. ಮುಗಿದ ಕೈಯ್ಯನ್ನು ಇಳಿಸಿ, ಅಡುಗೆ ಮನೆಗೆ ಹೋಗಿ ಊದಿನ ಕಡ್ಡಿ ಹಚ್ಚಿಕೊಂಡು ಒಂದು ಗಾಂಧೀಜಿ ಚಿತ್ರಕ್ಕೊಂದು, ಸ್ವಾಮಿಗಳ ಚಿತ್ರಕ್ಕೊಂದು ಇಟ್ಟು, ಇಬ್ಬರಿಗೂ ಮತ್ತೊಮ್ಮೆ ಕೈ ಮುಗಿದಳು.

"ಅನ್ನ ಕೊಟ್ಟು, ವಿದ್ಯಾಕಲ್ಸಿ ದೊಡ್ಡೋನ್ ಮಾಡ ದೇವ್ರು ನೀನು, ನೀನೂ ಬುದ್ದೀ ಕೊಡಪ್ಪಾ ಇವನ್ಗೆ!" ಎಂದು ಸ್ವಾಮಿಗಳ ಚಿತ್ರಕ್ಕೂ ಕೈ ಮುಗಿದಳು. ಗಾಂಧೀಜಿಯ ಚಿತ್ರ ಅಲುಗಿತು, ಆಶೀರ್ವಾದ ಮಾಡಲೆಂದೇ ಎತ್ತಿದ ಕೈ ಚಲಿಸಿದಂತಾಯ್ತು. ಸ್ವಾಮಿಗಳ ವಿಶಾಲ ಕಣ್ಣುಗಳೂ ಅಲುಗಿದವು. ಇಬ್ಬರೂ ಹರಸಿದಂತಾಯ್ತು. ಮತ್ತೊಮ್ಮೆ ಕೈ ಮುಗಿದು, ಅಡ್ಡಬಿದ್ದು, ಎರಡು ಚಿತ್ರಗಳನ್ನೂ ಮುಟ್ಟಿ ಕಣ್ಣಿಗೆ ಒತ್ತಿಕೊಂಡಳು.

ಕೊಡ ತುಳುಕಿತು.

೧

ಮುಖಕ್ಕೆ ಮುತ್ತಿಟ್ಟ ಕುಂಬಳ ಬಳ್ಳಿಯ ಕುಡಿಯನ್ನು ಇಂದು ನೇವರಿಸಲಿಲ್ಲ. ಏಕೆ, ಅದರ ಕಡೆ ಲಕ್ಷ್ಯಯನ್ನೂ ಕೊಡಲಿಲ್ಲ. ಮಲ್ಲಿಗೆ ಬಳ್ಳಿಯ ಬುಡದ ಒತ್ತಿನಲ್ಲಿಯೇ ಮೊಳೆತು ಕುಡಿವರಿದು, ಮಾಳಿಗೆಯನಾವರಿಸಿ, ಮನೆಯ ಮುಂದಿನ ಚಪ್ಪರಕ್ಕಿಳಿದು ದಾರಿಗೆ ಮೊಗವನ್ನು ಚಾಚಿತ್ತು, ಕುಂಬಳ. ಶಂಕರ ಹೊರಗೆ ಹೋಗುವಾಗ, ಒಳಗೆ ಬರುವಾಗ ಮುಖಕ್ಕೆ ಮುತ್ತನಿಡುತ್ತಿತ್ತು, ಆ ಕುಂಬಳ ಕುಡಿ. ಹಸುರು ಹಾವಿನಂತೆ ಒಡಮುರಿದು ನೀಳವಾಗಿ ತೂಗುತ್ತಿರುವ ಬಳ್ಳಿಗೆ ನೂರಾರು ಎಳೆಯ ಎಲೆಗಳು. ಬಸವನ ಹುಳುವಿನ ಕೋಡಿನಂತಹ ಎಳೆ ಎಳೆಯ ಬಿಳಲುಗಳು, ಉಂಗುರುಂಗುರವಾಗಿ ಮನಮೋಹಕವಾಗಿವೆ, ಶಂಕರನ ಟೊಪ್ಪಿಗೆಯ ಮೇಲೆ 'ಬೆರಳಾಡಿಸಿದರೆ' ಆ ಕುಡಿಗೆ ಒಂದಾನಂದವೇನೋ! ಅವನ ಮೊಗಕ್ಕೆ ಮುತ್ತನಿತ್ತರೆ ಅದರ ರಕ್ತ; ಶಕ್ತಿಯುತವಾಗಿ ಡಾಂಗುಡಿಯಿಡಲು ಮುಂದುವರಿಯುವುದೇನೋ! ಮನೆಯ ಮುಂದುಗಡೆ ಇರುವ ಆ ಎರಡು ಹೂಗಿಡಗಳು ಆ ಕುಂಬಳದ ಸ್ಥಾನವನ್ನು ಗಳಿಸಲಾರವು.

ತುಸು ದೂರದಿಂದ ಶಂಕರ ಮುಗುಳ್ನಗುತ್ತಾನೆ, ಆ ಕುಡಿಯನ್ನು ಕಂಡು. ಹತ್ತಿರಕ್ಕೆ ಬಂದಾಗ ತಲೆತೂಗಿ ತುಟಿ ತೆರೆದು

ುದ್ದನಿಡುತ್ತದೆ; ಟೊಪ್ಪಿಗೆಯನ್ನು ಮೃದುವಾಗಿ ಸವರುತ್ತದೆ. ಂಕರ ಅದನ್ನು ಹೂಹಗುರವಾಗಿ ನೇವರಿಸುತ್ತಾನೆ. ದಿನ ನವೂ ಸಂಜೆಗೆ ತುಸು ಮೇಲೆತ್ತಿ ಅದರ ಉದ್ದವನ್ನು ಚಪ್ಪರದಲ್ಲಿ ಡಗಿಸುತ್ತಾನೆ. ಮರುದಿನ ಮತ್ತೆ ಕುಡಿವರಿಯುತ್ತದೆ. ಮತ್ತೆ ೀವರಿಸುತ್ತಾನೆ; ಮತ್ತೆ ಮೇಲೆತ್ತಿ ಚಪ್ಪರದಲ್ಲಡಗಿಸಿ, ಅದರ ುಖವನ್ನು ದಾರಿಗೆ ಬಿಡುತ್ತಾನೆ. ಏನು ಮೋಹವೋ ೆ ಕುಂಬಳದಲ್ಲಿ; ಏನುನೇಹವೋ ಆ ಕುಡಿಯಲ್ಲಿ; ಏನು ಪುಳಕವೋ ೆ ಸ್ಪರ್ಶನದಲ್ಲಿ; ಎಂಥ ರಸವೋಸರುವದೋ ಮುದ್ದಿನಲ್ಲಿ.

ಹೌದು ಏನೋ ನೇಹ, ಮೋಹ, ಪುಳಕ- ಆ ಎರಡರಲ್ಲಿ: ುಲ್ಲಿಗೆ, ಕುಂಬಳ. ಅವೆರಡರಲ್ಲಿಯೇ ಏನೋ ಪ್ರೀತಿ. ಮನೆಯ ುುಂಭಾಗದ ಅಕ್ಕ ಪಕ್ಕದಲ್ಲಿ ಎರಡು ಹೂಗಿಡಗಳನ್ನು ನಟ್ಟಿ ್ದಾನೆ. ಒಂದು ಕಸಿಮಾಡಿದ ಕಣಗಿಲೆ. ಇನ್ನೊಂದು ಮೊನ್ನೆ ಾನೇ ನಟ್ಟ ಗುಲಾಬಿ. ಅವುಗಳ ಆರೈಕೆಯನ್ನೂ ಶಂಕರನೇ ಾಡುತ್ತಾನೆ. ಸಂಜೆ ಮನೆಗೆ ಬಂದವನು ಅಂಗಳವನ್ನು ಗುಡಿಸಿ, ೆ ಗಿಡಗಳ ಮಡಿಗಳನ್ನು ಸರಿಮಾಡಿ, ನೀರೆರೆದು, ಒಂದು ೃಪ್ತಿಯ ಮುಗುಳು ನಗುತ್ತಾನೆ. ಕೋಣೆಯಲ್ಲಿ- ದಾರದ ನೆರವಿ ಿಂದ ಒಳಹೊಕ್ಕು ಕುಡಿವರಿದು ಅಲ್ಲಲ್ಲಿ ಮೊಗ್ಗು ನಗಲು ನೆರೆದ ುಲ್ಲಿಗೆ; ದಿನದಿನವೂ ನೇವರಿಸಿ ಮುದ್ದಿಡುವ ಕುಂಬಳ; ಅಷ್ಟೆತ್ತ ರಕ್ಕೆ ಬೆಳೆದು, ಗಾಳಿಗೆ ಕೋಲು ಕೋಲಾಗಿ ಅಲ್ಲಾಡುವ ಕಣಗಿಲೆ; ಈಗೀಗ ಹಸರು ನಗುವ ಗುಲಾಬಿಯ ದಂಟು- ಇವುಗಳಲ್ಲಿ ಏನೋ ಮೋಹ, ಏನೋ ಪ್ರೀತಿ, ಏನೋ ಪುಳಕ. ಅದೆಂತಹದೋ!

ಆದರೆ ಇಂದು ಮುಖಕ್ಕೆ ಮುದ್ದಿಟ್ಟ ಕುಂಬಳವನ್ನು ಗಮ ಿಸಲಿಲ್ಲ. ಅವಸರವಿತ್ತು ಅವನ ನಡಿಗೆಯಲ್ಲಿ. ತಾಯಿಗಿನ್ನು ಕೆಲಸವಿಲ್ಲವೆಂಬ ಸಂತೋಷ, ಕಾಲೇಜಿಗೆ ಹೊತ್ತಾಯಿತೆಂಬ ಕಾತರ- ಎತ್ತಿದ್ದ ಶಂಕರ. ಪ್ರಾಕಾರದ ಕದ ತೆರೆದು

ಅವಸರದಿಂದಲೇ ಅದನ್ನು ಮುಚ್ಚಿ ಮುಂದುವರಿದ. ಹಿ
ಉಳಿಯಿತು, ಚಿಕ್ಕವಿಸ್ತೀರ್ಣದ ಪ್ರಾಂಗಣ. ಚಿಕ್ಕದಾದರ
ಚೊಕ್ಕಟವಾಗಿದೆ. ಅಲಂಕಾರವಿಲ್ಲದ ಕಾಂಪೌಂಡ್ ಗೇಟ
ಮರದ ಒಂದು ಬಾಗಿಲು.

ಬಸ್‌ಸ್ಟ್ಯಾಂಡಿಗೆ ಹೋಗಿ ಕಾದು ನಿಂತ, ಶಂಕರ. ತುಂಬಿ
ಬಸ್ಸು ಬಂದು ನಿಂತುದು, ಹತ್ತುನಿಮಿಷಗಳ ನಂತರ. ಸ್ಥ
ಸಿಕ್ಕದೇನೋ ಎಂಬ ಗಾಬರಿಯಾಯ್ತು. ಹನುಮಂತನ ಬಾಲ
ನಡು ರೋಮ, ಶಂಕರ. ಒಬ್ಬೊಬ್ಬರೇ ಬಸ್ಸು ಹತ್ತಿ ಹೋ
ಕುಳಿತುಕೊಂಡರು. ಶಂಕರನ ಎದೆ ಡವಗುಟ್ಟುತ್ತಿತ್ತು, ಎಲ್ಲಿ ತ
ಮುಂದಿನವನಿಗೇ ಸ್ಥಳ ಮುಗಿಯುತ್ತದೋ ಎಂದು.

"No Seats" (ಸ್ಥಳವಿಲ್ಲ) ಕಂಡಕ್ಟರ್ ಕೂಗಿ
ಶಂಕರನ ಎದೆ ಧಸಕ್ಕೆಂದಿತು. ಒಂದು ಹೆಜ್ಜೆ ಬಸ್ಸಿನಲ್ಲಿ, ಇನ್ನೊಂ
ಕೆಳಗೆ! "Get in Sir" (ಒಳಗೆ ನಡೆಯಿರಿ) ಕಂಡಕ್ಟ
ದಯಪಾಲಿಸಿದ. ಶಂಕರ ಒಂದು ಉಸಿರುಬಿಟ್ಟ. ಹೋ
ಕುಳಿತುಕೊಳ್ಳಲು ಅತ್ತಿತ್ತ ನೋಡಿದ. ಎಲ್ಲಿಯೂ ಖಾಲಿ ಇಲ್
ನಿಂತುಕೊಂಡೇ ಹೋಗುವಂತಾಯ್ತು.

ಅತ್ತಿತ್ತ ನೋಡುವಾಗ ಮಹಿಳೆಯರ ಸಾಲಿನಲ್ಲಿ ಅವ
ದೃಷ್ಟಿ ನಟ್ಟಿತು. ಆಶ್ಚರ್ಯಮಿಶ್ರಿತ ಎಳನಗೆ ಅವನ ತುಟಿಯ
ಮಿಂಚಿತು. ಅವರಿವರ ಅರಿವೆಯಿಲ್ಲದೆಯೇ ಅವನು ಕಣ್ಣಲ್ಲಿಯೆ
ನಕ್ಕ. ಆ ನಗುವಿನಲ್ಲಿ: ವ್ಯಥೆ, ಸಂತಸ, ಕನಿಕರ ಮೂರು
ತುಂಬಿದ್ದವು. ಅವುಗಳನ್ನು ಪೂರ್ಣ ವ್ಯಕ್ತಪಡಿಸಲು ಅವ
ಕಣ್ಣುಗಳು ಏನೇನೋ ಪ್ರಯತ್ನ ಪಡುತ್ತಿದ್ದರೂ ಪೂರ್ಣ ಜಯ
ಪಡೆಯಲಿಲ್ಲ. ಅವಳ ಕಣ್ಣುಗಳು ಊದಿದ್ದವು. ನಸುತುಸ
ಕೆಂಪಾಗಿಯೇ ಇದ್ದುವು. ಒಮ್ಮೆ ನೋಡಿ ತಲೆ ತಗ್ಗಿಸಿದಳು.

ಬಸ್ಸು ಓಡುತ್ತಿತ್ತು. ಶಂಕರ ಒಂದು ಕೈಯಲ್ಲಿ ಬಸ್ಸಿ

ಕಂಬಿಯನ್ನೂ, ಮತ್ತೊಂದರಲ್ಲಿ ತನ್ನ ಕೈಚೀಲವನ್ನೂ ಹಿಡಿದು ಕೊಂಡಿದ್ದ. ಎರಡು ಕಣ್ಣುಗಳಲ್ಲೂ ಆ ಯುವತಿಯನ್ನು ತುಂಬಿ ಕೊಂಡಿದ್ದ. ಅವನ ನೆಟ್ಟದಿಟ್ಟಿ, 'ಲಾ ಕಾಲೇಜ್' ಎಂದು ಕಂಡಕ್ಟರ್ ಕೂಗುವವರೆವಿಗೂ ಕದಲಲಿಲ್ಲ. ಬಸ್ಸು ನಿಂತಿತ್ತು. ಚಂಗನೆ ಇಳಿದು, ಬಸ್ಸು ಇಳಿದು ಹತ್ತುವವರಿಗೆ ದಾರಿ ಬಿಟ್ಟು ನಸು ದೂರ ನಿಂತುಕೊಂಡ. ಆ ಯುವತಿಯೂ ಇಳಿದಳು.

''ಯಾಕೆ ತಡವಾಯ್ತು ? ಈ ಬಸ್ಸಿಗೆ ಬಂದಿರಿ ?'' ಮೊದಲು ನುಡಿದವಳು ಆಕೆ.

"ಯಾಕೆ ನಾಲ್ಕು ದಿನ ಕಾಲೇಜಿಗೆ ಬರಲಿಲ್ಲ ?" ಅವಳ ಪ್ರಶ್ನೆಗೆ ಉತ್ತರಿಸದೆ, ತಾನೊಂದು ಪ್ರಶ್ನೆ ಹಾಕಿದ ಶಂಕರ.

"ಯಾರು ಮನೆಯಲ್ಲಿ ಕಟ್ಟಿ ಹಾಕಿದ್ದರು, ತಡವಾಗಿ ಬರಲು?" ಅವಳು ಮತ್ತೊಂದು ಪ್ರಶ್ನೆ ಹಾಕುತ್ತ, ''ಯಾರೋ ಇರಬೇಕು. ಅವರು ಬಂದರೆ ?'' ಎಂದು ಕಳೆಯಿಲ್ಲದ ನಗು ನಗುತ್ತ ಕೇಳಿದಳು

"ಯಾರು ಲಲಿತ ? " ಹೆಜ್ಜೆಯನ್ನು ಹಾಕುತ್ತ ಅಚ್ಚರಿಯಿಂದಲೇ ಕೇಳಿದ, ಶಂಕರ. ಅವನಿಗೆ ಬಗೆಹರಿಯದ ಪ್ರಶ್ನೆಯಾಗಿತ್ತು. "ಅವರು ಬಂದರೆ ? " ಯಾರು ಬಂದರು ? ಯಾರವರು ?

"ಯಾರು ಲಲಿತ ?" ಮತ್ತೆ ಪ್ರಶ್ನಿಸಿದ. ಅವಳು ಮತ್ತೆ ಮಾತನಾಡಲಿಲ್ಲ. ಮುಖ ತಗ್ಗಿತ್ತು. ಸೆರಗು ತಲೆತುಂಬ ಮುಚ್ಚಿತ್ತು. ಶಂಕರನಿಗೆ ಇದೊಂದೂ ಅರ್ಥವಾಗಲಿಲ್ಲ. ಲಲಿತ ಈ ಪ್ರಶ್ನೆಯನ್ನೇಕೆ ಕೇಳಿದಳು ? ಏನಿದರ ಅರ್ಥ ? ಮತ್ತೊಮ್ಮೆ ಕೇಳಿದರೂ ಅವಳು ಉತ್ತರಿಸದೆ, ಮೌನವ್ರೋ ಎಂಬಂತಹ "ಯಾರಿಲ್ಲ.... ಸುಮ್ಮನೆ ಅಂದೆ." ಎಂದುಬಿಟ್ಟಳು. ಅವಳ ಆ ದನಿ ಆಳವಾದ ಗಭೀರ ಬಾವಿಯ ಮೂಲೆಯೊಂದರಿಂದ ಸೂಸಿ ಬಂದಂತಿತ್ತು.

"ಹೋಗಲಿ. ನೀನು ಈ ನಾಲ್ಕುದಿನ ಯಾಕೆ ಬರಲಿಲ್ಲ ಕಾಲೇಜಿಗೆ ? ಯಾಕೋ ಸೊರಗಿದಂತೆ ಕಾಣುತ್ತೀಯೆ ! ಮೈಯಲ್ಲಿ

ಚನ್ನಾಗಿಲ್ಲವೆ ? ಮುಖದಲ್ಲಿ ಕಳೆಯಿಲ್ಲ. ಕಣ್ಣೇಕೋ ಊದಿ ಕೊಂಡಂತಿವೆ....!”

“ಏನೂ ಆಗಿಲ್ಲ. ನೀವು ನೋಡಲು ಬಂದಿದ್ದಿರಲ್ಲ!” ಸ್ವಲ್ಪ ಸಿಡುಕೂ ತುಂಬಿದ್ದಂತೆ ತೋರಿತು. ಆದರೆ ಗಡುಸಾಗಿರಲಿಲ್ಲ. ಮಂಜು ಸುರಿವ ವೇಳೆ ದೂರದಲ್ಲಿ ಮಾತನಾಡಿದಂತಿತ್ತು. ಶಂಕರನ ಹೃದಯ ಕಂಪಿಸಿತು. ಹೌದು. ಪಾಪ. ಲಲಿತೆಗೆ ಚನ್ನಾಗಿಲ್ಲ. ಜ್ವರ ಬಂದಿದ್ದಿರಬೇಕು. ಈ ನಾಲ್ಕು ದಿನವೇಕೆ ಬರಲಿಲ್ಲ - ಎಂಬ ಯೋಚನೆ ಬಂದಿದ್ದರೂ ಅವಳ ಮನೆಗೆ ಹೋಗಿಬರಬೇಕೆನ್ನಿಸಿರ ಲಿಲ್ಲ. ಆ ಮನೆಗೆ ಹೋಗಬೇಕಿತ್ತೆ ? ಈ ಪವಿತ್ರೆಯ ಮನೆಗೆ ? ಈ ತಪಸ್ವಿನಿಯ ಮನೆಗೆ ? ಎರಡನೆಯ ಸಾರಿ ಹೋಗಿ ಬರಲು ನನಗೆ ಯೋಗ್ಯತೆ ಇದೆಯೇ ? ಅಪವಿತ್ರವಲ್ಲವೆ, ಅಲ್ಲಿಗೆ ತನ್ನಂಥ ವನು ಹೋಗುವದು ?

ಅಪವಿತ್ರ !

ಹೌದು. ಅಪವಿತ್ರ ! ತಾನು ನೀಚ !

ಶಂಕರನ ಮನಸ್ಸು ಹೊಯ್ದಾಡಿತು; ಗಾಳಿಗಿಟ್ಟ ದೀಪ. ಮತ್ತೆ ಯೋಚನೆ ಸುಳಿಯಿತು, ಬಿರುಗಾಳಿಯಾಗಿ. ಸ್ಥಿಮಿತದಲ್ಲಿದ್ದ ಅವನ ಮನಸ್ಸು ಛಿದ್ರಛಿದ್ರವಾಯ್ತು. ತಾನೆಂತಹ ತಪ್ಪು ಕೆಲಸ ಮಾಡಿದೆ ! ಒಂದು ವ್ಯಕ್ತಿಯ ಜೀವನವನ್ನೇ ಸುಖ ಸಾಮ್ರಾಜ್ಯ ತೊರೆಯುವಂತೆ ಮಾಡಿದೆನಲ್ಲ ! ಈ ವೇಳೆಗೆ ಲಲಿತ ಎಲ್ಲಿಯೋ ಸುಖವಾಗಿ, ಜೀವನ ಸಾಗಿಸುತ್ತಿದ್ದಳು, ತನ್ನ ಕೈ ಹಿಡಿದ ಪತಿ ಯೊಡನೆ. ಮಗುವೊಂದೂ ಆಗಿರುತ್ತಿತ್ತು. ಯೌವ್ವನದ ಮಧುರ ಕಾಲವನ್ನಿಂತು ಕಳೆಯಬೇಕಾಯ್ತೆ ? ಸಂನ್ಯಾಸಿನಿಯಾಗಿ ? ನನ ಗಾಗಿ ? ನನ್ನಂತಹ ಕೃತಘ್ನನಿಗಾಗಿ ? ಛೆ ! ಎಂತಹ ಕೃತಘ್ನ ನಾನು ! ಚಳಿವ ಕುಡಿಯ ಕೆಳೆ ಬೆಳೆಸಿ ಅದರ ಕತ್ತನ್ನು ಮುರಿದ ವನು, ನಾನೆ ! ನಾನೆ !! ನಾನೆ !!!

ಶಂಕರನ ಎದೆ ಡವ್ ಡವ್ ಡವ್ ಡವ್ ಹೊಡೆದುಕೊಳ್ಳು ತ್ತಿತ್ತು. ಅವನು ಎತ್ತಿಡುತ್ತಿದ್ದ ಅವನ ಕಾಲೇ ಬೆಟ್ಟವಾಗಿತ್ತು. ಮೌನವಾಗಿ ಸಾಗುತ್ತಿದ್ದ ಲಲಿತ, ಹಿಂದಿರುಗಿ ನೋಡಿದಳು: ಶಂಕರನ ತಲೆ ತಗ್ಗಿದೆ; ಕಣ್ಣೀರ ಹನಿಗಳೆರಡು ಉಬ್ಬಿದ ಗಲ್ಲಗಳ ಮೇಲೆ ಬಿಂದುವಾಗಿ ಮಿನುಗುತ್ತಿವೆ! ಅಚ್ಚರಿಯಾಯಿತು, ಲಲಿತಳಿಗೆ.

ನಾನಂದುದೇನು? ಅವರ ಎದೆಯನ್ನಿರಿಯುವ ಮಾತನ್ನಾಡಿದೆನೆ? ನಾನಂದುದಾದರೂ ಏನು? 'ನೀವು ನೋಡಲು ಬಂದಿದ್ದಿರಲ್ಲ!' ಎಂದುದೆ? 'ಅವರು ಬಂದರೇನು?' ಎಂದುದೆ? ಅಯ್ಯೋ ನಾನೇಕೆ ಆ ಮಾತನಾಡಬೇಕಿತ್ತು! ನಾನೆಂಥವಳು! ಹೌದು ನಾನೆಂಥವಳು? ಪಾಪಿ! ಪಾಪಿಯ ಮನೆಗೆ ಬರಬೇಕಿತ್ತೆ ಇವರು? ಪತಿತೆಯ ಮನೆಗೆ ಬರಬೇಕಿತ್ತೆ ಇವರು? ನಾನೇಕೆ ಅಲ್ಲಿಯೇ ಕೊರಳಿಗೆ ನೇಣಾಕಿಕೊಳ್ಳಲಿಲ್ಲ? ಇವರ ಈ ಪವಿತ್ರ ಮುಖವನ್ನು ನೋಡಿ ಅಪವಿತ್ರಗೊಳಿಸಬೇಕಾಯ್ತೆ? ನನ್ನ ಮನಸ್ಸನ್ನೇಕೆ ಬಿಗಿ ಹಿಡಿಯದೆ ಬಂದೆ? ಕಡೆಯಬಾರಿ ನೋಡಿ ಹೋಗೋಣವೆಂದಲ್ಲವೆ? ಇವರ ಕಾಲಿಗೆ ಬಿದ್ದು ಕ್ಷಮೆಕೇಳಿ ತೆರಳಬೇಕೆಂದಲ್ಲವೆ?.... ಇವರ ಕಣ್ಣಲ್ಲಿ ನೀರ ತರಿಸುವ ಮಾತನಾಡಿದೆನಲ್ಲಾ! ಇವರ ಜೀವನ ಪರ್ಯಂತವೂ ಈ ರೀತಿಯ ದುಃಖ ಕೊಡಲೆಂದೇ ನನ್ನ ಹೆತ್ತಳೇ, ತಾಯಿ? ಅಯ್ಯೋ ಅಮ್ಮಾ ನೀನಿದ್ದಿದ್ದರೆ ಇಂಥ ಗತಿಗೆ ನಾನಿಳಿಯುತ್ತಿದ್ದೆನೆ? ನೀನು ಇದ್ದಿದ್ದರೆ....!!

ಲಲಿತಳ ಕಣ್ಣೊ ನೀರ ಕರೆಯಿತು, ತೊಂಡೆವಣ್ಣಿನ ರಸವು ಸೋರುವಂತೆ! ದೀನವದನಳಾಗಿ ಶಂಕರನನ್ನು ನೋಡಿದಳು. ಆ ವೇಳೆಗೆ ಶಂಕರನೂ ತಲೆ ಎತ್ತಿದ. ತಾನು ಅಳುತ್ತಿದ್ದುದರ ಪರಿವೆಯೂ ಅವನಿಗಿದ್ದಂತಿರಲಿಲ್ಲ.

'ಡಣ್ ಡಣ್' ಕಾಲೇಜ್ ಗಂಟೆ ಬಾರಿಸಿತು. ಅಲ್ಲಲ್ಲಿ ನಿಂತ ವಿದ್ಯಾರ್ಥಿಗಳು ತರಗತಿಗಳ ಕಡೆ ಹೊರಟರು. ಶಂಕರ

ಎಚ್ಚತ್ತ. ಲಲಿತಳೂ ಎಚ್ಚತ್ತಳೇನೋ, "ಬನ್ನಿ ಆ ಪಾರ್ಕಿನಕಡೆ ಹೋಗೋಣ. ಇಲ್ಲಿ ಬೇಡ" ಎಂದು ಒಂದು ನಿರ್ಜನ ಉದ್ಯಾನದ ಕಡೆ ಹೆಜ್ಜೆ ತಿರುಗಿಸಿದಳು. ಶಂಕರ ಯಾಂತ್ರಿಕವಾಗಿ ಹಿಂಬಾಲಿಸಿದ. ಒಂದೊಂದು ಹೆಜ್ಜೆಯೂ ಆನೆ ಭಾರವಾಗಿತ್ತು; ಗಿರಿಭಾರವಾಗಿತ್ತು. ಅಂದಿನಂತೆ ಇಂದೂ ಭಾರವಾಗಿತ್ತು, ಅಂದು ಇವಳ ಮನೆಗೆ ಹೋಗುವಾಗ ಆಗಿದ್ದಂತೆ!

ಹೌದು ಇವಳ ಮನೆಗೆ ಹೋಗುವಾಗ!

ಶಂಕರನ ಹೃದಯ ಕಂಪಿಸಿತು. ಹರಿದ ವೀಣೆಯ ತಂತಿ ಬಿರುಗಾಳಿಗೆ ಸಿಕ್ಕಿತು. ಗಾಳಿಯೊಡಲನ್ನು ಕೆದರಿ ಕೆದರಿ ಏನನ್ನೋ ತೆರೆಯುತ್ತಿತ್ತು. ಅದು ಇನ್ನೂ ನಿಚ್ಚಳವಾಗಿಯೇ ಇದೆ. ಶಂಕರ ನೋಡುತ್ತಲೇ ಇದ್ದಾನೆ. ಅವನೇ ಅಲ್ಲಿ ನಟಿಸುತ್ತಿದ್ದಾನೆ. ಹೌದು ನಟಿಸುತ್ತಿದ್ದಾನೆ. ಒಂದು ಹೃದಯವನ್ನೇ ರಂಗವಾಗಿಸಿ, ತನ್ನ ಭಾರವಾದ ಹೆಜ್ಜೆಯನ್ನು ಹಾಕಿ ಹಾಕಿ, ತುಳಿ ತುಳಿದು ನರ್ತಿಸುತ್ತಿದ್ದಾನೆ. ತೆರೆ ಎದ್ದಿದೆ, ಚಿತ್ರ ನಡೆಯುತ್ತಿದೆ:

ಕಾಲೇಜಿಗೆ ಸೇರಿದ ಮರುದಿನ. ಜೂಲೈ ತಿಂಗಳ ವಾತಾವರಣ. ಆಗಲೇ ಮಳೆ ಬಂದು ನಿಂತಿದೆ. ಹಾಸಿದ ಹಸುರಿನಲ್ಲಿ ಮಳೆವನಿಗಳು ಮುತ್ತಾಗಿ ಚೆಲ್ಲಿವೆ. ರವಿಯ ಕಿರಣ ಹಸುರನ್ನು ಮುದ್ದಿಡುತ್ತಿವೆ. ತಂಗಾಳಿ ತೀಡಿ ತೀಡಿ ಬರುತ್ತಿದೆ. ಹಸುರುಗುವ ಮರಗಳು ಕುಲುಕುಲು ನಗುತ್ತಿವೆ. ಭವ್ಯವಾಗಿ ನಿಂತ ಕಾಲೇಜ್ ಕಟ್ಟಡ. ಹಲವು ವಿದ್ಯಾರ್ಥಿಗಳು ಅಲ್ಲಲ್ಲಿ ಗುಂಪಾಗಿ ನಿಂತು ಹರಟೆಕೊಚ್ಚುತ್ತಿದ್ದಾರೆ. ಶಂಕರ ಇನ್ನೂ ಹೊಸಬ. ಕಟ್ಟಡದ ಹತ್ತಿರ ಸಾಗಿದ. ತನ್ನ ತರಗತಿಯನ್ನು ನೋಡಲು ಮುಂದುವರಿದ. ಸಾಗುವಾಗ ಹಾಗೆಯೇ ಕಟ್ಟಡವನ್ನು ಸೂಕ್ಷ್ಮವಾಗಿ ದಿಟ್ಟಿಸಿದ. ನಿನ್ನೆ ಸೇರುವಾಗ ಅವಸರದಲ್ಲಿದ್ದ; ಅಷ್ಟಾಗಿ ನಿರುಕಿಸಿರಲಿಲ್ಲ. ಇಂದು ಚನ್ನಾಗಿಯೇ ನೋಡಿದ, ಸೂಕ್ಷ್ಮವಾಗಿಯಾದರೂ. ಹಳೆಯ

ಧವ್ಯಕಟ್ಟಡ. ಮೂರು ತಿಂಗಳ ಹಿಂದೆ ಸುಣ್ಣ ಬಳಿದಿರಬಹುದು. ಅಲ್ಲಲ್ಲಿ ಜೇನನ್ನು ಮುರಿದ ಸ್ಥಳಗಳು ಕಾಣಿಸುತ್ತಿವೆ. ಅಲ್ಲಿ ತುಂಬಾ ಜೇನಿಟ್ಟಿದ್ದಿರಬೇಕೆನ್ನಿಸಿತು, ಶಂಕರನಿಗೆ.

ಕಾಲೇಜಿನ ವರಾಂಡವನ್ನೆಲ್ಲಾ ಸುತ್ತಿಬಂದ. ಅಕ್ಕಪಕ್ಕದಲ್ಲಿಯ ಕೋಣೆಗಳನ್ನು ನೋಡಿದ. ಒಂದೊಂದು ಒಬ್ಬೊಬ್ಬ ಪ್ರೊಫೆಸರರ ಕೋಣೆ. ಮುಂದುವರಿದ. ಆಗಲೇ ಗಂಟೆ ಬಾರಿಸಿದ್ದು. ಎರಡನೆಯ ಗಂಟೆ. ಯಾವುದೋ ಯೋಚನೆಯಲ್ಲಿ ಸಾಗುತ್ತಿದ್ದ ಶಂಕರನಿಗೆ ಈ ಗಂಟೆಯ ಶಬ್ದ ಕೇಳಿ, ತನ್ನ ತರಗತಿಯ ಕಡೆ ಸಾಗಿದ. ಅಷ್ಟರಲ್ಲಿ ಸೀರೆಯ ಮರ್ಮರ ಶಬ್ದ ಕೇಳಿಸಿತು. ಹಿಂದಿರುಗಿದ. ತಲೆತುಂಬ ಮುಸುಗು ಮುಚ್ಚಿದ ಸೆರಗು, ಕೈಯಲ್ಲಿ ಪುಸ್ತಕ, ಕಾಲಲ್ಲಿ ದಿಟ್ಟಿ- ಒಬ್ಬ ವಿದ್ಯಾರ್ಥಿನಿ ಹತ್ತಿರದಲ್ಲಿಯೇ ಬರುತ್ತಿದ್ದಾಳೆ. ಶಂಕರ ನೋಡಿದ. ಆಶ್ಚರ್ಯ ತುಂಬಿ ಹರಿಯಿತು; ಉಕ್ಕಿ ಹರಿಯಿತು. 'ಇಲ್ಲಿ!' ಎಂದಷ್ಟೇ ಅವನ ಆಶ್ಚರ್ಯದ ತುಟಿ ತೆರೆಯಿತು. ಫಕ್ಕನೇ ಕೂಗಿದ:

"ಲಲಿತಾ!"

ತಲೆ ಎತ್ತಿದ ತರುಣಿಯೂ ಅಚ್ಚರಿ ಪಟ್ಟಳು.

"ನೀವು!" ಅವಳ ಅಚ್ಚರಿ ಅಂತಾಡಿಸಿತು. ಗಂಟೆ ಬಾರಿಸಿತ್ತು. ಹೆಚ್ಚು ನಿಲ್ಲುವಂತಿಲ್ಲ. ತರಗತಿಗೆ ಹೋಗಬೇಕು- ಅದರ ಪರಿವೆಯೇ ಇಲ್ಲ ಇಬ್ಬರಿಗೂ! ಇಬ್ಬರಿಗೂ ಮಾತು ಹೊರಡುವಂತಿಲ್ಲ: ಸುಮ್ಮನೇ ಒಬ್ಬರನೊಬ್ಬರು ದಿಟ್ಟಿಸುತ್ತಿದ್ದಾರೆ.

"Why, Lalita, you are yet here ? Bell has gone ! It is Prof. Narayan's class: you should know." ಸ್ವರ ಬಂದ ಕಡೆಗೆ ಲಲಿತ ತಿರುಗಿದಳು. ಹಿಂದೆ ಪದ್ಮಿನಿ ನಿಂತಿದ್ದಳು, ತರಗತಿಗೆ ಹೋಗುವ ಅವಸರದಲ್ಲಿ. ಅವಳ ಕಣ್ಣು ಚಂಚಲ. ಕಣ್ಣಿನಲ್ಲಿಯೇ ತುಂಟುನಗೆ

ನಕ್ಕು ಲಲಿತೆಯನ್ನು ಕುಡಿನೋಟದಿಂದ ಜಡಿದಳು.

"Who is he" ಅವಳು ಕೇಳಿದಳು.

"He....he.... is my brother" ಲಲಿತ ಸ್ವಲ್ಪ ಅದರುತ್ತ ಉತ್ತರ ಕೊಟ್ಟಳು. ಪದ್ಮಿನಿಯ ಮುಖ ಸಪ್ಪೆಯಾಯಿತು. ತುಂಟು ನಗು ಮಾಯವಾಯ್ತು.

"Then, please, be talking with him". ಅವಳು ಹೋದಳು.

"ಬನ್ನಿ!" ಲಲಿತ ಕರೆದು, ಕಾಲೇಜ್ ಮೆಟ್ಟಲನ್ನಿಳಿಯತೊಡಗಿದಳು. ಶಂಕರ ಅವಳನ್ನು ನಡುಗುವಡಿಯಲ್ಲೇ ಹಿಂಬಾಲಿಸಿದ. ತರಗತಿಯನ್ನು ಮರೆತ. ತಲೆಯಲ್ಲಿ ನೂರಾರು ಯೋಚನೆಯ ಚೇಳುಗಳು ಕೊಂಡಿಯೆತ್ತಿ ಅತ್ತಿತ್ತ ಓಡಿಯಾಡಿದವು.

ಲಲಿತ ಇಲ್ಲೇಕೆ ಬಂದಳು ? ಏಕೆ ? ಏಕೆ ? ಬಿ. ಎ. ಆದೊಡನೆಯೇ ಸೇರಿದಳೆ ? ಅಥವಾ ಈ ವರ್ಷ ಸೇರಿದಳೆ ? ಈಗ ಎಲ್ಲಿದ್ದಾಳೆ ? ಇವಳನ್ನು ನೋಡಿದರೆ, ಆ ಕುಲುಕುಲು ನಗುವ ಮುಖವನ್ನು ಮಾರಿದವಳಂತಿದ್ದಾಳೆ. ಆ ಗಂಭೀರದ ಮುಖದಲ್ಲಿ ವ್ಯಥೆಯ ಕಡಲೂ ಕೂಡಿಕೊಂಡಂತಿದೆ. ಎಷ್ಟು ಸೊರಗಿದ್ದಾಳೆ ! ಬನಶಂಕರಮ್ಮ ಹೇಗಿದ್ದಾರೋ ! ಅವರೂ ಇಲ್ಲಿಗೆ ವರ್ಗ ಮಾಡಿಸಿಕೊಂಡಿರಬೇಕು. ಮಗಳ ಓದಿಗಾಗಿ ಎಂತಹ ಕಷ್ಟ ಪಡುತ್ತಿದ್ದಾರೆ ! ಇವಳು ಹೀಗಾಗಲು ಆ ತಾಯಿ ಹೇಗೆ ಬಿಟ್ಟರು ? ಸ್ವಲ್ಪ ತಲೆ ನೊಂದರೇ ಡಾಕ್ಟರರನ್ನು ಕರೆತರುತ್ತಿದ್ದ ಆ ತಾಯಿ, ಇಂತು ಸೊರಗಿದ ಮಗಳನ್ನು ನೋಡಿ ಸುಮ್ಮನಿರುವರೆ ? ಏನಿರಬಹುದು ?

ತಲೆ ಕೊಡವಿಕೊಂಡ ಶಂಕರ, ಏನೊಂದೂ ಅರ್ಥವಾಗಲಿಲ್ಲ. ಅವನು ಹೆಜ್ಜೆ ಹಾಕುತ್ತಲೇ ಇದ್ದ; ಲಲಿತ ಮುಂದುವರಿಯುತ್ತಲೇ ಇದ್ದಳು.

ಶಂಕರನಿಗೆ ಎಚ್ಚರವಾದದ್ದು, ತಾನು ಬಸ್ಸಿನಲ್ಲಿ ಲಲಿತೆಯ ಜೊತೆಗೆ ಕುಳಿತಾಗಲೇ! ಮುಖ ತಿರುವಿ ಒಂದು ಮುಗುಳು ನಕ್ಕ. ಆ ನಗೆಯಲ್ಲಿ ಕ್ಷಮೆ ಕೇಳುವ ದೀನತೆ ಇತ್ತು. ಲಲಿತಳೂ ನಕ್ಕಳು. ಅದರಲ್ಲಿ ಆನಂದ, ತೃಪ್ತಿ ತುಂಬಿ ಹರಿಯುತ್ತಿದ್ದಂತೆ ತೋರಿತು. ಮುಗುಳು ನಕ್ಕಳು ಅಷ್ಟೇ ಮರುನುಡಿಯಲಿಲ್ಲ. ಶಂಕರ ಮಾತನಾಡಲು ಯತ್ನಿಸಿದ; ಆಗಲಿಲ್ಲ. ಮಾತು ಎದೆಯಿಂದ ಸೀಳಿ ಸೀಳಿ ಬರುತ್ತಿದ್ದರೂ ನಾಲಗೆಗೆ ಬರುವನಿತರಲ್ಲೇ ಆರಿಹೋಗುತ್ತಿತ್ತು; ಬತ್ತಿಹೋಗುತ್ತಿತ್ತು.

ನನ್ನ ಪತ್ರ ಇವಳಿಗೆ ತಲುಪಿದ್ದಿರಬಹುದೆ? ಅದರ ಬಗ್ಗೆ ಇವಳಿಗೆ ಎಷ್ಟೂ ವ್ಯಥೆಯಾಗಿಲ್ಲವೆ? ನನ್ನ ಹುಚ್ಚು ಹುಚ್ಚು ಬರವಣಿಗೆಗೆ ಇವಳ ಮನಸ್ಸು ನೊಂದಿರಲಿಕ್ಕಿಲ್ಲವೆ? ಆ ಪತ್ರ ಇವಳನ್ನೂ ಇವಳ ತಾಯಿಯನ್ನೂ ಯಾವ ರೀತಿಯೂ ಮಾರ್ಪಡಿಸಿಲ್ಲವೆ? ಆ ಸಂದಿಗ್ಧ ಪರಿಸ್ಥಿತಿಯಲ್ಲಿ ತಾನು ಹೇಗೆ ಬರೆದೆ! ಎಲ್ಲಿಂದ ಬರೆದದ್ದು! ಅಬ್ಬ! ಅಷ್ಟು ಬರೆದುದೇ ಹೆಚ್ಚು. ಹುಚ್ಚು ಹುಚ್ಚೂ ಹೌದು. ಅಂತಹ ಕುಲುಮೆಯಿಂದ ಸಿಡಿಸಿಡಿದು ಬಂದ ನುಡಿಕಿಡಿಗಳು ಇವಳ ಎದೆಯನ್ನು ಸೀವರಿಯದೆ, ತಣಿಸಿದ್ದುಂಟೆ? ಹಿಂದಿನಂತೆ ಇಂದೂ "ಬನ್ನಿ" ಎಂದು, ಮುಂದೆ ನಡೆಯುತ್ತಿದ್ದಾಳೆ. ಆ ಪತ್ರ ಕಂಡಿದ್ದಾಳೆಯೇನು, ಈಕೆ? ಆ ಪತ್ರ! ಆ ಪತ್ರ!

ಅವನು ಬರೆದಿದ್ದ:

"ನಿನ್ನ ಏನೆಂದು ಕರೆಯಲಿ, ಲಲಿತ? ಯಾವ ಬಾಯಿಯಿಂದ ಏನೆಂದು ಕರೆಯುತ್ತಿದ್ದೆ- ಆ ಬಾಯಿಯ ನಾಲಗೆ ಇಂದು ಸುಟ್ಟು ಹೋಗಿದೆ. ಆ ಅಂದಿನ ಮಾತು ಇಂದೂ ಬೆಲೆಯುಳ್ಳುದೇ? 'ಇದೆಯೇನು. ಬೆಲೆ?' ನನ್ನಲ್ಲಿ ನಾನೇ ಪ್ರಶ್ನಿಸಿಕೊಂಡರೂ ಅದಕ್ಕೆ ಉತ್ತರವೇನು! 'ಇಲ್ಲ! ಬೆಲೆಯಿಲ್ಲ! ನೀನು ಕೃತಘ್ನ. ಅವಳ

ಬಗ್ಗೆ ಒಂದು ಶಬ್ದವನ್ನೂ ಉಚ್ಚರಿಸಬೇಡ, ನಿನ್ನ ಆತ್ಮಕ್ಕೆ ಹೊಂದಿಸಿಕೊಂಡು! ನೀನು ನೀಚ; ನಂಬಿದವರ ಕೊರಳ ಕೊಯ್ದ ಕೊಲೆಪಾತಕ!....' ಲಲಿತಾ, ನನ್ನ ಎದೆಯಿಂದ ಈ ಪ್ರತ್ಯುತ್ತರ ಗಳು ಬರುತ್ತಿವೆ, ಸಾಲು ಸಾಲಾಗಿ, ಸಾನು ಸಾನಾಗಿ; ಸಿಡಿಲಾಗಿ ಬರುತ್ತಿವೆ! ನನ್ನವಳೆಂಬ ಯಾವ ಪದವನ್ನು ಉಚ್ಚರಿಸಲೂ ಹೇಸುತ್ತಿದೆ ಈ ಜೀವ; ನಡುಗುತ್ತಿದೆ ಈ ಆತ್ಮ; ಹೆದರುತ್ತಿದೆ ಈ ಮನಸ್ಸು. ಏನೆಂದು ಕರೆಯಲಿ ಲಲಿತ? ಕಮಲಕ್ಕೂ ಕೆಸರಿಗೂ ಸಂಬಂಧವಿದೆ. ಕಮಲದಂತಹ ನಿನ್ನನ್ನು ಕೆಸರಿನಂತಹ ನಾನು, 'ಸಂಬಂಧವಿದೆ!' ಎಂದು ತಿಳಿದು ಸಂಬೋಧಿಸಲೆ? ಅದರೂ ಎದೆ ಬಾರದು! ಲಲಿತಾ; ಕ್ಷಮಿಸು! ನಿನ್ನನ್ನು 'ಲಲಿತ' ಎಂದಲ್ಲದೆ ಬೇರೆ ಯಾವ ತೆರದಲ್ಲೂ ಸಂಬೋಧಿಸಿ ಬರೆಯಲಾರೆ! ನನ್ನ ಸ್ಥಿತಿ, ರೀತಿ, ನೀತಿ- ನಿನಗೊಂದೂ ಗೊತ್ತಿರಲಿಕ್ಕಿಲ್ಲ. ನನ್ನ ಪರಿಸರಣ, ಪರಿಸ್ಥಿತಿ ನಿನಗೆ ಇಷ್ಟೂ, ಎಳ್ಳಷ್ಟೂ ಗೊತ್ತಿರಲಿಕ್ಕಿಲ್ಲ! ಗೊತ್ತಾದರೆ ನೀನೂ ಹೇಳುವೆಯೇನೋ ಸ್ವರವೆತ್ತಿ; "ಬೇಡ, ನನ್ನನ್ನು ನೀನೇನೂ ಕರೆಯಬೇಡ! ನೀನು ಕೃತಘ್ನ! ಕೃತಘ್ನ!" ಎಂದು.

ಕೃತಘ್ನ! ಎನ್ನುತ್ತೀಯಾ, ಲಲಿತ? ಇಲ್ಲ! ನೀನನ್ನಲಾರೆ! ಅಂತಹ ಹೃದಯ ನಿನ್ನದಲ್ಲ! ನೀನು ಪವಿತ್ರಳು. ಬೆಳ್ಳಗಿರುವುದ ನ್ನೆಲ್ಲಾ ಹಾಲೆಂದೇ ಬಗೆದವಳು; ಬಗೆವವಳು! ಆ ಸುಂದರ ಪವಿತ್ರ ಎದೆಯ ಸರೋವರದಿಂದ, 'ಕೃತಘ್ನ' ಎಂಬ ತೆರೆ ಏಳದು. ನೀನು ಸುಮ್ಮನೇ ಕಣ್ಣೀರಿಡುವೆ. ನಿನ್ನ ಗಂಭೀರ ಧೀರ ಪ್ರಕೃತಿ ಕರಗಿ ಕಣ್ಣೀರಾಗುತ್ತದೆ. ನನ್ನಷ್ಟು ನೀನು ದುರ್ಬಲಳಲ್ಲದಿದ್ದರೂ ನನಗಾಗಿ ನೀನು ಕಣ್ಣೀರಿಡುವೆ! ನಿನ್ನ ಗುಣವನ್ನು ನಾನರಿಯೆನೆ? ನಿನ್ನ ಹೃದಯವನ್ನು ನಾನರಿಯೆನೆ? ಹಾಗನ್ನಲಾರೆ! ನನ್ನ ಹೃದಯ ದಂತೆ ನಿನ್ನದಲ್ಲ! ಈ ನನ್ನ ಹೃದಯದಲ್ಲಿ ಅನೇಕ ಮೊಸಳೆಗಳಿವೆ! ಅದನ್ನು ನೀನರಿಯೆ! ಹಾಗೆ ಯೋಚಿಸಲೂ ನಿನ್ನ ಎದೆ ಒಪ್ಪದು!

ಂತಹ ಎದೆ! ಸಹೃದಯೆ! ನೀನು ನನ್ನ 'ಕೃತಘ್ನ' ಎನ್ನಲಾರೆ!
'ಕೃತಘ್ನ!' ಎನ್ನಲಾರೆ!

ಆದರೆ ನೀನು ಹಾಗಂದರೂ ನಾನು ನಿನ್ನನ್ನು ಶಪಿಸಲಾರೆ! ಹೌದು. ಶಪಿಸುವ, ದೂಷಿಸುವ ಯೋಗ್ಯತೆ ನನಗಿಲ್ಲ! ನಾನಿಲ್ಲ! ಸ್ಥಿತಿಯಲ್ಲೂ ನಾನಿಲ್ಲ. ನಿನಗೆ ದ್ರೋಹ ಬಗೆದವನೇ ನಿನ್ನ ದೂಷಿಸುವುದೆಂದರೇನು? ಶಪಿಸುವುದೆ? ಹಾಗೆ ಮಾಡಲಾರೆ! ನೀನು ಅನ್ನು; ದಿನದಿನವೂ ಅನ್ನು; ನಿಮಿಷನಿಮಿಷವೂ ಅನ್ನು 'ಕೃತಘ್ನ!' ಎಂದು! ಆ ಮಾತು ನನಗೆ ಕೇಳಿಸುವನಿತು ಗಟ್ಟಿ ಯಾಗಿ ಕೂಗಿ ಹೇಳು! ನಿನ್ನ ಬಾಳುವೆಯನ್ನೇ ಹಾಳು ಮಾಡಿದ ನನ್ನನ್ನು ನೀನು ಹೇಗೆ ಶಪಿಸಿದರೂ ನಾನು ಅದಕ್ಕೆ ಯೋಗ್ಯನೇ!

ನನ್ನ ಕ್ಷಮಿಸಲಾರೆ! ನೀನು ಕ್ಷಮಿಸಲಾರೆ! ಕ್ಷಮಿಸ ಬಾರದು! ಕ್ಷಮಿಸಬೇಡ! ನಾನೂ ಕೇಳಲಾರೆ: ಕ್ಷಮಿಸೆಂದು! ಸುಖವಾಗಿ ಬಾಳುವ ನಿನ್ನನ್ನು ವಿಷಕೂಪಕ್ಕೆ ಕೆಡವಿ ಕೊಂದಿ ದ್ದೇನೆ! ಆದರೂ ನೀನು ನನ್ನಕಡೆ ಕರುಣೆಯಿಂದ ನೋಡುತ್ತಿರು ವಂತೆಯೇ ಕಾಣುತ್ತದೆ! ಹೌದು ಆ ನೋಟ! ಆ ಕರುಣೆಯ ನೋಟ!

ಆ ನೋಟ ಈಗ ನನ್ನೆದುರಿಗೆ ನೀಡಿ ನಿಂತಿದೆ. ಆ ಎರಡು ಕಣ್ಣುಗಳಲ್ಲಿ ತುಂಬಿ ನಿಂತ ಕರುಣೆಯ ಅಮೃತ ಕಡಲಿಗೆ, ಮತ್ತೆ ರಡು ಕಣ್ಣುಗಳಿಂದ ಸೌಹಾರ್ದನದಿ ತೆರೆತೆರೆಯಾಗಿ ಈಜಿಈಜಿ ಬಂದು ಸುರಿಯುತ್ತಿದೆ. ಆ ಹಿಂಬದಿಯ ಎರಡು ಕಣ್ಣುಗಳು! ಆ ತಾಯಿಯ ಎರಡು ಕಣ್ಣುಗಳು! ತಾಯಿ, ಮಗಳು! ಎಂತಹ ಜೋಡಿ! ಕಪಟವೆಂಬುದನಿತೂ ಅರಿಯದ ಆ ನಾಲ್ಕು ಕಣ್ಣುಗಳು!

ಬೇಡ ಲಲಿತ, ಆ ನೋಟವನ್ನು ಸಹಿಸಲಾರೆ! ನಾನು ದುರ್ಬಲ! ನಾನು ದುರ್ಬಲ! ಆ ತಾಯಿಗೆ ದ್ರೋಹ ಬಗೆದ ನೀಚ, ನಾನು! ನಿನಗೆ ಮೋಸ ಮಾಡಿದ ಪರಮ ಪಾಪಿ, ನಾನು!

ಒಂದಲ್ಲ, ಎರಡಲ್ಲ ನಾಲ್ಕುವರ್ಷ ತುಂಬಿದ ಆದರದಿಂದ ನೋ
ಕೊಂಡು, ನನ್ನನ್ನೊಬ್ಬ ಮನುಷ್ಯನನ್ನಾಗಿ ಮಾಡಿದ ನಿಮಗೆ ದ್ರೋ
ಬಗೆದೆ. ನನ್ನ ದೌರ್ಬಲ್ಯದಿಂದಲೇ ಆದದ್ದು, ಈ ಕೃತ್ಯ. ನನ್ನ
ಹೃದಯ ಯಾವಾಗಲೂ ದೌರ್ಬಲ್ಯದ ತವರುಮನೆ. ಈಗಲೋ
ಆಗಲೋ ಕುಸಿದು, ನೆಲಸಮವಾಗುವ ಹಳೆಯ ಮನೆ. ಸೋರುವ
ಮನೆ! ಮಳೆಯಿಲ್ಲದಾಗ ಮಾತ್ರ ಸಶಕ್ತನೆಂದು ಕೊಚ್ಚಿಕೊಳ್ಳು
ತ್ತದೆ. ಆದರೆ ಒಂದೆರಡು ತುಂಡು ಮೋಡ ಮೊಳಗಿ, ನಾಲ್ಕಾರು
ಹನಿ ಸುರಿದರಾಯ್ತು: ಮನೆಯೆಲ್ಲವೂ ಸೋರುತ್ತದೆ; ನಡುಗುತ್ತದೆ
ಗೋಡೆ, ಕಂಬ, ಜಂತೆ ಕುಸಿಯುತ್ತವೆ. ನುಸಿ ಮುಟ್ಟಿದ ಮಣ್ಣು
ಈ ಮನೆ. ಇದನ್ನು ನಚ್ಚಿ, ನೆಚ್ಚಿ ಕೆಟ್ಟಿರಿ ನೀವು. ಸುಂದರವಾದ
ಸಂಸಾರವಲ್ಲಿ ವಿಷವನ್ನು ಬೆರೆಸಿದೆ.

ಆಯ್ತು ವಿಷವನ್ನು ಬೆರೆಸಿದೆ. ನಿಮ್ಮನ್ನು ಕೊಂದೆ. ನಿಮ್ಮ
ರಡು ಹೃದಯಗಳ ಕೊಂದುದಲ್ಲದೆ, ಇನ್ನೆಷ್ಟೋ ಹೃದಯಗಳನ್ನು
ಕೊಂದಿರುವೆ, ಕೊಲ್ಲುತ್ತಿರುವೆ! ಅವು ನರಳುತ್ತಿವೆ. ಅವೂ
ನನ್ನಿದುರಿಗೀಗ ಶವಗಳಾಗಿ ತೇಲಿ ತೇಲಿ ಬರುತ್ತಿವೆ! ಅವುಗಳಿಗೂ
ಮೋಸ ಮಾಡಿದೆ; ಓಡಿಬಂದೆ!

ಹೌದು ಓಡಿಬಂದೆ ದೂರ ದೂರ ಓಡಿಬಂದೆ. ಹಿರಿಯರ
ಬಂಧನಕ್ಕೆ ಸಿಕ್ಕು ಕೊರಳಿಗೆ ತಾಳಿಯನ್ನು ಬಿಗಿಸಿಕೊಂಡ ಒಂದು
ಹೃದಯ ಅಲ್ಲಿ, ದೂರದಲ್ಲಿ, ನರಳುತ್ತಿದೆ! ಹಲವರ ಹಿಡಿತದಲ್ಲಿ
ಸಿಕ್ಕು ನರಳುವ ಸ್ಥಿತಿಯನ್ನೊದಗಿಸುವಲ್ಲಿ ನಾನೂ ಪಾಲುಗಾರ
ನಾಗಿರುವುದನ್ನೂ ನೀನರಿಯೆ!

ನನಗೆ ಮದುವೆಯಾಯ್ತು! ಅದು ಹೇಗೋ ನಡೆದು
ಹೋಯ್ತು. ಯಾರಿಗಾಗಿ ನಾನು ಮದುವೆಯಾದೆ? ಯಾರಿಗಾಗಿ
ಯೋ! ತಾಯಿಯವರ ಒತ್ತಾಯವ್ರೋ, ಊರವರ ಒತ್ತಾಯವ್ರೋ
ಅಂತೂ ಮದುವೆಯಾಯ್ತು. ಜಗತ್ತಿನ ಕಣ್ಣೆದಿರು ಮದುವೆಯ

ನಾಟಕವಾಡಿಯಾಯ್ತು. ಪರದೆ ಬಿತ್ತು. ಮುಚ್ಚಿಹೋಯ್ತು. ಆದರೆ ಪ್ರೇಕ್ಷಕರು ಹಾಗೆಯೇ ಕುಳಿತಿದ್ದಾರೆ! ನಾಟಕವಿನ್ನೂ ಮುಗಿದಿಲ್ಲವೆಂದೇ ಕುಳಿತಿದ್ದಾರೆ! ಪರದೆ ಅಲುಗಾಡುತ್ತಿದೆ. ಈಗ ತೆರೆದೀತು, ಆಗ ತೆರೆದೀತು- ಎಂದು ಕಾದು ನೋಡುತ್ತಿದ್ದಾರೆ. ಗುಲ್ಲೂ ಎಬ್ಬಿಸಿದ್ದಾರೆ; ಸಿಳ್ಳೆ ಹಾಕುತ್ತಿದ್ದಾರೆ; ಕೇಕೆ ಹಾಕುತ್ತಿದ್ದಾರೆ. ಆದರೆ ನಾನಿನ್ನು ಆ ನಾಟಕದಲ್ಲಿ ನಟಿಸೆನೆಂಬುದನ್ನವರು ಅರಿಯರು. ಅವರಿಗೆ ಬೇಕಿತ್ತು, ನಾನು ಆ ಹುಡಿಗಿಯನ್ನು ಮದುವೆಯಾಗುವುದು; ಅವರಿಗೆ ಬೇಕಿತ್ತು, ನಾನವರ ಇಚ್ಛೆಗೆ ಮಣಿಯುವದು. ಅದು ಆಯ್ತು, ತೀರಿ ಹೋಯ್ತು. ಇಂದಿಗೆ ಎಂಟು ದಿನಗಳು ಉರುಳುರುಳಿ ಹೋಗಿವೆ. ತಾಳಿ ಬಿಗಿದ ರಾತ್ರಿಯಲ್ಲಿಯೇ,- ನೆರೆದ ಬಂಧುಗಳಿಗೆ ಗಾಬರಿ, ವ್ಯಸನ, ದುಃಖ, ಸಂತೋಷ', ಆಶ್ಚರ್ಯ- ಅವರವರಿಗೆ ಬೇಕಾದಂತಹ ಸ್ಥಿತಿಯನ್ನಿತ್ತು ಹೊರಟುಬಂದೆ, ಇಲ್ಲಿಗೆ, ನೂರಾರು ಮೈಲಿ ದೂರದ ನಗರಕ್ಕೆ. ಅವರರಿಯರು, ನಾನಿಲ್ಲಿರುವುದನ್ನು. ನಾನು ಎಲ್ಲಿದ್ದೇನೆಂಬುದು ನಿನಗೂ ಬೇಡ! ಅದನ್ನು ತಿಳಿಸೆನು! ಅಂತೂ ನಾನು ಬದುಕಿರುವೆ. ಸಜೀವನಾಗಿದ್ದೇನೆ!' ಹಲವು ಜೀವಗಳನ್ನು ನೋಯಿಸಿಯೂ ಬದುಕಿದ್ದೇನೆ. ಜೀವನ ಪರ್ಯಂತವೂ ನೋಯುವ, ಅಳುಕುವ, ಉರಿಯುವ ಗಾಯಗಳನ್ನು ಮಾಡಿ ಬಂದಿದ್ದೇನೆ; ಓಡಿ ಓಡಿ ಬಂದಿದ್ದೇನೆ.

ನಿನಗೆ ಮಾಡಿದ ಮೋಸವನ್ನು ನಾನೀಗ ಬರೆಯಲಿ? ನಿನಗೆ ಊಡಿದ ವಿಷ, ಶಂಕರನು ಕೊರಳಲ್ಲಿ ಧರಿಸಿದುದಕ್ಕಿಂತಲೂ ವಿಷಮವಾದುದು. ನಾನೂ ಶಂಕರ! ನಾನು ವಿಷವನ್ನು ಧರಿಸುವವನಲ್ಲ; ವಿಷವನ್ನು ಕಾರುವವನು! ನಯವಾಗಿ ಹರಿದು, ನಂಬಿದವರ, ಹಾಲಿಟ್ಟವರ ಕಚ್ಚಿ ವಿಷಕಾರುವ ವಿಷಸರ್ಪ ನಾನು! ಕಾರ್ಕೋಟಕ ನಾನು! ಆದರೆ ಉಪಕಾರ ಮಾಡುವ ಕಾರ್ಕೋಟಕ ಅಲ್ಲ,

ಸಾಯಿಸುವ ಕಾರ್ಕೋಟಕ! ನೀನು ನನ್ನೊಡನೆ ಸಾಗಿಬಂದಿ
ಆಗ ನಾವೆಂತಹ ಬಾಳ ಕನಸನ್ನು ಕಟ್ಟಿದ್ದೆವು!

ಬೇಡ ಲಲಿತ, ಬೇಡ! ಆ ದೃಶ್ಯವನ್ನು ನೋಡಲೂ, ಕ
ಸಲೂ ನಾನೀಗ ಅಸಮರ್ಥನಾಗಿದ್ದೇನೆ. ನಿನ್ನೊಡನೆ ಕಳೆದ
ಶಾಂತಮಯ ಕಾಲ ಇನ್ನು ಬರಲಾರದು. ಎಂದೆಂದಿಗೂ ಬರದು
ದರಿದ್ರನಾಗಿ ಬಿದ್ದಿದ್ದವನನ್ನು ಕರುಣಾಳುವಾಗಿ ಕೈಹಿಡಿದು ಎ
ನಿಲ್ಲಿಸಿದೆ; ನಿರ್ಜೀವಿಗೆ ಜೀವವನಿತ್ತೆ. ಬಾಳನ್ನು ಬೆಳಗಲು ಹಣ
ಯನ್ನು ಹಚ್ಚಿಟ್ಟೆ. ಆದರೆ ನಾನು ನಿನಗೆ ದ್ರೋಹ ಬಗೆದೆ. ನಾಲ
ವರ್ಷ ನಿನ್ನೊಡನೆ ಕಾಲ ಕಳೆದಿದ್ದರೂ ನನ್ನ ದುರ್ಬಲ ಹೃದಯ
ವನ್ನು ನೀನು ಅರಿತುಕೊಳ್ಳಲಿಲ್ಲ. ಮೇಲೆತ್ತಿದ ಕೈಯನ್ನೇ ಕಚ್ಚಿ
ಓಡಿಬಂದಿದ್ದೇನೆ.

ಅಂದು ಅವಸರದಿಂದ ನೀನು ಬೀಳ್ಕೊಟ್ಟಾಗ ಹೆಚ್ಚು ಮಾತ
ನ್ನಾಡಲೂ ಆಗಲಿಲ್ಲ. ತಂತಿ ಕೈಯಲ್ಲಿತ್ತು; ಅದನ್ನು ಹಿಡಿದ ಕೈ
ನಡುಗುತ್ತಿತ್ತು; ರೈಲಿಗೆ ಹೊತ್ತಾಗಿತ್ತು. ಕೆಲವು ದಿನಗಳಲ್ಲಿಯೆ
ಹಿಂದಿರುಗುವೆನೆಂದು ಮಾತ್ರ ಹೇಳಿ ಹೊರಟುಬಂದೆ. 'ಹೋಗಿ
ಬನ್ನಿ' ಎಂದು ಕಾಲಿಗೆ ಬಿದ್ದ ನಿನ್ನ ಆ ಎಳೆಯ ದೇಹ ಈಗಲೂ
ನನ್ನ ಮಂಜಾದ ಕಣ್ಣುಗಳಲ್ಲಿ ತೇಲಿ ತೇಲಿ ಬರುತ್ತಿದೆ. ಅದನ್ನು
ಹಾಗೆಯೇ ಹಿಡಿದು ನಿಲ್ಲಿಸು; ನನ್ನನ್ನು 'ಕೊಲ್ಲಬೇಡ!'

ನಿನಗೆ ಮಾಡಿದ ಇನ್ನೊಂದು ದ್ರೋಹವನ್ನು ನಾನೀಗ ಬರೆಯ
ಬೇಕೆಂದರೂ ಹಾಗೆ ಮಾಡಲಾರೆ! ಲಲಿತ ಹಾಗೆ ಅದನ್ನು ಬರೆಯ
ಲಾರೆ! ನನ್ನ ನೀಚ ಹೃದಯ ಈಗಲೂ- 'ಪತಿತ'ನಾಗಿ
ಕೊಳಚೆಯ ಮಡುವಿನಲ್ಲಿ ಬಿದ್ದಿರುವಾಗಲೂ- ಇನ್ನೂ ಮರೆಮಾಚು
ತ್ತಿದೆ! ಅದನ್ನು ನಿನಗೆ ಹೇಳಲು ನಾಚುತ್ತದೆ! ನಾಚಿಕೆಯಿಲ್ಲದ,
ಮಾನವಿಲ್ಲದ ಹೃದಯ, ನಾಚುತ್ತದೆ! ನನಗದನ್ನು ಬರೆವ
ಚೇತನವೂ ಇಲ್ಲ!

ಇಲ್ಲ, ನನಗಾವ ಚೇತನವೂ ಇಲ್ಲ! ಇನ್ನು ನಾನಿಲ್ಲವಾಗುವ ಚೇತನವೂ ಇಲ್ಲ. ಇನ್ನು ಹೆಚ್ಚು ಬರೆಯಲಾರೆ! ಈ ಪತ್ರ (ಇದೂ ಪತ್ರವೆ!) ಉದ್ದವಾಯ್ತು; ಬಹಳ ಉದ್ದವಾಯ್ತು. ಅದರ ಪರಿವೆಯಿಲ್ಲ ನನಗೆ. ನಾನೇ ಈ ಪತ್ರ. ಇದು ಕಲ್ಮಶ ವಾಗಿದೆ! ನನ್ನಂತಹುದೇ ಈ ಪತ್ರ; ನನ್ನ ಪತ್ರ! ಇದನ್ನೋದಿ ಸುಟ್ಟುಬಿಡು. ಆ ಸುಡುವ ಉರಿ ಆ ಕಾಲಕ್ಕಾದರೂ ನನ್ನ ದಹಿಸಲಿ! ಈ ಪತ್ರ ಕರುಕಾಗಿ ಗಾಳಿಗೆ ಹಾರಿಹೋಗುವಂತೆ ನನ್ನ ದೇಹವೂ ನಾಶವಾಗಲಿ; ಆರಿ ಹೋಗಲಿ! ಹಾಗೆ ಹಾರೈಸು! ಹಾರೈಸು ದೇವಿ! ನಿನ್ನ ತಾಯಿಗೆ ನಾನೇನೂ ಹೇಳಲಾರೆ. ಆ ತಾಯಿಯ ವಿಷಯವನ್ನು ಈ ಪತ್ರದಲ್ಲಿ ಸೇರಿಸುವುದೇ ಒಂದು ಪಾಪ. ಪಾಪಿ ಬರೆಯುವ ಈ ಪತ್ರದಲ್ಲಿ ಆ ಪವಿತ್ರೆಯ ನಾಮ ಇರಬಾರದು! ನಿನ್ನದೂ ಇರಬಾರದು! ಆದರೂ ಇದೆ! ಇರುವು ದನ್ನು ಅಳಿಸಿಹಾಕು. ಸುಟ್ಟುಬಿಡು! ಉಳಿಸಿಕೊಳ್ಳಬೇಡ! ಸಾಯದೆ ಇರುವ ನನ್ನನ್ನು ಸಾಯುವಂತೆ ಹಾರೈಸು. ನಿನ್ನ ಕ್ಷಮೆಯನ್ನು ಬಯಸೆನು! ನೀನು ನನ್ನನ್ನು ಕ್ಷಮಿಸಬೇಡ! ಬೇಡ!! ಬೇಡ!!!

ನಿನಗೆ ಮೋಸ, ವಂಚನೆ ಮಾಡಿದ ಕೃತಘ್ನ
ಶಂಕರ.

ಮ. ಮಾ:- ನಿನ್ನನಪ್ಪಿದ ಈ ತೋಳು ಅನ್ಯರನಪ್ಪವು, ಕಾಮ ದಿಂದ! ನಿನ್ನ ಮುತ್ತಿಟ್ಟ ಈ ತುಟಿ ಅನ್ಯರನ್ನು ಮುದ್ದಿಡದು, ಕಾಮದಿಂದ!!

ಇತಿ- ಶಂ."

ಅದು ಹಾಯ್ದು ಹೋಯ್ತು. ವರುಷವೊಂದರ ಹಿಂದೆ ಬರೆದ ಪತ್ರ ಅಂದು ಅವನ ಮನಃಪಟಲದ ಮೇಲೆ ಹಾದು ಹೋಯ್ತು. ಅದು ಮತ್ತೆ ಮತ್ತೆ ಸುಳಿಸುಳಿದು ಸುರುಳಿಸುರುಳಿ

ಯಾಗಿ ಸುಳಿಯುತ್ತಿದೆ. ಅದು ಏನೇನು ಮಾಡಿದೆಯೋ! ಈಗಿನ ಲಲಿತೆ ಆಗಿನವಳಲ್ಲ! ಇವಳ ತಾಯಿಯವರು ಹೇಗಿದ್ದಾರೋ! ಅವರನ್ನು ನಾನೀಗ ನೋಡಲೇ? ಈ ಪಾಪಿ ಕಣ್ಣಿನಿಂದ ನೋಡಲಿ? ಬೇಡ, ಬೇಡ; ನಾನು ನೋಡಲಾರೆ!

"ಗಾಂಧಿ ಚೌಕ!" ಕಂಡಕ್ಟರ್ ಕೂಗಿದ. ಲಲಿತ ಮುಟ್ಟಿ ಎಬ್ಬಿಸಿದಾಗಲೇ ಶಂಕರನಿಗೆ ಎಚ್ಚರ. ಭಾವನಾ ಲೋಕದಿಂದ ಎಚ್ಚರಾದ. "ಬನ್ನಿ" ಕರೆದು, ಬಸ್ಸಿನಿಂದಿಳಿದಳು, ಲಲಿತ. ಶಂಕರನೂ ಇಳಿದು ಅವಳನ್ನು ಹಿಂಬಾಲಿಸಿದ. ಭಾರವಾದ ಹೆಜ್ಜೆಯನ್ನು ಹಾಕುತ್ತಿದ್ದ. ಒಂದೆರಡು ಮನೆಗಳನ್ನು ದಾಟಿ, ಬಲಗಡೆಯ ಪಕ್ಕದ ಗಲ್ಲಿಯಲ್ಲಿ ಸಾಗಿದರು. ನಾಲ್ಕು ಗಜ ದೂರ ಹೋಗಿ ತಲೆ ಎತ್ತಿ ನೋಡಿದ, ಶಂಕರ. ಒಂದು ಚಿಕ್ಕ ಮನೆ. ಬಾಗಿಲಮೇಲೆ ತೂಗುತ್ತಿತ್ತು: "ಶಂಕರ ಪ್ರಸಾದ" ನೋಡಿ, ತಲೆ ತಗ್ಗಿಸಿದ ಶಂಕರ. ತಲೆ ಮೇಲೆತ್ತಿದ್ದು, ಕೋಣೆಯಲ್ಲಿಯ ಕಡ್ಡಿ ಚಾಪೆಯ ಮೇಲೆ ಕುಳಿತಾಗಲೇ!

ಒಮ್ಮೆ ಕೋಣೆಯನ್ನು ಸುತ್ತೂ ನೋಡಿದ. ಚಿಕ್ಕ ಕೋಣೆ. ಎರಡು ಕಿಟಕಿಗಳು. ಒಂದು ಮೂಲೆಯಲ್ಲಿ ಹೊಲಿಯುವ ಯಂತ್ರ; ಇನ್ನೊಂದು ಮೂಲೆಯಲ್ಲಿ ಚರಕ; ಈ ಕಡೆಯ ಮೂಲೆಯಲ್ಲಿ ಪುಸ್ತಕದ ಸಣ್ಣ ಬೀರು. ಶಂಕರ ಗೋಡೆಗಳನ್ನು ನೋಡಿದ. ಅಲ್ಲಿದ್ದುದು ಒಂದೇ ಒಂದು ಚಿತ್ರ. ದಿಗಂಬರೆಯಾಗಿ ಕಪ್ಪನೆಯ ನೀಳ ಕೇಶವನ್ನು ಚಲ್ಲಿ ಹರಡಿ, ಹೋಗುತ್ತಿರುವ ಅಕ್ಕಮಹಾದೇವಿಯದಾಗಿತ್ತು. ಅನತಿ ದೂರದಲ್ಲಿ ಶ್ರೀಶೈಲ; ಎರಡು ಕೈಗಳನ್ನೂ ಮೇಲೆತ್ತಿ 'ರಕ್ಷಿಸು ಸ್ವೀಕರಿಸು' ಎಂದು ಆರ್ತನಾದದಿಂದ ದೀನಳಾಗಿ ಸಾಗುತ್ತಿದ್ದಾಳೆಂಬಂತೆ ತೋರುತ್ತಿದೆ. ಒಂದು ಹೆಜ್ಜೆ ಮುಂದೆ, ಇನ್ನೊಂದರ ಹಿಮ್ಮಡಿ ನಸು ಎದ್ದಿದೆ.

ಶಂಕರ ದಿಗ್ಗನೆ ಎದ್ದ. ಆ ಚಿತ್ರದ ಅಡಿ ಬರೆದಿತ್ತು:

"ಮೂಲ ದ್ವಾರದ ಬೇರ ಮೆಟ್ಟಿ,
ಭೂಮಂಡಲವನೇರಿದೆ;
ಆಚಾರದ ಬೇರ ಹಿಡಿದು,
ಐಕ್ಯದ ತುದಿಯನೇರಿದೆ;
ವೈರಾಗ್ಯದ ಸೋಪಾನದಿಂದೆ-
ಶ್ರೀಗಿರಿಯನೇರಿದೆ!
ಕೈವಿಡಿದು ಕರೆದುಕೊಳ್ಳಾ
ಚೆನ್ನಮಲ್ಲಿಕಾರ್ಜುನಾ !!"

ಅಕ್ಷರ ದುಂಡಾಗಿ ಮುದ್ದಾಗಿದ್ದವು. ಅವು ಲಲಿತೆಯವ್ವೆಗಳೇ! ಈ ಚಿತ್ರವನ್ನೆಲ್ಲಿ ಪಡೆದಳು ? ವೈರಾಗ್ಯವೇ ಮೂರ್ತಿವೆತ್ತು ಬಂದು, ಲೋಕದ ಗಂಡರನ್ನೊಲ್ಲದೆ, ಅವರನ್ನೆಲ್ಲಾ ಒಲೆಯೊಳಗಿಕ್ಕು ಎಂದು ಹೇಳಿ, ರೂಹಿಲ್ಲದ ಕೇಡಿಲ್ಲದ ಚಲುವಂಗೊಲಿದು ಸಾಗುತ್ತಿರುವ, 'ಕೈವಿಡಿದು ಕರೆದುಕೊಳ್ಳಾ' ಎಂದು ದೀನತೆಯಿಂದ ಬೇಡುತ್ತಿರುವ ಅಕ್ಕನೇ ಇಲ್ಲಿ ಚಿತ್ರವಾಗಿದ್ದಾಳೆ! ಇದನ್ನು ಬರೆದವರಾರು ? 'ಅಕ್ಕಾ ನಿನ್ನನ್ನು ಸೃಷ್ಟಿಸಿದವರಾರು ? ನೀನೆ ಅವರ ಹೃದಯವಿರಬೇಕು!' ಎಂದು ಆ ಚಿತ್ರವನ್ನು ಕೇಳಿದ.

"ಕುಳಿತುಕೊಳ್ಳಿ !"

ಲಲಿತ ಮೃದುವಾಗಿ ಕರೆದಾಗಲೇ ಎಚ್ಚರ. ಎಲ್ಲಿರುವೆನೆಂದು ತನ್ನ ತಾನೆ ಪ್ರಶ್ನಿಸಿಕೊಳ್ಳುವವನಂತೆ ಸುತ್ತಲೂ ನೋಡಿದ; ತನ್ನನ್ನೂ ನೋಡಿಕೊಂಡ. ಎದುರಿಗೆ, ಹಾಲು ಹಿಡಿದು ನಿಂತುಕೊಂಡಿದ್ದ ಲಲಿತಳನ್ನೂ ನೋಡಿದ. ಯಂತ್ರದಂತೆ ಕುಳಿತ.

"ತೆಗೆದುಕೊಳ್ಳಿ" ಲಲಿತ ಪ್ರೀತಿಯಿಂದ ಒಂದು ಲೋಟವನ್ನೆತ್ತಿ ಕೊಟ್ಟಳು.

'ನೀನೂ ತೆಗೆದುಕೋ' ಎನ್ನಲೂ ಇಲ್ಲ, ಶಂಕರ. ಹಿಂದಿನಂತೆ ಅಂದೂ ಹಾಲಿತ್ತ ಲಲಿತಳಿಗೆ ಅಂದು ಹಾಗನ್ನಲಿಲ್ಲ.

ಯಾವುದೋ ಮಂತ್ರದ ಹಿಡಿತಕ್ಕೆ ಸಿಕ್ಕು, ಯಂತ್ರದಂತೆ ಆಚರಿಸು ತ್ತಿದ್ದ. ಒಂದೊಂದೇ ಆದರೂ ಲಲಿತ ಮಾತನಾಡುತ್ತಿದ್ದಳಾದರೂ ಶಂಕರ ಏನೊಂದೂ ನುಡಿಯಲಿಲ್ಲ. ಅವನ ಕಣ್ಣು ಬೇರಾರನ್ನೋ ಕಳ್ಳದಿಟ್ಟಿಯಿಂದ ನಿರುಕಿಸುವಂತೆ ಕಾಣುತ್ತಿದ್ದವು.

"ಯಾಕೆ ಹೀಗಿದ್ದೀರಿ ? ಕಡೆಗೂ ಗಂಟುಬಿದ್ದಳೆಂದೇ ?" ಲಲಿತಳ ಕಣ್ಣು ಒಂದು ಹನಿ ಸುರಿಸಿತು. ಗಂಭೀರವಾದ ಆ ಕಣ್ಣುಗಳು, ಆಳವಾಗಿ ದುಃಖದ, ಸುಖದ ಕಡಲಾಗಿ ಕಾಣುತ್ತಿ ದ್ದುವು. ಫಕ್ಕನೇ ಎಚ್ಚರವಾಯ್ತು, ಶಂಕರನಿಗೆ.

"ಬೇಡ ಲಲಿತ! ನೀರ ಸುರಿಸಿ, ನನ್ನ ಕೊಲ್ಲಬೇಡ! ಕೊಲ್ಲ ಬೇಡ!!" ಎಂದು ಫಕ್ಕನೇ ಕಣ್ಣೀರು ತೊಡೆದ. ಆಗ ಹಿಡಿದು ಕೊಂಡಿದ್ದ ಲೋಟ ಬಿದ್ದು ಹಾಲೆಲ್ಲಾ ಚೆಲ್ಲಿ ಹೋಯ್ತು. ಆಗಲೇ ಅವನಿಗೆ ಸಂಪೂರ್ಣ ಪ್ರಜ್ಞೆ ಬಂದದ್ದು. ತಾನು ಕಾಲೇಜಿಗೆ ಹೋಗಿದ್ದು, ಅಲ್ಲಿ ಲಲಿತಳನ್ನು ಆಕಸ್ಮಿಕವಾಗಿ ಕಂಡದ್ದು, ಅವಳು 'ಬನ್ನಿ' ಎಂನೊಡನೆ ಮಂತ್ರಮುಗ್ಧನಾಗಿ ಕೈದಿಯಂತೆ ಹಿಂಬಾಲಿ ಸಿದ್ದು, ಈಗ ಇಲ್ಲಿ ಕುಳಿತು ಅವಳ ಕಣ್ಣೀರ ತೊಡೆದದ್ದು, ಹಾಲು ಚೆಲ್ಲಿದ್ದು.- ಎಲ್ಲವೂ ನೆನಪಿಗೆ ಸುಳಿದವು; ಸ್ಮೃತಿ ಸಚೇತನವಾಯ್ತು.

"ಲಲಿತ, ನೀನಿಲ್ಲಿ....ಹೇಗೆ ?....ಇದು ಯಾರ ಮನೆ ?.... ತಾಯಿ...." ತೊದಲುತ್ತ ಶಂಕರ ಪ್ರಶ್ನಿಸಿದ.

"ನೀವು ಈ ಊರಲ್ಲಿ ಏಕೆ ? ಕಾಲೇಜಿಗೇಕೆ ಬಂದಿದ್ದಿರಿ ?" ಉತ್ತರಿಸದೆ ಲಲಿತ ಪ್ರಶ್ನಿಸಿದಳು.

ಹೇಗೆ ಹೇಳಬೇಕೆಂದು ತೋರದಿದ್ದರೂ ಉತ್ತರಿಸಬೇಕಾಯ್ತು; ಉತ್ತರಿಸಿದ.

"ನಾನಿಲ್ಲಿ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಲಕ್ಚರರ್; ಲಾ ಕಾಲೇಜಿನಲ್ಲಿ ವಿದ್ಯಾರ್ಥಿ !"

"ಮನೆ ?"

"ಪರಮಹಂಸ ನಗರದಲ್ಲಿ!"

"ಊಟ?"

ಲಲಿತಳ ಈ ಪ್ರಶ್ನೆಗೆ ಏನು ಉತ್ತರಿಸುವುದು?

"ಈಗ ನಾನು ನಳ!" ಎಂದು, ಅಂತಹ ಸನ್ನಿವೇಶದಲ್ಲೂ ತನ್ನ ಉತ್ತರಕ್ಕೆ ತಾನೇ ನಕ್ಕ. ಲಲಿತಳೂ ತುಟಿಯಲ್ಲಿ ಹಾಸ್ಯವನ್ನು ವ್ಯಕ್ತಪಡಿಸಿದಳು.

ಸ್ವಲ್ಪ ಹೊತ್ತು ಮೌನವಾವರಿಸಿತು. ಚಲ್ಲಿದ ಹಾಲನ್ನು ಲೋಟಕ್ಕೆ ತುಂಬುತ್ತ ಲಲಿತ ತಲೆ ತಗ್ಗಿಸಿದ್ದಳು. ದೂರದ ರಸ್ತೆಯಲ್ಲಿ ವಾಹನಗಳ ಓಡಾಟದ ಸದ್ದು. ಗಲ್ಲಿಯ ಕಸದ ಗುಂಡಿಯ ಹತ್ತಿರ "ಕಾಕಾ" ಎಂಬ ಕಾಗೆಯ ಕಾಕು ಸ್ವರ. ಗಾಳಿ ಎರಡು ಕಿಟಿಕಿಗಳಿಂದಲೂ ತೂರಿಬರುತ್ತಿತ್ತು. ತಣ್ಣಗೆ ತೀಡುತ್ತಿತ್ತು; ಎಲ್ಲಿಂದಲೋ ಸುವಾಸನೆಯನ್ನೂ ಹೊತ್ತು ತರುತ್ತಿತು.

"ನಿನ್ನ ಸಮಾಚಾರ ಲಲಿತ?" ಶಂಕರ ಮೌನವನ್ನೊಡೆದ. ಲೋಟವನ್ನು ಆಚೆಗೆ ಎತ್ತಿಡುತ್ತ, ಶಂಕರನ ಕಡೆ ಮುಖ ಮಾಡಿ, "ನಿಮ್ಮದು ಆಯ್ತೆ?" ಎಂದು ಪ್ರಶ್ನಿಸಿದಳು.

"ಆಯ್ತು ಇನ್ನೇನಿದೆ? ಉಪಾಧ್ಯಾಯ, ವಿದ್ಯಾರ್ಥಿ, ಬಾಣಸಿಗ,-" ಈ ಮೂರು ಪದಗಳು ನನ್ನೀಗಿನ ಸ್ಥಿತಿಯನ್ನು ಪರಿಚಯ ಮಾಡಿಕೊಡುತ್ತವೆ."

"ಉಪಾಧ್ಯಾಯಿನಿ, ಟೈಲರ್, ವಿದ್ಯಾರ್ಥಿನಿ, ಅಡುಗೆಯವಳು-ಈ ನಾಲ್ಕು ಪದಗಳು ನನ್ನ ಪರಿಚಯಕ್ಕೆ ಸಾಕು!" ಎಂದು ನಸುನಕ್ಕಳು, ಲಲಿತ.

"ಅಂದರೆ?"

"ಅದೋ ನೋಡಿ ಆ ಹೊಲಿಯುವ ಯಂತ್ರದಿಂದ ಕೆಲಸವಾಗುತ್ತೆ. ಅದನ್ನು ಏರಿ ಕುಳಿತಾಗ ಟೈಲರ್; ಅಲ್ಲಿ ನೋಡಿ ಚರಕವಿದೆ. ಅದರಿಂದ ನೂಲು ತೆಗೆವಾಗ ಆತ್ಮಾನಂದ; ಇದೋ

ನೋಡಿ ಈ ಪುಸ್ತಕ ಕಪಾಟಿನಲ್ಲಿ ಕೆಲವು ಮಕ್ಕಳ ಪುಸ್ತಕಗಳಿವೆ-
ಅಂದರೆ ಉಪಾಧ್ಯಾಯಿನಿ. ಅಕ್ಕಪಕ್ಕದ ಮನೆಯವರ ಮಕ್ಕಳಿಗೆ
ರಾತ್ರಿ ಪಾಠ ಹೇಳುತ್ತೇನೆ. ಇನ್ನೇನು ಅಡುಗೆಯವಳು, ಹೊಟ್ಟೆ
ಇರುವುದರಿಂದ, ಅದಕ್ಕೆ ಹಸಿವೆ ಇರುವುದರಿಂದ....!"

"ಮತ್ತೆ ?"

"ಮತ್ತಿನ್ನೇನು ? ಈಗ ಎರಡನೆಯ ವರ್ಷದಲ್ಲಿ ಓದುತ್ತಿರುವ
ವಿದ್ಯಾರ್ಥಿನಿ. ಆಯ್ತು."

"ಅದೆಲ್ಲಾ ಇರಲಿ. ತಾಯಿಯವರೆಲ್ಲಿ ? ನೀವಿಲ್ಲಿಗೆಂದು
ಬಂದಿರಿ ?"

ಶಂಕರ ಈ ಪ್ರಶ್ನೆ ಕೇಳಿದಾಗ, ಲಲಿತಳ ಹಾಸಯುಕ್ತ
ಮುಖ ಕಳೆಗುಂದಿತು ಸೆರಗನ್ನು ಕಣ್ಣಿಗಿಟ್ಟು ಅತ್ತುಬಿಟ್ಟಳು. ಅವನ
ಪಾದದ ಮೇಲೆ ತಲೆಯಿಟ್ಟು ಉರುಳುರುಳಿ ಅತ್ತುಬಿಟ್ಟಳು.

ಲಲಿತ ಹಾಗೆ ಅಳುತ್ತಾಳೆಂದು ಶಂಕರ ಅಂದುಕೊಂಡಿರಲಿಲ್ಲ.
ಲಲಿತ ಹೀಗೆಂದೂ ಅತ್ತವಳಲ್ಲ. ಅಂತಹ ಪ್ರಕೃತಿ ಅವಳದಲ್ಲ.
ಇಂದೇಕೆ ? ಇವಳ ತಾಯಿ ಸುದ್ದಿ ತೆಗೆದರೇಕೆ ಅಳುತ್ತಾಳೆ ?
ಇಲ್ಲವೇ ಆ ತಾಯಿ ? ಇಲ್ಲವೇನು ? ಎಲ್ಲಿ ಹೋದರು ? ಸತ್ತು
ಹೋದರೆ ? ಛೀ, ಬೇಡ ಮನಸ್ಸೆ ಇಂತಹ ಅಪಶಕುನವನ್ನು
ಚಿಂತಿಸಬೇಡ ! ಬೇಡ ! ಸತ್ತಿಲ್ಲ ! ಇವಳ ತಾಯಿ ಸತ್ತಿಲ್ಲ.
ಬನಶಂಕರಮ್ಮನವರು ಸತ್ತಿಲ್ಲ. ಹೌದು ಸತ್ತಿಲ್ಲ. ಹಾಗಾದರೆ
ಎಲ್ಲಿ ಹೋದರು ? ನನ್ನ ದುರ್ವರ್ತನೆಗಾಗಿ ಇವಳನ್ನು ದೂಡಿ
ಬಿಟ್ಟರೆ ? ಹೊರದೂಡಿದರೆ, ಲಲಿತೆಯನ್ನು, ಬನಶಂಕರಮ್ಮ ?
ಆ ಹೂವಿನೆದೆಯಲ್ಲಿ ಈ ಕಾಠಿಣ್ಯದ ಸಿಡಿಲೆ ? ಇಲ್ಲ. ಇಲ್ಲ !
ಹಾಗಾಗಿರಲಾರದು ! ಯಾಕೆ ಲಲಿತ ಹೀಗಳುತ್ತಾಳೆ ? ಅಯ್ಯೋ
ಏನಿರಬಹುದು ? ಏನಾಗಿದ್ದಿರಬಹುದು ?

ಶಂಕರನ ಎದೆ ಡವ್ ಡವ್ ಎಂದು ಡಿಯೊತ್ತುತ್ತಿತ್ತು.

ಸಿಯುಸಿರ ಹೊಗೆ ಬುಸ್ ಬುಸ್ ಹೊರಸೂಸುತ್ತಿತ್ತು. ಮನಸ್ಸು ಂಕಿಯಾಗಿ ನಾಬಗೆ ನಾಲಗೆಯಾಗಿ ಅತ್ತ ಇತ್ತ ಚಾಚುತ್ತಿತ್ತು. ನಶಂಕರಮ್ಮನವರು ಅಲ್ಲಿ ಒಣಸೌವೆಯಾಗಿದ್ದರು. ಅದನ್ನು ನೆಯಬೇಡವೆಂದರೂ ಮನಸ್ಸು ಏನೇನೋ ಕೆಟ್ಟುದನ್ನೆ ನೆನೆಯು ತ್ತು. ಏನು, ಏನಾಗಿದೆ ?

"ಯಾಕೆ ಲಲಿತ ? ಏನು ?" ನಡುಗುತ್ತಲೇ ಕೇಳಿದ. ಲಲಿತ ನ್ನು ಮುಟ್ಟಲು ಕೈ ನಡುಗುತ್ತಿತ್ತು. ಆದರೂ ಆಕೆಯ ಮುಖ ನ್ನು ಎರಡು ಕೈಯಲ್ಲಿ ತುಂಬಿ ಕೇಳಿದ, ಮತ್ತೊಮ್ಮೆ ಕಣ್ಣೀರ ೊಡೆದು ಕೇಳಿದ. ಆದರೆ ಲಲಿತ ಅವನ ಕೈ ಬಿಡಿಸಿಕೊಂಡು ಲೆಯನ್ನು ಅವನ ತೊಡೆಯಮೇಲಿಟ್ಟು ಬಿಕ್ಕಿ ಬಿಕ್ಕಿ ಅತ್ತಳು. ಳುತ್ತಳುತ್ತಲೇ ಉತ್ತರಿಸಿದಳು.

ಎಂತಹ ಉತ್ತರ ! ಅದನ್ನು ಕೇಳಿ, ಎದೆಯೊಡೆಯಿತು. ತ್ತರದ ಕಟ್ಟಡ ಬರಸಿಡಿಲಹೊಡೆತಕ್ಕೆ ನಡುಗಿ, ಸಡಿಲಿ, ಧಡಾ ನೇ ಕಡಿದು ಬಿತ್ತು. ದೊಡ್ಡದೊಡ್ಡ ಕಲ್ಲುಗುಂಡುಗಳು ಧುಡುಂ ುಡುಂ ಉರುಳುತ್ತಲೇ ಇದ್ದುವು. ಅದು ಅಂತಹದೇ ಸಿಡಿಲು. ೀರಕಸಿವ ಕರಿಮೋಡದ ಬಸಿರಿನಿಂದ ಸಿಡಿಲು ಸಿಡಿದು ಬಂದಿತ್ತು. ಾನು ಬಿಟ್ಟುದೇ ಆ ಸಿಡಿಲು ! ತನ್ನ ತೊಡೆಯಲ್ಲಿ ಮುಖಮುಚ್ಚಿ ಣ್ಣೀರ ಕರೆವ, ಕಪ್ಪುಗುರುಳನ್ನು ಬೆನ್ನಮೇಲೆಲ್ಲಾ ಹರಡಿದ್ದ ವ್ಯಕ್ತಿಯಿಂದ ಆ ಮಾತು ಬಂದಿತ್ತು; ಸಿಡಿದು ಬಂದಿತ್ತು.

"ಇಲ್ಲ. ತಾಯಿ ಇಲ್ಲ. ತೀರಿಹೋದಳು !" ಅಷ್ಟೇ ಂದದ್ದು ಲಲಿತ; ಅಷ್ಟೇ ನುಡಿದದ್ದು ಆಕೆ. ಮತ್ತೆ ಗಟ್ಟಿಸಿ ತ್ತಳು; ತನ್ನ ತೊಡೆಯನ್ನು ಮುಖದಿಂದ ತಿಕ್ಕಿ ತಿಕ್ಕಿ ಅತ್ತಳು. ುಟ್ಟ ಮರದ ಮೋಟಿನಂತೆ ಹಾಗೆಯೇ ಕುಳಿತಿದ್ದ, ಶಂಕರ.

ಹಾಗಾದರೆ ಬನಶಂಕರಮ್ಮ ಇಲ್ಲ ! ಆ ತಾಯಿ ಇಲ್ಲ ! ನ್ನು ಈ ಲಲಿತೆಯನ್ನು 'ಮಗೂ' ಎಂದು ಕರೆಯುವ ತಾಯಿ

ಇಲ್ಲ! ತನ್ನನ್ನು ಅಕ್ಕರೆಯಿಂದ ಕರೆದು, ಸವಿಮಾತನಾಡಿ, ಊಟಕ್ಕೆ ಇಟ್ಟು ಮಮತೆಯಿಂದ ನೋಡುತ್ತಿದ್ದ ಆ ಮಹಾತಾಯಿ ಇಲ್ಲ. ಇಲ್ಲ! ಎಲ್ಲಿಹೋದರು? ಯಾಕೆ? ಏನಾಗಿತ್ತು?

"ಅಯ್ಯೋ ಲಲಿತ, ಏನಾಗಿತ್ತು?" ಕರಿಯ ಮೋಟಿನಲ್ಲಿ ಇನ್ನೂ ಬೆಂಕಿ ಒಳಗೊಳಗೇ ಹೊಗೆಯಾಡುತ್ತಿತ್ತೇನೋ, ಈಗ ಜ್ವಾಲೆಯಾಗಿ ಈ ಮಾತಿನ ರೂಪದಲ್ಲಿ ನಾಲಗೆ ಚಾಚಿತು, ಲಲಿತೆಯ ಅಂತೆಯೇ ತನ್ನ ಹೃದಯವನ್ನು ನೆಕ್ಕಿ ನೆಕ್ಕಿ; ಅಲ್ಲಿ ಇಲ್ಲಿ ಅಷ್ಟಿಷ್ಟು ಹಸಿ ಇದ್ದಿದ್ದರೆ ಅದನ್ನೂ ನೆಕ್ಕಿ, ಸುಟ್ಟು ಸೂರೆಗೊಂಡಿತ್ತು. ಹೌದು ಸೂರೆಗೊಂಡಿತ್ತು.

ಲಲಿತ ಉತ್ತರ ಕೊಡಲಿಲ್ಲ ಆ ತಕ್ಷಣವೆ. ಅವನ ನಾಲ್ಕಾರು ಸಾರಿಯ ಪ್ರಶ್ನೆಗೆ ಅವಳ ಉತ್ತರ: "ಆ ವಿಚಾರ ಬೇಡ" ಎಂದು.

ಆ ವಿಚಾರ ತನಗೆ ಬೇಡವೇ? ಹೌದು ಅವರ ಹೃದಯವನ್ನು ಸುಟ್ಟು ಸೂರೆಮಾಡಿಹೋಗಿದ್ದ ತನಗೆ ಅವರ ಸಾವಿನ ಸಮಾಚಾರವಾದರೂ ಏಕೆ? ಅದನ್ನರಿಯಲು ತಾನಾರು? ತನಗೆ ಆ ಯೋಗ್ಯತೆ ಇದೆಯೇ? ಇದೆಯೇನು ಆ ಯೋಗ್ಯತೆ? ಆ ಮಹಾತಾಯಿಯನ್ನು ಯಾವ ಬೇನೆ ತಿಂದಿತೋ? ಯಾವ ಬೇನೆ ದಹಿಸಿತೋ! ಆ ನೋವು, ಆ ಬೇನೆ ಕಾಡುವಾಗ ತಾನೇನು ಮಾಡುತ್ತಿದ್ದೆನೋ! ತನ್ನ ಮನಸ್ಸು ಯಾವುದನ್ನು ಎಣಿಸುತ್ತಿತ್ತೋ!

ನಿಷ್ಪಂದನಾಗಿ ಸ್ವಲ್ಪ ಹೊತ್ತು ಹಾಗೆಯೇ ಕುಳಿತಿದ್ದ, ಶಂಕರ. ಆದರೂ ನೋವಿನ ಕುತೂಹಲ ಸುಡುತ್ತಿತ್ತು; ಜ್ವಾಲೆಜ್ವಾಲೆಯಾಗಿ ಏಳುತ್ತಿತ್ತು; ಎದೆ, ಮನವನ್ನು ದಹಿಸುತ್ತಿತು.

ಆ ಮೇಲೆ ಲಲಿತ ಸಾವಕಾಶವಾಗಿ ಎದ್ದು, ಎಲ್ಲ ಸಮಾಚಾರವನ್ನು ಹೇಳಿದಳು. ಆ ತಾಯಿಯ ಸಾವಿಗೆ ತಾನೇ ಕಾರಣವೆಂಬುದು ಆಗ ಅರಿವಾಯಿತು. ನನ್ನ ಕಾಗದ ಅಷ್ಟುದೂರದ ಪರಿಣಾಮವನ್ನುಂಟುಮಾಡುವುದೆಂದು ನಾನರಿತಿದ್ದೆನೆ? 'ಅವ

ನೊಬ್ಬ ಕೃತಘ್ನ. ಉಂಡ ಮನೆಗೆ ಎರಡು ಬಗೆದ ದ್ರೋಹಿ. ಅವನ ಸುದ್ದಿ ನಮಗಿನ್ನು ಬೇಡ !' ಎಂದು ನೆಮ್ಮದಿಯಿಂದಿರಬಹು ದೆಂದು ಬಗೆದಿದ್ದುದು ಈ ತೆರನಾಯಿತೆ ? ಆ ಪತ್ರವೇ ಆ ತಾಯಿಯ ಹೃದಯಕ್ಕೆ ಶೂಲವಾಯಿತೇ ? ಆ ನೋವೆ ಅವಳನ್ನು ಹಿಂಡಿ ಹಿಪ್ಪೆಮಾಡಿಬಿಟ್ಟಿತೆ? ಕಡೆಗೆ ಇಹಲೋಕವನ್ನೂ ತೊರೆಯಿಸಿ ಬಿಟ್ಟಿತೆ? ಅಯ್ಯೋ ನನ್ನ ಶಿರವನ್ನು ಆ ತಾಯ ಪಾದಕ್ಕಿಟ್ಟು ಕ್ಷಮೆಯನ್ನು ಕೇಳಿಕೊಳ್ಳಲೂ ಅವಕಾಶವಿಲ್ಲದಂತೆ ನನ್ನ ಪತ್ರ ಮಾಡಿತೇ ? ಆ ಪತ್ರದಲ್ಲಿಯೇ ನನ್ನ ವಿಳಾಸವನ್ನು ಏಕೆ ತಿಳಿಸಲಿಲ್ಲ. ತಿಳಿಸಿದ್ದಿದ್ದರೆ, ನನ್ನನ್ನು ಕಡೆಯುಗಳಿಗೆಯಲ್ಲಾದರೂ ಕರೆಸುತ್ತಿದ್ದರು. ಆದರೆ ಎಲ್ಲವೂ ಮುಗಿದು ಹೋಗಿದೆ ! ಏನಿಷ್ಟೂ ಉಳಿದಿಲ್ಲ. ಆ ಮಹಾ ಕುಂಡದಲ್ಲಿ ಬೇಯಲು ಈ ಹೂವು ಉಳಿದುಕೊಂಡಿದೆ !

ತನ್ನ ಮಗಳನ್ನು ಯೋಗ್ಯನಾದವನಿಗೇ ಕೊಟ್ಟು, ಸಂತೋಷ ದಿಂದ ನಲಿಯುವ ಅಳಿಯ-ಮಗಳನ್ನು ಕಣ್ತುಂಬ ನೋಡುವ ಆ ತಾಯ ಆಸೆಗೆ ಕೊಡಲಿ ಇಟ್ಟವನೂ ನಾನೆ! ಪತಿ ತೀರಿದ ಮೇಲೆ ಎಷ್ಟು ಕಷ್ಟ ಬಂದರೂ ಕೂಡ ಮಮತೆಯಿಂದ ಸಾಕಿ ಸಲಹಿ ಬೆಳೆಸಿದ ಮುದ್ದು ಮಗಳು ಅನಾಥೆಯಾಗಬೇಕಾಯಿತೇ ? ಎಂದು ಕೊರಗಿದ. ಆ ತಾಯ ದುಃಖ ಎಷ್ಟು ಹಿರಿದಾಗಿತ್ತೋ ? ಆ ಕಾರ್ಯಕ್ಕೂ ನಾನೇ ಕಾರಣ ! ಹಾದಿಯ ದೆವ್ವವನ್ನು ಮನೆಗೆ ಕರೆದುಕೊಂಡಳೇಕೆ ? ನನ್ನಂಥ ದುರ್ಬಲನನ್ನು ನಚ್ಚಿ ನೆಚ್ಚಿ ಬಾಳ ಸಾಗಿಸುತ್ತಿದ್ದಳೇಕೆ ? ತನ್ನ ಕುಲದ, ವಂಶದ, ಮನೆಯ ಕುಡಿ ಮುರುಟುವಂತಾಯ್ತು ? ಎಂದು ಹಲುಬಿದ ಆ ತಾಯ ದಾರುಣ ಚಿತ್ರ ಹೇಗಿತ್ತೋ ! ಬೇರೆಯವನಿಗೆ ತನ್ನ ಮಗಳನ್ನಿತ್ತು ಸುಖವಾಗಿ ಬಾಳಲು ಆ ತಾಯಿ ಯೋಚಿಸಲಿಲ್ಲವೇ ? ಲಲಿತಳಾದರೂ ಆ ವಿಷಯವಾಗಿ ಪ್ರಸ್ತಾಪಿಸಲಿಲ್ಲವೇ ? ಯಾಕೆ ಪ್ರಸ್ತಾಪಿಸಬಾರದಾಗಿತ್ತು ? ಅಯ್ಯೋ ಲಲಿತ ಹಾಗೇಕೆ ಮಾಡಬಾರದಾಗಿತ್ತು ?

"ಲಲಿತಾ, ನೀನೇಕೆ ಹೇಳಲಿಲ್ಲ ಬೇರಿಯಾರಿಗಾದರೂ ಕೊಟ್ಟು ಆ ಚಿಂತೆ ಬಿಡು- ಎಂದು ?" ಶಂಕರ ತಡೆಯದೇ ಕೇಳಿಯೇ ಬಿಟ್ಟ.

"ಅಯ್ಯೋ, ನನ್ನನ್ನು ಕೊಲ್ಲಬೇಕೆಂದಿದ್ದೀರಾ ?" ಎಂದು ಲಲಿತ ಮತ್ತೆ ರೋಧಿಸಿದಳು; ಮತ್ತೆ ಕರಿಗುರುಳ ಕೆದರಿ, ಕಣ್ಣೀರ ಕರೆದು, ಉರುಳುರುಳಿ ಅಳಲಿದಳು; ಮರುಮರುಗಿ ಅತ್ತಳು.

"ತನ್ನ ಮಗಳು ಬಿ. ಎ. ಪಾಸಾಗಿರುವುದನ್ನೂ ಕೇಳಲು ಆ ತಾಯಿ ಉಳಿಯಲಿಲ್ಲ; ನೀವು ಫಸ್ಟ್‌ಕ್ಲಾಸಿನಲ್ಲಿ ಮೊದಲಿಗರಾಗಿ ಪಾಸಾಗಿದ್ದುದನ್ನೂ ಆ ತಾಯಿ ಕೇಳಲಿಲ್ಲ. ಅಯ್ಯೋ, ಆಕೆ ಕೇಳಿದ್ದಿದ್ದರೆ ಸಾಯುತ್ತಿರಲಿಲ್ಲ. ಅಂತಹ ಸಾವನ್ನು ನಾನೆಲ್ಲೂ ನೋಡಿದ್ದಿರಲಿಲ್ಲ. ನನ್ನ ತಾಯಿಯೇ ಹಾಗೆ ಸತ್ತರೂ ನನಗೆ ನಂಬುಗೆಯಾಗಲಿಲ್ಲ. ಹೀಗೂ ಸಾಯುವುದುಂಟೇ ?- ಎಂದು ನನಗೀಗಲೂ ಆಶ್ಚರ್ಯವಾಗುತ್ತದೆ. ಅದರೊಡನೆಯೇ ದುಃಖ ಉಮ್ಮಳಿಸಿ ಬರುತ್ತದೆ. ಸತ್ತು ಹೋದಳಲ್ಲಾ ಎಂಬ ಅಳಲು ಎದೆಯನ್ನು ಕರಗಸಕ್ಕಿಟ್ಟು ಕೊರೆಯುತ್ತಿದೆ."

ಒಂದು ತಾಸಿನಲ್ಲಿ ಇಷ್ಟನ್ನು ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿದಳು.

ಕಡೆಯುಸಿರು ಬಿಡುವಾಗ 'ಶಂಕರನಿಗೆ ದ್ರೋಹ ಬಗೆಯ ಬೇಡ. ಅವನೆಂದಿದ್ದರೂ ನಿನ್ನವನೇ ? ಅವನು ಹೇಳುತ್ತಿದ್ದ ತತ್ವಗಳನ್ನು ಮರೆಯಬೇಡ. ಅವನು ನಿನ್ನ ಕೈ ಬಿಡುವುದಿಲ್ಲ. ನಿನ್ನ ಬಾಳಿನಲ್ಲಿ ನಚ್ಚಿರಲಿ; ಅವನಬಗ್ಗೆ ನೆಚ್ಚಿರಲಿ !' ಎಂದಿದ್ದರಂತೆ ! ನನ್ನ ಬಗ್ಗೆ ಆ ಮಾತುಗಳೇ ? ನನ್ನಲ್ಲಿ ಯಾರು ನೆಚ್ಚಿಕೆಯನ್ನಿಟ್ಟಾರು? ನನ್ನಂಥವನನ್ನೂ ನಂಬಲೂ, ನನಗೆ ದ್ರೋಹ ಬಗೆಯಬಾರದೆಂದೂ ಹೇಳಿದ ಆ ತಾಯಿ ಮಹಾಮಾತೆ ! ನನ್ನ ತತ್ವಗಳು ! ಅಯ್ಯೋ ತತ್ವಗಳು. ಹಿರಿಯರೂ, ಅನುಭಾವಿಗಳೂ ಆಡಿದ ಮಾತುಗಳನ್ನೇ ಹೇಳಿದ್ದುದೂ ನನಗಿಂತಹ ಗೌರವವನ್ನು

ಂದೀತೇ !

ತನ್ನಬಗ್ಗೆ ಆ ತಾಯಿ ನುಡಿದಿದ್ದನ್ನು ಕೇಳಿ ಶಂಕರ ನಕ್ಕು ಬಿಟ್ಟ; ಹುಚ್ಚನಂತೆಯೇ ನಕ್ಕುಬಿಟ್ಟ.

ತಾಯಿ ಸತ್ತಮೇಲೆ ಈ ನಗರದಲ್ಲಿದ್ದ ತಾಯಿಯ ಗೆಳತಿಯ ನೆರವಿನಿಂದ ಈ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ತಾಯಿ ಗಳಿಸಿಟ್ಟಿದ್ದ ಹಣದಿಂದ ಒಂದು ಹೊಲಿಗೆಯ ಯಂತ್ರವನ್ನು ಕೊಂಡು, ಅಕ್ಕಪಕ್ಕದ ಮನೆಯವರ ಮಕ್ಕಳಿಗೆ ಪಾಠ ಹೇಳಿ ಕಾಲೇಜಿನಲ್ಲಿ ಓದುತ್ತಿರುವುದೂ, ಹಾಗೆಯೇ ಒಂದು ವರ್ಷವನ್ನು ಕಳೆದಿರುವ ಲಲಿತಳ ಸಾಹಸವನ್ನು ಕೇಳಿ ಶಂಕರ ಮರುಗಿದ. ಅವಳ ಎದೆಯಲ್ಲಿದ್ದ ಗಂಡುತನಕ್ಕಾಗಿ ಅಚ್ಚರಿಯನ್ನೂ ಪಟ್ಟ.

"ಒಂದಿಲ್ಲ ಒಂದುದಿನ ನೀವು ಬರುತ್ತೀರಿ; ನನಗೆ ಸಿಗುತ್ತೀರಿ-ಎಂದು ನಾನು ನಂಬಿಕೊಂಡಿದ್ದೆ. ಅಂತೆಯೇ ಸಿಕ್ಕಿರಿ !" ಸೆರಗಿನಿಂದ ಕಣ್ಣೀರೊರಸಿಕೊಂಡು, ಮುಗುಳುನಗೆಯನ್ನು ತುಟಿಯ ಮೇಲೆ ಹಿಡಿದುತಂದು, ಮಾತನಾಡಿದಳು.

ಹೌದು ಸಿಕ್ಕಿದ್ದೇನೆ. ಆದರೆ ಸಿಕ್ಕದವನಾಗಿ ಸಿಕ್ಕಿದ್ದೇನೆ. ಅವಳಿಗೆ ಸಲ್ಲದವನಾಗಿ ಸಿಕ್ಕಿದ್ದೇನೆ. ಅವಳ ಕರುಣೆಯೇನು ! ಅವಳ ಮಮತೆಯೇನು ! ಅವಳ ಪ್ರೀತಿಯೇನು ! ನಾನಂತಹ ದ್ರೋಹ ಬಗೆದಿದ್ದರೂ ನನ್ನನ್ನು ಈಕೆ ಕರುಣೆ, ಪ್ರೀತಿ, ದಯೆಯಿಂದ ಕಾಣುತ್ತಿರುವುದೇನು !

"ಆದುದಾಯಿತು ನೀವೇಕೆ ಅಲ್ಲಿ ಕಷ್ಟಪಡುತ್ತಿದ್ದೀರಿ ಇಲ್ಲಿಗೇ ಊಟಕ್ಕೆ ಬನ್ನಿ!" ಲಲಿತ, ಶಂಕರನನ್ನು ಆಹ್ವಾನಿಸಿದಳು.

"ಏನು ಲಲಿತ ನೀನೆನ್ನುವದು ! ಇಲ್ಲಿಗೆ ನಾಬಂದರೆ ಅಕ್ಕಪಕ್ಕದವರೇನೆಂದುಕೊಂಡಾರು !"

ಲಲಿತ ನಕ್ಕು ಪ್ರಶ್ನಿಸಿದಳು.

"ನೀವಾರು ಬಲ್ಲಿರೇನು ?"

ಏನಿದು ಪ್ರಶ್ನೆ ? ನಾನಾರು ? ನಾನಾರು ನನಗೇ ಗೊತ್ತಿಲ್ಲವೇ ? ನಾನು ! ಹೌದು ನಾನಾರು ? ನಾನು ಶಂಕರ; ನಾನು ಕಾಲೇಜ್ ಲಕ್ಚರರ್; ! ನಾನು ಲಾ ಕಾಲೇಜ್ ವಿದ್ಯಾರ್ಥಿ !

"ಹೂ. ಬಲ್ಲೆ !"

"ಯಾರು ಹಾಗಾದರೆ ?"

"ಕಾಲೇಜ್ ಲಕ್ಚರರ್; ಲಾ ಕಾಲೇಜ್ ವಿದ್ಯಾರ್ಥಿ ಎಂ. ಶಂಕರ"

"ಆಮೇಲೆ ?"

"ಆಮೇಲೆ:....ಆಮೇಲಿನ್ನೇನು ?"

"ಹಾಗಾದರೆ ನೀವಾರೆಂಬುದು ನಿಮಗೇ ಗೊತ್ತಿಲ್ಲ !"

ಅವಳ ಮಾತಿಗೆ ನಗಬೇಕೋ, ಏನುಮಾಡಬೇಕೋ ತಿಳಿಯಲಿಲ್ಲ.

"ಛೇ ! ನನಗೆ ಹುಚ್ಚು ಹಿಡಿಸುತ್ತೀಯೆ, ಲಲಿತ ! ಅಷ್ಟೇ; ಇನ್ನೇನು ? ಹಾಂ ಹೌದು, ದೂರದ ಕುಸುಮಪುರಿಯ, ತಂದೆ ಇಲ್ಲದ, ತಾಯಿಯುಳ್ಳ ಒಬ್ಬ ಪೋರ !" ಹಾಗೆ ಉತ್ತರಿಸಬೇಕೆನ್ನಿಸಿತು; ಉತ್ತರಿಸಿಯೂ ಆಯಿತು.

"ಇನ್ನು....?"

"ಇನ್ನೇನು ಲಲಿತ ! ಓ ಹೌದು ! ಬನಶಂಕರಮ್ಮನವರೆಂಬ ಉಪಾಧ್ಯಾಯಿನಿಯವರಿಗೆ ಮೋಸ ಮಾಡಿದ, ಅವರ ಮಗಳು ಲಲಿತಳಿಗೆ ವಂಚನೆ ಮಾಡಿದ ದ್ರೋಹಿ...." ಹಾಗೇ ಇನ್ನೂ ಹೇಳುತ್ತಿದ್ದಂತೆಯೇ ಲಲಿತ, "ಬೇಡಿ ! ಹಾಗೆನ್ನಬೇಡಿ !" ಎಂದು ತನ್ನ ತಳಿರನಳಿಬೆರಳನ್ನು ಶಂಕರನ ತುಟಿಗಿಟ್ಟು ಮುಚ್ಚಿದಳು.

"ಹಾಗಾದರೆ ನಾನಾರು ಹೇಳು, ನೀನಾದರೂ !"

"ನೀವು ಲಲಿತೆಯ ಶಂಕರ !" "ನನ್ನ ಶಂಕರ !" ಲಲಿತ ತುಂಟುನಗೆಯಿಂದ ಉತ್ತರಿಸಿದಳು. ಶಂಕರನಿಗೆ ತುಂಬಿದ ವ್ಯಥೆ

ತೊಾಯಿತು.

"ಬೇಡ ಲಲಿತ ಇನ್ನೂ ಆ ಆಶೆಯನ್ನು ಇಟ್ಟುಕೊಳ್ಳಬೇಡ! ನ್ನನ್ನು ಮರೆತುಬಿಡು. ನನ್ನಂಥವನು ನಿನಗೆ ಯೋಗ್ಯನಲ್ಲ. ನಗೆ ಬೇರೊಬ್ಬನನ್ನು ನೋಡೋಣ. ಯೋಗ್ಯನೂ, ವಿದ್ಯಾ ಂತನೂ ಆದವನನ್ನೇ ನೋಡೋಣ. ನೀನು ನನ್ನ ತಂಗಿಯ ಮಾನ. ನನ್ನ ಯೋಗ್ಯತೆಗೂ ನಿನ್ನನ್ನು ತಂಗಿಯೆನ್ನಲೂ ಯೋಗ್ಯ ಯಿಲ್ಲ. ಅಲ್ಲಿಯೊಂದು ಹೃದಯ ಕೊರಗುತ್ತಿದೆ, ತಾಳಿ ಕಟ್ಟಿಸಿ ೊಂಡು. ಆದರೆ ನಾನು ಆ ಹೃದಯಕ್ಕೂ ಯೋಗ್ಯನಲ್ಲ! ನಾನು ತ್ರದಲ್ಲಿ ಬರೆದಿದ್ದಂತೆ, ನಿನ್ನನಪ್ಪಿದ ಈ ತೋಳು ಅನ್ಯರನ್ನು ಪ್ಪುವುದಿಲ್ಲ, ಕಾಮದಿಂದ. ನಿನ್ನನ್ನೂ ಕೂಡ! ನೀನೂ ಈಗ ರೀಶಿಯವಳು! ನನ್ನ ಹೃದಯಕ್ಕೆ ಈಗ ಪ್ರಾಯಶ್ಚಿತ್ತವಾಗಬೇಕಾ ದೆ. ನಾನಾರಿಗಾಗಿಯೂ ಬದುಕಬೇಕಾಗಿಲ್ಲ. ಆದರೂ ಬದುಕು ತ್ತಿರುವೆ. ಅದೇತಕ್ಕೋ ನಾನರಿಯೆ! ನಾನು ಲಾ ಕಾಲೇಜಿನಲ್ಲಿ ಮತ್ತಿರುವುದು ಅನ್ಯ ವಿಚಾರಗಳು ತಲೆಯಲ್ಲಿ ತೂರಬಾರದೆಂದು ಹೇಳಿದರೆ ತಪ್ಪಲ್ಲ. ನನ್ನ ಜೀವನ ಈಗ ಅಡುಗೆ ಮಾಡಿಕೊಳ್ಳು ವುದೂ, ಓದುವುದೂ, ಪಾಠ ಹೇಳುವುದೂ- ಇಷ್ಟಾಗಿದೆ. ಇದರ ಮೇಲೆ ಯಾವ ವಿಚಾರಕ್ಕೂ ನನಗೆಡೆಯಿಲ್ಲ. ಆ ಎಡೆ ನನಗೆ ಬೇಡ!"

ಲಲಿತಳ ಮುಖ ಚಣಹೊತ್ತು ಮಂಕಾಗಿ, ಹಣೆಯಲ್ಲಿ ನೆರಿಗೆ ಗಟ್ಟಿ ಮತ್ತೆ ಮುಗುಳು ನಕ್ಕಿತು.

"ಗೊತ್ತು. ಇಲ್ಲಿಗೆ ಬಂದಾಗ ಒಂದು ಸುಳ್ಳನ್ನೇ ಹೇಳ ಬೇಕಾಯ್ತು.... ನನಗೆ ಮದುವೆಯಾಗಿದೆ ಎಂದೂ, ಪತಿ ಹೆಸರು ಶಂಕರಪ್ಪನವರೆಂದೂ, ದೂರದಲ್ಲಿ ಕೆಲಸದಲ್ಲಿರುವರೆಂದೂ, ನಾನು ಲಾ ಕಾಲೇಜ್ ಮುಗಿಸಿದ ಮೇಲೆ ಅವರಲ್ಲಿಗೆ ಹೋಗುವುದಾ ಗಿಯೂ ಹೇಳಿದ್ದೆ. ಅದಕ್ಕಾಗಿಯೇ ನಿಮಗೀಗ ಹೇಳಿದ್ದು. ನೀವು

'ಲಲಿತೆಯ ಶಂಕರ! ನನ್ನ ಶಂಕರ!' ಎಂದು. ನಿಮ್ಮ ಆದರ್ಶಕ್ಕೆ
ನಾನೆಂದೂ ಅಡ್ಡಿಬರೆನು. ನಿಮ್ಮ ನಿಷ್ಠೆಗೆ ನಾನೆಂದೂ ಆತಂಕ
ವಾಗೆನು. ಆದರೆ ನನ್ನ ಮರೆಯದಿರಿ! ಈ ದೀನಳನ್ನು ನೀವು
ಮರೆತಂದೇ ನನ್ನ ಅಂತ್ಯ, ಇವಳನ್ನು ನೀವೇ ಮೇಲೆತ್ತಿದ್ದೀರಿ,
ಈಗಲೂ ಕೈ ಹಿಡಿದು ನಡೆಸಿರಿ. ಬೇರೆ ಭಾವಿಸಬಾರದು. ನಿಮಗೆ
ಹೇಗೆ ತೋರುವುದೋ ಹಾಗೆಯೇ ನಡೆಸಿರಿ. ಅಗೋ ಅಲ್ಲಿ
ನೋಡಿ: ನನ್ನ ಮನಸ್ಸಿನಲ್ಲಿ ಆ ವಚನ ಕೆಲಸಮಾಡುತ್ತಿತ್ತು. ಅದರ
ಪ್ರತೀಕವೇ ಆ ಅಕ್ಕನವರ ಚಿತ್ರ. ಅವರ ಪವಿತ್ರ ಜೀವ
ನಾದರ್ಶವೇ ನನ್ನ ಆದರ್ಶ. ಅವಳನ್ನು ಪರಿಚಯ ಮಾಡಿಕೊಟ್ಟು
ನನ್ನನ್ನು ನೀವು ಉದ್ಧರಿಸಿದ್ದೀರಿ. ಅದಕ್ಕಾಗಿ ನಿಮಗೆ ನಾನು
ಕೃತಜ್ಞಳು. ಯಾವಾವಕಾಲಕ್ಕೆ ಯಾರಾರಿಗೆ ಏನೇನು ಬರುತ್ತದೋ
ಎಂದು ನೀವೇ ಹೇಳುತ್ತಿದ್ದಿರಿ ತಾನೆ? ಅಂತೆಯೇ ನಿಮ್ಮ ಮತ್ತು
ನನ್ನ ಜೀವನದಲ್ಲಿ ಕೆಲವು ಘಟನೆಗಳು ನಡೆದಿವೆ. ಜೀವನವಿರುವ
ವರೆವಿಗೂ ಇನ್ನೂ ನಡೆಯಬಹುದು. ಲೋಕದಲ್ಲಿ ಹುಟ್ಟಿದಮೇಲೆ
ಅಂಜಲೇಕೆ? ಅಳುಕಲೇಕೆ? 'ಬೆಟ್ಟದ ಮೇಲೊಂದು ಮನೆಯ
ಮಾಡಿ ಮೃಗಗಳಿಗಂಜಿದರೆಂತಯ್ಯ' ಎಂದು ಅಕ್ಕ ಹೇಳಿಲ್ಲವೇ?
ಅನೇಕ ಘಟನೆಗಳು ಬರುತ್ತವೆ, ಸಾಗಿ ಹೋಗುತ್ತವೆ. ಅವು
ನಮ್ಮ ಮನಸ್ಸಿನಿಂದ ಮಾಸಿಹೋಗುತ್ತವೆ. ಮತ್ತೆ ಹೊಸ ಹೊಸ
ಘಟನೆಗಳು ಹುಟ್ಟಿಬರುತ್ತವೆ ಅವು ಸಾಗುತ್ತವೆ; ಅವೂ ಅಳಿಸಿ
ಹೋಗುತ್ತವೆ. ಅವುಗಳನ್ನು ನೆನೆದು ಅಳಲುವುದರಿಂದೇನು
ಪ್ರಯೋಜನ? ಆದರೆ ಒಮ್ಮೊಮ್ಮೆ ಈ ಲೌಕಿಕ ಹೃದಯ ಮರುಗು
ತ್ತದೆ, ಕೊರಗುತ್ತದೆ, ಅಳಲುತ್ತದೆ, ಅಳುತ್ತದೆ.

ಲಲಿತ ಗಂಭೀರವಾಗಿ ಯಾವ ಚಂಚಲತೆಯೂ ಇಲ್ಲದೆ
ಮಾತನಾಡುತ್ತಿದ್ದಳು. ಆ ಗಂಭೀರ ವಾಣಿಯಲ್ಲಿ ಶಂಕರ ಮುಳುಗಿ
ಕುಳಿತಿದ್ದ; ಕಲ್ಲಿನಂತೆ ಕುಳಿತಿದ್ದ. ಆಕೆ ಹೇಳುತ್ತಲೇ ಇದ್ದಳು.

"ಆವರಿ ನಾನೊಂದು ಮಾತನ್ನು ಹೇಳುತ್ತೇನೆ ನೀವು ಕೋಪಿಸಿಕೊಳ್ಳಬೇಡಿ !"

"ಅದಕ್ಕೇಕೆ ಲಲಿತ ಕೋಪ, ಹೇಳು !"

"ನೀವು ಬದುಕಬೇಕಾದದ್ದು ನಾಲ್ಕು ಜನಕ್ಕೆ. ಮೊದಲನೆಯದಾಗಿ ನಿಮ್ಮ ತಾಯಿಗೆ, ಎರಡನೆಯದಾಗಿ ನಿಮ್ಮ ಪತ್ನಿಗೆ, ಮೂರನೆಯದಾಗಿ ನಿಮಗೆ, ನಾಲ್ಕನೆಯದಾಗಿ ನಿಮ್ಮ ತಂಗಿಗೆ ನನಗೆ!" ಲಲಿತ ಏನು ಹೇಳುತ್ತಾಳೋ ಎಂದು ಕಾತುರದಿಂದ ಕಿವಿನಿಮಿರಿಸಿ ಕೇಳುತ್ತಿದ್ದ ಶಂಕರ ಈ ಮಾತು ಕೇಳಿ ಆಶ್ಚರ್ಯ ಪಟ್ಟ. ಅವಳ ಮಹತ್ ವ್ಯಕ್ತಿತ್ವಕ್ಕೆ ಮನದಲ್ಲಿಯೇ ವಂದಿಸಿದ.

ಅವಳ ಮಾತಿಗೆ ಅರ್ಥ ಒಪ್ಪಿಗೆಯನ್ನಿತ್ತು, ತಾಯಿಯನ್ನು ಕರೆಸಿಕೊಳ್ಳುವುದಾಗಿಯೂ ಹೆಂಡತಿಯವಿಚಾರ ಸಾಧ್ಯವಿಲ್ಲವೆಂದೂ ಹೇಳಿದ. ಈ ಕೆಟ್ಟ ಹೃದಯದಿಂದ ಆ ಹೃದಯಕ್ಕೆ ಸಿಕ್ಕುವುದಾದರೂ ಏನು ? ದುಃಖ, ವ್ಯಥೆ ಅಷ್ಟೆ. ಎಂದೂ ಹೇಳಿದ. ಆ ವಿಚಾರದಲ್ಲಿ ಮನಸ್ಸು ಕೆಡಿಸುವುದೂ ಬೇಡವೆಂದ.

ತನ್ನ ಬಗ್ಗೆ ಪ್ರಶ್ನೆ ಬಂದಾಗ ಅದೊಂದು ವಿಷಗಳಿಗೆ ಎಲ್ಲೆಲ್ಲಿಯೋ ಸುತ್ತಿದೆ; ಎಲ್ಲೆಲ್ಲಿಯೋ ಅಲೆದೆ. ಅಲ್ಲಿಯೇ ಆದ ಕೆಲವು ಗೆಳೆಯರ ಸಲಹೆಯ ಒತ್ತಾಯದ ಮೇರೆಗೆ ಇಲ್ಲಿಗೆ ಬಂದುದಾಯಿತು- ಎಂದೂ ಹೇಳಿದ.

ಹಗಲು ಮುಗಿಯುತ್ತಾ ಬಂದಿತು. ಇನ್ನು ಮನೆಗೆ ಹೊರಡೋಣವೆಂದು ಶಂಕರ ಎದ್ದ.

"ಲಲಿತ, ಅನ್ಯಥಾ ಭಾವಿಸಬೇಡ ಈ ಮನೆಗೆ ನಾನಿನ್ನು ಬರಲಾರೆ ! ನಿನ್ನ ಈ ಮನೆ ಆ ತಾಯಿಯಿಲ್ಲದ ಮನೆ ನನ್ನೆದೆಯನ್ನು ಚುಚ್ಚುತ್ತದೆ. ನನ್ನ ನಿನ್ನ ಭೆಟ್ಟಿ ಕಾಲೇಜಿನಲ್ಲಿ ಮಾತ್ರ. ನಿನ್ನ ಜೀವನವನ್ನು ನೋಡಿ ಅತೀವ ದುಃಖವಾಯಿತು. ಆದುದರಿಂದ ನಾನೊಂದು ಮಾತನ್ನು ಹೇಳುತ್ತೇನೆ; ಅಣ್ಣನಾಗಿ ಹೇಳು

ತ್ತೇನೆ. ನೀನು ಮದುವೆಯಾಗು. ಹೆಂಗಸು ಹಾಗೆ ಇರುವುದು ಸರಿಯಲ್ಲ. ಗಂಡಸಾದ ನಾನು ಹೇಗಿದ್ದರೂ ಇರಬಹುದು ಸಮಾಜ ನನ್ನನ್ನು ಪ್ರಶ್ನಿಸದು. ಆದರೆ ನಿನ್ನ ಸ್ಥಿತಿ ಹಾಗಲ್ಲ. ನೀನು ಏಕಾಂಗಿಯಾಗಿರಲಾರೆ. ಇರಬಾರದು. ನೀನೂ ಅಕ್ಕ ಮಹಾದೇವಿಯಾಗಬಹುದು, ಹೃದಯದಲ್ಲಿ. ಆ ಹನ್ನೆರಡನೆ ಶತಮಾನವೂ ಈ ಇಪ್ಪತ್ತನೆಯ ಶತಮಾನವೂ ಒಂದೇ ಎಂದು ಬಗೆಯಬೇಡ! ಆ ಸಮಾಜಕ್ಕೂ, ಈ ಸಮಾಜಕ್ಕೂ ಎಷ್ಟೋ ವ್ಯತ್ಯಾಸವಿದೆ. ನೀನು ಯೋಚಿಸು. ಸುದೀರ್ಘವಾಗಿ ಯೋಚಿಸು. ಹುಣಿಸೆಹಣ್ಣು ಬೇರೆಯವರಿಗೆ ಸಿಹಿಯಾಗಿದೆಂದು ತತ್ವಬೋಧಿಸುವು ದೆಂದು ತಿಳಿಯಬೇಡ! ನಿನ್ನನ್ನು ಈ ಸ್ಥಿತಿಯಲ್ಲಿ ನಾ ನೋಡಲಾರೆ. ನೀನು ಹೀಗಿರಬೇಡ! ಜಾಗ್ರತೆ ಯೋಚಿಸು. ಆ ತಾಯಿಯ ಋಣವನ್ನು ನಾನು ತೀರಿಸಬೇಕಾಗಿದೆ. ನಿನ್ನ ಅಭ್ಯುದಯವೇ ನನ್ನದು. ನಾನಿನ್ನು ಬರಲೇ? ಈ ಮನೆಗೆ ನಾನು ಬರಲಾರೆ! ಬರಲಾರೆ! ಆದರೆ ನನ್ನಲ್ಲಿ ನೀನೂ ನಿನ್ನಲ್ಲಿ ನಾನೂ ಸದಾ ಇದ್ದೇವೆ. ನೀನು ಯಾವ ಚಿಂತೆಯನ್ನೂ ಮಾಡಬೇಡ. ನಿನ್ನ ಸೂಚನೆಯಂತೆ ನನ್ನ ತಾಯಿಯನ್ನು ಕರೆಸಿಕೊಳ್ಳುವೆ. ನಿನಗಿಷ್ಟವಿದ್ದರೆ ಮನೆಗೇ ಬಂದು ಇರುವೆಯಂತೆ, ತಂಗಿಯಾಗಿ.!"

ಚೆಲ್ಲಿದ ಕುರುಳ ಲಲಿತೆಯನ್ನು ಬೀಳ್ಕೊಟ್ಟು ಹೊರಹೊರಟ, ಶಂಕರ. ಮನೆಗೆ ಬಂದು ಮಲಗಿ ಬಿಟ್ಟ. ರಾತ್ರಿಯೆಲ್ಲಾ ಯೋಚಿಸಿ, ಮರುದಿನ ತಾಯಿಗೆ ಪತ್ರಬರೆದ. ಜಾಗ್ರತೆ ಹೊರಟು ಬಾ. ಒಬ್ಬಳೇ ಬರಬೇಕು. ನಾನೇ ಸ್ಟೇಷನ್ನಿಗೆ ಬರುತ್ತೇನೆ ಎಂದು.

ನಾಲ್ಕುದಿನದ ನಂತರ ತಾಯಿಯನ್ನು ಸ್ಟೇಷನ್ನಿನಿಂದ ಕರೆದು ತಂದ. ಅಂದು ತಾಯಿ ಮಗನನ್ನಪ್ಪಿ ಗೋಳೋ ಎಂದು ಅತ್ತಳು. ಆಕೆಯೂ ಹೆಂಡತಿಯನ್ನು ಕರೆಸಿಕೊಳ್ಳಲು ಬೇಡಿದಳು. ಆದರೆ

ಂಕರನ ಮನಸ್ಸು ಕಲ್ಲಾಗಿತ್ತು. ತಾಯಿಗೆ ಅಂದೇ ಇನ್ನೊಂದು ಮಾತನ್ನು ಹೇಳಿದ್ದ: ತನ್ನ ಕೋಣೆಗೆ ಬರಬೇಡವೆಂದು. ತಾಯಿ ಂದಂದಿನಿಂದ ಅಡುಗೆಯ ಕೆಲಸ ವರ್ಜವಾಯಿತು. ಅಂದಿನಿಂದ ವನದೊಂದು ಜೀವನ, ಕ್ರಮಜೀವನ ಸಾಗಿತು.

ಸಾಗುತ್ತಲೇ ಇದ್ದ. ಒಂದೊಂದು ಹೆಜ್ಜೆಯೂ ಆನೆಭಾರ ಾಗಿತ್ತು; ಗಿರಿಭಾರವಾಗಿತ್ತು. ಚಿತ್ರ ಮುಗಿಯಿತು. ತೆರೆ ಬಿತ್ತು. ಮುಂದೆ ಮುಂದೆ ಹೋಗುವ ಲಲಿತಳನ್ನು ಹಿಂಬಾಲಿಸಿ ನಿಧಾನ ಾಗಿ ಹೋಗುತ್ತಿದ್ದ. ದಾರಿ ಹೆಜ್ಜೆ ಹೆಜ್ಜೆಯಾಗಿ ಕ್ರಮಿಸುತ್ತಿತ್ತು. ಾಲೇಜು ಅಡಿ ಅಡಿಯಾಗಿ ದೂರವಾಗುತ್ತಿತ್ತು.

ಇಬ್ಬರೂ ನಿರ್ಜನ ಪಾರ್ಕಿನಲ್ಲಿ ಹೋಗಿ ಕಲ್ಲುಬೆಂಚೊಂದರ ಮೇಲೆ ಕುಳಿತರು. ಲಲಿತ ಸಂಕೋಚದಲ್ಲಿ ಸಿಕ್ಕು ಮುದುಡಿ ೊಂಡಿದ್ದಂತೆ ಕಾಣುತ್ತಿದ್ದಳು. ತಾನು ಅಸ್ಪೃಶ್ಯಳು ಎಂಬಂತೆ ೇಚರಿಸುತ್ತಿದ್ದಳು. ಅವಳ ಕಣ್ಣು ಕೆಂಪಗೆ ಊದಿದ್ದವು.

ಸ್ವಲ್ಪಹೊತ್ತು ಶಂಕರನನ್ನು ದಿಟ್ಟಿಸಿ, ತನ್ನ ಎರಡು ಕೈಗ ಲ್ಲೂ ಮುಖವನ್ನು ಮುಚ್ಚಿಕೊಂಡು ಅತ್ತುಬಿಟ್ಟಳು. ಶಂಕರನಿಗೆ ನ್ನೂ ಆಶ್ಚರ್ಯವಾಯಿತು. ಲಲಿತಳ ಇಂದಿನ ಈ ರೀತಿಯೇನು? ಅವನಿಗೆ ಅರ್ಥವಾಗಲಿಲ್ಲ. ಎದ್ದು ಅವಳ ಕಣ್ಣೀರನ್ನು ತೊಡೆ ಯಲು ಹೋದ. ತಕ್ಷಣವೇ ಲಲಿತ ಎದ್ದು ದೂರ ಸರಿದು ೂಗಿದಳು.

"ಅಣ್ಣಾ ನನ್ನನ್ನು ಮುಟ್ಟಬೇಡ! ನಾನು ಪಾಪಿ, ನಾನು ತಿತೆ! ನನ್ನನ್ನು ಮುಟ್ಟಬೇಡ!"

"ನಾನು ದುರ್ಬಲ! ನಾನು ದುರ್ಬಲ!!"

೧

"ಅಣ್ಣಾ. ನಾನು ಪಾಪಿ! ನಾನು ಪತಿತೆ!!" ಆಕೆ ಹಾಗೆ
ಯೇ ಕೂಗುತ್ತಿದ್ದಳು. ಇವನು ಹೀಗೆಯೇ ಹೊರಳುರುಳುತ್ತಿದ್ದ
ನಿದ್ದೆ ಬರಲೊಲ್ಲದು. ಅದೇ ಕನಸು; ಅದೇ ನನಸು. ಭರ್ಚಿ
ಭರ್ಚಿಗಳು ಸಾಲುಗಟ್ಟಿ ಸುತ್ತಲೂ ತಿವಿಯುತ್ತಿವೆ. ಕಣ್ಣುಬಿಟ್ಟ
ಆ ಕಾವಳವನ್ನು ನೋಡಲೂ ಆರದವನಾದ, ಶಂಕರ. ರಾತ್ರಿ
ಎರಡುಗಂಟೆಯಾದರೂ ನಿದ್ರೆ ಇಷ್ಟೂ ಬಾರದು. ಹಸಿವೆ ಇಲ್ಲ
ವೆಂದು ಹಾಗೆಯೇ ಮಲಗಿದ್ದ.

ಆ ಕತ್ತಲಲ್ಲಿ ಕುರುಳುಚಲ್ಲಿ ಮಲಿನ ಸೀರೆಯುಟ್ಟ ಲಲಿತೆ
ತನ್ನ ಬಟ್ಟಗಣ್ಣತುಂಬ ನೀರಸುರಿಸುತ್ತಿದ್ದಾಳೆ; "ಅಣ್ಣಾ, ಮುಟ್ಟ
ಬೇಡ! ನಾನು ಪಾಪಿ! ನಾನು ಪತಿತೆ!!" ಆಕೆ ಹಾಗೆಯೇ
ಕೂಗುತ್ತಿದ್ದಾಳೆ; ಇವನು ಹೀಗೆಯೇ ಹೊರಳುರುಳುತ್ತಿದ್ದಾನೆ.
ಅದೇ ಮಾತು, ಅದೇ ನೋಟ, ಅದೇ ಚಿತ್ರ! ಹದ್ದು ಬಂದು
ಹಾವಿನಮೇಲೆ ಎರಗಿದಂತಹದೇ! ಕಚ್ಚಿ, ಕಚ್ಚಿ ಹರಿ, ಹರಿದು
ತಿನ್ನುತ್ತಿದೆ, ಆ ಹದ್ದು. ಶಂಕರ ಕಣ್ಣು ಮುಚ್ಚಿದ, ಬಿಗಿಯಾಗಿ.
ಕಣ್ಣು ತೆರೆಯದೇ ಇದ್ದರೂ ತೆರೆದಹಾಗೆ. ಮುಂದೆಯೇ ಆ ಚಿತ್ರ
ಸಾಗಿದಹಾಗೆ. ಇನ್ನೂ ಬಿಗಿಯಾಗಿ ಮುಚ್ಚಿದ; ಇನ್ನೂ ಕೊರೆ,
ಕೊರೆದು ಮುಚ್ಚಿದ. ಆದರೂ ಹಾಗೆಯೇ ನಟ್ಟು ನಿಂತಿದೆ; ನೀಡಿ
ನಿಂತಿದೆ. ಅದು ಹೋಗದು; ಅದು ಅಳಿಸಲಾರದು.

ಹೌದು ಅಳಿಯಲಾರದು !

ಹಾಗೆಯೇ ಅಂದಿದ್ದಳು, ಲಲಿತ, ಅಳುತ್ತಾ: "ಅಣ್ಣಾ ಅಳಿಸ
ಲಾರದ ಕಳಂಕವನ್ನು ಹಚ್ಚಿಕೊಂಡೆ; ಏಳಲಾರದ ಕೂಪದಲ್ಲಿ ಬಿದ್ದೆ;
ಕೆಸರಿನ ಕೂಪದಲ್ಲಿ ಒದ್ದಾಡುತ್ತಿರುವೆ. ನೀನು ಮುಟ್ಟಬೇಡ!
ನೀನು ಎತ್ತಲಾರೆ! ನಿನ್ನ ಶಕ್ತಿಗೂ ಮೀರಿ ಭಾರವಾಗಿದ್ದೇನೆ.
ನೀನು ಪ್ರಯತ್ನಪಡಬೇಡ. ನಿನ್ನ ಮಾತನ್ನು ಅರಿಯಲಿಲ್ಲ.
ಜಗತ್ತು ಮೋಸದ ಸಂತೆ! ಮೋಸದ ಸಂತೆ!!" ಲಲಿತಳ ಆ
ಮಾತು ಎಷ್ಟು ಸತ್ಯ! ಎಷ್ಟು ನಿತ್ಯ ಕಣ್ಣೀರ ಕರೆವ ಕಣ್ಣಿನಾಳ
ದಲ್ಲೂ ಸಿಡಿಲು ಹುದುಗಿರುತ್ತದೆ. ಎಂತಹ ವಂಚನೆ! ಎಂತಹ
ಮೋಸ!!

ಎಂತಹ ಮೋಸ!

ಶಂಕರ ಕೊರೆ, ಕೊರೆದು ಕಣ್ಣುಮುಚ್ಚಿದ. ಆದರೂ ಆ
ಚಿತ್ರ ಹಾಗೆಯೇ ನಿಂತಿದೆ. ಅದು ಹಾಗೆಯೇ ಸಾಗುತ್ತಿದೆ. ಅದು
ಬೆಂಕಿಯಾಗಿ ಧಗಧಗಿಸುತ್ತದೆ.

ಲಲಿತ ತಲೆಕೆದರಿ ನಿಂತಿದ್ದಾಳೆ. ಕಣ್ಣು, ಧಾರೆ, ಧಾರೆಯಾಗಿ
ನೀರಸುರಿಸುತ್ತದೆ. ಧಾರೆ, ಧಾರೆಯಾಗಿ ಸುರಿಯುತ್ತಲೇ ಇದೆ!
ನಿಶ್ಯಬ್ದವಾಗಿ, ನಿರಂತರವಾಗಿ ಸುರಿಯುತ್ತಿದೆ. ತುಂಬಿ ತುಂಬಿ
ಧುಮು ಧುಮಿಕಿ ಹರಿಯುತ್ತಿದೆ, ಆ ಕಣ್ಣೀರ ಕಾಲುವೆ. ಕಾಲುವೆ
ಯಲ್ಲ; ಹೊಳೆ! ಹೊಳೆಯೆ? ಅದೂ ಅಲ್ಲ! ನದಿ, ಪ್ರವಾಹ!
ಹಾಯ್ ಪ್ರವಾಹ!! ಸುಳಿ ಸುಳಿ ತಿರುಗುತ್ತಿದೆ. ಭೋರ
ಘೋರೆಂದು ಗಾಳಿ ಸುಯ್ಯನೆ ಸುತ್ತುತ್ತಿದೆ. ಕರಿ ಕುರುಳ ಮೋಡ
ತುಂಬಿ ಹೊಡೆದಾಡುತ್ತಿವೆ, ಸದ್ದಿಲ್ಲದೆ. ಆನೆಗಳ ಧಿಮ್ಮಿ ಧಿಟಿ
ಹೊಡೆದಾಟ! ಪ್ರವಾಹವೆಲ್ಲ ಇಲ್ಲಿಯೇ ಮಡುಗಟ್ಟಿದೆ, ತುಂಬಿ.
ಸುಳಿ ಸುಳಿ ಸುತ್ತುತ್ತಿದೆ. ಮರ, ಗಿಡ, ಕಸ- ಎಲ್ಲವೂ ತತ್ತರಿಸಿ
ಗಿಮಿ ಗಿಮಿ ತಿರುಗುತ್ತಿವೆ! ತಿರು ತಿರುಗಿ ಆಳದಾಳಕ್ಕಿಳಿಯುತ್ತಿವೆ.

ಸಾಗಿ ಸಾಗಿ ಅಳಿಯುತ್ತಿವೆ; ಕಾಣದಾಗುತ್ತಿವೆ! ಇನ್ನೂ ನುಗ್ಗಿ ನುಗ್ಗಿ ಬರುತ್ತಿದೆ, ಪ್ರವಾಹ! ಸುತ್ತ ಸಾಸು ಸಾಸು ಪ್ರದೇಶ. ಕಲ್ಲು ಗುಂಡುಗಳು ಭೀಕರವಾಗಿ ಇತ್ತಲೇ ನೋಡುತ್ತ, ಇತ್ತಲೇ ಧುಮು ಕಲು, ಆತುರವಾಗಿ ತಲೆದೂಗಿ, ಮೈಬೀಗಿ, ಕುಳಿತಿವೆ. ಬಿರುಗಾಳಿ ಬೀಸುತ್ತಿದೆ. ಸುತ್ತುಮುತ್ತಿನ ಗುಡ್ಡಗಳು ಅಲುಗಾಡುತ್ತಿವೆ. ಅದೋ ಆ ಗುಡ್ಡಗಳಿಂದ ಗುಂಡುಗಳು ಉರುಳುತ್ತಿವೆ, ಇತ್ತ. ಉಸಿರು ಕಟ್ಟಿದ. ತಾನು ಆ ಗರ್ತದಲ್ಲಿ! ನೀರು ಎಲ್ಲವನ್ನೂ ಕೊಚ್ಚಿ, ಕೊಚ್ಚಿ, ನೊಗೆ ನೊಗೆದು ಭೀಷಣವಾಗಿ ಸುತ್ತುತ್ತಿದೆ. ಆನೆ ಆನೆ ಅಲೆಗಳು ಮೇಲೇರಿ ಬರುತ್ತಿವೆ; ನೊರೆ ನೊರೆ ಗುಡ್ಡ ಗಳಾಗಿ ಬರುತ್ತಿವೆ. ಉಸಿರು ಕಟ್ಟಿದ ಶಂಕರ. ನೀರು ಕುಡಿದ. ತಲೆತಿರುಗಿತು. ಅವನು ನೋಡುತ್ತಲೇ ಇದ್ದಾನೆ. ಅಗೋ ಉರುಳುರುಳಿ ಬರುತ್ತಿದ್ದಾವೆ, ಕಲ್ಲುಗುಂಡುಗಳು. ತನ್ನೆಡೆಗೇ ಬರುತ್ತಿದ್ದಾವೆ! ನುಗ್ಗಿ ನುಗ್ಗಿ ಬರುತ್ತಿದೆ ಪ್ರವಾಹ; ಸುಳಿ ಸುಳಿ ಸುತ್ತುತ್ತಿದೆ, ನೀರು; ಭೋರ ಭೋರನೆ ಬೀಸುತ್ತಿದೆ, ಗಾಳಿ; ಗಡ ಗಡನೆ ಹೊಡೆದಾಡುತ್ತಿವೆ, ಮೋಡ. ಮೇಲೆ ಅಲ್ಲಿ ಅಯ್ಯೋ ಸಿಡಿಲು! ಬರಸಿಡಿಲು ಕಿಡಿಕಾರಿ, ಬೆಂಕಿಯುಗುಳಿ, ರಭಸದಿಂದ ಬರುತ್ತಿದೆ. ನಾನು ಸತ್ತೆ! ಸತ್ತೆ!! ನಾನಿನ್ನು ಇಲ್ಲ! ಮೇಲೆ ನುಗ್ಗುತ್ತಿದೆ ನೀರು, ಮೇಲೆ ಉರುಳುತ್ತಿವೆ ಗುಂಡು, ಅಲ್ಲೋಲ ಕಲ್ಲೋಲವಾಗಿ ಸುತ್ತಿದೆ ಗಾಳಿ, ಪ್ರಕೃತಿಯನ್ನು! ಮೇಲಿಂದ ಸೀಳಿ ಬರುತ್ತಿದೆ ಸಿಡಿಲು! ಭರ್ಜಿಯಾಗಿ ಬರುತ್ತಿದೆ!! ಅಯ್ಯೋ ಸತ್ತೆ!

ಕೂಗಿ ಕಣ್ಣುತೆರೆದ ಶಂಕರ. ಗಡಿಯಾರ ಟಿಕ್, ಟಿಕ್, ಎನ್ನುತ್ತಲಿದೆ. ಕಾವಳ ಕಣ್ಣಿಗೆ ಕಪ್ಪಾಗಿ ಮೆತ್ತಿದೆ. ಮೈಯ್ಯೆಲ್ಲಾ ಬೆವರಿತು. ಎದೆ ಡಾ ಡವ, ಡಾ ಡವ ಎನ್ನುತ್ತಿದೆ. ಇನ್ನು ಮಲಗುವದು ಸಾಧ್ಯವಿಲ್ಲ! ಎದ್ದು ದೀಪ ಹಚ್ಚಿದ. ಬೆಳಕಾಯಿತು.

ಾಳಿ ತಣ್ಣಗೆ ಬೀಸಿ ಬರುತ್ತಿದೆ. ಮಲ್ಲಿಗೆ ಬಳ್ಳಿ ನಸುತುಸು
ಲಾಡುತ್ತಿದೆ. ಗಡಿಯಾರ ಟಿಕ್, ಟಿಕ್ ಎನ್ನುತ್ತಿದೆ. ದೂರದ
ಾಯೊಂದು 'ಭೌ, ಭೌ' ಕೇಳಬರುತ್ತಿದೆ.

ಶಂಕರನ ಎದೆ ತೀವ್ರವಾಗಿ ಬಡಿದುಕೊಳ್ಳುತ್ತಿದೆ. ಇನ್ನೂ
ಾದೇ ಕನಸು. ತಾನಿನ್ನೂ ಅಲ್ಲಿಯೇ ಇದ್ದಂತೆ. ಆ ಸುಳಿಯ
ಲ್ಲಿಯೇ, ಆ ಚಕ್ರದಲ್ಲಿಯೇ ಸಿಕ್ಕಿದ್ದಂತೆ. ಅದೇ ಕನಸು, ಅದೇ
ಕನಸು. ಮನಸ್ಸು ಛಿದ್ರ, ಛಿದ್ರ; ಹೃದಯದ ಒತ್ತಡ ಜಾಸ್ತಿ
ಯಾಯಿತು! ಡೌ ಡವ ಸಾಗುತ್ತಲೇ ಇದೆ. ಗಡಿಯಾರದ 'ಟಿಕ್'
ಗಿಂತ ಎದೆಯ 'ಡೌ' ಹೆಚ್ಚಾಗಿದೆ. ಶಂಕರ ಕಿಟಕಿ ಕಡೆ ಸಾಗಿದ.
ಕಿಟಕಿಯಾಚೆ ನೋಡಿದ.— ಕಿಟಕಿಯಾಚೆ ನೋಡಿದ!

ಅಹುದು ಅದೇ ಕಿಟಕಿ! ಅದೇ ಕಿಟಕಿ!! ಇನ್ನೂ ಬೆಳಕಿದೆ.
ಯಾಕೋ! ಇನ್ನೆಷ್ಟು ಮಂದಿಯನ್ನು ಸುಡಲೆಂದೋ! ಎಂತಹ
ಸರ್ಪಿಣಿಯನ್ನೊಳಗೊಂಡ ಕೋಣೆ ಅದು! ಹೆಸರಿಗೆ ತಕ್ಕಂಥವಳೇ!
ನಾಗವೇಣಿ! ನಾಗವೇಣಿಯಲ್ಲ, ನಾಗಿಣಿ! ಸರ್ಪಿಣಿ!! ಲೋಕ
ವನ್ನೆಲ್ಲ ವಿಷಕೂಪದಲ್ಲಿ ಕೆಡವಿ, ಸಾಯುವ ಜೀವಗಳನ್ನು- ನರನರಳಿ
ಸಾಯುವ ಜೀವಗಳನ್ನು- ನೋಡಿ ನೋಡಿ ನಗುವ ಸರ್ಪಿಣಿ!
ನಾಗಿಣಿ! ಅಯ್ಯೋ ನಾಗವೇಣಿ!

ನಾಗವೇಣಿ!

ನೀಳವಾದ ಕೇಶರಾಶಿ! ನಯವಾಗಿ ಹಿಕ್ಕಿ ಹಿಕ್ಕಿ ಬಾಚಿ,
ಸಳ್ಳಕವಾಗಿ ಹೆಣೆದು, ಕೊನೆಯನ್ನು ಹಾಗೆಯೇ ಗೊಂಡೆಯಾಗಿ
ಬಿಟ್ಟ ವೇಣಿ, ಜಡೆ! ಗುಂಗುರು ಕುರುಳು. ಸುವಾಸನಾಯುಕ್ತ
ತಲೆ; ಮುಡಿಗೆ ಮಲ್ಲಿಗೆ! ಶಂಕರ ನಿಂತಿದ್ದವನು ಹಾಗೆಯೇ ಧಡಾ
ರನೇ ಕಿಟಕಿಯನ್ನು ಮುಚ್ಚಿಬಿಟ್ಟ. ಎರಡನ್ನೂ ಏಕಾಏಕಿ ಮುಚ್ಚಿ
ಬಿಡುವಿಬಿಟ್ಟ. ಧಡಾರನೆ ಹಾಕಿಬಿಟ್ಟ! ಅವನೇನು ಮಾಡುತ್ತಿ
ದ್ದಾನೆಂಬುದು ಅವನಿಗೇ ಅರಿವಾಗಲಿಲ್ಲ. ಹಾಗೆ ವರ್ತಿಸಿದ.

ಸಮಾಧಾನವಾಯಿತೆ ? ಇಲ್ಲ, ಇಲ್ಲ ! ಹರಿಯುವ, ತುಂಬಿಹ
ಯುವ ಪ್ರವಾಹಕ್ಕೆ ಮರಳಿನ ಆಣೆಕಟ್ಟು. ಅಷ್ಟೇ ಅವನ
ಮಾಡಿದ್ದು. ಮುಚ್ಚಿದ ಕಿಟಿಕಿಯಿಂದಲೇ ತೂರಿಬಂದಿದ್ದಾಳೆ ನಾ
ವೇಣಿ ! ಆ ವೇಣಿ ! ಆ ನಯವಾದ ಮಿರುಗುವ ಹಾವಿನಂತ
ವೇಣಿ ! ಅದೇ ಲಲಿತೆಯನ್ನು ಕಚ್ಚಿದ್ದು; ಅದೇ ನನ್ನನ್ನೂ ಕಚ್ಚಲ
ಬಂದದ್ದು; ಅದು ವೇಣಿಯಲ್ಲ, ಸರ್ಪ ! ಹಾವು, ವಿಷತುಂಬಿ
ಹಾವು ! ನಾಗರಹಾವು !! ಅಯ್ಯೋ ನಾಗಿಣಿ ಅವಳನ್ನೂ ಕೊಂದ
ಯ ? ಮೋಸದಿಂದ ಕೊಂದೆಯ !

ಮೋಸ, ವಂಚನೆ, ನಾಗಿಣಿ- ನಾಗವೇಣಿ !

ಶಂಕರ ಶತಪದವನ್ನಿಡುತ್ತಿದ್ದ. ಅವನ ಕಣ್ಣು ನೆಲವನ್ನೇ
ನೋಡುತ್ತಿತ್ತು. ಬಾಗಿಲನ್ನೂ ಒಮ್ಮೆ ನೋಡಿತು.

ಅದೋ, ಅದೋ ಬಾಗಿಲು ತೆರೆಯಿತು. ಆರುತಿಂಗಳ
ಹಿಂದಿನ ಬಾಗಿಲು ತೆರೆಯಿತು.- ಮೆಲ್ಲನೆ, ಹಗುರಾಗಿ, ಶಬ್ದವಿಲ್ಲದೆ !
ಹೌದು ತಾನು ಅಗುಳಿ ಹಾಕಿರಲಿಲ್ಲ, ಹಾಗೆಯೇ ಇತ್ತು.
ಬಾಗಿಲು ತೆರೆಯಿತು. ಗಾಳಿಗೆ ಹಾಗಾಯಿತೇನು ? ಅಲ್ಲ ಅಲ್ಲ
ಗಾಳಿಯಲ್ಲ. ಅದೋ ಅದು ಗಾಳಿಯೇನು ? ಗಾಳಿಯಲ್ಲ !
ಒಂದು....ಎರಡು....ಚಲ್ಲುತ್ತಿವೆ ಕೂದಲು, ಕಪ್ಪನೆಯ ಕೂದಲು.
ಬರಿಯ ಕೂದಲೇ ? ಅಲ್ಲ ! ಜಡೆ !! ಮಿರುಮಿರುಗುವ ಜಡೆ !!!
ಅದು ಎಲ್ಲಿದೆ ? ಎರಡು ಕೈಗಳು ಅದನ್ನು ಹಿಡಿದುಕೊಂಡಿವೆ.
ಬೆರಳುಗಳು ಆ ಕೂದಲಿನಲ್ಲಿ ಆಟವಾಡುತ್ತಿವೆ. ಜಡೆ ಏರಿ ಇಳಿದು
ಮಲಗಿದೆ; ಕುಡಿಬೆರಳುಗಳೊಡನೆ ಆಟವಾಡುತ್ತಿದೆ. ಬಾಗಿಲು
ಸಂಪೂರ್ಣ ತೆರೆಯಿತು. ಶಂಕರ ನೋಡುತ್ತಲೇ ಇದ್ದ. ಅವಳು
ಒಳಬಂದಳು. ಯಾರು ? ಯಾರು ? ಲಲಿತಳೆ ? ಅಲ್ಲ ! ಯಾರೋ;
ಹೊಸಮುಖ ! ಹೊಸಮುಖವೆ ? ಹೌದು ಹೊಸಮುಖ !
ಹಿಂದೆಂದೂ ನೋಡಿಲ್ಲವೆ ? ಇಲ್ಲ, ಇಲ್ಲ ! ಇದು ಹೊಸ ಮುಖ

ಸು ಮುಖ. ನಗೆಯನ್ನು ತುಟಿತಳಿರಿನಿಂದ ಕೊಂಕಿಸಿ ಕೊಂಕಿಸಿ ರಿಸುವ ಮುಖ.

ಘಮ್ಮನೆ ವಾಸನೆ ತುಂಬಿಬಂತು. ಹರಿದು ಬಂತು. ಸ್ನೋ, ಡರ್ ವಾಸನೆಯನ್ನು ಹೀರಿಕೊಂಡು ಗಾಳಿ ಅಲ್ಲಾಡಿತು. ಲು ಕುಲು ನಕ್ಕಿತು. ಮೆಲ್ಲ ಮೆಲ್ಲನೆ ಕೋಣೆಯತುಂಬಾ ಸುಳಿ ಡಿತು, ಮೆಲ್ಲ ಮೆಲ್ಲನೆ ಅಡ್ಡಾಡಿತು. ತುಂಬಿ, ತೀವಿ ನಿಂತಿತು.

ವಾಸನೆ ಘಮ್ಮನೆ ಬಂದಿತು. ಅದರೊಡನೆ ಅವಳೂ ಂದಳು. ಮುಖ ನಗುತ್ತಿದೆ. ಕುರುಳು ಹಣೆಯಲ್ಲಿ ಹಾರಾಡು ವೆ; ಚಕ್ಕಂದವಾಡುತ್ತಿವೆ. ಎಡಗಡೆಯ ಭುಜದಮೇಲಿಂದ ಡುಬಂದ, ಹಳ್ಳಕನೆ ಹೆಣೆದ, ಜಡೆ ಏರಿ ಇಳಿದು ಅವಳ ರಳೊಡನೆ ಆಟವಾಡುತ್ತಿವೆ; ಸರಸವಾಡುತ್ತಿವೆ. ಶೆರಗು ಜಾರಿ ದ್ದಿದೆ. ಅವಳು ನಗುತ್ತಿದ್ದಾಳೆ. ತೆಳ್ಳನೆಯ ಸೀರೆ ಅಂಟಿ ಂಡಿದೆ. ಅವಳು ಮೆಲ್ಲನೆ ಒಳಬಂದಳು. ಶಂಕರ ನೋಡು ಲೇ ಇದ್ದ. ಅಚ್ಚರಿಯಿಂದ, ಕಣ್ಣು ತೆರೆತೆರೆದು ನೋಡುತ್ತಿದ್ದ; ನವಾಗಿ ನೋಡುತ್ತಿದ್ದ. ಅಚಲವಾಗಿ ನಿಂತು ನೋಡುತ್ತಿದ್ದ. ಚಲವಾಗಿ ನಿಂತು ನೋಡುತ್ತಲೇ ಇದ್ದ. ಅವಳು ಬಂದಳು. ಒಳ ಂದಳು ! ಬಂದಳೇನು ? ಹೌದು ಬಂದಳು. ಮೆಲ್ಲನೆ ಕಾಲಿ ಡ ಬಾಗಿಲನ್ನು ಮುಚ್ಚಿದಳು ! ಮುಂಬರಿದಳು. ಹತ್ತಿರ ತ್ತಿರ ಬಂದಳು ! ನಸುನಕ್ಕಳು. ಕಣ್ಣು ಮಿಟುಕಿಸಿ ನಕ್ಕಳು. ಟಿಯ ನಲುಗಿಸಿ ನಕ್ಕಳು ! ಮುಖದತುಂಬ ಸ್ನೋ, ಪೌಡರ್. ತ್ತಿರ ಹತ್ತಿರ ಬಂದಳು. ಶಂಕರ ಹಾಗೆಯೇ ನಿಂತಿದ್ದ. ಅವಳು ಂದೇ ಬಂದಳು. ಶಂಕರ ಎಚ್ಚೆತ್ತ.

"ಯಾರು ನೀವು ? ಯಾರು ಬೇಕಾಗಿತ್ತು ? ತಾಯಿಯವರಿಲ್ಲ. ರಿಗೆ ಹೋಗಿದ್ದಾರೆ ! ಇನ್ನೆರಡು ದಿನಗಳಲ್ಲಿ ಬರುತ್ತಾರೆ !" ತಬಡನೆ ಬಡಬಡಿಸಿದ.

"ಹೌದು ಗೊತ್ತು!" ಆಕೆ ಕಿಲಕ್ಕನೆ ನಕ್ಕಳು. ಶಂಕರ
ಎದೆ ಬಡಿದುಕೊಳ್ಳುತ್ತಿತ್ತು. ಹಣೆಯತುಂಬ ಬೆವರಹನಿ ಸಾ
ಗಟ್ಟಿದ್ದವು.

"ಹಾಗಾದರೆ ಯಾಕೆ ಬಂದಿರಿ?"

"ನಾನಾಚೆ ಮನೆಯಲ್ಲಿರುವೆ ಅಗೋ ಕಿಟಿಕಿಯಿಂದ ನೋ
ಆ ಕಿಟಿಕಿ ಕಾಣುವುದಿಲ್ಲವೇ?" ಅವಳು ಬೆಟ್ಟು ತೋರಿಸಿದಳ
ಶಂಕರ ತಿರುಗಿ ಅತ್ತ ನೋಡಿದ. ಹೌದು ತನ್ನ ಕೋಣೆಯ
ಕಿಟಿಕಿಗೆ ನೇರವಾಗಿಯೇ ಇತ್ತು ಆ ಕಿಟಿಕಿ. ಅದನ್ನು ನೋಡಿದ

"ಅದೇ ನನ್ನ ಕೋಣೆ" ಅವಳು ಅವನ ಭುಜಹಿಡಿದ
ಹೇಳಿದಳು. ಥಂಗನೇ ಸೆಗೆದ, ಶಂಕರ. ಅವನಿಗೆ ಇದೆಲ್ಲ
ಆಶ್ಚರ್ಯವಾಗಿಯೇ ತೋರುತ್ತಿತ್ತು. ಸಿಟ್ಟೂ ತುಂಬಿ ಬಂತು
ಕಣ್ಣು ಕಿಡಿಕಾರಿತು.

"ಆದರೆ ಆಯ್ತು. ಇದು ನನ್ನ ಕೋಣೆ! ಅದು ನಿಮ
ದಾದರೆ ಅಲ್ಲಿಗೆ ಹೋಗಿ. ಇಲ್ಲಿಗೇಕೆ ಬಂದಿರಿ?" ಶಂಕರ ಗುಡಗಿದ

"ಅವಳ ಮುಖ ಬಾಡಿತು. ಬಿಸಿನೀರಿನಲ್ಲಿ ಅದ್ದಿ ತೆಗೆ
ಗುಲಾಬಿಯಂತಾಯಿತು. ಫಳಕ್ಕನೆ ನೀರು ತುಳುಕಿತು, ಅವ
ಕಣ್ಣಲ್ಲಿ. ಶಂಕರನ ಸಿಟ್ಟು ಮತ್ತೆ ವಿಸ್ಮಯಕ್ಕೆ ತಿರಿಗಿತು. ಅವನು
ಹಾಗೆಯೇ ನಿಂತ, ಕಲ್ಲಿನಂತೆ. ಏನುಮಾಡಲೂ ತೋರಲಿಲ್ಲ
ಏನು ನುಡಿಯಲೂ ತೋರಲಿಲ್ಲ. ಹಾಗೆಯೇ ನಿಂತಿದ್ದ.

"ನೀವೀ ಮನೆಗೆ ಬಂದಂದಿನಿಂದಲೂ ನೋಡುತ್ತಿದ್ದೇನೆ!
ನೀವು ನನ್ನಕಡೆ ಒಮ್ಮೆಯೂ ನೋಡಲಿಲ್ಲ! ನಿಮ್ಮ ವಿಚಾರವನ್ನೆಲ್ಲಾ
ತಿಳಿದುಕೊಂಡಿರುವೆ. ಈ ವ್ರತ, ಈ ನಿಯಮ ಯಾಕೆ ಈ ವಯ
ಸ್ಸಿನಲ್ಲಿ? ಇತ್ತ ನೋಡಿ? ಈಕಡೆ ನೋಡಿ. ಕಣ್ಣು ತೆರೆದು
ನೋಡಿ! ನಿಮ್ಮ ಎದೆಯಲ್ಲಿ ಇಲ್ಲವೇನು; ಆ ಬಯಕೆ? ಅದನ್ನು
ಏಕೆ ಮುಚ್ಚಿಟ್ಟಿದ್ದೀರಿ?" ಆಕೆ ಹುಬ್ಬು ಹಾರಿಸಿ ನುಡಿದಳು.

ಕಣ್ಣೀರಿಲ್ಲಿ? ಇಲ್ಲ! ನೀರು ಯಾವಾಗಲೋ ಆರಿ ಹೋಗಿತ್ತು. ಗಲ್ಲ, ಕಣ್ಣು, ತುಟಿ ನಗುತ್ತಿದ್ದವು. ಕತ್ತು ಕೊಂಕಿತ್ತು; ಜಡೆ ಂರಿ ಇಳಿದು ಎದೆಯಮೇಲೆ ಮಲಗಿತ್ತು.

ನಿಮ್ಮ ಎದೆಯಲ್ಲಿ ಆ ಬಯಕೆ ಇಲ್ಲವೇ? ಅದನ್ನೇಕೆ ಮುಚ್ಚಿ ಟ್ಟಿದ್ದೀರಿ? ಆ ಮಾತು ಸುಪ್ತವಾಗಿದ್ದ ಎದೆಯ ತಳವನ್ನು ಕಲ ಕಿತು. ಹೌದು ಆ ಬಯಕೆ ಇತ್ತು, ಹಿಂದೆ. ಅದು ಜಾಗೃತಾ ವಸ್ಥೆಯಲ್ಲಿಯೇ ಇತ್ತು. ಕೇವಲ ಒಂದೆರಡು ತಿಂಗಳಿಗಾಗಿ ಕಾಯುತ್ತಿತ್ತು. ಆ ಬಯಕೆ- ರವಿಯ ಮೊದಲ ಅಂಕವಾಗಿ ಅರುಣಕಿರಣವನ್ನೊತ್ತಿದ್ದ. ಆ ಒತ್ತಿಸಿಕೊಂಡ ಕೆನ್ನೆಯ ಉಷೆ ಯಾರು? ಅದೋ ಅಲ್ಲಿ, ಅಕ್ಕನೆದುರು ಕುಳಿತು ಓದುತ್ತಿದ್ದಾಳೆ:

‘ಬಟ್ಟಹ ಮೊಲೆಯ ಭರಜವ್ವನದ ಚಲುವಕಂಡು ಬಂದಿರಣ್ಣಾ
ನಾನು ಹೆಂಗುಸಲ್ಲ!
ನಾನು ಸೂಳೆಯಲ್ಲ!!
ಅಣ್ಣಾ ಮತ್ತೆ ನನ್ನನ್ನು ಕಂಡುಕಂಡು ಆರೆಂದು ಬಂದಿರಣ್ಣಾ?
ಚನ್ನಮಲ್ಲಿಕಾರ್ಜುನನಲ್ಲದೆ,
ಮಿಕ್ಕಿನ ಪರಪುರುಷನು,
ನಮಗಾಗದ ಮೊರೆ ನೋಡಣ್ಣ’
‘ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ,-
ಸುಡಲೀದೇಹವ!
ಒಡಲವಿಡಿದು ಕೆಡದಿರು!
ಚನ್ನಮಲ್ಲಿಕಾರ್ಜುನನರಿ, ಮರುಳೆ!’

ಅವಳು ಈಗ ಯೋಗಿನಿ. ಅವಳು ಈಗ ತಪಸ್ವಿನಿ. ಅವಳನ್ನು ಆಲಿಂಗಿಸಿದ್ದೆ; ಮುತ್ತಿಟ್ಟಿದ್ದೆ. ಕಾಮದ ಬಯಕೆ ತೀವ್ರ ವಾದಾಗ ಹಾಗೆ ಮಾಡಿದ್ದೆ. ಅದರ ಪೂರ್ಣತೆಗಾಗಿ ಇನ್ನೊಂದು ಮೂರುತಿಂಗಳು ಬೇಕಿತ್ತು. ಆ ಬಯಕೆಯು ಪೂರೈಕೆಯಾಗುವು

ದರೊಳಗೇ ಅದು ಸುಟ್ಟುಹೋಯಿತು; ಗಾಳಿಗೆ ತೂರಿಹೋಯ್ತು, ಬಯಲಲ್ಲಿ ಲೀನವಾಯಿತು. ಆಯ್ತು. ಅದು ಇಲ್ಲವಾಯ್ತು! ಇಲ್ಲವೇನು ಆ ಬಯಕೆ? ಶಂಕರ ಕೆದಕಿ ನೋಡಿಕೊಂಡ. ಇಲ್ಲ. ಕಾಣಿಸಲಿಲ್ಲ! ಎಲ್ಲೋ ಒಂದು ಕಣ ಕಂಡಿತು. ಅದೂ ಅಲ್ಲವೆಂದು ಅನ್ನಿಸಿತು. ಇಲ್ಲ, ತನ್ನೆದೆಯಲ್ಲಿ ಆ ಬಯಕೆ ಇಲ್ಲ! ಇಲ್ಲದ ಆ ಬಯಕೆಯನ್ನು ಮುಚ್ಚುವುದಾದರೂ ಏಕೆ, ಹೇಗೆ?

"ಇಲ್ಲ! ನೀನು ಹೊರಗೆ ನಡೆ! ನಡೆ!! ಇಲ್ಲಿರಬೇಡ! ನಿನ್ನ ಮನೆ ಯಾವುದೋ ಅಲ್ಲಿಗೆ ನಡೆ. ಇಲ್ಲಿ ನಿಲ್ಲಬೇಡ. ನಿನ್ನ ನಾ ನೋಡಲಾರೆ! ನೀನಾರೋ ನಾನರಿಯೆ! ಹೀಗೆ ಪರಪುರುಷನ ಮನೆಯ ನುಗ್ಗಿ ನಾಚಿಕೆ ಇಲ್ಲದೆ ನಿಂತು, ಜಾರಿಣಿಯರಂತೆ ಮಾತನಾಡುವುದು ನಿನಗೆ ಶೋಭಿಸುವುದೇ? ನಡೆ! ನಡೆ! ಇಲ್ಲಿ ನಿಲ್ಲಬೇಡ!" ಶಂಕರ ಗದರಿಸಿದ. ಆಜ್ಞಾಪಿಸಿದ. ಆದರೆ ಹೆಜ್ಜೆಯೊಂದನ್ನೂ ಮುಂದಿಡಲಾಗಲಿಲ್ಲ. ಕಾಲು ನಡುಗುತ್ತಿದ್ದವು; ಕಣ್ಣು ಮಾತ್ರ ಕಿಡಿಕಾರುತ್ತಿತ್ತು. ಆದರೆ ಅವಳು ಹಾಗೆಯೇ ನಿಂತಿದ್ದಳು, ಬಳುಕುತ್ತ. ನಗುತ್ತಲೇ ನಿಂತಿದ್ದಳು.

"ಒಲಿದು ಬಂದ ಹೆಣ್ಣ ಬೇಡವೆನ್ನುತ್ತಾರೇನು? ಈಗಲ್ಲದೆ ಯಾವಾಗಿನ್ನು ಸುಖ, ಸಂತೋಷ? ಸಂಗದಿಂದಲ್ಲದೆ ಸುಖವೆಲ್ಲಿಯದು?" ಆಕೆ ನಾಚಿಕೆ ಇಲ್ಲದೆ ಆಡಿದಳು. ಶಂಕರನೇ ನಾಚುವಂತಾಯಿತು. ಇಂತಹ ಹೆಂಗಳೆಯರಿಂದಲೇ ಲೋಕದ ಅವನತಿ, ನಾಶ. ಲೋಕದಲ್ಲಿ ಅನೀತಿಯು ಮನೆಮಾಡಿರುವುದು, ಇಂಥವರಿಂದಲೇ! ಇಂಥವರಿಂದಲೇ ತತ್ವ, ನೀತಿ, ಧರ್ಮ ಹಾಳಾಗುವುದು. ಹೇಗೆ ಬಂದು ನಿಂತಿದ್ದಾಳೆ, ರಕ್ಕಸಿಯಹಾಗೆ!

ಹೌದು ರಕ್ಕಸಿ! ರಕ್ಕಸಿಯಲ್ಲದೆ ಇನ್ನೇನು? ಆ ಸೌಂದರ್ಯದ ಒಳಗೆ ಸಿಗ್ಗಿಗಿಸಿತೂ ಸ್ಥಳವಿಲ್ಲವೆ? ನಾಚಿಕೆಗೆಟ್ಟ ಹೆಣ್ಣಿಗೆ ಎಂಥ ಸೌಂದರ್ಯವಿದ್ದರೇನು? ಈಗೇನು ಮಾಡುವುದು. ಏನು

ಾಡುವುದು ? ಶಂಕರನಿಗೆ ಏನು ಮಾಡಲೂ ತೋಚಲಿಲ್ಲ. ಾವ ಯೋಚನೆಯೂ ಸುಳಿಯಲಿಲ್ಲ. ಸೋತುಬಿಟ್ಟ ಶಂಕರ. ಡೆಗೆ ನಯವಾಗಿಯಾದರೂ ಹೊರಡಿಸಬೇಕೆಂದುಕೊಂಡ. ಆ ನಯ ೀಗೆ ? ಹೇಗೆ ವರ್ತಿಸಬೇಕು ? ಅವನ ಹೃದಯ ರೋಷದಿಂದ ದಿಯುತ್ತಿತ್ತು. ಅವಳನ್ನು ಹಿಡಿದು ಹೊರನೂಕಿ ಕದಮುಚ್ಚ ಹುದಿತ್ತು. ಆದರೆ ಅವಳು ಕೂಗಿಕೊಂಡರೆ ? ಈ ಹಗಲು ರಂಭಾ ವಾದರೆ ? ಆದರೆ ? ಏನು ಮಾಡುವುದು ? ಹೇಗೆ ಪಾರಾಗುವುದು?

"ಬೇಡತಾಯಿ ನನ್ನನ್ನು ಬಯಸಬೇಡ ! ನನ್ನಲ್ಲಿ ಆ ಬಯಕೆ ಲ್ಲ. ಅದು ಸುಟ್ಟುಹೋಗಿದೆ ! ಅದು ಜೀವಂತವಿಲ್ಲ. ಅದು ಳಿದು ಹೋಗಿದೆ. ಈ ಸೊಬಗು, ಈ ಬಿನ್ನಾಣ, ಈ ಕೊಂಕು. ನ್ನು ನನಗೆ ಬೇಡ. ಅದರಿಂದ ದೂರವಿದ್ದೇನೆ ! ದಯವಿಟ್ಟು ೊರಗೆ ನಡೆ." ಬೇಡುವವನಂತೆ ಕೇಳಿಕೊಂಡ.

'ಸೊಬಗನೇಕೆ ಹಳಿಯುತಿರುವೆ
ಬಣಗು ಬೈರಾಗಿ
ಸೊಬಗು ದೇವನಂಶವಲ್ತೆ,
ಹೇಳು ಓ ತ್ಯಾಗಿ'

ರಾಗವಾಗಿ, ಮೃದುವಾಗಿ ಹಾಡಿದಳು. ಅವಳ ಕಂಠವನ್ನು ೀಳಿ ಶಂಕರ ಮುಗ್ಧನಾದ. ಇಂತಹ ಸುಸ್ವರದಲ್ಲೂ ಕಾಮದ ಪಸ್ವರವಿದೆಯಲ್ಲವೆ ? ಆ ಕುವೆಂಪುರವರ ವಾಣಿಯನ್ನು ಈ ಂಠದಲ್ಲಿ ಈ ಉಪಯೋಗಕ್ಕಾಗಿ ಕೇಳುವಂತಾಯಿತೆ ? ಇವಳು ಾಮಾನ್ಯಳಲ್ಲ, ಹಾಗಾದರೆ ! ಸಾಹಿತ್ಯದಲ್ಲಿ ಅಭಿರುಚಿಯೂ ಿದ್ದಂತೆ ಕಾಣುತ್ತದೆ. ಆ ಸಾಹಿತ್ಯದ ಅಭ್ಯಾಸವನ್ನು ಈ ಕೆಲಸ ್ಕಾಗಿಯೇ ವಿನಿಯೋಗಿಸಿಕೊಳ್ಳುತ್ತಿದ್ದಾಳೆಂದು ತೋರುತ್ತದೆ. ಂಕರನಿಗೆ ಉಪಾಯವೊಂದು ಹೊಳೆಯಿತು.

"ನಿಮಗೆ ಸಾಹಿತ್ಯದಲ್ಲಿ ಅಭಿರುಚಿ ಇದೆಯೆ ? ಅಕ್ಕಮಹಾ

ದೇವಿಯವರ ವಚನಗಳನ್ನು ಓದಿದ್ದೀರಾ ?" ಮೃದುವಾಗಿಯೆ
ಕೇಳಿದ.

"ಹೌದು ಅಭಿರುಚಿ ಇದೆ. ನಾನು ಅಕ್ಕನ ಬಳಗದ ಕಾರ್ಯ
ದರ್ಶಿನಿ. ಅಕ್ಕನ ವಚನಗಳೆಲ್ಲವನ್ನೂ ಓದಿದ್ದೇನೆ !" ಹೆಮ್ಮೆಯಿಂದ
ಹೇಳಿದಳು.

"ಹಾಗಾದರೆ, ಒಂದು ವಚನವನ್ನು ಹೇಳಿ !" ಮೆಲ್ಲ ಮೆಲ್ಲನೆ
ಅವಳನ್ನು ದಾರಿಗೆ ತಂದು, ದಾರಿತೋರಿಸಿ, ಹೊರಡಿಸಬೇಕೆಂದು
ಬಗೆದು ಹಾಗೆ ಶಂಕರ ಕೇಳಿದ.

'ಸಂಗದಿಂದಲ್ಲದೆ ಅಗ್ನಿ ಹುಟ್ಟದು.
ಸಂಗದಿಂದಲ್ಲದೆ, ಬೀಜ ಮೊಳೆದೋರದು.
ಸಂಗದಿಂದಲ್ಲದೆ, ದೇಹವಾಗದು.
ಸಂಗದಿಂದಲ್ಲದೆ, ಸರ್ವಸುಖದೋರದು....'

ನಿಲ್ಲಿಸಿ ಕಣ್ಣುಮಿಟುಕಿಸಿ, ಮತ್ತೊಮ್ಮೆ ಹೇಳಿದಳು:

'ಸಂಗದಿಂದಲ್ಲದೆ ಸರ್ವಸುಖದೋರದು !!'

ಅಲ್ಲಿಗೇ ನಿಲ್ಲಿಸಿದಳು. ಕುಲು ಕುಲು ನಗುತ್ತಿದ್ದಳು.

ಅಬ್ಬಾ ಘಾಟಿ ಹೆಂಗಸು, ಈಕೆ ! ಆ ವಚನವನ್ನು ಹೇಗೆ
ಅರ್ಥ ಮಾಡಿಕೊಂಡಿದ್ದಾಳೆ ! 'ಸಂಗದಿಂದಲ್ಲದೆ, ಸರ್ವಸುಖ
ದೋರದು !' ಈ ಮಾತೆ ಇವಳ ಸರ್ವಸ್ವವೆಂದು ತೋರುತ್ತದೆ.
ಅಕ್ಕನನ್ನು ಹಾಳುಮಾಡಿದರು, ಇಂದಿನ ಹೆಂಗಸರು. ಮೋಹಿಸಿ
ಬಂದ ಪುರುಷ ತಂಡವನ್ನೇ ಹೀಯಾಳಿಸಿ ಮಲ್ಲಿಕಾರ್ಜುನನಲ್ಲಿ
ಬೆರೆಯಲು ಹೊರಟ ಆ ಮಹಾದೇವಿಯಲ್ಲಿ ! ಅವಳ ಹೆಸರಿನಲ್ಲಿ
ಸಂಘವನ್ನು ಮಾಡಿಕೊಂಡು, ಅವಳ ವಚನಗಳನ್ನು ಅಪಾರ್ಥ
ಮಾಡಿಕೊಂಡು, ಅವುಗಳನ್ನೇ ತಮ್ಮ ಕಾಮಲಾಲಸೆಯ ತೃಪ್ತಿಗಾಗಿ
ಉಪಯೋಗಿಸಿಕೊಳ್ಳುವ ಇವರೆಲ್ಲಿ ! ಅಯ್ಯೋ ಅಕ್ಕ ನೀನು ಏಕೆ
ಹುಟ್ಟಿದ್ದೆ ? ಏಕೆ ಆ ತತ್ವವನ್ನು ಸಾರಿದ್ದೆ ? ಆದ್ಯರ ಅರವತ್ತು

ಚನಕ್ಕೆ ಒಂದು ವಚನ ಸಮತೂಗುವಂತೆ ಹಾಡಿದ ನಿನ್ನ ಂದೊಂದು ವಚನದಲ್ಲೂ ಎಷ್ಟೆಷ್ಟು ಪಾಪಪಂಕವನ್ನು ತುಂಬು ದ್ದಾರೆ, ನೋಡು ! ನೀನು ಸತ್ತೆ ! ನೀನಿನ್ನು ಇಲ್ಲ. ನೀನಿಲ್ಲ. ಲ್ಲ, ಅಕ್ಕಾ ನೀನಿಲ್ಲ !

ಶಂಕರನ ದುಃಖ ತುಂಬಿಬಂತು. ಎದೆಯ ರೋಷವೆಲ್ಲಾ ರುಣೆಯ ಮಡುವಾಗಿ ಕಣ್ಣಲ್ಲಿ ತುಳುಕಿತು; ಒಂದೆರಡು ಹನಿ ಾಗಿ ಘಳಕ್ಕನೆ ಉದುರಿತು.

ಮತ್ತೊಂದು ದನಿ ಮಾತನಾಡಿತು: "ಶಂಕರ, ಹಾಗೆ ಆರೋ ಸಬೇಡ ! ಅಕ್ಕ ಸತ್ತಿಲ್ಲ. ಅಕ್ಕನನ್ನು ಅಪಾರ್ಥ ಮಾಡಿಕೊಂಡು, ಯುವವರು ಈಗಿನ ಕಾಲದ ಕೆಲವರು ಮಾತ್ರ; ಎಲ್ಲರೂ ಲ್ಲ ! ಇದನ್ನು ನೀನರಿತಿದ್ದೂ ಹೀಗೆ ಅಂದುಕೊಳ್ಳುವೆಯಲ್ಲಾ ! ಲಲಿತೆಯನ್ನು ಕಾಣೆಯಾ ? ಅವಳ ಜೀವನವನ್ನು ಅರಿತಿದ್ದೂ ೀನು ಹೀಗೆ ಆರೋಪಿಸುವುದು ಸರಿಯೆ ?"

ಹೌದು ಸರಿಯಲ್ಲ. ತಾನು ಹಾಗೆ ಆರೋಪಿಸುವುದು ಸರಿ ುಲ್ಲ ! ಅಕ್ಕಾ, ನೀನು ಸತ್ತಿಲ್ಲ. ನೀನು ಅಮೃತ ಪುತ್ರಿ ! ನೀನು ಾಡ ಮಹಿಳೆಯರ, ಏಕೆ, ಸಕಲ ಜೀವರ ಪಾವನ ಮಾಡುತ್ತಿ ್ದೀಯೆ ! ಅವರ ಜೀವದ ಹಿಂದೆ ಅಮೃತ ಹಸ್ತವಾಗಿ ಕಾಪಾ ುತ್ತಾ ಬಂದಿದ್ದೀಯೆ. ನೀನು ಸತ್ತಿಲ್ಲ ! ಲಲಿತೆಯಂಥವರಿದ್ದಾರೆ. ನ್ನ ಹಾದಿಯನ್ನು ಹಿಡಿದು ನಿನ್ನಂತೆಯೇ ಆಗಲು ಹೊರಟವ ದ್ದಾರೆ, ಅವರ ದಾರಿ ಬೆಳಕು ನೀನು. ಆನೆ ಬೀದಿಲಿ ಬರಲು ್ವಾನ ತಾ ಬಗುಳುವುದು. ಹೌದು ಶ್ವಾನ ಬಗುಳುವುದು. ಆನೆಯ ರಿಮೆ, ಗರಿಮೆಯನ್ನರಿಯದೆ ಬಗುಳಿ ತನ್ನ ಕುಲವನ್ನು ನಾಲಗೆ ುಂದ ವ್ಯಕ್ತಪಡಿಸುತ್ತದೆ. ಇಂತಹ, ಇಲ್ಲಿ ನನ್ನೆದುರು ಲಜ್ಜೆ ಇಲ್ಲದೆ ಕಾಮಿನಿಯಾಗಿ ನಿಂತಿರುವ, ಮಹಿಳೆಯಂತಹವರು ನಾಯಿ ಗಳು. ಅವರ ವರ್ತನೆ ನಾಯಿಗಳಂತೆಯೇ ! ಅವರು ನಾಯಿ

ಗಳೇ ! ನಾಯಿಗಳೇ !!

ಶಂಕರ ಕತ್ತೆತ್ತಿ ನೋಡಿದ. ಅವಳು ನಿಂತಿರಲಿಲ್ಲ; ಕುಳಿತಿದ್ದಳು ! ಜಾರಿದ ಸೆರಗಿನಿಂದ ಕುಳಿತಿದ್ದಳು. ಹಿಂದೆ ಎರಡು ಕೈಗಳನ್ನೂ ಊರಿ, ಮುಖವೆತ್ತಿ ಎದೆಯುಬ್ಬಿಸಿ ಕುಳಿತಿದ್ದಳು. ತನ್ನೆಡೆಗೆಯೇ ನೋಡುತ್ತಿದ್ದಳು. ಬಟ್ಟಗಣ್ಣ ಬಿಟ್ಟು ನೋಡುತ್ತಿದ್ದಳು. ಆ ಕಣ್ಣತುಂಬ ನೀರು ತುಂಬಿತ್ತು. ಅದು ಕರುಣಾರಸವ್ರೋ, ಕಾಮರಸವ್ರೋ ?

ಶಂಕರ ದಿಟ್ಟಿಸಿ ನೋಡಿದ: ಒಮ್ಮೆ ಕರುಣೆ, ಒಮ್ಮೆ ಕಾಮ. ಎರಡೂ ಬೆರೆತೊಮ್ಮೆ- ಹೀಗೆಯೇ ತೋರುತ್ತಿತ್ತು. ಅವನಿಗೆ ಅವಳನ್ನು ಅರ್ಥಮಾಡಿಕೊಳ್ಳುವುದೇ ಕಷ್ಟವಾಯಿತು. ಏನಿದು, ಅಳುತ್ತಾಳೆ; ನಗುತ್ತಾಳೆ. ಏನಿದು ಸಿಡುಕುತ್ತಾಳೆ; ದೀನವದನಳಾಗುತ್ತಾಳೆ ! ಇದೂ ಒಂದು ಗತ್ತೋ, ಕಲೆಯೋ ತನ್ನಬಲೆಯಲ್ಲಿ ಬೀಳಿಸಿಕೊಳ್ಳಲು ? ಶಂಕರನ ತಲೆ ಕದಡಿಹೋಯಿತು.

ಏನೂ ತೋಚದೆ ಕಿಟಕಿಯಕಡೆ ಹೊರಳಿ, ಅಲ್ಲಿ ಹೋಗಿ ನಿಂತ. ಆ ಕಿಟಕಿ ಮತ್ತೆ ಕಾಣುತ್ತಿತ್ತು. ಅಲ್ಲಿಯ ಕಿಟಕಿ- ಪರದೆ ಗಾಳಿಗೆ ಅಲುಗಾಡುತ್ತಿತ್ತು ಒಮ್ಮೊಮ್ಮೆ, ಗಾಳಿಬೀಸಿದಾಗ ಹೆಚ್ಚು ಸರಿದು, ಕೋಣೆಯ ಸ್ವಲ್ಪ ಭಾಗವನ್ನು ತೋರಿಸುತ್ತಿತ್ತು. ಕೋಣೆಯಲ್ಲಿ ಯಾವುದೋ ಒಂದು ಚಿತ್ರ ಮಸುಕು ಮಸುಕಾಗಿ ತೋರುತ್ತಿತ್ತು. ಗಾಳಿ ಭರ್ರನೆ ಬೀಸಿತು. ಪರದೆ ಸಂಪೂರ್ಣ ತೆರೆಯಿತು; ಚಿತ್ರ ಸ್ಪಷ್ಟ ಕಂಡಿತು: ನಲ್ಲ ತನ್ನ ತೋಳ ತೆಕ್ಕೆಯಲ್ಲಿ ಬಿಗಿದಪ್ಪಿ, ನಲ್ಲೆಯನ್ನು ಮುದ್ದಿಡುತ್ತಿದ್ದಾನೆ. ಆ ನಾಲ್ಕೂ ತುಟಿಗಳ ಕೆಂಪು ಅವರ್ಣನೀಯ. ರಕ್ತ ಸುರಿಯುವಂತಹ ಕೆಂಪು ! ನೋಡಲಾರದೆ ಹಿಂದಿರಿಗಿಸಿದ, ತನ್ನ ಕತ್ತನ್ನು, ಶಂಕರ. ಕಣ್ಣಮುಂದೆ, ನಗುತ್ತಾ ಅದೇ ಭಂಗಿಯಲ್ಲಿ ಕುಳಿತಿದ್ದಳು, ಆಕೆ. ಅವಳ ತುಟಿಗಳೂ ಆರಕ್ತವಾಗಿದ್ದುವು. ಅವಳ ಕಣ್ಣುಗಳೂ ತುಂಬಿದ್ದವು ಆಸೆಯಿಂದ.

ುಚ್ಚು ಹಿಡಿಯಿತು ಶಂಕರನಿಗೆ.

ಕತ್ತು ಎಡಗಡೆಗೆ ತಿರುಗಿಸಿದ. ಅವನ ದಿಟ್ಟಿ ನಿಟ್ಟಿಸಿತು:
ೀರ ಗಂಭೀರವಾಗಿ ಕೋಲೂರಿ ನಿಂತಿದ್ದ ಸ್ವಾಮಿ ವಿವೇಕಾನಂದ.
ಸೆ ಅಂಕುರಿಸಿತು. ಬರಡು ಭೂಮಿಯಲ್ಲಿ ಮಲ್ಲಿಗೆಯ ಬಳ್ಳಿ
ೂನರಿದಂತಾಯಿತು. ಶಂಕರನ ಎದೆ ಪುಳಕಿತವಾಯಿತು.
ಾಗೆಯೇ ನಿಂತು, ಬೊಟ್ಟುಮಾಡಿ ತೋರಿಸುತ್ತಾ, "ಇವರಾರು
ೂತ್ತೆ ?" ಎಂದು ಕೇಳಿದ.

"ಹೌದು ಗೊತ್ತು. ವಿವೇಕಾನಂದ !"

ಈತನು ಲೋಕದ ಕಣ್ಣು, ಜಗತ್ತಿನಲ್ಲಿ ಹೆಸರಾದವನು.
ನ್ನ ತತ್ವವನ್ನು ಸಾರಿ ಧರ್ಮ, ನೀತಿಯನ್ನು ಸ್ಥಿರಗೊಳಿಸಿದವನು.
ಲ್ಲಿಯೇನು: ಈತನು ಬ್ರಹ್ಮಚಾರಿ !"

"ಹೌದು. ಬಣಗು ಬ್ರಹ್ಮಚಾರಿ !" ಅವಳು ಒಡನೆಯೇ
ುಡಿದಳು. "ಅವನನ್ನೇಕೆ ನೋಡುತ್ತೀರಿ; ಇವನನ್ನು ನೋಡಿ,
ಾಂಧಿಯನ್ನು !" ಆಕೆ ಹೇಳಿದಳು. ಶಂಕರ ನೋಡಿದ. ಹೌದು
ಲಗೈಯ್ಯನ್ನು ಎತ್ತಿ ಆಶೀರ್ವದಿಸುವಂತೆ ನಿಂತ ಭಂಗಿಯ, ಭಂಗಿ

"ಹೌದು ಈತನೂ ಮಹಾತ್ಮ." ಶಂಕರ ಉದ್ಗರಿಸಿದ.

"ಈತನು ಹೆಣ್ಣನ್ನು ಕೂಡಲಿಲ್ಲವೇ ?" ಆಕೆ ಪ್ರಶ್ನಿಸಿದಳು.
ುಂದುವರಿಯುತ್ತಾ, "ಈತನು ಮಹಾತ್ಮನಾಗಲಿಲ್ಲವೇ ? ಆಹಾರ
ಂತೆ ಕಾಮವೂ ಮುಖ್ಯ. ವಿವೇಕಾನಂದ ಬರಿಯ ಬಣಗು
್ರಹ್ಮಚಾರಿಯಾಗಿ ತತ್ವವನ್ನು ಬೋಧಿಸಿ, ರಸವನ್ನು ಸವಿಯದೆ
ಾವಿಗೀಡಾದ. ಆದರೆ ಈ ಗಾಂಧಿ ರಸವನ್ನೂ ಸವಿದ; ಸ್ವಾತಂತ್ರ್ಯ
ನ್ನೂ ತಂದಿತ್ತ; ಮಹಾತ್ಮನೂ ಆದ. ವಿವೇಕಾನಂದ ಬೋಧಿಸಿ
ೆರಡಿದ ಆ ವೇದಾಂತವನ್ನು ಎಷ್ಟು ಮಂದಿ ಆಚರಿಸುತ್ತಿದ್ದಾರೆ,
ನುಭವಿಸುತ್ತಿದ್ದಾರೆ ? ಈ ಗಾಂಧಿ ಕೊಟ್ಟ ಸ್ವಾತಂತ್ರ್ಯವನ್ನು
ಷ್ಟುಜನ ಅನುಭವಿಸುತ್ತಿಲ್ಲ ? ಆತನದು ಗಾಳಿಯ ಮಾತು;

ಆದರೆ ಈತನದು ಕಲ್ಲಿನ ಮಾತು. ಆತನ ತತ್ವ ಈ ಕಾಲಕ್ಕೆ ಸಲ್ಲದು!” ನಿರರ್ಗಳವಾಗಿ ಆಕೆ ನುಡಿದಳು.

“ಗಾಂಧೀಜಿಯು ಬ್ರಹ್ಮಚಾರಿಯಲ್ಲವೆ? ಬ್ರಹ್ಮಚಾರಿಯಾಗಿರ ಬೇಕೆಂದು ಸಾರಲಿಲ್ಲವೆ?”

“ಯಾವಾಗ? ಐದಾರು ಮಕ್ಕಳಾದಮೇಲೆ!”

ಅಣಕಿಸುವ ನಗೆಯಲ್ಲಿ ನುಡಿದಳು. “ಓಹೋ ಇನ್ನೊಬ್ಬ ಸ್ವಾಮಿಗಳೂ ಇಲ್ಲಿದ್ದಾರೆ!” ಶಂಕರನಿಗಿನ್ನು ತಡೆಯಲಾಗಲಿಲ್ಲ. ತನ್ನ ಆರಾಧ್ಯ ದೇವತೆ ಸ್ವಾಮಿ ವಿವೇಕಾನಂದರನ್ನು ಹೀಗಳೆದು ನುಡಿಯುತ್ತಿದ್ದಾಳೆ. ಗಾಂಧೀಜಿಯವರನ್ನು ಹಾಸ್ಯಮಾಡುತ್ತಿದ್ದಾಳೆ. ಅನ್ನವಿತ್ತ ತನ್ನ ಸ್ವಾಮಿಗಳನ್ನು ಅಣಕಿಸುತ್ತಿದ್ದಾಳೆ. ಇವಳ ಸರಸ ಅತಿಯಾಯಿತು. ಇನ್ನು ಇವಳೊಡನೆ ಮಾತು ಬೇಡ! ಅಪರಿಚಯಸ್ಥ ಪರಸ್ತ್ರೀಯೊಡನೆ ಈ ಇಷ್ಟು ಮಾತುಗಳು!

ಅದುರಿದ ಎದೆಯನ್ನೇ ಗಟ್ಟಿಮಾಡಿಕೊಂಡ. ನಡುಗುವ ಮನವನ್ನೇ ಕಲ್ಲುಮಾಡಿದ. ಕರಗುವ ಧೈರ್ಯವನ್ನೇ ಹಿಡಿ ಹಿಡಿದು, ಬಸಿದು ಗಟ್ಟಿ ಮುದ್ದೆಮಾಡಿ, ಆರಿಸಿ, ಬೀಸಿ ಒಗೆಯೋಣ ವೆಂದು ತಯಾರಿ ನಡೆಸಿದ. ಒಳಗಿನ ಹೊಡೆದಾಟ ಸಾಗಿಯೇ ಇತ್ತು. ಇನ್ನೇನು ಗಟ್ಟಿಯಾಗಿ ಕೂಗಿ ಹೇಳಬೇಕೆಂದು ಬಾಯಿ ತೆರೆಯುವಾಗಲೇ ಆಕೆ ಬಾಯಿಬಿಟ್ಟಳು.

“ನನ್ನ ಕತೆಯನ್ನು ನೀವು ಕೇಳಿದ್ದರೆ ಹೀಗೆ ವರ್ತಿಸುತ್ತಿರ ಲಿಲ್ಲ. ನಿಮ್ಮಂತೆಯೇ ನನ್ನ ಗಂಡನೆಂಬುವವನೊಬ್ಬನಿದ್ದ. ನನ್ನನ್ನು ನಿರ್ಗತಿಕಳನ್ನಾಗಿ ಮಾಡಿ, ಯಾವಳೊಡನೆಯೋ ಓಡಿಹೋದ. ಈ ಅರಿಯದ ನಗರದಲ್ಲಿ ನನ್ನ ನಾನು ಸಾಕಿಕೊಳ್ಳುವುದು ಹೇಗೆ? ನಾನೀ ವೃತ್ತಿಗಿಳಿಯಬೇಕಾಯಿತು. ನನ್ನನ್ನು ಮಾಡಿಕೊಂಡ ಆ ಗಂಡನೂ ನಿಮ್ಮಂತೆ ಕಾಲೇಜ್ ಉಪಾಧ್ಯಾಯನೇ ಆಗಿದ್ದ. ಸಾತ್ವಿಕನಂತೆಯೇ ತೋರುತ್ತಿದ್ದ. ನನ್ನನ್ನು ಈ ಗತಿಗೆ ಈಡು

ರಾಡಿ ಹೋದ. ನಾನಾಗ ಏನುಮಾಡಬೇಕಿತ್ತು. ನೀವೇ ಹೇಳಿ." ಎಂದು ಕಣ್ಣಿಗೆ ಸೆರಗಿಕ್ಕಿ ಅಳತೊಡಗಿದಳು. ಹೊರಡು ಎಂದು ಹೇಳಬೇಕೆಂದಿದ್ದ ಶಂಕರನ ಧ್ವನಿ ಅಲ್ಲಿಯೇ ಅಡಗಿತು. ಅವನು ಯಾರಿಸಿದ ಧೈರ್ಯದ ಮುದ್ದೆ ಮತ್ತೆ ಕರಕರಗಿ ಹೋಯಿತು.

ಆಧಾರವಿಲ್ಲದೆ ಬಾನಿನಿಂದ ನೆಲಕ್ಕೆ ಬೀಳುವ ಪ್ರಾಣಿಯಂತೆ ಣಿಸಿದಳು ಆಕೆ. ಎತ್ತಿ ಹಿಡಿಯಲು ಮುಂಬರಿಯಲೆ? ಈಕೆ ಯಾರು; ತಾನಾರು? ಇವಳ ಪಾಡು ಇವಳಿಗೆ; ತನ್ನಪಾಡು ತನಗೆ. ರಚಿಂತೆ ನಮಗೆ ಏಕೆ? ನಮ್ಮ ಚಿಂತೆ ನಮಗೆ ಸಾಲದೆ? ದಿನ ಳೆದಹಾಗೆಲ್ಲ ಬುವಿಯ ಜಾಲವು ನಮ್ಮ ಸುತ್ತುವುದೆ ಹೊರತು, ಗಿ ಬಿಗಿಯುವುದೆ ಹೊರತು ಬಿಚ್ಚಿ ಬಿಡುವುದು ಎಂಬ ನೆಚ್ಚ ಕಾಣೆ. ಇದು ಎಷ್ಟನೆಯದು? ನಾಲ್ಕನೆಯದು! ಒಂದನ್ನು ಲಿದು, ನಂಬಿಸಿ ಮೋಸ ಮಾಡಿದುದಾಯಿತು; ಒಳ್ಳೆಯ ಜೊತೆ ಾರ ಎಂದು ಬಗೆದು ಆಟವಾಡಿದ ಇನ್ನೊಂದನ್ನು, ತನ್ನ ನಿರ್ಧಾರ ನ್ನು ಹೇಳದೆ ವಂಚಿಸಿಯಾಯ್ತು; ಮತ್ತೊಂದು ಹಿರಿಯರ ಮಾತುಕೇಳಿ ತಾಳಿ ಬಿಗಿಸಿಕೊಂಡು, ಅಲ್ಲಿ, ದೂರದಲ್ಲಿ ಬಿದ್ದಿದೆ. ಈಗ ಇದೊಂದು. ಆ ಮೂರಕ್ಕೂ ಎದೆಯೊಡೆಯುವ ಸ್ಥಿತಿಯನ್ನಿ ತ್ತಿದಲ್ಲದೆ, ಇದನ್ನೂ ಅಪ್ಪಿ ನನ್ನನ್ನು ನಾನು ವಂಚಿಸಿಕೊಳ್ಳಲೇ?" ನಿನ್ನನಪ್ಪಿದ ಈ ತೋಳು ಅನ್ಯರನಪ್ಪದು ಕಾಮದಿಂದ, ನಿನ್ನ ಮುತ್ತಿಟ್ಟ ಈ ತುಟಿ ಅನ್ಯರನು ಮುತ್ತಿಡದು, ಕಾಮದಿಂದ." ಎಂದು ಲಲಿತೆಗೆ ಮಾತು ಕೊಟ್ಟು, ಈಗ ಇವಳನ್ನು ಹೊಂದಲೇ? ತಾನು ಮಾಡಿದ ಹೆಣ್ಣನ್ನು ಕೂಡದೆ ನೋವನ್ನಿತ್ತುದಲ್ಲದೆ, ಈಗ ಈ ಕೃತ್ಯವನ್ನು ಮಾಡಿ ತಾಯಿಗೆ ಇನ್ನಷ್ಟು ನೋವನ್ನೀಯಲೇ? ಇವಳನ್ನು ನೋಡಿದರೆ ಯಾರಾದರೂ ನಂಬುವರೆ? ಇವಳನ್ನು ದೂಷಿಸಿ ಪ್ರಯೋಜನವೇನು. ಇವಳ ನೀತಿಯೇ ಇದೆಂದು ಕಾಣುತ್ತದೆ. ಇವಳ ಕರ್ಮ ಇವಳಿಗೆ; ನನ್ನ ಕರ್ಮ ನನಗೆ.

ಇನ್ನು ಯೋಚನೆಗೆ ಅವಕಾಶ ಪಡಬಾರದು! ಇಲ್ಲಿ ಇವಳು ಇರಲೂ ಅವಕಾಶವನ್ನೂ ಕೊಡಬಾರದು, ಶಂಕರ ನಿರ್ಧರಿಸಿದ. ಈಗ ಅವನ ನಿರ್ಧಾರ ಅಚಲವಾಗಿತ್ತು. ಸುಸ್ಥಿರವಾಗಿತ್ತು.

"ನಿನ್ನ ಕತೆ ನನಗೆ ಬೇಡ! ನಡೆ. ನೀನಿನ್ನು ಇಲ್ಲಿರಬೇಡ! ಇನ್ನೊಮ್ಮೆ ಬಂದರೆ ನಿನ್ನ ಗತಿ ಏನಾಗುವದೋ! ಎಚ್ಚರಿಕೆ! ನೀನು ನಡೆ. ಇಷ್ಟು ಹೊತ್ತು ಹೆಣ್ಣೆಂದು ಸುಮ್ಮನಿದ್ದೆ. ಇನ್ನು ದೂಡಬೇಕಾಗುತ್ತದೆ. ನಡೆ, ಏಳು! ಇಲ್ಲಿ ಕಣ್ಣೀರಿಡಬೇಡ! ಇಲ್ಲಿ ನನ್ನ ಕಣ್ಣೆದುರಿಗಿರಬೇಡ! ಏಳು, ಹೂಂ ಏಳು!" ಶಂಕರ ಗದರಿಸಿಕೊಂಡ; ಕೂಗಿಕೊಂಡ.

ಫಕ್ಕನೆ ಎದ್ದಳು ಆಕೆ! ಚಟ್ಟನೆ ಎದ್ದುಬಿಟ್ಟಳು. ಅವಳ ಕಣ್ಣು ಕಿಡಿಕಾರುತ್ತಿತ್ತು. "ನನ್ನನ್ನಾರೆಂದು ತಿಳಿದುಕೊಂಡಿದ್ದೀರಿ? ನಾಗವೇಣಿಯಲ್ಲ! ನಾಗಿಣಿ!! ನಾನು ಒಲಿದರೆ ಅಮೃತ. ಇಲ್ಲದಿದ್ದರೆ ವಿಷ. ನಿಮ್ಮಂತಹ ಗಂಡುಗಳನ್ನು ಎಷ್ಟೋ ನೋಡಿರುವೆ. ನೆನಪಿರಲಿ ಈ ದಿನ! ನೆನಪಿರಲಿ ಈ ಗಳಿಗೆ! ಒಲಿದು ಬಂದರೆ ಹೊರದೂಡುವಿರಿ. ಒದೆಯಲೂ ಬಂದಿರಿ. ಮಾಣಿಕ್ಯವನ್ನು ಕೆಂಡವನ್ನಾಗಿ ಮಾಡಿದಿರಿ! ಎಚ್ಚರಿಸಲು ಬಂದಿದ್ದೀರಿ, ನನ್ನನ್ನು! ನಾನೇ ಎಚ್ಚರಿಕೆ ಕೊಡುತ್ತೇನೆ!" ಸಿಡಿದು ಹೊರ ಹೊರಟಳು.

"ನಡೆ. ನಿನ್ನ ಎಚ್ಚರಿಕೆ ಅಲ್ಲಿರಲಿ!" ಧಡಾರನೆ ಬಾಗಿಲನ್ನು ಮುಚ್ಚಿದ ಅಗಳಿಯನ್ನೂ ಭದ್ರವಾಗಿ ಹಾಕಿದ. ಅವಳು ಮತ್ತೆ ಬಾರದಿರಲೆಂದು ಬಿಗಿಯಾಗಿ ಹಾಕಿದ.

ಹೌದು ಹಾಕಿದ. ಎಂದು? ಆರುತಿಂಗಳ ಹಿಂದೆ! ಈಗ ಶಂಕರ ನೋಡಿದ. ಬಾಗಿಲು ತೆಗೆದಿದೆಯೋ ಏನೆಂದು ಓಡಿ ಹೋಗಿ ಕದವನ್ನು ಧಡಾರನೆ ಬಡಿದ. ಮುಚ್ಚುವನೇನೋ ಎಂಬಂತೆ ಬಡಿದ. "ನಡೆ, ಹೋಗು!" ಎಂದು ಹುಚ್ಚನಂತೆ ಕೂಗಿಕೊಂಡ. ಬಾಗಿಲನ್ನು ಹಾಗೆಯೇ ಭದ್ರವಾಗಿ ಅದುಮಿಹಿಡಿದಿದ್ದ.

ತನ್ನ ಶಕ್ತಿಯನ್ನೆಲ್ಲಾ ಬಾಗಿಲಮೇಲೆ ಉಪಯೋಗಿಸಿದ್ದ.

ಕದ ತಟ್ಟಿದಂತಾಯಿತು. "ಹ್ಞಾಂ, ಯಾರವರು ?" ಶಂಕರ ಕೂಗಿಕೊಂಡ.

"ಯಾಕೆ ಮಗೂ ? ನಿದ್ದೆ ಬರಲಿಲ್ಲವೆ ? ಬಾಗಿಲು ಯಾಕೆ ಬಡೀತೀಯಾ ?"

ತಾಯಿ ! ತನ್ನ ತಾಯಿ !!

ಶಂಕರನ ಸ್ಮೃತಿ ಎಚ್ಚರಾಯಿತು. ಜಾಗ್ರತೆಯಾಯಿತು. ಬಾಗಿಲು ತೆರೆದ. ತಾಯಿ ಬಾಗಿಲ್ಲಲ್ಲೇ ನಿಂತಿದ್ದಳು.

"ಯಾಕಪ್ಪಾ ?, ಇವತ್ತಿಂಗದೀಯಾ ? ರಾತ್ರಿಯೆಲ್ಲಾ ನಿದ್ದೆ ಮಾಡಿದಂಗೇ ಇಲ್ಲ ! ನಾಳೆ ಊರಿಗೆ ಓಗಿ ಬರಬೇಕಂತಿದ್ದೆ. ನಿನ್ನ ಮೈಯ್ಯಾಗೆ ಚನ್ನಾಗಿಲ್ದಿದ್ರೆ, ಇನ್ನೊಂದಿನಾ ಓಗಿ ಬರ್ತೀನಿ. ಏನಾಗೈತೆ ? ತಲೆ ನೋಯ್ತೈತೇನು ?" ಮಮತೆಯಿಂದ ಕೇಳಿದಳು, ತಾಯಿ.

ಹೌದು ತನಗೆ ತಲೆ ನೋಯುತ್ತದೆಯೇ ? ಶಂಕರ ಹಣೆ ಮುಟ್ಟಿ ನೋಡಿಕೊಂಡ. ಬೆಂಕಿಯಲ್ಲಿ ಕೈಯಿಟ್ಟಂತಾಯಿತು. ಸಂಜೆ ನಡೆದುದೆಲ್ಲಾ ಮತ್ತೆ ನೆನಪಾಯ್ತು.

ಬೆಳಗಿನಂದು ಹೇಳಿದ್ದ: 'ಮಧ್ಯಾಹ್ನ ರಜೆ ತೆಗೆದುಕೊಳ್ಳುತ್ತೇನೆ; ಪೇಟೆಕಡೆ ಹೋಗಿ ಬರೋಣ. ತಡಿ ತರೋಣಂತೆ' ಎಂದು. ಆದರೆ ಮಧ್ಯಾಹ್ನವೇಕೆ, ಸಂಜೆಯಾದರೂ ಮನೆಗೆ ಹಿಂದಿರುಗಲಿಲ್ಲ. ತಾಯಿ ಕಾದೇ ಇದ್ದರು. ಸಂಜೆ ಏಳುಗಂಟೆಗೆ ಮನೆಗೆ ಬಂದಾಗ ಕೇಳಿದ್ದರು. "ಯಾಕೆ ಮಗೂ ಹೊತ್ತಾಯ್ತು ? ಮಧ್ಯಾಹ್ನ ಪೇಟೆ ಕಡೆ ಓಗಿಬರೋಣಾಂದಿದ್ದೆ. ಹೋಗಲಿ ಬಿಡು ಆಮೇಲೆ ಓಗಿ ಬಂದ್‌ರಾತು. ನಾಳೆ ಊರಿಗೆ ಓಗಿ ಬರ್ತೀನಿ. ಬಂದ್‌ಮೇಲೆ ತಡಿ ತಂದ್ರಾತು"

ಹೌದು ತಾಯಿ ಹಾಗಂದಿದ್ದರು. ನಾಳೆ ಊರಿಗೆ ಹೋಗು

ವುದಾಗಿ ಹೇಳಿದ್ದರು. ಇದ್ದಕ್ಕಿದ್ದಹಾಗೆಯೇ ಯಾಕೆ ಹಾಗೆ ಹೇಳಿ ದರೋ ಶಂಕರನಿಗೆ ಅರ್ಥವಾಗಿರಲಿಲ್ಲ. "ಈಗ ಯಾಕೆ ಹೋಗ್ತಿ ಯಾ? ಇನ್ನೇನು ರಜ ಬರುತ್ತದೆ. ಆಮೇಲೆ ಹಂಪೆಗೆ ಹೋಗಿ ಬರೋಣ. ಹಾಗೆಯೇ ಊರಿಗೆ ಹೋಗಿ ಬಂದ್ರಾಯಿತು. ನಾನೂ ಬಹಳ ದಿನಾಯ್ತು, ಊರು ನೋಡಿ" ಎಂದು ಹೇಳಬೇಕೆಂದಿದ್ದ. ಆದರೆ ಊರನ್ನು ನೆನೆದೊಡನೆಯೇ ಅವನಿಗೆ ಹುಚ್ಚು ಹಿಡಿದಂತಾ ಗುತ್ತಿತ್ತು. ತನ್ನ ತಂದೆ ತಾಯಿ ಬಾಳಿದ ಊರು. ತಾನು ಹುಟ್ಟಿ ಬೆಳೆದು, ಗೆಳೆಯರೊಡನೆ ಆಟವಾಡಿದ ಊರು. ಪ್ರಾಥಮಿಕ ಶಾಲೆಗೆ ಹೋಗಿ ಹುಡುಗರೊಡನೆ ಜಗಳವಾಡಿ ಮನೆಗೆ ಬಂದು ತಾಯಿಯೊಡನೆ ದೂರುತ್ತಿದ್ದ ಊರು. ಮಾವಿನ ಮರಗಳಲ್ಲಿ ಹಣ್ಣುಕಿತ್ತು ಅದೇ ಮರಕ್ಕೆ ಕಟ್ಟಿಸಿಕೊಂಡು ಹೊಡೆತತಿಂದ ಊರು. ತನ್ನ ತಂದೆ ಮಡಿದ ಊರು! ತಾವಿಬ್ಬರೂ ನಿರ್ಗತಿಕರಾದ ಊರು... ಮುಂದೆ ನೆನೆಯಲು ಆಗಿದ್ದಿರಲಿಲ್ಲ. ಅಲ್ಲಿ ಕೂಲಿಮಾಡಿ ದುಡಿದು ತನ್ನ ಒಡಲನ್ನು ಹೊರೆಯುವುದೇ ಕಷ್ಟವಾಗಿರುವಾಗ ತನ್ನ ಓದಿಗೆ ಹಣ ಒದಗಿಸಿದ್ದ ತಾಯಿ ಎದುರು ನಿಂತು ಊರಿಗೆ ಹೋಗಿ ಬರು ತ್ತೇನೆಂದು ಹೇಳುತ್ತಿದ್ದಾಳೆ. ಅವಳು ದಿನದಿನವೂ ದುಡಿದು, ಅಲ್ಲಿಯೇ ಮುಕ್ತಿಯನ್ನು ಪಡೆಯಲು ಆಸಿಸಿದ್ದ ಈ ಮಣ್ಣಿನ ಮಗಳು ಆ ಊರನ್ನು ಹೇಗೆ ಮರೆತಾಳು? ಪಾಪ ಹೋಗಿ ಬರಲಿ. ಇವಳ ಇಷ್ಟಕ್ಕೆ ಯಾಕೆ ವಿರುದ್ಧವಾಗಬೇಕು? ನನ್ನನ್ನು ಜೊತೆಗೆ ಕರೆಯದಿದ್ದರಾಯಿತು. ಎಂದು ಯೋಚಿಸಿ, "ಹಾಗೆಯೇ ಆಗ ಲವ್ವಾ. ಹೋಗಿ ಬಾ. ನೀನು ಬೆಳಿಗ್ಗೇ ಹೇಳಿದ್ದಿದ್ದರೆ ಏನಾ ದರೂ ತರಕಾರಿ ತರಬಹುದಾಗಿತ್ತು. ಊರಿಗೆ ತೆಗೆದುಕೊಂಡು ಹೋಗಿ ಮೂಡ್ಲ ಗಂಗವ್ವರ ಮನೆಗೆ ಕೊಡಬಹುದಾಗಿತ್ತು. ರೈಲು ಏಳುಗಂಟೆಗೆ ಹೊರಡುತ್ತೆ ದಾರಿಗೆ ಏನಾದರೂ ಬುತ್ತಿ ಮಾಡು" ಎಂದೂ ಹೇಳಿದ್ದ.

ಅದು ಈಗ ನೆನಪಿಗೆ ಬಂತು. ತಾಯಿ ಕರುಣೆಯ ಮೂರ್ತಿ ಾಗಿ ನಿಂತಿದ್ದಾಳೆ. "ಯಾಕೆ ಮಗೂ ? ತಲೆ ನೊಯ್ಯಾತೈತಾ ?" ಂದು ಮಮತೆಯಿಂದ ಕೇಳುತ್ತಿದ್ದಾಳೆ. ಶಂಕರ ತಲೆಗೆ ಕೈಯಿಟ್ಟು ಂಡೇ ಇದ್ದ. ತಾಯಿ ಫಕ್ಕನೆ ಹಣೆಗೆ ಕೈಯಿಟ್ಟರೆ? ಬೆಂಕಿ ಂತಿರುವ ಹಣೆಯನ್ನು ನೋಡಿ ಊರಿಗೆ ಹೊರಟಾಳೆಯೇ ? ನ್ನ ದುಃಖ ಇವಳಿಗೇಕೆ ? ಬೇಡ. ಊರಿಗೆ ಹೋಗಿ ಬರಲಿ.

"ಇಲ್ಲವ್ವಾ ! ಏನೂ ಆಗಿಲ್ಲ. ಯಾಕೋ ನಿದ್ದೆ ಬರಲಿಲ್ಲ ಾಗೆಯೇ ಓದುತ್ತಾ ಕುಳಿತಿದ್ದೆ. ಹೊರಗೋಗಿ ಬಂದು, ಬಾಗಿಲು ುಚ್ಚುತ್ತಿದ್ದೆ" ಎಂದ.

"ಯಾಕಪ್ಪಾ ಚಳಿಯಾಗ್ತದೇನು ? ಕಿಟಕಿ ಮುಚ್ಚಿದ್ದೀಯಾ ?" ಾಯಿ ಕೇಳಿದಳು. ಶಂಕರ ತಾನು ಕಿಟಕಿಯನ್ನು ಮುಚ್ಚಿದುದರ ರಿವೆಯೆ ಇಲ್ಲದೆ ಅತ್ತ ತಿರುಗಿ ನೋಡಿದ.

ಸಿಡಿಲು ಹೊಡೆದಂತಾಯಿತು. ತಲೆ ತಿರುಗಿತು. ಏನೋ ನಾಹುತವಾಗಿ ಹೋದವರಂತೆ ಮರಂಬಟ್ಟುನಿಂತ ತಾಯಿ ಹೇಳಿ ಳು, "ಮಲಗಿಕೋ; ನಿದ್ದೆಮಾಡು. ಹಾಗೆಲ್ಲಾ ನಿದ್ದೆಗೆಟ್ ಾರದು. ಚಳಿಯಾಗದಿದ್ದರೆ ಕಿಟಕಿ ತೆಗೆದು ಮಲಗಿಕೋ. ತ್ತುಂಟೆ ಏಳ್‌ಬೇಕು." ಹಾಗೆಂದು ಬಾಗಿಲು ಮುಚ್ಚಿಕೊಂಡು, ನ್ನ ಕೋಣೆಗೆ ತೆರಳಿದಳು.

ಶಂಕರ ಹಾಗೆಯೇ ನಿಂತಿದ್ದ. ತಲೆತಿರುಗುತ್ತಿತ್ತು. ಕಣ್ಣು ನಿ ಸುರುಸುತ್ತಿತ್ತು. ಸರ್ವನಾಶವಾಗಿತ್ತು. ಯಾವಪರಿವೆಯಲ್ಲಿಯೋ ಡಾರನೆ ಮುಚ್ಚಿದ್ದ, ಕಿಟಕಿಯನ್ನು. ಆ ಹೊಡೆತಕ್ಕೆ ಸಿಕ್ಕಿ ಲ್ಲಿಗೆಯ ಬಳ್ಳಿ ಕತ್ತರಿಸಿಹೋಗಿತ್ತು. ನೀಳವಾಗಿ ಹರಿದು ಬಂದು ುಡಿಕುಡಿಯಾಗಿ ನಗುತ್ತಿದ್ದ ಮಲ್ಲಿಗೆ ಕತ್ತರಿಸಿಹೋಗಿತ್ತು. ಶಂಕರನ ತ್ತು ಉಬ್ಬಿಬಂತು. ಅಯ್ಯೋ ನನ್ನ ಮಲ್ಲಿಗೆಯೇ ! ನೀನೂ ತ್ತರಿಸಿ ಹೋದೆಯಾ ! ಅತ್ತ ಲಲಿತೆ ಕೂಪಕ್ಕೆ ಬಿದ್ದಳು; ಇತ್ತ

ಲತೆ ನೀನೂ ಕತ್ತರಿಸಿ ಹೋದೆ. ದಿನದಿನದ ಒಂದೊಂದು ಮು
ನಲ್ಲಿ ಅಮೃತತ್ವವನ್ನೀಯುತ್ತಿದ್ದ ನೀನು ಇಂದು ನನ್ನನ್ನು ತೊ
ದೆಯಾ ! ನನ್ನ ಮಲ್ಲಿಗೆಯನ್ನು ನಾನೇ ಕೈಯ್ಯಾರೆ ಕೊಂದೆನಲ್ಲಾ
ಇನ್ನು ನಾನು ನಿರ್ಗತಿಕ. ಇಂದಿನಿಂದ ಪೂರ್ಣ ನಿರ್ಗತಿ
ಇಂದೇಕೋ ವಿಷಘಳಿಗೆ ಕಾಲೇಜಿಗೆ ತಡವಾಗಿ ಹೋದೆ. ಕಾ
ಜಿಗೆ ಹೋಗಲೇ ಇಲ್ಲ. ಅಲ್ಲಿ ಲಲಿತೆಯ ದಾರುಣ ದುಃಖವನ
ಎದೆಯಲ್ಲಿ ತುಂಬಿಕೊಂಡೆ. ಇಲ್ಲಿ ಯಾವುದೋ ರೋಷದ
ಯಾವುದೋ ದುಃಖದಲ್ಲಿ ನಿನ್ನ ಕೊಂದೆ, ಮಲ್ಲಿಗೆ ! ಆರೇ
ತಿಂಗಳಿಂದಲೂ ನನ್ನ ಸಂಗಾತಿಯಾಗಿದ್ದ, ಆರೇಳು ನಿಮಿಷಗಳ
ಕಾಲವನ್ನು ಕಳೆಯಿಸಿದ್ದೆ. ನಿನ್ನ ನೋಡಿ ನನ್ನೆದೆ ಹಿಂದಿನ
ದುಃಖವನ್ನು ಮರೆತಿತ್ತು, ಮರೆಯುತ್ತಿತ್ತು. ಈಗ, ಸುಖ ನಿ
ಸಂಗದಿಂದ ಎಂದೆನ್ನುತ್ತಿದ್ದ, ಹೃದಯಕ್ಕೆ ಸಿಡಿಲು ಬಡಿಯಿತು
ಆಯಿತು ನನ್ನ ಬಾಳು ! ಮುಗಿಯಿತು ನನ್ನ ಜೀವನ. ಅಯ್ಯೋ
ಮಲ್ಲಿಗೆ ! ಸದ್ದಿಲ್ಲದೆಯೇ ಕೊರಗಿ ದುಃಖಿಸಿದ. ಓಡಿಹೋಗಿ
ಬಳ್ಳಿಯನ್ನು ತಬ್ಬಿ ತಬ್ಬಿ ಮುತ್ತನೂ ಇಟ್ಟ. ಬಳ್ಳಿ ಹಸುರಾಗಿಯೆ
ಇತ್ತು. ನಗುತ್ತಲೇ ಇತ್ತು. ಶಂಕರನಿಗೆ ಹುಚ್ಚು ಹಿಡಿಸುತ್ತಿತ್ತು

"ಈ ಕಟುಕನನ್ನು ನೋಡಿ ನಗುತ್ತಿದ್ದೀಯಾ, ಮಲ್ಲಿಗೆ
ಏನು, ಕನಿಕರದಿಂದ ನಗುತ್ತಿದ್ದೀಯಾ ? ಅಥವಾ ಉಪಹಾಸ
ದಿಂದಲೋ ? ಹೇಳು ಮಲ್ಲಿಗೆ, ಹೇಳು ! ನೀನು ಹೇಳು !! ನೀನ
ಸತ್ತು ಹೋದೆಯಾ ? ಇಷ್ಟುದಿನ ನನ್ನನ್ನು ಸಲಹಿದ ನೀನು
ತೊರೆದು ಹೋದೆಯಾ ? ತೊರೆದೆಯಾ ?

ಬಳ್ಳಿ ಹಾಗೆಯೇ ಇತ್ತು. ಹಾಗೆಯೇ ಹಸುರುಗುತ್ತಿತ್ತು
ಹಾಗೆಯೇ ನಗುತ್ತಿತ್ತು. ಶಂಕರ ಕೆಳಗೆ ದೊಪ್ಪನೆ ಕುಳಿತ
ಕಡಿದವನಂತೆ. ಮುಖ ಮುಚ್ಚಿಕೊಂಡು ಮೌನವಾಗಿಯೇ
ದುಃಖಿಸಿದ.

"ನಾಗಿಣಿ ! ನೀನು ಹೇಳಿದಂತೆಯೇ ಮಾಡಿದೆಯಾ ? ನನ್ನ ಲಲಿತೆಯನ್ನು ನೀನು ಕೆಡಿಸಿದೆ. ನಿನ್ನ ಮೇಲಿನ ಸಿಟ್ಟಿನಿಂದ ಈ ನನ್ನ ಮಲ್ಲಿಗೆಯನ್ನು ಕತ್ತರಿಸಿದೆ !" ಶಂಕರ ಹಾಗೆಯೇ ಅಳುತ್ತಿದ್ದ. ಒಂದೊಂದು ಯೋಚನೆಯೂ ಅವನನ್ನು ಚುಚ್ಚುತ್ತಿತ್ತು. ಆಳ ವಾಗಿ ಚುಚ್ಚುತ್ತಿತ್ತು. ಆ ಯೋಜನೆ, ನೆನಪುಗಳ ಮೊನೆಗಳು ವಿಷಸಿಕ್ತವಾಗಿದ್ದುವು. ಅವು ಆಳವಾಗಿ ನಟ್ಟು ವಿಷಕಾರುತ್ತಿದ್ದವು. ಹೃದಯವನ್ನು ಛಿದ್ರ, ಛಿದ್ರ ಮಾಡುತ್ತಿದ್ದವು.

ನಾನು ದುರ್ಬಲ! ನಾನು ದುರ್ಬಲ!! ಓ ಗುರುವೇ ನಿನ್ನ ಧೈರ್ಯ, ಸ್ಥೈರ್ಯ ನನಗೆ ಬಾರವು. ನಾನು ಅಣು, ವಿಭುವಲ್ಲ ! ನಾನು ಕಣ, ಮಹತ್ತಲ್ಲ ! ನಾನು ಪುಕ್ಕಲಪಾಪ, ಧೈರ್ಯನಿಧಿ ಯಲ್ಲ ! ಅತ್ತ ದರಿ ಇತ್ತ ಹುಲಿ,- ಪರಿಸ್ಥಿತಿ ಬಂದಾಗ, ಹುಲಿ ಯನ್ನು ಏರಿ ದರಿಯನ್ನು ಹಾರಿದ ಆ ನಿನ್ನ ಧೀಶಕ್ತಿ ನನಗಿಲ್ಲ. ನನ್ನ ಹೃದಯ ದುರ್ಬಲವಾಗಿದೆ. ನಿನ್ನನ್ನು ಅಣಕವಾಡಲು ಈ ಎಲ್ಲ ವೇಷಗಳು. ಈ ವ್ರತ, ಈ ನಿಯಮ, ಈ ಅಲಂಕಾರ ! ಈ ನಿನ್ನ ಭಾವಚಿತ್ರ, ಈ ಸಾಮಾನ್ಯವಾಗಿರುವ ಕೋಣೆ, ನನಗಿಲ್ಲ, ಲೋಕವನ್ನಿದುರಿಸಿ ಸಾಗುವ ಶಕ್ತಿ. ಹುಟ್ಟಿದಂದಿನಿಂದಲೂ ಹೀಗೆಯೇ ಸಾಗಿ ಬಂದಿರುವೆ. ಒಂದೊಂದು ಘಟನೆಯು ತೇಲಿ ಬಂದರೆ ಕಲ್ಲೆಂದು ಭಾವಿಸಿದ್ದ ಹೃದಯ ನೀರಾಗುತ್ತಿತ್ತು, ನೀರಾಗು ತ್ತಿದೆ, ಆಗುತ್ತದೆ. ಕಾಸಿಲ್ಲದೆ ಕಡಲನ್ನು ದಾಟುವೆ; ಬಿಕ್ಷುಕನಾಗಿ ಭೂಮಂಡಲವನ್ನು ಸುತ್ತುವೆನೆನ್ನುವ ನಿನ್ನ ಆ ಅಚಲ ನಿರ್ಧಾರ ವನ್ನು ನಾನೂ ಮಾಡಿದ್ದುಂಟು ಆದರೆ ನಿನ್ನದೆ ನನಗಿಲ್ಲ ! ಇಲ್ಲ ಗುರುವೇ, ಇಲ್ಲ ! ನಿನ್ನ ಆ ಧೈರ್ಯ, ಆ ಶಕ್ತಿ, ಆ ಆತ್ಮ, ಆ ಎದೆ ನನಗಿಲ್ಲ. ನಾನು ದುರ್ಬಲ, ನಾನು ಪಾಮರ !"

ಶಂಕರ ಹಾಗೆಯೇ ಅಳುತ್ತಿದ್ದ. ಏನೇನೋ ನೆನೆ ನೆನೆದು ಅಳುತ್ತಿದ್ದ. ಪ್ರಳಯಕ್ಕೆ ಸಿಕ್ಕ ತರಗೆಲೆ ತಾನೆಂದು ಬಗೆದು ಅಳು

ತ್ತಿದ. ಮೌನವಾಗಿ ಅಳುತ್ತಿದ್ದ. ಎದ್ದುನಿಂತು ಕೈಯೆ
ವಿವೇಕಾನಂದರ ಚಿತ್ರವನ್ನು ತೋರಿಸುತ್ತಾ ನಿಂತ. ದಿಟ್ಟಿಸುತ
ನಿಂತ. ಹಾಗೆಯೇ ನಿಂತಿದ್ದ. ಅವನ ಕೈ ಬಿತ್ತು. ದಿ
ಹಾಗೆಯೇ ಇತ್ತು. ಅವನು ಹಾಗೆಯೇ ನಿಂತಿದ್ದ. ಕಣ
ತುಂಬಿತ್ತು.

ಬುಗುರಿ ನಿದ್ದೆಗಟ್ಟಿತು.

೪

ಕಣ್ಣು ತುಂಬಿತ್ತು. ದಿಟ್ಟಿ ಹಾಗೆಯೇ ಇತ್ತು. ಕೈ ಬಿತ್ತು. ಅವನು ಹಾಗೆಯೇ ನಿಂತಿದ್ದ. ಹಾವಿನಂತೆ ಹರಿದು ಹೋಗುತ್ತಿತ್ತು, ರೈಲು. ಹೊಗೆಯನ್ನು ಬುಸ್ ಬುಸ್ ಉಗುಳಿ ಚಕ್ ಚಕ್ ಶಬ್ದ ಮಾಡಿ ಹರಿದು ಹೋಗುತ್ತಿತ್ತು, ರೈಲು. ದೂರದ ಊರಿಗೆ ತನ್ನ ತಾಯಿಯನ್ನು ಕರೆದುಕೊಂಡು ಹೋಗುತ್ತಿತ್ತು. ತಾಯಿಯ ಮುಖದಲ್ಲಿ ತರುಣಿ ತವರಿಗೆ ಹೋಗುವ ಸಂತಸ ಉಕ್ಕುತ್ತಿತ್ತು. ಇಳಿಬಿದ್ದ ಗಲ್ಲದಲ್ಲಿಯೇ ನಗುವಿನ ಚಿಲುಮೆ ಚಿಮ್ಮುತಿತ್ತು. ಏನೋ ಒಂದು ವಿಧದಲ್ಲಿದ್ದ ತಾಯಿ ನಿನ್ನೆಯಿಂದ ಸ್ವಲ್ಪ ಸಂತೋಷವಾಗಿಯೇ ಇದ್ದಳು. ಅವಳ ಮುಖದಲ್ಲೊಂದು ಕಳೆ ಮಿನುಗುತ್ತಿತ್ತು. ಸೈನಿಕನ ಸಾಹಸದ ನಸು ಕಳೆಯೂ ಮಿನುಗುತ್ತಿತ್ತು. ತನ್ನ ತಾಯಿ ಊರಿಗೆ ತೆರಳುತ್ತಿದ್ದಾಳೆ. ಇಂದು ಎರಡನೆಯ ಸಲ ಊರಿಗೆ ಹೋಗುತ್ತಿದ್ದಾಳೆ. ಆರು ತಿಂಗಳ ಹಿಂದೆ ಹೋಗಿ ಬಂದಿದ್ದಳು. ಆರು ತಿಂಗಳಿಗೇ ಈ ನಗರವಾಸ ಬೇಸರವಾಯ್ತೇನೋ!

"ಬರೇ ಒಂದಿಷ್ಟು ಅನ್ನ ಬೇಸಿಹಾಕಿ ಕುಂತ್ರಾಯ್ತಪ್ಪ. ಇನ್ನೇನ್ಮಾಡಬೇಕು? ಬೇಸರ!" ಎನ್ನುತ್ತಿದ್ದಳು, ತಾಯಿ.

"ಓದು ಕಲೀತೀಯೇನವ್ವಾ ನಾನು ಹೇಳಿ ಕೊಡ್ತೇನಿ." ಶಂಕರ ಕೇಳಿದ್ದ.

"ಅಯ್ಯೋ ಅದೊಂದು, ನನಗೆ! ಈ ಸಾಯೋ ಹದ್ದಿಗ
ಕಪ್ಪಾ ಓದು. ನನ್ನಾ ದುರಾದೃಷ್ಟ: ನಮ್ಮಪ್ಪ ಓದಿಸ್ಲಿ
ತಾಯಿಯ ಉತ್ತರ.

"ನಾನು; ನಿನ್ನಾ ಮಗ- ಹೇಳಿಕೊಡ್ತೀನವ್ವಾ; ಕಲಿ
ಕಲ್ತಾರೆ ಯಾವದಾದ್ರೂ ಪುಸ್ತಕ ಓದುತ್ತಾ ಕುಳಿತುಕೋ
ಬಹುದು." ಶಂಕರ ಸಲಹೆಯಂತೆ ನುಡಿದಿದ್ದ.

"ಹೂಂ. ನನಗ್ಯಾಕೆ ಮಗು? ನೀನ್ ಓದೋದು ನೋ
ದರೇ ಸಾಕು. ನೀನೇ ಬಿಡುವಿದ್ದಾಗ ಓದು. ನಿಮ್ಮಪ್ಪ ಈಗಿದ್ದದ್ರೆ
ನಿನ್ ನೋಡಿದ್ದಿದ್ರೆ." ಎಂದು ಕಣ್ಣಿಗೆ ಸೆರಗಿಟ್ಟು ದುಃಖಿಸಿದ್ದಳು
ಶಂಕರನೂ ನಿಟ್ಟುಸಿರಿಟ್ಟಿದ್ದ.

ತನ್ನ ತಂದೆ ಚಿಕ್ಕವನಾಗಿದ್ದಾಗಲೇ ಸ್ವರ್ಗವಾಸಿಯಾಗಿದ್ದ
ತಾನು ತನ್ನ ತಾಯಿ ಇಬ್ಬರೇ. ತನ್ನ ಅಕ್ಕ ಗಂಡನಮನೆಯ
ದ್ದಳು, ಆ ವೇಳೆಗೆ. ನಾಲ್ಕಾರು ಮನೆಯ ದಾಸೋಹ ಮಾಡಿ
ಪಾರಾಯಣ ಹೇಳಿ ಜೀವಿಸುತ್ತಿದ್ದ ಬಾಳು ತನ್ನ ತಂದೆಯದು
ಆಗೀಗ ಹೇಳುತ್ತಿದ್ದ ಶಾಸ್ತ್ರದಿಂದಲೂ ನಾಲ್ಕಾರು ದುಡ್ಡು ಸಿಗು
ತ್ತಿತ್ತು. ಸಿದ್ದಯ್ಯನವರೆಂದರೆ ಆ ಊರಿಗೆಲ್ಲಾ ಬೇಕಾದವರು
ಹಾಗೆಂದರೆ ಅವರನ್ನು ಕುಳ್ಳಿರಿಸಿ ಹಾಲು ಎರೆಯುತ್ತಿದ್ದರೆಂದಲ್ಲ
ಅವರು ಆ ಊರಿಗೆ ಬೇಕಾದವರಾದರೂ ಬಡತನ ತಪ್ಪಿದ್ದಲ್ಲ.
ಆದರೂ ಯಾರಾದರೂ ಪಡವಲಕಾಯಿಯನ್ನೋ, ಕುಂಬಳಕಾಯಿ
ಯನ್ನೋ ಇನ್ನಾವುದೋ ತರಕಾರಿಯನ್ನೊ ತಂದುಕೊಡುತ್ತಿದ್ದರು.
ಸುಗ್ಗಿಯಲ್ಲಿ ಊರವರೆಲ್ಲಾ ಧಾನ್ಯ ಕೊಡುತ್ತಿದ್ದರು. ಆ ಕಾಲದಲ್ಲಿ
ಸಂಗ್ರಹವಾದ ದವಸವೇ ವರ್ಷದ ಗಂಜಿ. ಕೊರತೆಯಿಲ್ಲದೆ
ಜೀವಿಸುವಷ್ಟು ಗಂಜಿಯೇನೋ ಆಗುತ್ತಿತ್ತು. ಆದರೆ ಮನೆಗೆ
ಬರುವ ಅತಿಥಿಗಳು ಬಹಳ. ಯಾರೂ ಉಪವಾಸ ಹೋದುದಿಲ್ಲ,
ಆ ಊರಿಗೆ ಬಂದ ಹೊಸಬರು. 'ಗುರುಕೊಟ್ಟುದೆಂ'ದು ಆದರದಿಂದ

ಡಿ ಸಿ, ಅತಿಥಿಯನ್ನು ತೃಪ್ತಿಪಡಿಸಿಯೇ ಕಳಿಸಬೇಕು. ಸೌಜನ್ಯ, ದೀನರನ್ನು ಕಂಡು ಕನಿಕರಿಸುವ ಸುಹೃದಯ- ದ್ದಯ್ಯನವರಿಗೆ ಹುಟ್ಟಿನೊಡನೆಯೇ ಬಂದ ಗುಣಗಳು. ಅಂತೂ ಅವರಿದ್ದಾಗ ಸಂಸಾರ ಹಾಯಾಗಿಯೇ ಸಾಗಿಹೋಗಿತ್ತು. ಅವರ ಕಾಲ ತುಂಬಿ ಬಂದಿತ್ತು. ಅವರು ಇಹಲೋಕ ತೊರೆದು ಸಾಗಿ ದರು. ಹೆಂಡತಿ ಮಕ್ಕಳು ದಿಕ್ಕಿಲ್ಲದಾದರು. ಬೇಕಾಗಿದ್ದ ಸಿದ್ದಯ್ಯ ನವರ ಸಂಸಾರ ಊರವರಿಗೆ ಆಗ ಬೇಡವಾಯ್ತು. 'ಅಯ್ಯೋ ಪಾಪ !' ಎಂದು ಮೊದಲನ್ನುತ್ತಿದ್ದವರೂ ಕೊನೆಕೊನೆಗೆ ಅನಾದರ ದಿಂದಲೇ ಕಾಣಲು ಪ್ರಾರಂಭಿಸಿದರು.

ಜಗತ್ತು ಹೀಗೆಯೇ ಸಾಗುತ್ತಿದೆ. ತಾಯಿ ಅದನ್ನೆಲ್ಲಾ ಹೇಳುತ್ತಿದ್ದಳು. ಶಂಕರ ಆಗಿನ್ನೂ ಪ್ರಪಂಚವೇನೆಂಬುದನ್ನೇ ಅರಿಯದ ಎಳೆಗರು. ತಾಯಿಯ ಹೃದಯದಲ್ಲಿ ಏನೋ ಆಸೆ: ಎಳೆಗರು ಎತ್ತಾಗುತ್ತದೆಂದು. ಒಳಮನೆಯಲ್ಲಿಯೇ ಇದ್ದವಳು ಹೊರಬರಬೇಕಾಯ್ತು; ಬಂದಳು. ಹೊಸಲು ದಾಟಿ, ಹೊಲಕ್ಕೆ ಕಾಲಿಟ್ಟಳು ಕೂಲಿಗಾಗಿ. ಕೂಲಿಯ ಜೀವನ ಮೊದಮೊದಲು ಅಸಹ್ಯವಾಗುತ್ತಿತ್ತು; ಕಷ್ಟವಾಗುತ್ತಿತ್ತು. ಆದರೆ ಅದೂ ಒಗ್ಗಿತು. ಒಗ್ಗಲೇಬೇಕಲ್ಲವೆ ? ಪರಿಸರಣ, ಪ್ರಕೃತಿ ಒಗ್ಗಿಸುತ್ತದೆ; ಒಗ್ಗಿಸು ತ್ತದೆ. ತನ್ನ ಪ್ರವಾಹದೊಡನೆ ತೇಲಿಸಿ ತೇಲಿಸಿ ತೆಗೆದುಕೊಂಡು ಹೋಗುತ್ತದೆ. ಏಳು ಬೀಳುಗಳು ತೇಲುವಾಗ ಕಂಡೇಕಾಣುತ್ತವೆ.

ಸಿದ್ದಯ್ಯನವರು ಮಾಡಿದ್ದ ಆಸ್ತಿಯೆಂದರೆ ಒಂದು ಒಳ್ಳೆಯ ಚಿಕ್ಕ ಮನೆ. ಆ ಊರಿಗೆಲ್ಲಾ ಅಚ್ಚುಕಟ್ಟಾದ, ಸುಂದರ ಮನೆ ಯೆಂದರೆ- ಮಠದ ಸಿದ್ದಯ್ಯನವರದು. ಗೋಡೆಗೆ ಗಾರೆ ಹಾಕಿದ ಮನೆ ದೂರದಿಂದಲೇ, ಮರಗಳ ನಡುವೆ, ಮೊದಲು ಕಾಣುತ್ತದೆ. ಗಾಳಿ ಬೆಳಕು ತುಂಬಿ ಹರಿಯುತ್ತವೆ. ಹಿತ್ತಿಲಲ್ಲಿ ನಿಂತು ನೋಡಿ ದರೆ, ಹತ್ತಿರದಲ್ಲಿಯೇ ಕಾಣುವ ಬೆಟ್ಟ. ಎಡಗಡೆಗೆ ಸರಕಾರಿ

ರಸ್ತೆಯ ಎರಡು ಮಗ್ಗಲಿಗೂ ಸಾಲಾಗಿ ನಿಂತು ಕೊಡೆನಿಡಿ
ಮರಗಳು. ಬಲಗಡೆಗೆ ಹಳೆಯ ದೇಗುಲವೊಂದು ಕಣ್ಗೊಳಿಸ
ತ್ತದೆ. ಅಂತೂ ಒಂದು ಸುಂದರ ಮನೆ. ಆ ಊರಿನಲ್ಲಿ ಇ
ಒಂದು ಮಾಪರಿಯ ಮನೆ. ಪರ ಊರವರು ಹಾಗೆ ಹಾದ
ಹೋದರೆ, 'ಸೈ. ಎಂತಾ ಪಸಂದೈತೆ !' ಎನ್ನುವ ಮನೆ.

ಮನೆಯೇನೋ ಹಾಗಿತ್ತು. ಆದರೆ ಸಿದ್ದಯ್ಯನವರ ಕಾಲ
ನಂತರ ದಿನ ದಿನಕ್ಕೂ ಸ್ಥಿತಿ ಕೆಡುತ್ತಾ ಬಂತು. ಶಂಕರ ಬೆ
ಯುತ್ತ ಬಂದ. ಖರ್ಚು ಹೆಚ್ಚುತ್ತಲೂ ಬಂತು. ಅಂತೆಯೆ
ಮಗನ ಅಭ್ಯುದಯಕ್ಕಾಗಿ ಸಂತತವೂ ಚಿಂತಿಸುವ ತಾಯಿಗೆ ದುಡಿ
ತವೂ ವಿಶಾಲವಾಯ್ತು. ಕ್ಷಣ ಕುಳಿತುಕೊಳ್ಳಲು ಬಿಡುವಿಲ್ಲ
ಇದ್ದುದೊಂದು ಆಕಳನ್ನು ಮೈತೊಳೆದು, ಹೊರಹೊಡೆದು, ಸೆಗಣಿ
ತುಂಬಿಹಾಕಿ ಕೈ ತೊಳೆದಾಗ ಸೂರ್ಯ ಇಣಿಕಿಹಾಕುತ್ತಿದ್ದ
ಶಂಕರನನ್ನು ಎಬ್ಬಿಸಿ, ನೀರು ಹಾಕಿಸಿಕೊಂಡು, ಆಕಳನ್ನು
ಹೊಡೆದುಕೊಂಡುಬರಲು ಕಳಿಸಿ, ತಾನು ಅಡುಗೆಯ ಮನೆಯ
ಕೆಲಸಕ್ಕೆ ತೊಡಗುವಳು. ಬಂದ ಆಕಳನ್ನು ಹಿಂಡಿ, ಶಂಕರನಿಗೆ
ಒಂದು ಬಟ್ಟಲು ಹಾಲು ಕೊಟ್ಟು, ತಂಗಳು ಮುದ್ದೆಯನ್ನೊ
ಅನ್ನವನ್ನೋ ನೀಡಿ ಶಾಲೆಗೆ ಕಳಿಸುವಳು. ಶಂಕರ ಮನೆಗೆ
ಬರುವ ವೇಳೆಗೆ ಮನೆಗೆಲಸ ಮುಗಿಸಿ ಅಡುಗೆ ಮಾಡಿ ಕಾದಿರು
ವಳು. ಅವನಿಗೆ ಊಟಕ್ಕೆ ಇಟ್ಟು, ತಾನುಂಡು, ನೆಲುವಿನ ಮೇಲೆ
ಆಹಾರವನ್ನಿಟ್ಟು ಬೀಗದಕ್ಕೆ ಮಗನಕೈಗೆ ಕೊಟ್ಟು ತಾನು ಹೊಲ
ಗೆಲಸಕ್ಕೆ ಕೂಲಿ ಹೋಗುವಳು. ಸಂಜೆ ಬಂದವಳೇ ಅಡುಗೆ
ಮಾಡಿ, ಆಕಳನ್ನು ಕರೆದು, ಇಬ್ಬರೂ ಉಂಡಮೇಲೆ, ತಾನು
ಹಾಗೆಯೇ ಬರಿಯ ನೆಲದ ಮೇಲೆ ಉರುಳುವಳು. ಶಂಕರ
ಗಟ್ಟಿಯಾಗಿ ತನ್ನ ಪಾಠವನ್ನು ಓದಿಕೊಳ್ಳುವನು.

ಮಗನು ಓದುವ ಒಂದೊಂದು ಪದ ಕಿವಿಗೆ ಬಿದ್ದಾಗಲೆಲ್ಲಾ

ತಾಯಿಯ ಹೃದಯ ಆನಂದದಲ್ಲಿ ತೇಲುವುದು. ಅವಳ ದುಃಖವೆಲ್ಲಾ ಮರೆಯಾಗಿ ಭವಿಷ್ಯದ ಸುಂದರ ಕನಸು ಗುಡಿಕಟ್ಟುವುದು. ತನ್ನ ಮಗ ಬಹಳ ಓದಬೇಕು. ಸರಕಾರಿ ನೌಕರನಾಗಬೇಕು. ಮದುವೆಯಾಗಿ ಹೂಡಿದ ಸಂಸಾರದಲ್ಲಿ ತಾನು ಆನಂದದಿಂದ ಓಡಿಯಾಡಬೇಕು. ಆ ಆಸೆ ಅವಳೊಬ್ಬಳಲ್ಲಿಯೇ ತುಡಿಯಲು ಬಿಡದೆ ಶಂಕರನಿಗೂ ಹೇಳುವಳು: 'ಮಗೂ ನೀನು ಚನ್ನಾಗಿ ಓದಬೇಕು. ಕಲೆಕ್ಟರಾಗಬೇಕು!'

ಕಲೆಕ್ಟರಾಗಬೇಕು!

ಹೌದು ತಾಯಿ ಹಾಗೆ ಆಸಿಸುತ್ತಿದ್ದಳು; ಹಾರೈಸುತ್ತಿದ್ದಳು. ದಿನ ದಿನವೂ ಆಶೀರ್ವದಿಸುತ್ತಿದ್ದಳು. ಬಡತನ, ಹಸಿವೆಯಗಾಳಿ ಬೀಸುತ್ತಿದ್ದರೂ ಕುಡಿವರಿಯುವ ಬಳ್ಳಿಗೆ ನೆರಕೆಯಾಗಿದ್ದಳು, ತಾಯಿ. ಕಂಡಿ ಕಂಡಿ ಬಿದ್ದಿದ್ದರೂ ಅದನ್ನು ಹೇಗೋ ಸರಿಪಡಿಸಿ ಸ್ವಲ್ಪವೂ ಚಳಿಯಾಗದಂತೆ ಬಿಸಿಯಾಗಿಯೇ ವಾತಾವರಣವನ್ನಿಟ್ಟಿದ್ದಳು. ಸರಿಯಾದ ಗೊಬ್ಬರ, ನೀರು, ಬೆಳಕನ್ನು ಈಯುತ್ತಿದ್ದಳು, ತನ್ನ ತಾಯಿ. ಹಾಗೆ ಬೆಳೆಸಿದ್ದಳು. ಮಮತೆ, ಪ್ರೀತಿ, ಕರುಣೆ ತಾನು ಬೆಳೆದಂತೆಲ್ಲಾ ಹಿಗ್ಗುತ್ತಿದ್ದುವು, ಹಿರಿದಾಗುತ್ತಿದ್ದವು; ವಿಶಾಲವಾಗುತ್ತಿದ್ದವು. ನೆರಕೆ ಸಡಿಲುತ್ತಿತ್ತು; ಜೀರ್ಣವಾಗುತ್ತಿತ್ತು. ಆ ನೆರಕೆಯ ಆಶ್ರಯದಲ್ಲಿಯೇ ಬೆಳೆದ ಬಳ್ಳಿಗೆ ಒಮ್ಮೊಮ್ಮೆ ಬಿಸಿ ತಾಗಿದಾಗ, ನೀರಿಲ್ಲದಾಗ, ಹಸಿವೆಯಾದಾಗ ಕೊರಗುವುದುಂಟು, ತನ್ನ ನೆರಕೆಯನ್ನು ಹೀನೈಸುವುದುಂಟು; ಹಟ ಹಿಡಿಯುವುದುಂಟು!

ಹೌದು ಹಟ!

ಎಂತಹ ಹಟ! ತಾಯಿ ಕಣ್ಣೀರ ಕರೆದರೂ ಕರಗಲಾರದ ಹಟ! ತಾನು ಬೆಳೆದು ಹಿರಿಯನಾಗಿದ್ದಿದ್ದರೂ, ಹೈಸ್ಕೂಲಿನಲ್ಲಿ ಓದುತ್ತಿದ್ದರೂ ಹಟ! ತಾಯಿಯನ್ನು ಬಯ್ಯುವುದು. ಒಮ್ಮೊಮ್ಮೆ ಹೊಡೆಯುವುದು! ಅಯ್ಯೋ ಅಂತಹ ತಾಯಿಯನ್ನೂ ತಾನು

ಹೊಡೆಯುತ್ತಿದ್ದೆನಲ್ಲಾ ! ತನ್ನ ಒಡಲನ್ನೇ ತೇದು ತೇದು ತ
ಓದಿಗೆ ಎರೆದ ಆ ತಾಯ ಹೃದಯಕ್ಕೆ ಎಂತಹ ನೋವನ್ನಿತ್ತೆನಲ್ಲ
ಆಕೆ ಒಮ್ಮೆಯಾದರೂ ನೊಂದುದುಂಟೆ ? ಕಹಿಯಾದುದುಂಟೆ
ಒಳಗೊಳಗೇ ನೋಯುತ್ತಿದ್ದಿರಬಹುದು. ಆದರೆ ತನಗೆ ಕಹಿ
ಯಾದುದಿಲ್ಲ ! ಇಲ್ಲ; ಕಹಿಯಾದುದಿಲ್ಲ. ಆ ತಾಯಿಯಿಂದ ಸಿಹಿ
ಯಲ್ಲದೆ ಕಹಿ ಹೊರಸೂಸುವುದುಂಟೆ ? ಉಂಟೆ ?

'ಚಂದನವ ಕಡಿದು, ಕೊರೆದು, ತೇವಡೆ
ನೊಂದೆನೆಂದು ಕಂಪಬಿಟ್ಟಿತ್ತೆ ?
ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿದಿತ್ತೆ ?
ಸಂದು ಸಂದು ಕಡಿದು ಕಬ್ಬನು ತಂದು ಗಾಣದಲಿಕ್ಕೆ,
ಬೆಂದ ಪಾಕಂಗಳು ಸಕ್ಕರೆಯಾಗಿ
ನೊಂದೆನೆಂದು ಸವಿಯ ಬಿಟ್ಟಿತ್ತೆ ?' ಇಲ್ಲ; ಇಲ್ಲ !

ಅಂತವಳು ತನ್ನ ತಾಯಿ !

ಅಂತವಳು ತನ್ನ ತಾಯಿ ! ಈಗ ತನ್ನ ಊರಿಗೆ ತೆರಳು ತಿದ್ದಾಳೆ. ತಾನು ದುಡಿದ, ತನ್ನನ್ನು ಎತ್ತಿದ ಆ ಸ್ಥಳಕ್ಕೆ ಈಗ ಹೋಗುತಿದ್ದಾಳೆ. ಆ ಊರಿನ ಮೇಲೆ ಏನು ಮಮತೆಯೋ ! ಎಂಥ ಪ್ರೀತಿಯೋ ! ಅವಳ ಮಮತೆಯ ಮನೆಯೆಡೆಗೆ ಕರೆದೊಯ್ಯುತ್ತಿದೆ, ಆ ರೈಲು. ಹೌದು ರೈಲು ಬುಸ್ ಬುಸ್ ಹೊಗೆ ಕಾರುತ್ತಿದೆ; ಹರಿಯುತ್ತಿದೆ. ಡೊಂಕಾಗಿ ಹರಿಯುತ್ತಿದೆ. ಚಕ್ ಚಕ್ ಶಬ್ದಮಾಡಿ ಉರುಳುತ್ತಿದೆ. ತಾಯಿ ದೂರ ದೂರವಾಗು ತಿದ್ದಾಳೆ. ದೂರ ದೂರವಾಗುತಿದ್ದಾಳೆ. ಅವಳು ಎಂದು ಬರುತ್ತಾಳೋ ! "ಎಂದು ಬರುತ್ತೀ" ಎಂದೂ ಕೇಳಲಿಲ್ಲ ! ಕೇಳಲಿಲ್ಲವೇಕೆ ? ತಾನು ಯಾವುದೋ ಸ್ಥಿತಿಯಲ್ಲಿದ್ದೆ ! ಯಾವುದು ಆ ಸ್ಥಿತಿ ?

ಶಂಕರ ಹಾಗೆಯೇ ದಿಟ್ಟಿಸುತ್ತಿದ್ದ. ಕಣ್ಣು ತುಂಬಿತ್ತು. ಅವನು ಹಾಗೆಯೇ ನಿಂತಿದ್ದ. ಹೊಗೆಯನ್ನು ಉಗುಳುಗುಳಿ ರೈಲು ದೂರ ದೂರ ಹೋಗುತ್ತಿತ್ತು. ಸರಿ ಸರಿದು, ಗಿಡ್ಡವಾಗಿ, ದುಂಡಾಗಿ ಚಿಕ್ಕೆಯಾಗಿ ಸಾಗುತ್ತಿತ್ತು. ಕರಗುವನಿತು ದೂರ ವಾಯ್ತು. ಕರಗಿಯೂ ಆಯ್ತು. ರೈಲು ಕರಗಿಹೋಯ್ತು. ತಾಯಿಯನ್ನು ಹೊತ್ತುಕೊಂಡು ರೈಲು ಕರಗಿಹೋಯ್ತು.

ಶಂಕರ ಹಾಗೆಯೇ ನಿಂತಿದ್ದವನು, ಏಕಾಏಕಿ ಏನೋ ನೆನೆಸಿಕೊಂಡ. ಬಿರ ಬಿರನೆ ಹೊರಟ. ಪ್ಲಾಟ್‌ಫಾರಂ ಟಿಕೆಟ್ ಕೇಳಿದವನನ್ನೂ ಲೆಕ್ಕಿಸದೆ ನಡೆದುಬಿಟ್ಟ. ಬಿರ ಬಿರನೆ ಹೆಜ್ಜೆ ಇಡುತ್ತಿದ್ದಾನೆ, ಮನೆಯಕಡೆ. ನಗರವನ್ನೊಮ್ಮೆ ನೋಡಿದ. ಎಳೆಯ ರವಿಕಿರಣಗಳು ಚಿಮ್ಮಿ ಹೊನ್ನಕಾಂತಿಯನ್ನಿತ್ತಿವೆ, ಮೇಲೆದ್ದ ಮಹಡಿಗಳಿಗೆ. ಅಲ್ಲಲ್ಲಿ ಹೊಗೆ ಕಾರುತ್ತಿವೆ, ಕಾರ್ಖಾನೆಗಳು. 'ಓss' ಎಂದು ಒದರುತ್ತಿವೆ, ಯಂತ್ರಗಳು. ತಣ್ಣನೆಯ ಗಾಳಿ ತೀಡಿಬರುತ್ತಿದೆ. ಮೈಕೂದಲನ್ನೆಲ್ಲಾ ನಿಮಿರೇಳಿಸುವ ಕುಳಿರಗಾಳಿ ಹಾವಾಗಿ ಸಳಸಳ ಸುತ್ತಿ ಹರಿಯುತ್ತಿದೆ. ಶಂಕರ ಸಾಗುತ್ತಲೇ ಇದ್ದಾನೆ. ನಗರವನ್ನು ಹಕ್ಕಿನೋಟದಿಂದ ನೋಡಿ ಮನಸ್ಸಿನಲ್ಲಿಯೇ ನಕ್ಕ; ಮನಸ್ಸಿನಲ್ಲಿಯೇ ಕಿಡಿಕಾರಿದ. ತಲೆಯಲ್ಲಿ ಏನೋ ಗೊಂಯಿಗುಟ್ಟುತ್ತಿತ್ತು. ಮನಸ್ಸು ತಾಳಹಾಕುತ್ತಿತ್ತು. ಅವನು ಹೆಜ್ಜೆಹಾಕುತ್ತಿದ್ದ. ದೇಹ ಸಾಗುತ್ತಿತ್ತು. 'ಪೋಂ ಪೋಂ'- ಬಸ್ಸು, ಕಾರು ಬರ್ ಬರ್ ಹಾದು ಹೋಗುತ್ತಿದ್ದುವು. 'ಹೇಹೇ. ದಾರಿ !'- ಜಟಕ ಓಡುತ್ತಿದ್ದುವು. ಗುಂಪು ಗುಂಪು ಜನ ಅವಸ ರವಸರವಾಗಿ ಸಾಗುತ್ತಿದ್ದರು. ಶಂಕರನೂ ಸಾಗುತ್ತಿದ್ದ.

ಮನೆಗೆ ಹೋಗಿ ಕೋಣೆ ಹೊಕ್ಕವನು ಕುರ್ಚಿಯಮೇಲೆ ಸುಮ್ಮನೇ ಕುಳಿತುಬಿಟ್ಟ. ಅವನ ಮನಸ್ಸು ಬರಿದಾಗಿತ್ತು. ಏನೇನೂ ಎನೆಷ್ಟೂ ಇದ್ದಂತೆ ತೋರಲಿಲ್ಲ. ಮನಸ್ಸು ಬರಡಾ

ಗಿತ್ತು. ಅಲ್ಲಿ ಹಸಿಯಿಲ್ಲ; ಚಿಗುರಿಲ್ಲ. ಏನೇನೋ ಯೋಚಿಸಿ
ಏನೇನೂ ತೋರಲಿಲ್ಲ. ಎಲ್ಲವೂ ಬರಿದೋ ಬರಿದು. "ಮ
ಶೂನ್ಯ, ಮನ ಶೂನ್ಯ ಬೀಡು ಶೂನ್ಯಮಕ್ಕಟಾ!" ದುರ್ಯೋಧನ
ಸ್ಥಿತಿಯಾಗಿತ್ತು, ಶಂಕರನಿಗೆ. ಎಡಗಡೆ ತಿರುಗಿದ ಕಿಟಿಕಿ ಹಾಗೆಯೆ
ಮುಚ್ಚಿತ್ತು. ಗಡಿಯಾರ ನಿಂತಿತ್ತು. ರಾತ್ರಿಯ ನಿತ್ಯಾಹಾರವಿಲ್ಲ
ಪ್ರಾಣರಹಿತವಾಗಿ ಸಪ್ಪಗೆ ಮಿನಗುತ್ತಿತ್ತು. ಮಲ್ಲಿಗೆಬಳ್ಳಿ ಜೋ
ಬಿದ್ದಿತ್ತು.

ಹೌದು. ಮಲ್ಲಿಗೆ ಬಳ್ಳಿ ಜೋತುಬಿದ್ದಿತ್ತು.

ಶಂಕರನ ಮನ ತುಂಬಿಬಂತು. ಎದೆ ತುಂಬಿಬಂತು
ಕತ್ತು ತುಂಬಿಬಂತು; ಕಣ್ಣೂ ತುಂಬಿಬಂದವು. ಎಲ್ಲವೂ ಕಹಿ
ಎಲ್ಲವೂ ಕಹಿ. ನಿನ್ನೆಯ ಘಟನೆಗಳೆಲ್ಲಾ ಒಮ್ಮೆ ನದಿ ಗರ್ಜಿಸಿ
ಭೋರೆಂದು ಹಾದುಹೋದಂತೆ ಹಾದು ಹೋದುವು: ಕಲಸು
ಕಲಸಾಗಿ, ಕಲಕು ಕಲಕಾಗಿ; ಛಿದ್ರ ಛಿದ್ರವಾಗಿ ಆಕಾಶ ಮೊಗಬ
ಕೊಂಡಹಾಗೆ. ತಡವಾಗಿ ಹೋಗಿದ್ದ ಶಂಕರ, ಕಾಲೇಜಿಗೆ. ಬಸ್ಸಿ
ನಲ್ಲಿ ಸಿಕ್ಕಿದ್ದಳು ಲಲಿತ. ಆಕೆ ಪತಿತಳಾದುದನ್ನು ಪಾರ್ಕಿನಲ್ಲಿ
ಕಣ್ಣೀರ ಕರೆದು ಹೇಳಿದ್ದಳು. ರಾತ್ರಿ ಮನೆಗೆ ಭಾರವಾಗಿ ಬಂದಿದ್ದ
ಊಟಮಾಡದೆ ಮಲಗಿದ. ಆದರೆ ಲಲಿತೆಯನ್ನು ಕಚ್ಚಿದ್ದ ನಾಗ
ವೇಣಿ ಆರುತಿಂಗಳ ಹಿಂದಿನ ಕದವನ್ನು ದೂಡಿಕೊಂಡು ಬಂದಿದ್ದಳು
ಧಡಾರನೆ ಕಿಟಿಕಿಯನ್ನು ಹಾಕಿದ್ದ. ತಾಯಿ ಬಂದು ಎಚ್ಚರಿಸಿ
ದ್ದಳು, ತಾನು, ಮರುದಿನ, ಊರಿಗೆ ಹೋಗಿಬರುವುದಾಗಿ...
ತಲೆನೋಯುತ್ತಿತ್ತು.... ಮಲ್ಲಿಗೆ ಬಳ್ಳಿ ಕತ್ತರಿಸಿ ಬಿದ್ದಿತ್ತು.
ನಿನ್ನೆಯ ಘಟನೆಗಳು ಕಲಸುಹೊಲಸಾಗಿ ಈಜಿ ಹೋದವು;
ರಭಸದಿಂದ ಸಾಗಿಹೋದವು. ಈಗ ಗಡಿಯಾರನಿಂತಿತ್ತು; ಮಲ್ಲಿಗೆ
ಬಳ್ಳಿ ಜೋತುಬಿದ್ದಿತ್ತು.

ಶಂಕರನಿಗೆ ಅಲ್ಲಿ ಕುಳಿತುಕೊಳ್ಳುವಂತಾಗಲಿಲ್ಲ. ಎದ್ದು

ಕೋಣೆಯಲ್ಲಿ ಸುತ್ತಾಡಿದ. ಲಲಿತೆಯ ನೆನಪಾಯಿತು. ಈಗ ಲಲಿತ ಹೇಗಿದ್ದಾಳೋ ! ಹೇಗಿದ್ದಾಳೋ ! ನಿನ್ನೆ ಸಂಜೆ ಬಸ್ಸು ಹತ್ತಿಸಿ ಬಂದಿದ್ದ. ಅವಳು ಮನೆಗೆ ಹೋದಳೋ ಇಲ್ಲವೋ ! ಹೋಗಿ ನೋಡಿ ಬರಬೇಕು. ಅವಳನ್ನು ಈಗ ಹೇಗೆ ಕಾಣ ಬೇಕು ? ಆಕೆ ಹೇಗಿದ್ದಾಳೋ ! ಹೇಗಿದ್ದಾಳೋ ? ಇದ್ದಾಳೋ, ಇಲ್ಲವೋ !!!

ಮನಸ್ಸು ಬಿಸಿಯೇರಿತು. ಹೊಯ್ದಾಡಿತು. ಕುದಿಯೆಸರಿ ನಲ್ಲಿ ಮುದ್ದೆ ಕತಕತನೆ ಕುದಿದು ಬೇಯುತ್ತಿತ್ತು. ಟಿಸ್ ಪುಸ್ ಎಂದು ಉಗಿಯನ್ನೂ ಉಸಿರಿಡುತ್ತಿತ್ತು. ಸುಂಯ್ ಸುಂಯ್ ಎಂದು ಮಡಕೆ ಅಳಲುತ್ತಿತ್ತು. ಮನಸ್ಸು ಕುದಿಯುತ್ತಿತ್ತು. ಅಲ್ಲಿ ನಿಲ್ಲಲಾಗಲಿಲ್ಲ. ಹಾಗೆಯೇ ಹೊರಟುಬಿಟ್ಟ. ಬಾಚದ ಕೂದಲು ಸಿಮಿರಿ ಹರಡಿದ್ದವು. ಅರ್ಧ ತೋಳಿನ ಅಂಗಿ, ನಡು ವಿಗೆ ಸುತ್ತಿದೊಂದು ಲುಂಗಿ- ಹಾಗೆಯೇ ಹೊರಟುಬಿಟ್ಟ. ಬಾಗಿ ಲಿಗೆ ಬೀಗ ಹಾಕಿದ್ದೂ ತಡವೇ ಹೊರಟುಬಿಟ್ಟ. ತಲೆ ಸುಡು ತ್ತಲೇ ಇತ್ತು. ಮನಸ್ಸು ತುಂಬಿತ್ತು. ಕಹಿರಸ ತುಳುಕುತ್ತಿತ್ತು. ಅವನು ಬೀಸಿ ಬೀಸಿ ಹೆಜ್ಜೆ ಇಡುತ್ತಿದ್ದ. ಹಿಂದೆ ತಾನು ಕಾಲೇ ಜಿನಲ್ಲಿ ಓದುತ್ತಿದ್ದಾಗ ಅವರ ಮನೆಗೆ ಹೋಗುತ್ತಿದ್ದಾಗ ಹೇಗಿರು ತ್ತಿದ್ದೆ ? ಈಗ ! ? ಅಯ್ಯೋ ಈಗ ! ? ಮನಸ್ಸು ಕಲಕಿಬಿಟ್ಟಿತ್ತು. ಆ ಜೀವನ, ಆ ಬಾಳು- ಅದು ಹಾಗೆ ಹಾಯಿತು. ಕಣ್ಣಿಗೆ ಕಟ್ಟಿ ಬಂತು. ಆ ಅಂದು ಹೋಗುತ್ತಿದ್ದ ನಾನು ನಾನೇನು ? ಅವನು ನಾನೆ ? ನಾನೇ ಅವನಾಗಿದ್ದೆನೇನು ? ಅವನು ಎಂಥವನು ? ಎಂಥವನು ಅವನು ?

ತಾಯ ಮಾತ ಮೀರಿ ಧೈರ್ಯದಿಂದ ಹೋಗಿದ್ದ. ಎಂತೆಂಥ ಹಿರಿಯರ ಜೀವನ ಚರಿತ್ರೆಯನ್ನು ಓದಿ ಶಂಕರನ ಧೈರ್ಯ ಇಮ್ಮಡಿಸಿತ್ತು. ಗೋಖಲೆ ಬೀದಿ ದೀಪದಲ್ಲಿ ಓದಲಿಲ್ಲವೇ ?

ವಿವೇಕಾನಂದರು ವಿದೇಶದಲ್ಲಿ ಹೊಟ್ಟೆಗಿಲ್ಲದೆ ನರಳಲಿಲ್ಲವೆ? ಹ
ಓದಿದ ಗೋಖಲೆ ಮಹಾನಾಯಕರಾಗಿ ಸಾಗಿದರು; ಹಾಗೆ ನರಳ
ವಿವೇಕಾನಂದರು ಜಗದ್ವಿಖ್ಯಾತಿಯನ್ನು ಪಡೆದ ಮಹರ್ಷಿಯಾದರ
ತಾನೇಕೆ ಆಗಬಾರದು? ಹೌದು ತಾನೇಕೆ ಆಗಬಾರದು? ಮ
ಸ್ಸಿನ ಇದಿರು ಎಂತಹ ಕೋಟಲೆಯ ಕೋಟೆಗಳೂ ನಿಲ್ಲಲಾರವ
ಇಷ್ಟುದಿನ ತಾನು ಕಷ್ಟಪಟ್ಟಿಲ್ಲವೆ? ಹೈಸ್ಕೂಲು ವಿದ್ಯಾಭ್ಯಾಸದ
ಏನೆಲ್ಲಾ ಕಷ್ಟಗಳನ್ನು ಪಟ್ಟಿದ್ದರೂ ಅದರಲ್ಲಿ ಜಯಶಾಲಿಯಾ
ದ್ದೇನೆ. ಶಾಲೆಗೆ ಮೊದಲಿಗನಾಗಿ ಬಂದಿದ್ದೇನೆ! ಏಕೆ ಜಿಲ್ಲೆ
ಮೊದಲಿಗನಾಗಿ ಪಾಸಾಗಿದ್ದೇನೆ! ಕಾಲೇಜಿನಲ್ಲಿಯೂ ಯಾ
ಓದಬಾರದು? ಇದುವರಿವಿಗೂ ಈ ಪಟ್ಟಣದ ವರ್ತಕರನ
ಕೇಳಿಲ್ಲ. ಕೇಳಿದರೆ, ದೊಡ್ಡವರು 'ಇಲ್ಲ' ಎನ್ನುತ್ತಾರೆಯೇ
ಎಲ್ಲಿಯಾದರೂ ಉಂಟೆ? ಒಬ್ಬ ಬಡ ವಿದ್ಯಾರ್ಥಿ ಮನೆಂ
ಬಾಗಿಲಿಗೆ ಬಂದು ಬೇಡಿದರೆ ನಾಲ್ಕು ದುಡ್ಡು ಕೊಡಲಾರರೆ
ಕೊಟ್ಟೇ ಕೊಡುತ್ತಾರೆ. ಇದುವರೆವಿಗೂ ತನ್ನ ತಾಯ ಜೀ
ವನ್ನುಂಡು ಬೆಳೆದಿದ್ದ. ಇಲ್ಲಿಯುವರಿವಿಗೂ ಓದಿಯಾಗಿತ್ತು
ತಾಯಿಯ ಸ್ಥಿತಿಯಲ್ಲಿ ತಾನು ಕಾಲೇಜಿನಲ್ಲಿ ಓದುವುದು ಕಷ್ಟ
ಬಹಳ ಕಷ್ಟ.

ತಾಯಿಯೂ ಹಾಗೆಯೇ ಹೇಳಿದ್ದಳು.

"ಮಗೂ, ಇಲ್ಲೀವರೆಗೂ ಕೊಟ್ಟೆ. ಇನ್‌ಮೇಲೆ ಆಗ
ಕಿಲ್ಲಪ್ಪ. ಕಾಲೇಜಿನಾಗೆ ಓದಬೇಕಂದ್ರೆ ಕಮ್ಮಿ ರೊಕ್ಕ ಬೇಕಾ
ಅದ್ಕೆ ನಮ್ಮಿಂದ ಎಲ್ಲಿ ಸಾಧ್ಯಪ್ಪಾ? ನನಗೂ ಆಸೆ ಇತ್ತು. ನೀನ
ಕಲೆಕ್ಟ್ರಾಗೋವರೆಗೂ ಓದಬೇಕೆಂದು. ಆದ್ರೆ ಈಗಿನ ಸ್ಥಿತಿಯ
ಹ್ಯಾಗಪ್ಪಾ? ನಮ್ಮಂತವರ್ಗೆಲ್ಲಾ ಯಾಕಪ್ಪಾ? ಸುಮ್ನೆ ಇಲ್ಲಿ
ಎಲ್ಲಾದ್ರೂ ಗುಮಾಸ್ತನಾಗಿರು, ಇಲ್ದಿದ್ರೆ ಮೇಷ್ಟ್ರಾಗು."

ಅವಳ ಮಾತಿನಲ್ಲಿ ಸತ್ಯ ತುಂಬಿತ್ತೆಂದು ಶಂಕರನಿಗೆ ಗೊತ್ತಿತ್ತು

ಆದರೂ ತನ್ನ ಹಟ, ಮಹತ್ವಾಕಾಂಕ್ಷೆ ಅವನನ್ನು ಮುಂದೆ ಮುಂದೆ ಹೆಜ್ಜೆಯನ್ನಿಡಿಸುತ್ತಿತ್ತು; ದೂರ ದೂರ ದೂಡುತ್ತಿತ್ತು. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ತೋರುತ್ತಿತ್ತು. ಬೆಳ್ಳಗೆ ಅಮೃತ ಶಿಲೆಯಲ್ಲಿಯೇ ಮಿನುಗುತ್ತಿತ್ತು. ನೀಲಿಯ ಸೆರಗಿನ ಮುಸುಗಿಟ್ಟು ಕುಲು ಕುಲು ನಗುತ್ತಿತ್ತು. ಸುಂದರ ನೋಟ ಕಣ್ಮುಂದೆ ಕುಣಿಯುತ್ತಿತ್ತು. ಮನೋಹರವಾಗಿಯೇ ಕುಣಿಯುತ್ತಿತ್ತು.

ಹೈಸ್ಕೂಲಿನಲ್ಲಿ ಎಲ್ಲರು ಪ್ರೀತಿಸಿದಂತೆಯೇ ಆ ಕಾಲೇಜಿನಲ್ಲಿಯೂ ತನ್ನನ್ನು ಎಲ್ಲರೂ ಪ್ರೀತಿಸುತ್ತಾರೆ. ಪಾಠಗಳಲ್ಲಿ ಯಾರಿಗೂ ಹಿಂದೆಯಿಲ್ಲ. ಪ್ರತಿಯೊಂದು ವಿಷಯದಲ್ಲಿ ಪೂರ್ಣಜ್ಞ. ಎಲ್ಲ ವಿದ್ಯಾರ್ಥಿಗಳೂ ತನ್ನನ್ನು ಗೌರವಿಸುವವರೆ! ಎಲ್ಲ ಉಪಾಧ್ಯಾಯರೂ ತನ್ನನು ಪ್ರೀತಿಸುವವರೇ! ಎಲ್ಲಿ ನೋಡಿದರೂ ಉತ್ಸಾಹ; ಹೆಮ್ಮೆ, ಪ್ರೀತಿ, ಗೌರವ ಸಾಲುಸಾಲಾಗಿ ಬರುತ್ತಿವೆ. ಯಾರೋ ಕಾಲೇಜ ಫೀಯನ್ನು ಕೊಡುತ್ತಿದ್ದಾರೆ; ಮತ್ತಾರೋ ಪುಸ್ತಕಗಳನ್ನು ಕೊಟ್ಟರು. ಅಲ್ಲಿ ಯಾವುದಕ್ಕೂ ಕೊರತೆಯಿಲ್ಲ; ಯಾವುದಕ್ಕೂ ತೊಂದರೆಯಿಲ್ಲ. ಪದವೀಧರನಾಗುವವರೆವಿಗೂ ಸುಖಸಂತಸಪಲ್ಲಿಯೇ ಕಾಲ ಕಳೆಯಬಹುದು. ತಾನು ಪದವೀಧರನಾದರೆ...!

ಆಹಾ ತಾನು ಪದವೀಧರನಾದರೆ? ಆದರೆ!

ಶಂಕರನ ಮೈ ಜುಂ ಎಂದಿತ್ತು. ತಾನಾವುದೋ ಕೆಲಸದಲ್ಲಿ, ಅಧಿಕಾರದಲ್ಲಿದ್ದಾನೆ. ತಾಯಿಯ ಒಳಬಯಕೆ ಅರಳಿವೆ. ಘಮಘಮಿಸುತ್ತಿದೆ. ನಾಲ್ಕಾರು, ಹತ್ತಾರು ದುಂಬಿಗಳ ಬೆಂಬಲ ಜೀಗುಟ್ಟುತ್ತಿದೆ. ತಾನಾಗ ಹಿರಿಯ ಸಾಹಿತಿಯೂ ಹೌದು. ಈಗೀಗ ಕಿರಿದಾಗಿ ಕವನಿಸುತ್ತಿರುವವನು ಅಂದು ಮಹಾ ಪಂಡಿತ ಕವಿ. ಬೇಂದ್ರೆ, ಕುವೆಂಪು, ಪು. ತಿ. ನ, ಅಡಿಗರ ಸಮಸಮ. ಇಡೀ ಕನ್ನಡನಾಡೇ ತನ್ನನ್ನು ಹೊಗಳುತ್ತದೆ; ಗೌರವಿಸುತ್ತದೆ; ಕಾಣಲು ಮುನ್ನುಗ್ಗುತ್ತದೆ. ತನ್ನ ಪೂಜ್ಯ ಗುರು ಶಾಮರಾಯರು ಹೇಳಿ

ಲ್ಲವೆ ? "ನಿನಗೆ ಒಳ್ಳೆಯ ಭವಿಷ್ಯವಿದೆ. ಮುಂದುವರಿ. ನಿನ್ನಂಥ ನಲ್ಲದೆ ಬೇರೆ ಯಾವನು ಕಾಲೇಜಿನಲ್ಲಿ ಓದಬೇಕು ? ನಿ ಅಭ್ಯಾಸ ಇಲ್ಲಿಗೇ ಕೊನೆಗಾಣದಿರಲಿ !" ಎಂದು ? ಹೌದು, ಗುರುವಾಕ್ಯ ಸುಳ್ಳಾಗದು. ತನಗೆ ಉಜ್ವಲ ಭವಿಷ್ಯವಿದೆ. ಅ ನಕ್ಷತ್ರ ಮಿನುಗುತ್ತಿವೆ; ಚಂದ್ರ ನಗುತ್ತಿದ್ದಾನೆ. ಮಂದಾನಿ ತೀಡುತ್ತಿದೆ. ಮಂದಾರ ಕುಲು ಕುಲು ನಗುತ್ತಿದೆ, ಕಂಪಸೂಸಿ ಹಸುರು ಹುಲ್ಲು ಹಾಯಾಗಿ ಹರಡಿ ಸುಖವನ್ನೇ ಪಿಸುಗುಟ ತ್ತಿದೆ. ಗಾಳಿ ಹರಿದು ಕಚಗುಳಿಯನಿಡುತ್ತಿದೆ. ಗಂಧವ ಲೋಕದ ಗಾನ ತಾನತಾನವಾಗಿ ಝುರಿ ಝುರಿಯಾಗಿ ಇಳಿದ ಬಂದು ತುಂಬಿ ನಿಂತಿದೆ. ಎಲ್ಲೆಲ್ಲಿಯೂ ಮಧುರ ನೋಟ, ಸ್ಪರ್ಶ ಸಂತೋಷ, ಶಾಂತಿ.

"ಇಲ್ಲವ್ವಾ ನಾನು ಹೋಗಲೇಬೇಕು ! ಆಗಲೇ ಕಾಲೇಜಿ ಅರ್ಜಿಹಾಕಿದ್ದೇನೆ. ಕೆಲವರು ಹಣಕೊಡಲು ಒಪ್ಪಿಕೊಂಡಿದ್ದಾರೆ ಅಲ್ಲಿ ಹಾಸ್ಟಲೂ ಇದೆ. ಊಟವೂ ಪುಕ್ಕಟೆ ದೊರೆತೀತು. ನಾನು ಹೋಗುತ್ತೇನೆ !.... ಅವ್ವಾ ನಾನು ಓದಿದರೆ, ನಿನಗೆ ಸಂತೋಷ ವಿಲ್ಲವೇನವ್ವಾ ? ಪ್ರೀತಿ ಇಲ್ಲೇನವ್ವಾ ?"

ತಾಯಿಯ ಕಣ್ಣು ತುಂಬಿಬಂದಿತ್ತು; ಫಳಕ್ಕೆಂದು ಎರಡು ಬಿಂದೂ ಉದುರಿದ್ದವು. ಎದೆಯೊಳಗೇ ಹುದುಗಿಸಿಕೊಂಡಳೆಂಬಂತೆ ಅಪ್ಪಿಕೊಂಡಿದ್ದಳು. "ಮಗೂ ನೀನು ದೊಡ್ಡವನಾದರೆ ನನಗೆ ಹೆಮ್ಮೆಯಲ್ಲವೆ ? ಆದರೆ ? ಆದರೆ !...." ಹಾಗೆಯೇ ಸುಮ್ಮನಾಗಿ ದ್ದಳು.

ಮಗನ ನಿರ್ಧಾರವನ್ನರಿತು ಆಕೆಗೆ ಮಧುರ ಸಂಕಟ. ಎಂತಹ ಉತ್ಸಾಹ ! ಎಂತಹ ಉತ್ಸಾಹ !! ತನ್ನ ಪತಿ ಇದ್ದಿದ್ದರೆ ! ಇದ್ದಿದ್ದರೆ !! ಆಕೆ ನೆನೆದು ಅತ್ತಿದ್ದಳು. ಮಗನನ್ನಪ್ಪಿ ಅತ್ತಿದ್ದಳು. ಆದರೂ ಶಂಕರ ಹೊರಟುಹೋಗಿದ್ದ, ಭವಿಷ್ಯದ ಬೆನ್ನಹಿಡಿದು.

ಶೃಂಗದ ಬೆನ್ನೇರಿ ಕಲ್ಪನಾ ವಿಲಾಸಕ್ಕೆ ಯಾತ್ರೆ ಹೊರಟಿದ್ದ. ಹೋಗಿ ಕಾಲೇಜನ್ನೂ ಸೇರಿದ್ದ ಇನ್ನು ತನ್ನ ಜೀವನ ಸಾರ್ಥಕ ವಾಯ್ತೆಂದೂ ಬಗೆದಿದ್ದ. ಬಾಳು ಬೆಲ್ಲವಾಯ್ತೆಂದೂ ಬರಿಬಾಯ ಚಪ್ಪರಿಸಿದ್ದ.

ಕಾಲ ದಿನ ದಿನವಾಗಿ ಸಾಗುತ್ತಿತ್ತು. ಮೊದಲು ನಿಮಿಷ ವಾಗಿದ್ದು ಬರಬರುತ್ತ ಯುಗವಾಯ್ತು, ಆ ಒಂದೊಂದು ದಿನ. ಹಾಸ್ಟಲಿನಲ್ಲಿ ಸ್ಥಳ ಸಿಕ್ಕಬೇಕಾದರೆ ಎರಡು ತಿಂಗಳು ಬೇಕಾಯ್ತು. ದೊರೆತರೂ ಅದು ಯಾವರೀತಿಯದೋ, ಯಾವ ನೀತಿಯದೋ! ಸ್ವಾಮಿಗಳ ಕೃಪಾ ಕಟಾಕ್ಷಕ್ಕೆ ಪಾತ್ರನಾಗಬೇಕಾದರೇ ದಿನಕ್ಕೆ ನಾಲ್ಕುಬಾರಿಯಾದರೂ ಅವರ ಪಾದಸ್ಪರ್ಶವನ್ನು ತನ್ನ ಹಣೆ ಪಡೆಯಲೇಬೇಕಾಗಿತ್ತು. ಇದ್ದ ಹಣ, ಕಾಸು ಕಾಸು ಕೂಡಿಸಿದ್ದ ಹಣ, ನೀರಿನಂತೆ ಖರ್ಚಾಗಿಹೋಗಿತ್ತು. ಹಾಸ್ಟಲ್ ಸಿಗುವ ವೇಳೆಗೆ ವಾರವೊಂದನ್ನು ಕಡಲೇಕಾಯಿಯಲ್ಲಿಯೇ ಜೀವಿಸ ಬೇಕಾಗಿತ್ತು.

ಬಣ್ಣ ಅಳಿಸಿಯಾಯ್ತು. ದೇವೇಂದ್ರ ಸಿದ್ಧನೇ ಆದ. ನಾಟಕ ಮುಗಿದಿತ್ತು; ಬಣ್ಣ ಅಳಿಸಿಯಾಯ್ತು: ಮೊದಲಿನ ಸಿದ್ಧನೇ ಆದ. ನಾಟಕದ ಆ ವೈಭವ, ಆ ಗತ್ತು ಎಲ್ಲವೂ ಅಳಿಸಿಹೋಯ್ತು. ಮರುದಿನ ಬೆಳಗ್ಗೆ ಸಗಣಿ ತುಂಬಿ ಹೊತ್ತುಕೊಂಡು ತಿಪ್ಪೆಗೆಸೆ ಯಲು ಹೊರಟ ಸಿದ್ಧನೇ ಆದ. ಶಂಕರನೂ ಹಾಗೆಯೇ ಆದ. ತಾನು ಕಲ್ಪಿಸಿದ್ದ ಭಾವನೆಯ ಬಣ್ಣ ಕರಕರಗಿ ಹೋಗಿತ್ತು; ಅಳಿಸಿ ಹೋಗಿತ್ತು. ಕೊರಗುವ ಶಂಕರನೇ ಆದ; ಬಡವ ಸಿದ್ಧನೇ ಆದ.

ಆ ದಿನ ಬಂದಿತ್ತು. ಅದು ದುರ್ದಿನವೋ ಸುದಿನವೋ ಅಂತೂ ಬಂದಿತ್ತು. ಶಂಕರನ ವಿದ್ಯಾರ್ಥಿ ಜೀವನದ ಬಾನಿನಲ್ಲಿ. ಮರೆಯಲಾರದ ದಿನವಾಗಲೆಂದೇ ಬಂದಿತ್ತು.

ಕಾಲೇಜ್ ಫೀಜಿಗಿಲ್ಲದೆ ತನ್ನ ಕರಡಿಗೆಯನ್ನು ಮಾರಿದ್ದ.

ಆದರೂ ಹಣ ಸಾಕಾಗಿರಲಿಲ್ಲ. ವೀರಶೈವ ಕುಲದಲ್ಲಿ ಹುಟ್ಟಿ ಮಠದಯ್ಯಗಳ ಮಗನಾಗಿ, ಲಿಂಗವಿಲ್ಲದೆ ತಮ್ಮ ಹಾಸ್ಟಲಿನ ಊಟಮಾಡಲು ಅಪ್ಪಣೆಯನ್ನು ಸ್ವಾಮಿಗಳು ಕೊಟ್ಟಾರೆಯೇ ಇಲ್ಲ! ಸಾಧ್ಯವಿಲ್ಲ! ಸ್ವಾಮಿಗಳ ಸ್ವಾಭಿಮಾನ, ಲಿಂಗದ ಬಗ ಇದ್ದ ಅಪಾರ ಪ್ರೀತಿ, ಪ್ರೇಮ, ಪೂಜ್ಯಭಾವ ಶಂಕರನನ್ನು ಇ ಗೊಡಲಿಲ್ಲ. ಹೇಗೋ ಅರಿತ ಸ್ವಾಮಿಗಳು ಊಟ ನಿಲ್ಲಿಸಿಯೆ ಬಿಟ್ಟರು. ಕರಡಿಗೆಯನ್ನು ಹಾಕಿಕೊಳ್ಳದೆ, ಬರಿದೆ ಬಂದ ಪ್ರವೇಶವಿಲ್ಲವೆಂದು ಖಂಡತುಂಡವಾಗಿಯೇ ಹೇಳಿಬಿಟ್ಟಿದ್ದರು.

ಶಂಕರ ತನ್ನ ಸ್ವಾಮಿಗಳ ಪಾದಕ್ಕೆ ಹಣೆ ಹಚ್ಚಿದ್ದ ಕಣ್ಣೀರ ಕರೆಕರೆದು ಬೇಡಿಕೊಂಡಿದ್ದ. ತನ್ನ ದುಃಖವನ್ನು ಕಣ್ಣೀ ರಾಗಿಯೇ ಹರಿಯಿಸಿದ್ದ. ಸ್ವಾಮಿಗಳ ಹೃದಯ ಸಿಮೆಂಟಾಗಿತ್ತು ಎಷ್ಟು ನೀರು- ಅದು ಉಪ್ಪಾಗಿರಲಿ, ಸಿಹಿಯಾಗಿರಲಿ,- ಬಿದ್ದಷ್ಟೂ ಗಟ್ಟಿಯಾಗುತ್ತಿತ್ತು. ಒಂದು ನಾಡಿನ ಹಿರಿಸಮಾಜದ ಪೂಜ್ಯ ಪೀಠದಲ್ಲಿದ್ದ ತಾವು ತಮ್ಮ ತತ್ವ, ನೀತಿ, ನಿಯಮ, ಆಚಾರಕ್ಕೆ ಕೊಡಲಿಯಿಡುವುದೆ? ಹಾಗಾದರೆ ತಾವು ಇರುವುದೇತಕ್ಕೆ? ಸಾಧ್ಯ ವಿಲ್ಲ. ಅದು ಸಾಧ್ಯವಿಲ್ಲ! ಕಾಲನ್ನು ಮೇಲಕ್ಕೆತ್ತಿಕೊಂಡು, ಗದರಿಸಿಬಿಟ್ಟಿದ್ದರು. ಶಂಕರ ನಡುಗಿ ದೂರ ಸರಿದಿದ್ದ. ಬಾಗಿದ ತಲೆಯನ್ನು ಮೇಲಕ್ಕೆತ್ತಿ ಸುತ್ತಲೂ ನೋಡಿದ್ದ. ಕಣ್ಣು ತುಂಬಿತ್ತು. ಆ ಕೋಣೆಯ ಸುತ್ತನ್ನು ಮತ್ತೊಮ್ಮೆ ನೋಡಿದ್ದ. ಆ ಮುಂಚೆ ಎಷ್ಟೋಸಲ ನೋಡಿದ್ದಿದ್ದರೂ ಹೊಸಬನಂತೆ ನೋಡಿದ್ದ, ಮತ್ತೊಮ್ಮೆ. ಕಣ್ಣು ಮಂಜುಮಂಜಾಗಿತ್ತು. ಮನ ನಡುಗು ತ್ತಿತ್ತು. ಸಂಕಟ ಮೇರೆವರಿದಿತ್ತು. ಅವನು ಸುತ್ತು ನೋಡಿದ್ದ, ಆ ಗೋಡೆಗಳ ತುಂಬೆಲ್ಲಾ ಶರಣರ ವಚನಗಳ ಪಟಗಳನ್ನು ತೂಗುಹಾಕಲಾಗಿತ್ತು. ಸಾಲು ಸಾಲು ನೇತಾಡುತ್ತಿದ್ದವು. ಗಾಳಿ ಸುಳಿದಾಗ ಅಲುಗಾಡುತ್ತಿದ್ದವು; ಒಯ್ದಾಡುತ್ತಿದ್ದವು. ಸುಂದರವಾದ

ಾಲು ಕಾಗದದಲ್ಲಿ ದುಂಡಾಗಿ ಅಚ್ಚಿಸಿದ್ದ ವಚನಪಟಗಳು
ಾಯಿ ತೆರೆಯುತ್ತಿದ್ದವು; ಮುಂದವಾಗಿ ತಿಳಿಯಾಗಿ ಹಾಡುತ್ತಿದ್ದುವು.

"ದಯವಿಲ್ಲದ ಧರ್ಮವಾವುದಯ್ಯಾ ?
ದಯವೇ ಧರ್ಮದ ಮೂಲವಯ್ಯಾ ?
ನಮ್ಮ ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ ?"

"ಕಲ್ಲನಾಗರ ಕಂಡರೆ ಹಾಲನೆರೆವರಯ್ಯ;
ದಿಟನಾಗರ ಕಂಡರೆ, ಕೊಲ್ಲುಕೊಲ್ಲೆಂಬರಯ್ಯ;
ಉಂಬುವ ಜಂಗಮ ಬಂದೊಡೆ ನಡೆನಡೆಯೆಂಬರಯ್ಯ;
ಉಣ್ಣದ ಲಿಂಗಕ್ಕೆ ಬೋನವನಿಕ್ಕುವರಯ್ಯ !"

"ಹೊರಗೆ ಪೂಜಿಸಿ ಏವೆನಯ್ಯಾ,
ಒಳಗೆ ಶುದ್ಧವಿಲ್ಲದನ್ನಕ ?
ಮಣಿಯ ಕಟ್ಟಿ ಏವೆನಯ್ಯಾ,
ಮನಮುಟ್ಟದನ್ನಕ ?
ನೂರನೋದಿ ಏವೆನಯ್ಯಾ
ನಮ್ಮ ಕೂಡಲ ಸಂಗಮ ದೇವನ
ಮನ ಮುಟ್ಟದನ್ನಕ ? "

ಅಯ್ಯಾ, ಶೀಲ ಶೀಲವೆಂತೆಂಬಿರಯ್ಯಾ ?
ಶೀಲದ ನೆಲೆಯ ಬಲ್ಲರೆ, ಹೇಳಿರೋ !
ಅರಿಯದಿರ್ದೊಡೆ ಕೇಳಿರೋ :
ಕಾಮ ಒಂದು ಭವಿ, ಕ್ರೋಧ ಎರಡನೆಯ ಭವಿ;
ಇಂತು, ಲೋಭ, ಮೋಹ, ಮದ, ಮತ್ಸರ, ಆಮಿಷ-
ಈ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು
ಲಿಂಗವಿಲ್ಲದವರ 'ಭವಿ ! ಭವಿ !' ಎಂಬರು.
ತಮ್ಮ ಅಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನ್ನರಿಯದೆ,
ಅಚ್ಚ ಪ್ರಸಾದಿ, ನಿಚ್ಚ ಪ್ರಸಾದಿ, ಸಮಯಪ್ರಸಾದಿಗಳೆಂದು

ಜಲಕ್ಕೆ ಕನ್ನವಸಿಕ್ಕಿ, ಉದಕವ ತಂದು,
ಲಿಂಗಕ್ಕೆ ಮಜ್ಜನವನೆರೆವ ಹಗಲುಗಳ್ಳರಿಗೆ–
ಮೆಚ್ಚುವನೆ, ಚನ್ನಮಲ್ಲಿಕಾರ್ಜುನ?"

"ಹಗಲುಗಳ್ಳರಿಗೆ ಮೆಚ್ಚುವನೇ, ಚನ್ನಮಲ್ಲಿಕಾರ್ಜುನ?"

ಅಕ್ಕನ ಮಾತು ಅವನಿಗೆ ಹಿಡಿಸಿತ್ತು. ಆ ಸಂಕಟದಲ್ಲಿಯೆ ಒಂದು ಸಂತೋಷ ಚಿಮ್ಮಿ ಬಂದಿತ್ತು. ಹೌದು ಹಗಲುಗಳ್ಳರ ವೇಸು, ಈ ನಮ್ಮ ಸ್ವಾಮೀಜಿ? ಕಾಮ, ಕ್ರೋಧ, ಮೋಹ ಮದ, ಮತ್ಸರ, ಆಮಿಷ ಇಲ್ಲದ ಲಿಂಗಾಂಗ ಸಾಮರಸ್ಯರೇನು ಶಂಕರ ಸ್ವಲ್ಪ ನಕ್ಕುಬಿಟ್ಟಿದ್ದ. ಆದರೆ ಕೇಳಿಸುವಂತೆ ನಗಲು ಧೈರ ಬಂದಿರಲಿಲ್ಲ. ಹೊರಬಂದಿದ್ದ. ಇಂತಹ ಹಗಲುಗಳ್ಳರಿಗೆ ವಂ ಸುವುದೇ ಮಹಾ ಪಾಪವೆಂದು ಅವನ ಮನಸ್ಸು ತಾಳ ಹಾಕುತ್ತಿತ್ತು ಪೀಠದಲ್ಲಿ ಕುಳಿತು ಮೆರೆವ ನಮ್ಮ ಸ್ವಾಮಿಗಳು ಕಾವಿ ಹಾಕಿದ ಮಾತ್ರಕ್ಕೇ, ಜಟೆಯನ್ನು ಬೆಳೆಯಿಸಿದ ಮಾತ್ರಕ್ಕೇ, ಲಿಂಗ ಧರಿಸಿದ ಮಾತ್ರಕ್ಕೇ, ಮಠಾಧಿಪತಿಯಾಗಿರುವುದರಿಂದಲೇ ಲಿಂಗವಂತರೇನು? ಅಕ್ಕ ಹೇಳಿದ ನಿಜವಾದ ಭವಿ ಇವರೇ! ಹೌದು ಇವರಲ್ಲದಿನ್ನಾರು? –ಶಂಕರನ ಮನಸ್ಸು ತಾಳ ಹಾಕುತ್ತಿತ್ತು.

ಅವನ ಹೆಜ್ಜೆ ಒಂದರನಂತರ ಒಂದು ಭಾರವಾಗಿ ಬೀಳುತ್ತಿತ್ತು.

ಅತ್ತ ಫೀಜು ಕಟ್ಟಲೂ ಪೂರ್ಣ ಹಣವಿಲ್ಲ; ಇತ್ತ ಹಸಿದ ಹೊಟ್ಟೆಗೆ ಹಿಟ್ಟಿಲ್ಲ. ಮೊದಲೇ ದುರ್ಬಲ ಹೃದಯದ ಶಂಕರ ಸಪ್ಪನೆ ಸರಿದುಹೋಗಿದ್ದ. ಯಾವುದಕ್ಕೂ ದಿಕ್ಕು ತೋಚದೆ, ಮೆಲ್ಲ ಮೆಲ್ಲನೆ ಹೋಗಿ ಕಾಲೇಜಿನ ಸಮೀಪದ ಕಲ್ಲುಬೆಂಚಿನ ಮೇಲೆ ಮಲಗಿಕೊಂಡುಬಿಟ್ಟಿದ್ದ. ತಾವು ಬಡವರಾಗಿದ್ದಿದ್ದರೂ ಒಮ್ಮೆಯೂ ಹಸಿವೆಯಾಗಲು ತನ್ನ ತಾಯಿ ಬಿಡುತ್ತಿದ್ದುದಿಲ್ಲವೆಂದು ನೆನೆ ನೆನೆದು ಒಂದೆರಡು ಹನಿಯನ್ನೂ ಕರೆದಿದ್ದ. ಫೀಜು ಕಟ್ಟದೆ ತರಗತಿಗೆ ಸೇರಿ ಸೆನೆಂದು ಹಿಂದಿನ ದಿನವೇ ಪ್ರಿನ್ಸಿಪಾಲರು ಹೇಳಿದ್ದರಿಂದ ತಾನು

ಅಲ್ಲಿಯೇ ಮಲಗಿಬಿಟ್ಟಿದ್ದ.

ಪುನಃ ಎದ್ದದ್ದು ಸಂಜೆಯಾದಾಗ; ಲಲಿತ ಕೂಗಿ ಎಬ್ಬಿಸಿದ್ದಾಗ. ಕಣ್ಣುಜ್ಜಿ, ಸರಿಯಾಗಿ ಕುಳಿತಾಗ, ಲಲಿತ ಅಚ್ಚರಿಬೆರೆತ ಮೊಗದಲ್ಲಿ ನಸುನಗುತ್ತಿದ್ದಳು.

"ಯಾಕೆ ಇಲ್ಲಿ ಮಲಗಿದ್ದೀರಿ ? ಕ್ಲಾಸಿಗೇಕೆ ಬರಲಿಲ್ಲ ?"

ಅದೇ ಮೊದಲು ಆಕೆ ಮಾತನಾಡಿಸಿದ್ದು. ಶಂಕರನಿಗೆ ಅತ್ಯಾಶ್ಚರ್ಯವಾದದ್ದು ಅವನ ಜೀವನದಲ್ಲಿ ಅದೇ ಮೊದಲು. ಜಗತ್ತಿನಲ್ಲಿಯ ಆಶ್ಚರ್ಯಗಳ ಹಂತಿಗೂ ಆ ಭೆಟ್ಟಿಯನ್ನು ಸೇರಿಸಬೇಕೆಂದು ಚಿಂತಿಸಿದ.

ಶಂಕರ ಕಾಲೇಜಿನಲ್ಲಿಯ ಪ್ರತಿಭಾವಂತ ಸಾಹಿತಿಯೆಂದು ಎಲ್ಲರೂ ಅನ್ನುತ್ತಿದ್ದರು. ಪ್ರತಿಯೊಂದು ಸಭೆಯಲ್ಲಿಯೂ ಅವನ ಭಾಷಣವಿಲ್ಲದಿದ್ದರೆ ಏನೋ ಒಂದು ಕೊರತೆ. ಅವನ ಲೇಖನಗಳನ್ನು ಮೆಚ್ಚಿಕೊಂಡು ಬೆನ್ನುತಟ್ಟಿದ್ದರು ಕನ್ನಡ ಪಂಡಿತರು. ಅನೇಕ ಪತ್ರಿಕೆಗಳಲ್ಲಿ ಕವನಗಳನ್ನು ಅಚ್ಚಿಸಿದ್ದ. ಬರೆಯಲೂ ಬಲ್ಲ, ಭಾಷಣ ಮಾಡಲೂ ಬಲ್ಲ ಶಂಕರ ಕಾಲೇಜಿನಲ್ಲಿ ಎಲ್ಲರ ಕಣ್ಣಿನಲ್ಲೂ ಬೆಳಗಿದ್ದ. ಲಲಿತಳೂ ಬಲ್ಲಳು. ಲಲಿತೆ ಲೇಡೀಸ್ ಕ್ಲಬ್ಬಿನ ಕಾರ್ಯದರ್ಶಿನಿಯೆಂದು ಶಂಕರನೂ ಬಲ್ಲ. ಆಕೆ ಉಡುತ್ತಿದ್ದುದು ತೆಳ್ಳನೆಯ ಸೀರೆ. ಒಳಲಂಗ ಹೊರಗೆ ಉಟ್ಟಿದ್ದಾಳೇನೋ ಎಂಬಂತೆ ಕಾಣುತ್ತಿತ್ತು. ಸಿನೇಮಾ ತಾರೆಯರಂತೆ ಕೂದಲಿನ ಅಲಂಕಾರ. ಮುಖ ಲಕ್ಷಣವಾಗಿದ್ದರೂ ಸ್ನೋ ಪೌಡರ್. ಅವಳ ಬಿಂಕ ತುಸು ಅಸಹ್ಯವಾಗಿಯೇ ತೋರುತ್ತಿತ್ತು, ಶಂಕರನಿಗೆ. ಅವಳನ್ನು ಕಂಡರೆ ಏನೋ ಒಂದು ವಿಧವಾದ ತಿರಸ್ಕಾರ. ಬಳೆಯಿಲ್ಲದ ಎಡಗೈಯಲ್ಲಿ ಗಡಿಯಾರವನ್ನು ಕಟ್ಟಿ, ಜನನೋಡಲೆಂಬಂತೆ ಆಗಾಗ ಆ ಕೈಯನ್ನು ಬೀಸುತ್ತಿದ್ದ ಅವಳ ಗತ್ತನ್ನು ನೋಡಿದರೆ ಶಂಕರನ ಮೈ ಉರಿದುಹೋಗುತ್ತಿತ್ತು.

ಒಮ್ಮೆ ಕನ್ನಡ ಸಭೆಯಲ್ಲಿ ಮುಖ್ಯ ಭಾಷಣಕಾರನಾ ಮಾತನಾಡಿದ್ದ. ವಿಷಯ: 'ಇಂದಿನ ವಿದ್ಯಾರ್ಥಿನಿಯರು.' ತೀಕ್ಷ್ಣ ವಾಗಿಯೇ ಖಂಡಿಸಿ ಮಾತನಾಡಿದ್ದ.

"ಬರಿಯ ಬಣ್ಣದ ತಗಡಿನ ಗೊಂಬೆಗಳು ಈ ಇಂದಿ ವಿದ್ಯಾರ್ಥಿನಿಯರು. ಬರಿಯ ವೇಷದಲ್ಲಿಯೇ ತಮ್ಮ ಕಾಲವನ್ನು ಕಳೆಯುತ್ತಿದ್ದಾರೆ. ಕ್ಷಮಿಸಬೇಕು ಈ ದಿನದ ಭಾಷಣ ಬರಿಯ ವಿದ್ಯಾರ್ಥಿನಿಯರನ್ನೇ ಕುರಿತು ಇರುವುದರಿಂದ ಬರಿಯ ಅವರ ವಿಷಯವಾಗಿಯೇ ಮಾತನಾಡಬೇಕಾಗಿದೆ. ಶ್ರೀ ಕುವೆಂಪು ಹೇಳು ತ್ತಿದ್ದಂತೆ ಇಂದಿನ ಸ್ತ್ರೀಯರು ಮುಂದಿನ ಸಮಾಜ ಕಟ್ಟಡಕೆ ಕಾಗದದ ಕಂಬಗಳು. ಅದರಲ್ಲಿಯ ಹೆಚ್ಚಿನಪಾಲು ವಿದ್ಯಾರ್ಥಿನಿ ಯರದಾಗಿದೆ. ಒಂದು ಹೆಣ್ಣಿಗಿರುವ ನಯ, ವಿನಯ, ಗಾಂಭೀರ್ಯ- ಇಷ್ಟಾದರೂ ಬೇಡವೆ ? ಸ್ತ್ರೀ ಸ್ವಾತಂತ್ರ್ಯವೆಂದರೆ ಮೈಮೇಲೆ ಬೀಳುವಂತೆ ವರ್ತಿಸುವುದೇನು ? ಎದೆ ಸೆಟೆಸಿ, ಮೊಗವೆತ್ತಿ, ಸೆರ ಗನ್ನು ಚೆಲ್ಲಿ ನಡೆಯುವುದೇನು ? ತಾಯಿಯರಾಗುವ, ತೊಟ್ಟಿಲನ್ನು ತೂಗುವ, 'ರಾಜ್ಯವನ್ನೂ ಆಳಲೂ ಬಲ್ಲ' ಸ್ತ್ರೀಯ ಶಕ್ತಿ ಈ ಮುಖ ವಾಗಿ ಹರಿಯಬೇಕಾಯ್ತೆ ? ಧೂಳು ಧೂಳು ಹಾರುವಂತೆ ಪೌಡರು ಹಾಕುವುದೇ ಆಧುನಿಕತೆಯೋ ? ವಿದ್ಯಾವಂತೆಯರೆಂದು ಕರೆಸಿ ಕೊಳ್ಳುವ ಬೋರ್ಡೋ ? ಇದನ್ನು ಅರಿತುಕೊಳ್ಳಬೇಕು. ಪಾಶ್ಚಾತ್ಯ ಸಂಸ್ಕೃತಿಯನ್ನೇ ಸಂಸ್ಕೃತಿಯೆಂದು ತಿಳಿದು, ಅಂತೆಯೇ ಕರೆದು, ಅದಕ್ಕೆ ನಮ್ಮ ಸಂಸ್ಕೃತಿಯನ್ನು ಮಾರುಗೊಡಬಾರದು. ಆ ಮೊಸಳೆಯನ್ನಪ್ಪಿ ವಿಷದಾಳಕ್ಕೆ ಮುಳುಗಬಾರದು. ನಾವು ಎಷ್ಟು ಮುಂದುವರೆಯುತ್ತಿದ್ದೇವೆಂದು ಅರಿತುಕೊಂಡಿದ್ದೇವೆಯೋ ಅಷ್ಟು ಹಿಂದೆ ಹಿಂದೆ ಹೋಗುತ್ತಿದ್ದೇವೆ. ಇಪ್ಪತ್ತನೆಯ ಶತಮಾನದ ಕನ್ನಡ ಮಹಾಕವಿ ಶ್ರೀ ಅಂಬಿಕಾತನಯದತ್ತರ ಈ ಪದ್ಯವನ್ನು ಓದಿ ನನ್ನ ಭಾಷಣವನ್ನು ಮುಗಿಸುತ್ತೇನೆ.

"ಅನರ್ಣನೀಯ ಅರ್ವಾಚೀನ ಸೌಂದರ್ಯ"
ಕುರುಡಿರಲಿ ಮೆಳ್ಳಿರಲಿ ಕಪ್ಪುಕನ್ನಡಕವಿರೆ
ನಯನಗಳನೇನು ಬಣ್ಣಿಸಲಿ ಮಣ್ಣು ?
ಏನು ತಲೆ ಬಣ್ಣಿಸಲಿ ತಿಗಳಿ ಮೇಯುವ ಹೊಲವ ?
ಕಲಪನ್ನು ಕಾಣವೇ ನನ್ನ ಕಣ್ಣು ?
ತುಟಿಗಳನು ಬಣ್ಣಿಸಲೆ ? ತುಂಬೆಲ್ಲ ತಂಬುಲವು,
ಹಲ್ಲುಗಳ ಬಣ್ಣಿಸಲೆ ? ನಿನ್ನವಹುದೊ ?
ಸಾರಣೆಯ ಕಾರಣೆಯ ಗಲ್ಲಗಳ ಬಣ್ಣಿಸಲೆ ?
ಆ ಬಣ್ಣನೆಯು ಏನು ನಿನ್ನದಹುದೋ ?
ಬಣ್ಣದಾ ಬೀಸಣಿಕೆ ಕೈಬೀಸಿ ನಡೆದಾಗ
ಕೈವಸ್ತ್ರವನ್ನು ಬಣ್ಣಿಸಲೆ ನಾನು ?
ಮೊಚ್ಚೆ ಮುಚ್ಚಿರಲಾಗಿ ಅಡಿಯಡಿಯ ಬಣ್ಣನೆಯು
-ರವಿಯಿರಲಿ ಕವಿಯಿರಲಿ- ಸಾಧ್ಯವೇನು ?
ಅಂಗಾಂಗ ವ್ಯಂಗ್ಯವಿರಬಹುದು ಇರದಿರಬಹುದು;
ವ್ಯಂಗ್ಯಕಾವ್ಯದ ಹಾಗೆ ನಿನ್ನ ಮಾಟ.
ನಿನ್ನ ಮೈಯನ್ನೆಲ್ಲ ನೀನೆ ಬಣ್ಣಿಸಿಕೊಂಡೆ,
ಬೇರೆ ಬಣ್ಣನೆ ಬರಿಯ ಬಣ್ಣದಾಟ.

ಈ ಕವನದ ಭಾವನೆಯನ್ನರಿತು ನನ್ನ ತಾಯಂದಿರು, ಸೋದರಿಯರು ತಮ್ಮ ಪಥವನ್ನು, ಒಳ್ಳೆಯ ಪಥವನ್ನು ಹಿಡಿಯಲಿ. ಗಂಡಸರಿಗೆ ಮಾರ್ಗದರ್ಶಿಗಳಾಗಲಿ."

ಆ ಸಭೆಯಲ್ಲಿ ಕಾರ್ಯದರ್ಶಿಸಿ ಲಲಿತಳೂ ಇದ್ದಳು. ಆಗಾಗ ಅತ್ತ ತಿರುಗಿದಾಗ ಅವಳ ಮುಖ ರುದ್ರವಾಗಿರುವುದು ಕಾಣುತ್ತಿತ್ತು. ಒಮ್ಮೊಮ್ಮೆ ತಲೆತಗ್ಗಿಸಿ ಕುಳಿತುಕೊಂಡಿರುತ್ತಿದ್ದಳು. ಏನೋ ಸೇಡನ್ನು ತೀರಿಸಿಕೊಳ್ಳುವ ಛಲವನ್ನಾಕೆ ಆಗ ತೊಡುತ್ತಿದ್ದಂತೆ ಕಾಣುತ್ತಿತ್ತು.

ಅದೇ ಲಲಿತ ಬಂದಿದ್ದಾಳೆ. ತನ್ನನ್ನು ಎಬ್ಬಿಸಿ ಎದುರಿಗೆ ನಿಂತಿದ್ದಾಳೆ! ಅವನಿಗೆ ಆಶ್ಚರ್ಯ. ಎಲ್ಲಿಲ್ಲದ ಆಶ್ಚರ್ಯ ತುಂಬಿದ ಆಶ್ಚರ್ಯ. ಏನೂ ಅರಿಯದವನಾಗಿ, ಅಪರಾಧಿಯಂ ನಿಂತುಬಿಟ್ಟಿದ್ದ. ಆ ಭಾಷಣದ ಬಗ್ಗೆ ಕೇಳಿ ಲೇವಡಿ ಎಬ್ಬಿಸಿದರೆ ಅಲ್ಲಿ ಯಾರೂ, ತನ್ನ ಹೊರತು, ಗಂಡು ಪಿಳ್ಳೆ ಇಲ್ಲ. ಸ್ವಲ್ಪ ದೂರದಲ್ಲಿ ಹುಡುಗಿಯರ ಗುಂಪೊಂದು ಸಾಗುತ್ತಿತ್ತು. ಶಂಕರ ಮೌನವೇ ಪರಬ್ರಹ್ಮ, ಮೌನವೇ ಮಹಾ ಔಷಧಿ, ಎಂದು ಮೌನ ವಾಗಿಯೇ ಇದ್ದ. ಹಸಿವೂ, ಕಾಲೇಜಿನ ಚಿಂತೆಯೂ ಸ್ವಾಮಿಗಳ ಬಗೆಗಿದ್ದ ಕೋಪವೂ ಒಂದೂ ಆಗ ಅವನಲ್ಲಿ ಇದ್ದಿರಲಿಲ್ಲ. ಯಾವ ಮೂಲೆಯನ್ನು ಕಡಿದು ನೋಡಿದ್ದಿದ್ದರೂ ಅವನ ದೇಹದಲ್ಲಿ ಸಿಗು ತ್ತಿದ್ದುದು ಬರಿಯ ಆಶ್ಚರ್ಯ, ನಸು ಅಧೈರ್ಯಮಿಶ್ರಿತ ಕಂಪನ. ಅಷ್ಟೇ!

ಅವನು ಹಾಗೆಯೇ ನಿಂತುಬಿಟ್ಟಿದ್ದ. ಲಲಿತ ನಸುನಗುತ್ತ ಮತ್ತೆ ಪ್ರಶ್ನಿಸಿದ್ದಳು: "ಯಾಕೆ ಇಲ್ಲಿ ಮಲಗಿದ್ದೀರಿ? ಕ್ಲಾಸಿಗೇಕೆ ಬಂದಿರಲಿಲ್ಲ?"

ಏನು ಹೇಳಬೇಕೋ ತೋರಿರಲಿಲ್ಲ ಶಂಕರನಿಗೆ. ಫೀಜು ಕಟ್ಟಲಿಲ್ಲ. ಕಾಲೇಜಿಗೆ ಬಿಡುವುದಿಲ್ಲವೆಂದು ಪ್ರಿನ್ಸಿಪಾಲರು ಹೇಳಿ ದರು. ಅದಕ್ಕಾಗಿ ಬರಲಿಲ್ಲವೆಂದು ಹೇಳಲೆ? ಯಾಕೆ ಕಟ್ಟಲಿಲ್ಲ ವೆಂದು ಕೇಳಿದರೆ? ತನ್ನ ಬಡತನವನ್ನು ಪ್ರದರ್ಶಿಸಲೆ? ಮೊದಲೇ ಬಿಂಕದಿಂದ ಬೀಗಿದ ಈ ಹೆಣ್ಣು, ನನ್ನ ಭಾಷಣವನ್ನು ಕೇಳಿ ಕ್ರುದ್ಧಳಾಗಿದ್ದ ಇವಳು ಈಗ ನಾನು ಕಡುಬಡವನೆಂದು ತಿಳಿದರೆ ನಕ್ಕುಬಿಡುತ್ತಾಳೆ. ತಿನ್ನಲು ಕೂಳಿಗೆ ಗತಿಇಲ್ಲದ ಈ ದರಿದ್ರರು ಪರರು ಮೋಜುಮಾಡುವುದನ್ನು ಹೇಗೆ ಸಹಿಸಿಯಾರು? ಪರರ ಸುಖವನ್ನು ಕಂಡು ಕರುಬುವ ಈ ಜನರಂಥವರಲ್ಲದೆ ಅನ್ಯರು ಮಾತನಾಡಿಯಾರೆ?-

ಥೇ ಈಗ ತನ್ನ ಮಾನ ತೆಗೆದೇ ಬಿಡುತ್ತಾಳೆ. ತಾನು ಎಷ್ಟೇ ಕಷ್ಟಪಡುತ್ತಿದ್ದರೂ ಇದುವರಿವಿಗೂ ತನ್ನ ಒಬ್ಬ ನಚ್ಚಿನ (ಅವನೂ ತನ್ನಂತೆಯೇ ಬಡವ) ಗೆಳೆಯನ ಹೊರತು ಅನ್ಯರಿಗೆ ತಿಳಿಯದು ತನ್ನ ಬಡತನ. ಹೇಗೋ ಮುಚ್ಚಿ ಸಾಗಿ ಬಂದಿದ್ದ. ಈಗ ಯಾಕೆ ಎಂದು ಕೇಳುವ ಈ ಹೆಣ್ಣಿಗೆ ತನ್ನ ವಿಚಾರ ಹೇಳಲೇ? ಹೌದು ಈಕೆ ತನ್ನ ವಿಷಯವನ್ನು ತೆಗೆದುಕೊಂಡು ಏನು ಮಾಡುವಳು? ನಿನಗೇಕೆ ಈ ವಿಚಾರ? ಎಂದು ಹೇಳಲಿ? ಏನೆಂದು ಉತ್ತರಿಸುವುದು?

ನಿಮಿಷ ನಿಮಿಷ ಕಾಲ ಸರಿದು ಹೋಗುತ್ತಿತ್ತು. ವಿದ್ಯಾರ್ಥಿನಿಯರ ಗುಂಪು ದೂರದೂರವಾಗುತ್ತಿತ್ತು.

"ಬೀಗ ಹಾಕಿದೆಯೇನೋ?"

ಶಂಕರ ತಲೆ ಎತ್ತಿದ್ದ. ಕಾಲೇಜಿನ ಜವಾನನ್ನು ಲಲಿತೆ ಪ್ರಶ್ನಿಸುತ್ತಿದ್ದಳು.

"ಹೌದ್ರಮ್ಮಾ" ಅವನು ಬೀಗದ ಕೈ ಕೊಟ್ಟು, ಮುಂದುವರಿದಿದ್ದ. ಲಲಿತೆ ಹಾಗೆಯೇ ನಿಂತಿದ್ದಳು. ಶಂಕರನೂ ನಿಂತಿದ್ದ.

"ಯಾಕೆ ನಾನು ಮಾತನಾಡಿಸಿದ್ದು ತಪ್ಪಾಯ್ತೆ?"

ಶಂಕರನ ಅಚ್ಚರಿಯ ಮಡುವಿಗೆ ತೆರೆತೆರೆಯಾಗಿ ಲಲಿತೆಯ ಮಾತು ನೀರು ತುಂಬುತ್ತಿತ್ತು. ಆ ಲಲಿತಳೇ ಈಕೆ? ಏನೆಂತಹ ಮಿದುವಿದೆ ಮಾತಿನಲ್ಲಿ! ಏನೆಂತಹ ನಯವಿದೆ, ರೀತಿಯಲ್ಲಿ! ಮಾಣಿಕ್ಯದ ಹೂವೇನು ಲಲಿತ? ತಾನು ಭಾಷಣ ಬಿಗಿಯುವಾಗ ತನ್ನ ದೃಷ್ಟಿಯಲ್ಲಿ ಈಕೆಯೇ ಮುಖ್ಯವಾಗಿದ್ದವಳು. ಬರಿಯ ದುರಹಂಕಾರದ, ಬಣ್ಣದ ಚಿಟ್ಟೆಯರು ಈ ವಿದ್ಯಾರ್ಥಿನಿಯರೆಂದು ಅರಿತ ತನಗೆ ಸರಿಯಾದ ಪೆಟ್ಟುಕೊಡುತ್ತಿದ್ದಾಳೆ, ಲಲಿತ. ಒಮ್ಮೆಗೇ ಅಪ್ರಬುದ್ಧನಾಗಿ ಯಾವ ವಿಷಯದಲ್ಲೂ, ಯಾವ ವಿಚಾರದಲ್ಲೂ ಕೊನೆಯ ನಿರ್ಣಯವಾಗಿ ಮಾತನಾಡಬಾರದು, ಹಾಗೆ ಯೋಚಿಸಲೂ

ಬಾರದು - ಎಂದೆನ್ನಿಸಿತು, ಶಂಕರನಿಗೆ.

"ತಪ್ಪೆಲ್ಲಿಯದು ? ಏನೋ ಕೆಲಸವಿತ್ತು ಕಾಲೇಜಿಗೆ ಬ ಲಾಗಲಿಲ್ಲ. ಹೊತ್ತಾಗಿ ಬಂದೆ. ಕಾಲೇಜ್ ಹಾಸ್ಟಲಿನಲ್ಲಿ ಒ ಸ್ನೇಹಿತನನ್ನು ಕಾಣಬೇಕಾಗಿತ್ತು. ಕ್ಲಾಸ್ ಬಿಡಲಿ - ಎಂದು ಇ ಕುಳಿತೆ. ತಿರುಗಿ ಆಯಾಸವಾಗಿತ್ತಾದ್ದರಿಂದ ನಿದ್ದೆ ಮಾಡಿದೆನೆಂದ ಕಾಣುತ್ತೆ. ನೀವು ಇಲ್ಲಿ...."

"ಹ್ಞಾಂ... ಇದೇ ಹಾದಿಯಲ್ಲೇ ನಾ ಹೋಗುವುದು ಹೀಗೆಯೇ ಹೋದರೆ ನಮ್ಮ ಮನೆ ಹತ್ತಿರವಾಗುತ್ತೆ."

"ಇಷ್ಟು ಹೊತ್ತಿನಲ್ಲಿ....!"

"ಇವತ್ತು ಬಣ್ಣದ ಚಿಟ್ಟೆಗಳ, ದುರಹಂಕಾರದ ಬೊಂಬೆಗಳ ಸಭೆಯಿತ್ತು." ಕುಹುಕವಾಗಿ ನಕ್ಕಳು, ಲಲಿತ. ಶಂಕರನ ಎದೆಗೆ ಇರಿದಂತಾಯ್ತು. ನಾಚಿಕೆ ಮೈಯೆಲ್ಲಾ ಆವರಿಸಿತು.

"ಕ್ಷಮಿಸಿ. ನೀವೇಕೋ ಅಣಕವಾಡುತ್ತಿದ್ದೀರಿ. ನಾನು ಬರುತ್ತೇನೆ. ನಿಮಗೂ ಹೊತ್ತಾಯ್ತು." ಶಂಕರ ಮೆಲ್ಲನೆ ಕಾಲ್ತೆಗೆದಿದ್ದ.

"ಪರವಾಯಿಲ್ಲ. ಹೊತ್ತಾಗುವುದಿಲ್ಲ. ನಿಮ್ಮನ್ನು ಅಣಕ ವಾಡುವುದಕ್ಕಲ್ಲ ನಾನಂದದ್ದು."

"ಹಾಗಾದರೆ ನೇರವಾಗಿ ಎದೆಗೇ ತಿವಿಯುತಿದ್ದೀರಿ!" ಎಂದು ಶಂಕರ ನಸು ನಕ್ಕು ನುಡಿದಿದ್ದ.

"ಲಲಿತ ಸ್ವಲ್ಪ ಗಟ್ಟಿಯಾಗಿಯೇ ನಕ್ಕಿದ್ದಳು. ಹಾಗೆಯೇ "ನೀವೇಕೆ ಕ್ಲಾಸಿಗೆ ಬರಲಿಲ್ಲ - ನನಗೆ ಗೊತ್ತು" ಎಂದೂ ಅಂದಿದ್ದಳು.

ಹಾಗದರೆ ಇವಳಿಗೆ ಗೊತ್ತೇನು ? ಬರಿಯ ಜಾಣಾಕ್ಷತನ ದಿಂದ ಗುಟ್ಟು ತಿಳಿಯುವ ಪರಿ ಇರಬೇಕು, ಎಂದು ಅದಕ್ಕೆ ತಕ್ಕ ಮದ್ದರೆಯಲು.

"ಓಹೋ. ಹಾಗದರೆ ನಾನು ಮೈಸೂರಿಗೆ ಹೋಗಿದ್ದುದು

ನಿಮಗೆ ಗೊತ್ತೋ ?" ಎಂದು ಬುರುಡೆ ಹಾರಿಸಿದ್ದ. "ಅಲ್ಲಿ ನನ್ನ ಗೆಳೆಯರಿದ್ದಾರೆ. ಅವರ ಮನೆಯಲ್ಲಿ ಮದುವೆ. ಅದಕ್ಕೆ ಹೋಗಬೇಕಾಗಿತ್ತು." ಬುರುಡೆಗೆ ಬಣ್ಣವನ್ನು ಬಳಿದಿದ್ದ.

"ಎಂದಿನಿಂದ ನಿಮಗೆ ಈ ಅಭ್ಯಾಸವಾಗಿದೆ? ಮೊದಲಿನಿಂದಲೂ ಹೀಗೇಯೇನು ?" ಲಲಿತ ಏನೋ ಕೇಳುವಂತೆ ಪ್ರಶ್ನಿಸಿದ್ದಳು.

"ಏನ್ರಿ ಹಾಗಂದರೆ ?"

"ಬುರುಡೆಗೆ ಬಣ್ಣ ಹಚ್ಚಿ, ಗಾಳಿಯಲ್ಲಿ ತೂರುವುದನ್ನು!" ಅವಳ ಕಣ್ಣು ಕನಿಕರದಿಂದ ತುಂಬಿದ್ದರೂ ಅಲ್ಲಿ ಕುಹಕದ ನಗುವಿತ್ತು. ಪರಿಹಾಸದ ಸೊಬಗಿತ್ತು.

" ಅಂದರೆ ನನಗೆ ಅರ್ಥವಾಗಲಿಲ್ಲ!"

" ಹಾಗೆಂದರೆ ಅರ್ಥವಾಗುತ್ತದೆಯೇ ? ಹಸಿವಾಗುತ್ತದೆ !"

" ಅದೂ ಅರ್ಥವಾಗಲಿಲ್ಲ !"

" ಹಾಗೆ ಬಣ್ಣದ ಮಾತನಾಡಿ ಸುಳ್ಳನ್ನು ಹಾರಿಸಿದರೆ ಹಸಿವು ಹೆಚ್ಚಾಗುತ್ತೆಯೇ ಹೊರತು ಹೊಟ್ಟೆ ತುಂಬದು ! ಹಣವಾಗದು ! 'ಅರ್ಥ'ವಾಗದು !"

ಮಾತು ಬಹಳವಾಯ್ತೆಂದು ಶಂಕರನಿಗೆ ಎನ್ನಿಸಿತ್ತು, ಕಾಲೇಜಿನ ಹುಡಿಗಿಯರ ಬಗ್ಗೆ ಏನೇನೋ ಕತೆ ಕೇಳಿದ್ದ. ಆ ಕತೆಗಳಿಗೆ ಸೇರುವ ಒಂದು ಕತೆ ಇದೆಲ್ಲಾಗುತ್ತೋ ಎಂದು ತುಸು ಬೆದರಿದ್ದ. ಇನ್ನು ಹೊರಡೋಣವೆಂದು,

" ಆಯ್ತು, ಹೊತ್ತಾಯ್ತು. ಇನ್ನು ನೀವು ಹೊರಡಿ " ಶಂಕರನ ಕಾಲು ಕದಲಿತು.

" ಜೋಡಿಸಿದಿರಾ ?" ಲಲಿತ ಕೇಳಿದ್ದಳು.

" ಏನನ್ನು "

" ಹಣವನ್ನು ಫೀಜು ಕಟ್ಟಲು ಹಣವನ್ನು !"

ವಿದ್ಯಾರ್ಥಿನಿಯರನ್ನು ಅವಹೇಳನ ಮಾಡಿದೆಯಾ- ಎಂದು

ಬಲವಾಗಿ, ಕೆನ್ನೆಗೆ, ಬೀಸಿ ಹೊಡೆದಿದ್ದರೂ ಆ ಮಾತು ಕೇಳಿದಾ
ಆದ ಅವಮಾನ, ನೋವು ಆಗುತ್ತಿದ್ದಿರಲಿಲ್ಲ! ಮಾತು ಬಂದು
ಮೌನದಲ್ಲಿ ಕರಗಿ ಹೋಗಿತ್ತು. ಎತ್ತಿಟ್ಟ ಹೆಜ್ಜೆ ಹಾಗೆಯೆ
ನಿಂತಿತ್ತು. ಕಣ್ಣು ಅಗಲವಾಗಿದ್ದವು ಅಲ್ಲಿ ಅಚ್ಚರಿ ತುಳುಕುತ್ತಿತ್ತು

"ನನಗೆಲ್ಲಾ ಗೊತ್ತಾಯ್ತು. ಪ್ರಿನ್ಸಿಪಾಲರು ಹೇಳಿದರು
ನೀವು ಕ್ಲಾಸಿಗೆ ಬಾರದಿದ್ದುದೇಕೆಂದು ಕುತೂಹಲದಿಂದ ಅವರಿ
ರನ್ನು ವಿಚಾರಿಸಬೇಕೆಂದಿದ್ದೆ. ಆದರೆ ನಾಚಿಕೆ ಅಡ್ಡವಾಯ್ತು
ಯಾವುದಾದರೂ ನೆವದಿಂದ ಪ್ರಿನ್ಸಿಪಾಲರನ್ನು ಕಂಡು ಕೇಳೋಣ-
ವೆಂದು ಅವರ ಕೋಣೆಗೆ ಹೋದೆ. ಅಲ್ಲಿ ನಿಮ್ಮ ಬಗ್ಗೆ ದೂರಿದೆ
ನಮ್ಮನ್ನೆಲ್ಲಾ ಅವಮಾನ ಮಾಡುವ ರೀತಿಯಲ್ಲಿ ಮಾತನಾಡಿದರು
ಇದಕ್ಕೆ ತಕ್ಕ ಚರ್ಯೆ ತೆಗೆದುಕೊಳ್ಳಬೇಕೆಂದೂ ಹೇಳಿದೆ
'ಇನ್ನವನು ಕಾಲೇಜಿಗೆ ಬರಲಿಕ್ಕಿಲ್ಲ ಬಿಡಿಯಮ್ಮ' ಎಂದರು
'ಯಾಕೆ ಸಾರ್?' ಎಂದು ಕೇಳಿದೆ. 'ಹಿಂದಿನ ತಿಂಗಳ ಫೀಜೂ
ಈ ತಿಂಗಳ ಫೀಜೂ ಕಟ್ಟಿಲ್ಲ. ಇಷ್ಟುದಿನ ತಡೆದಾಯ್ತು. ಇನ್ನು
ಕ್ಲಾಸಿಗೆ ಬಿಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿದೆ. ಬಡವ-
ನಂತೆ. ಆದರೇನುಮಾಡಲಿಕ್ಕಾಗುತ್ತೆ? ಆತನು ಇಂದು ಬಂದಿಲ್ಲ.
ಇನ್ನು ಬರಲಿಕ್ಕಿಲ್ಲ. ಪಾಪ!' ಎಂದರು. ಹೀಗೆಯೇ ನಾನು
ನಿಮ್ಮ ವಿಷಯ ತಿಳಕೊಂಡದ್ದು. ನಿಮ್ಮ ಪ್ರತಿಭೆಯನ್ನು ನೋಡಿ
ನಿಮ್ಮನ್ನು ಮಾತನಾಡಿಸಬೇಕೆಂದಿದ್ದೆ. ನನ್ನ ಬಗ್ಗೆ ತಪ್ಪು ತಿಳಿದು
ಕೊಳ್ಳಬೇಡಿ. ನಿಮ್ಮ ತಂಗಿಯೆಂದು ತಿಳಿದುಕೊಳ್ಳಿ. ಈಗ
ಸಂದರ್ಭ ಸಿಕ್ಕಿತು ಮಾತನಾಡಿಸಿದೆ. ತಪ್ಪಾಯ್ತೆ?" ಲಲಿತ
ಒಂದೇ ಸಮನೆ ಹೇಳಿದ್ದಳು. ಶಂಕರ ಕೇಳುತ್ತಲೇ ನಿಂತಿದ್ದ.
ತಲೆ ತಗ್ಗಿಸಿ ನಿಂತಿದ್ದ. ಮಾತನ್ನೊಂದೂ ಆಡಲಾಗಿರಲಿಲ್ಲ.
ಕಣ್ಣು ತುಂಬಿತ್ತು.

"ಬನ್ನಿ ಮನೆಗೆ ಹೋಗೋಣ. ನಿಮ್ಮನ್ನು ಕರೆತರಲು

ಅಮ್ಮ ಹೇಳಿದ್ದಾರೆ." ಎಂದೂ ಲಲಿತ ಅಂದಿದ್ದಾಗ ಶಂಕರನಿಗೆ ದಿಗ್ ಭ್ರಮೆಯಾಗಿತ್ತು.

"ಯಾಕೆ ಅವರು ಹೇಳಿದರು ? ಮನೆಯಲ್ಲಿ ಯಾರಿದ್ದಾರೆ?" ಲಲಿತಳ ವಿಷಯವನ್ನು ಅರಿಯುವ ಕುತೂಹಲ, ಅಚ್ಚರಿಯನ್ನು, ಭೇದಿಸಿಕೊಂಡು ಬಂದು ಆ ಮಾತಾಗಿತ್ತು. ಆಗ ಅವನ 'ಧೀಶಕ್ತಿ' ಯೆಲ್ಲಾ ಕಂಠದಲ್ಲಿ ನಸು ಗದ್ಗದವಾಗಿ ಕರಗುವಂತಿತ್ತು.

"ಮನೆಯಲ್ಲಿ ನಾವಿಬ್ಬರೇ : ನಮ್ಮ ತಾಯಿ ಮತ್ತು ನಾನು. ನಿಮ್ಮ ವಿಷಯ ಹೇಳುತ್ತಿದ್ದೆ. ನಿಮ್ಮ ಭಾಷಣದ ವಿಷಯವನ್ನೂ ಹೇಳಿದ್ದೆ, ರೋಷದಿಂದ. ಆಗಲೇ ಅವರು, 'ಕರೆದುಕೊಂಡು ಬಾ' ಎಂದು ಹೇಳಿದ್ದರು. ನಿಮ್ಮನ್ನು ಮಾತನಾಡಿಸಬೇಕೆಂದಿದ್ದರೂ ನನ್ನಲ್ಲಿದ್ದ ಆ ಕ್ರೋಧ ಹಾಗೆ ಮಾಡಗೊಟ್ಟಿರಲಿಲ್ಲ. ಅಮ್ಮ ದಿನವೂ ಹೇಳುತ್ತಿದ್ದರು. ನಿಮ್ಮ ಕೆಲವು ಕವಿತೆಗಳನ್ನು ಅವರು ಓದಿದ್ದಾರಂತೆ. ಅವರ ಶಾಲೆಗೆ 'ದಿವ್ಯಜ್ಯೋತಿ' ಪತ್ರಿಕೆಯನ್ನು ತರಿಸುತ್ತಿದ್ದಾರಂತೆ. ಮೊನ್ನೆ ಅಚ್ಚಾದ ನಿಮ್ಮ 'ಕೊರತೆಯ ಕೂಗ'ನ್ನೂ ಆಡಿಸಿದ್ದಾರಂತೆ, ಅವರ ಶಾಲೆಯಲ್ಲಿ"

"ಅವರ ಶಾಲೆ?"

"ಹ್ಞ- ಅವರು ಮಿಡ್ಲ್ ಸ್ಕೂಲ್ ಮೇಡಮ್. ಕನ್ನಡದಲ್ಲಿ ತುಂಬಾ ಪ್ರೀತಿ."

"ಸಂತೋಷ. ಮಗಳಂತೆ ತಾಯಿ!"

"ಸುಟ್ಟಿತು. ನಾನೇನು ಪಂಡಿತೇ!"

"ಹಾಗಾದರೆ ಅದು ಹೇಗೋ ಮೊದಲನೇ ಬಹುಮಾನ ಬಂದದ್ದು ಆ ವಾಕ್ ಸ್ಪರ್ಧೆಯಲ್ಲಿ! ನ್ಯಾಯಮೂರ್ತಿಗಳಿಗೆ ಮೊದಲೇ ಕಾಫಿ ಕೊಡಿಸಿದ್ದಿರಬೇಕು!" ಶಂಕರ ಮೈಚಳಿಬಿಟ್ಟು ಮಾತನಾಡಿದ್ದ. "ಓಹ! ದಬಾಯಿಸಿ ಮಾತನಾಡಿದರಾಯ್ತು. ನಿಮಗೆ ಎರಡನೇ ಬಹುಮಾನ ಬಂದದ್ದಕ್ಕೇನೋ ಈ ಆರೋಪ

ಬನ್ನಿ. ಹೊತ್ತಾಯ್ತು. ಮಾತನಾಡುತ್ತ ಹೋಗೋಣ!" ಲಲಿ
ಕತ್ತು ತಿರುವಿ, ಕಾಲು ಕಿತ್ತಳು.

ಶಂಕರನ ಮನಸ್ಸು ಡೋಲಾಯಮಾನವಾಗಿತ್ತು. ಹೋಗಲಿ
ಬಿಡಲೇ? ತಾನೂ ಬಂದು ಏಳೆಂಟು ತಿಂಗಳಾಗಿದ್ದರು
ಯಾರೊಬ್ಬರ ಮನೆಗೂ ಹೋಗಿದ್ದಿರಲಿಲ್ಲ. ಈಗ ಹೋಗುವುದೆ
ಅದರಲ್ಲೂ ತರುಣಿಯ ಜೊತೆಗೆ! ಕಂಡ ಅವರಿವರು ಏನಂದಾರು
ತನ್ನ ಸ್ನೇಹಿತರಾರಾದರೂ ನೋಡಿದರೆ? ಕ್ಲಾಸಿಗೆ ಬಾರದೆ ಮಜಾ
ಮಾಡುತ್ತಿದ್ದಾನೆಂದು ತಿಳಿದುಕೊಂಡು ಗೇಲಿ ಮಾಡಿದರೆ? ಈಗಿನ
ಈ ಕಷ್ಟವನ್ನು ಸಹಿಸುವುದೇ ಸಾಕಾಗಿರುವಾಗ ಈ ಹೊಸದೇಕೆ
ಬೇಡ! ಹೋಗುವುದು ಬೇಡ! ಬೇಡ!

"ನೀವು ಮಲಗಿರುವುದನ್ನು ನೋಡಿದೆ. ಆಶ್ಚರ್ಯವಾಯ್ತು-
'ಯಾರಾದರೂ ಹೀಗೆ ಮಲಗುವುದುಂಟೆ?' ಎಂದು ನಿಮ್ಮನ್ನು
ನೋಡಿದಾಗ ಮನಸ್ಸು ಕ್ರುದ್ಧವಾಯ್ತು. ಆದರೆ ನಿಮ್ಮ ಬಾಡಿದ
ಮುಖ ನೋಡಿ ಕರುಳು ಚುರುಕ್ ಎಂದಿತು. ತಾಯಿ ದಿನವೂ
ಹೇಳುತ್ತಿದ್ದರು ಕರೆತರಲು. ಅದಕ್ಕೇ ಎಬ್ಬಿಸಿದೆ." ಮಾತನಾಡು
ತ್ತಲೇ ಒಂದೆರಡು ಹೆಜ್ಜೆ ಮುಂದುವರಿದಿದ್ದಳು, ಲಲಿತ. ಅವಳ
ಕತ್ತು ತಗ್ಗಿತ್ತು. ನಡೆ ಮಂದವಾಗಿತ್ತು.

ಗಾಳಿ ತಣ್ಣಗೆ ಬೀಸುತ್ತಿತ್ತು. ಶಂಕರ ಅಲ್ಲಿಯೇ ನಿಂತಿದ್ದ.
ಹಕ್ಕಿಗಳು ಸುತ್ತಮುತ್ತಿನ ತೋಟಗಳಲ್ಲಿ ಚಿಲಿಪಿಲಿಗುಡುತ್ತಿದ್ದವು.
ರೈತರು ಗಾಡಿಗಳನ್ನು ಹೊಡೆದುಕೊಂಡು ಅನತಿ ದೂರದಲ್ಲಿ
ಸಾಗುತ್ತಿದ್ದರು. ಲಲಿತ ಮೆಲ್ಲನೆ ಬಹು ಮೆಲ್ಲನೆ ನಡೆಯುತ್ತಿದ್ದಳು.
ಕತ್ತಲು ತೆರೆತೆರೆಯಾಗಿ ಮಬ್ಬಾಗಿ ಮುಚ್ಚುತ್ತಿತ್ತು. ಶಂಕರ ನಿಂತೇ
ಇದ್ದ. ಲಲಿತೆಗೆ, ಶಂಕರ ತನ್ನಹಿಂದೆ ಬರುತ್ತಾನೆಂದು. ಅಯ್ಯೋ
ಪಾಪ ಈಗೇನು ಮಾಡಲಿ? ಶಂಕರ ಯೋಚಿಸಿದ್ದ. ಅವನ
ಮನಸ್ಸು ಸ್ಥಿಮಿತಕ್ಕೆ ಬಂದಿರಲಿಲ್ಲ. ಮತ್ತೆ ಯೋಚನೆಯ ಗಾಳಿ

ಬೀಸಿ ಬಡಿದಿತ್ತು. ಮನಸ್ಸು ಡೋಲಾಯಮಾನವಾಗಿತ್ತು. ತೂಕದ ಕೋಲು ತೊಲೆಯಾಗಿತ್ತು. ಹಾಗೆ ಹೀಗೆ ಹೊಯ್ದಾಡುತ್ತಿತ್ತು.

ಏನು ಮಾಡಬೇಕು ? ಊರಿಗೆ ಹೋಗಿ ತಾಯಿಯ ಹತ್ತಿರ ಬಿದ್ದುಬಿಡುವುದು. ನಮ್ಮಂಥವರಿಗಲ್ಲ ಈ ಓದು. ಹೋಗಿಬಿಡೋಣ. ಈ ಊರಿನಿಂದ ದೂರದೂರ ಹೋಗಿ ಬಿಡೋಣ, ಎನಿಸಿತ್ತು. ಊರಿಗೆ ಹೋಗಲೂ ಹಾದಿಯ ಖರ್ಚಿಗೆ ಹಣವಿದ್ದಿರಲಿಲ್ಲ. ಮಾರಿದ್ದ ಕರಡಿಗೆಯ ಹಣ ಐದು ರೂಪಾಯಿ ಇದ್ದವು. ಅವೂ ಸಾಲವು. ಕನಿಷ್ಟ ಹತ್ತು ರೂಪಾಯಿಯಾದರೂ ಬೇಕು, ಊರ ಸೇರಲು, ಕರಡಿಗೆ ಇಲ್ಲದೆ ಊರಿಗೆ ಹೋದರೆ ತಾಯಿಯ ಹೃದಯ ಸಿಡಿದುಹೋಗಲಿಕ್ಕಿಲ್ಲವೆ ? ಬರಿಕೊರಳಿನಿಂದ ಹೋದರೆ ತಾಯಿ ಕೇಳದಿದ್ದಾಳೆಯೇ ? ಕಳೆದು ಹೋಯ್ತೆಂದು ಸುಳ್ಳು ಹೇಳುವುದೆ ? ಹೊತ್ತು ಹೆತ್ತು ಸಾಕಿ ಸಲಹಿ ಇಷ್ಟು ದೊಡ್ಡವನನ್ನಾಗಿ ಮಾಡಿದ ಆ ತಾಯಿಗೆ ಸುಳ್ಳು ಹೇಳಲೆ ? ಸುಳ್ಳು ಹೇಳಲೇನು ? ಬೇಡ ! ಹಾಗೆ ಮಾಡಬಾರದು ! ಮತ್ತೆ ಒಂದು ಕೊಳ್ಳಬೇಕು. ಚಿಕ್ಕದಾದರೂ ಚಿಂತೆಯಿಲ್ಲ, ಹೊಸದನ್ನೇ ಕೊಳ್ಳಬೇಕು. ತಾಯಿಗೆ ತೋರಿಸಿ “ಆ ಕರಡಿಗೆ ದೊಡ್ಡದಿತ್ತು, ಹಳೆಯದಾಗಿತ್ತು. ಇದು ಚೆನ್ನಾಗಿದೆಯೆಂದು ಅದು ಕೊಟ್ಟು ಇದು ಕೊಂಡೆ’ ಎಂದು ಹೇಳುವುದು. ಈ ಮಾತು ಅಷ್ಟು ಸುಳ್ಳಾಗದು. ಆದರೆ ಹಾದಿ ಖರ್ಚಿಗೇನು ಮಾಡುವುದು ? ತನ್ನ ಯಾವ ಸ್ನೇಹಿತನನ್ನು ಕೇಳುವುದು ? ಹೊಟ್ಟೆಗಿಲ್ಲದೆ ಸಾಯುತ್ತಿರುವಾಗಲೂ ಕೇಳದ ನಾನು ಈಗ ಕೇಳಲೆ ? ಹೇಗೆ ಮಾಡಲಿ ? ಹೇಗೆ ಮಾಡಲಿ ?

ಹೇಗೆ ಮಾಡಲಿ ? ಎಂದುಕೊಂಡೇ ಬಂದಿದ್ದ ತನ್ನ ಕಾಲೇಜಿನವರಿವಿಗೂ. ಕಡೆಗೊಮ್ಮೆ ತನ್ನ ವಿದ್ಯಾಮಂದಿರಕ್ಕೆ ಶರಣಾರ್ತಿಯನ್ನರ್ಪಿಸಿ ಕಾಲುನಡಿಗೆಯಲ್ಲಿಯೇ ಪ್ರವಾಸ ಮಾಡಬೇಕೆಂದು

ನಿರ್ಧರಿಸುತ್ತ ಕುಳಿತಿದ್ದ. ಹಸಿವಿನಿಂದ ಹಾಗೆಯೇ ಮಲಗಿದ್ದ
ಎದ್ದು ಲಲಿತೆಯೊಡನೆ ಮಾತನಾಡಿದ್ದ. ಅವಳು ಈಗ ಕರೆದ
ಹೋಗುತ್ತಿದ್ದಾಳೆ.

ಶಂಕರನ ಮನಸ್ಸು ಡೋಲಾಯಮಾನವಾಗಿಯೇ ಇದ್ದಿತ್ತು
ಮೆಲ್ಲನೆ ಬಹು ಮೆಲ್ಲನೆ ಲಲಿತ ಹೆಜ್ಜೆಯನ್ನಿಡುತ್ತಿದ್ದಳು. ಪುಸ್ತಕ
ಗಳನೆದೆಗೊತ್ತಿಕೊಂಡಿದ್ದಳು. ತಲೆತಗ್ಗಿಸಿ ನಡೆಯುತ್ತಿದ್ದಳು. ಶಂಕರ
ಹಾಗೆಯೇ ನಿಂತಿದ್ದ. ನೋಡಿಬಿಟ್ಟರೆ ? ಅವಳು ಹಿಂದಿರುಗಿ
ನೋಡಿಬಿಟ್ಟರೆ ? ಅವಳು ನೋಡುವುದರೊಳಗೇ ಓಡಿಬಿಡಲೆ ?
ಹಿಂದೆ, ಹಿಂದೆ; ದೂರ, ದೂರ- ಓಡಿಬಿಡಲೆ ?! ಅವಳ ಕಣ್ಣ
ಕಾಣದನಿತು ದೂರಕ್ಕೆ ಓಡಿಹೋಗಲೆ ? ಹೌದು ಓಡಬೇಕು.
ಓಡಿ ಮರೆಯಾಗಬೇಕು. ಹ್ಞಾಂ ಅವಳು ಹೋಗುತ್ತಿದ್ದಾಳೆ.
ಇದೇ ಸಮಯ ಸುಸಮಯ.

ಶಂಕರ ಚಲಿಸಿದ. ಮೆಲ್ಲನೆ ಕಾಲೆತ್ತಿ ಹಿಂದಿಡಬೇಕು, ಕಳ್ಳ
ನಂತೆ- ಆಗಲೇ ಲಲಿತ ಮೆಲ್ಲನೆ ಕತ್ತು ಹೊರಳಿಸುವಂತೆ ಕಾಣಿಸು
ತ್ತಿತ್ತು. ಅಯ್ಯೋ ಕೆಲಸ ಕೆಟ್ಟಿತು. ಅವಳು ನೊಡುತ್ತಾಳೆ.
'ತಂಗಿಯೆಂದು ತಿಳಿದುಕೊಳ್ಳಿ' 'ತಾಯಿ ಕರೆಯುತ್ತಿದ್ದಾರೆ' 'ನಿಮ್ಮ
ಬಾಡಿದ ಮುಖ ನೋಡಿ ಕರುಳು ಚುರುಕ್ ಎಂದಿತು' ಚುರುಕ್
ಎಂದಿತೆ ? ಮಾತಾಯಿಯೇ ನೀನು ಲಲಿತ. ನಿನ್ನ ಕರುಳೂ
ಚುರುಕ್ ಎಂದಿತೆ ? ನವುರನ್ನು ಎದೆಯೊಳಗಿಟ್ಟುಕೊಂಡ ಕಠೋ
ಣೆಯೇ ನೀನು ?

ತುಂಬಿ ಬಂದಿತ್ತು ಪ್ರೀತಿ. ಉಕ್ಕಿ ಬಂದಿತ್ತು ದುಃಖ.
ಅಗೋ ಅವಳು ನೋಡುತ್ತಿದ್ದಾಳೆ. ಅವಳು ನೋಡುತ್ತಿದ್ದಾಳೆ.
ಹೋಗಬೇಕು. ಅವಳ ಹಿಂದೆ ಹೋಗಬೇಕು. ಅವಳ ಮನೆಗೆ
ಹೋಗಬೇಕು. ಅವಳ ತಾಯಿಯನ್ನು ಕಾಣಬೇಕು. ಯಾರೂ
ಇಲ್ಲವೆಂದು ತಿಳಿದಿದ್ದ ಹೃದಯಕ್ಕೂ ಒಂದು ಚುರುಕ್ ಎನ್ನುವ

ರುಳಿದೆ; 'ನೋಡಬೇಕು ಕರೆದು ತಾ' ಎಂದು ಹೇಳುವ ಹೃದಯ
ದೆ. ಹೋಗಬೇಕು; ಹೋಗಿ ಅವರನ್ನು ನೋಡಿ ಬರಬೇಕು.
ನ್ನ ತಾಯಿಯಂತೆಯೇ ಇದ್ದಿರಬೇಕು. ಲಲಿತ ಹೇಳಿದ್ದಾಳೆ
ಅವರಿಬ್ಬರೇ ಇರುವುದೆಂದು. ಹಾಗಾದರೆ ಲಲಿತಳ ತಂದೆ ಇಲ್ಲ.
ಇಲ್ಲ. ಏನಾದರೋ.... ಹೋಗಬೇಕು.

ಶಂಕರನ, ಹಿಂದೋಡಲು ಹವಣಿಸುತ್ತಿದ್ದ ಮನಸ್ಸು ತಿರು
ತು; ಕಾಲೂ ತಿರುಗಿತು. ಹೆಜ್ಜೆಯನ್ನು ಹೀಗೆ ತಿರುಗಿಸಿದ.
ರಡು ಹೆಜ್ಜೆ ಇಟ್ಟ. ಲಲಿತ ಹಿಂದೆ ನೋಡಿದ್ದಳು.

"ಯಾಕೆ ಮೆಲ್ಲನೆ ಬರುತ್ತಿದ್ದೀರಿ ? ಮೈಸೂರಿನಿಂದ ನಡೆದೇ
ಂದಿರೇನೋ ! ಆಯಾಸವಾಗಿದ್ದಿರಬೇಕು !" ಲಲಿತ ತುಸು ಗಟ್ಟಿ
ಯಾಗಿಯೇ ನಗುತ್ತ ನುಡಿದಿದ್ದಳು.

ಎರಡು ಹೆಜ್ಜೆ ನೆಲವನ್ನು ಒಂದು ಹೆಜ್ಜೆಯೇ ತಿಂದಿತು.
ಲಿತೆಯ ಹತ್ತಿರ ಸೇರಿದ್ದ. ಲಲಿತೆಯ ಹತ್ತಿರವೇ ಸೇರಿದ.

—

"ಹೇಯ್ ಸಾಮಿ. ಮುಂದೆ ನೋಡಿ ನಡೀರಿ. ಮುಂದೆ
ಾಡೀ ಪಾಡೀ ಬರ್‍ತಾವೆಂಬೋದೂ ನೋಡಾಕಿಲ್ವೆ ?"

ತಲೆ ಎತ್ತಿದ ಶಂಕರ. ತಾನೆಲ್ಲಿದ್ದಾನೆಂಬುದನ್ನರಿಯಲು
ಸ್ವಲ್ಪ ಹೊತ್ತಾಯ್ತು. ಕಿರು ಬೀದಿಯಲ್ಲಿ: ಎದುರಿಗೆ ಮೂಗು
ದಾರಕ್ಕೆ ಕಟ್ಟಿದ್ದ ಹಗ್ಗವನ್ನು ಬಿಗಿಯಾಗಿ ಹಿಂದಕ್ಕೆ ಜಗ್ಗಿ ಹಿಡಿದು
ಕೂಗಿ ಹೇಳುತ್ತಿದ್ದ ಬಂಡಿಯವನು. ಎರಡೂ ಹೋರಿಗಳು ಬುಸು
ಗುಟ್ಟುತ್ತಿದ್ದುವು. ನೊರೆ ನೊರೆ ಸೋರುತ್ತಿತ್ತು ಕಟವಾಯಿಗಳಿಂದ.
ಹೋರಿಗಳ ನಾಲ್ಕೂ ಕೆಂಗಣ್ಣುಗಳು ತನ್ನನ್ನೇ ನೋಡುತ್ತಿದ್ದವು.

ಚಂಗನೇ ಬಲಗಡೆಯ ಕಟ್ಟೆಯಮೇಲೆ ಹಾರಿದ, ಶಂಕ
ಬೀದಿಯಿಂದ. "ಮುಂದೆ ನೋಡಿ ಓಗಿ ಸಾಮೀ. ತಲೆ ಕ
ಕೊಂಡೀರಿ ?!" ಎಂದು ಹೇಳಿ, 'ಹೇ ಲಚ್ಚಾ' ಎಂದು ಬಾ
ಕೋಲೆತ್ತಿ ಬೆನ್ನಿಗೊಂದು ಹೊಡೆತಹಾಕಿ ಗಾಡಿಯವನು ಉರು
ಹೋದ, ಬಂಡಿಯೊಡನೆ. ಶಂಕರ ಹಿಂದಿರುಗಿ ನೋಡಿದ. ಚಕ್
ಉರುಳುತ್ತಿದ್ದವು. ಗಿರಗಿರನೆ ಉರುಳುತ್ತಿದ್ದವು. ಸುತ್ತಿದ್ದ
ಸುತ್ತುತ್ತಿತ್ತು. ದಾರಿ ಸಾಗುತ್ತಿತ್ತು. ಹಿಂಧಿನದೇ ತಿರುತಿರು
ತಿರುಗುತ್ತಿತ್ತು; ಮುಂದೆ ಮುಂದೆ ಸಾಗುತ್ತಿತ್ತು, ಗಾಡಿ.

ಶಂಕರ ತಲೆ ಕೊಡವಿಕೊಂಡು ಮುಂದುವರಿದ. ಕೆದರಿ
ತಲೆ ಹಾಗೆಯೇ ಇತ್ತು. ಹಾಗೆಯೇ ಬೆರಳಾಡಿಸಿ ಬಾಚಿಕೊಂಡ
ನಾಲ್ಕು ಹೆಜ್ಜೆ ಮುಂದೆ ಸಾಗಿ ಬಲಗಡೆಗೆ ತಿರುಗಿ ನಾಲ್ಕು ಹೆಜ್ಜೆ
ಹೋದ. ಅಲ್ಲಿಯೇ ಎದುರಿಗೆ ನೇತಾಡುತ್ತಿತ್ತು ಹಲಗೆ
"ಶಂಕರ ಪ್ರಸಾದ"

"ಯಾರು ಸ್ವಾಮಿ ನೀವು ? - ಯಾರ ಮನೆ ಹುಡುಕು
ತ್ತಿದ್ದೀರಿ ?"

ಶಂಕರ ಎಡಗಡೆಗೆ ನೋಡಿದ. ಗುಂಡುಮುಖದ ಗುಜ್ಜಾ
ನೆಯ ಹೆಂಗುಸು ಮಾತನಾಡಿಸಿದ್ದಳು. ಶಂಕರನ ಅಲ್ಪ ಸ್ವಲ್ಪ
ಧೈರ್ಯವೂ ಇಲ್ಲವಾಯ್ತು. ಯಾರ ಮನೆಯೆಂದು ಹೇಳುವುದು ?
ಏನೆಂದುಕೊಳ್ಳುವರೋ ! ನಡುಗುವ ಸ್ವರದಲ್ಲಿಯೇ ಕೇಳಿದ.

"ಇಲ್ಲಿ ಕಾಲೇಜ್ ವಿದ್ಯಾರ್ಥಿನಿಯೊಬ್ಬರಿದ್ದಾರಲ್ಲವೆ ?"

"ಯಾರು ಲಲಿತಮ್ಮನೋರಿ ?"

"ಹ್ಞಾಂ. ಅವ್ರೇ ! ಇದೇ ಮನೆಯಲ್ಲೇ ಇದ್ರು...."

"ಇದ್ರೂ ಏನ್ ಸ್ವಾಮಿ ಇದಾರೆ. ಅವ್ರು ನಿಮ್ಗೆ...."
ಆಕೆ ಶಂಕರನ ಪರಿಚಯವನ್ನು ಬಯಸಿ, ಅವನ ಉತ್ತರಕ್ಕಾಗಿ
ಸುಮ್ಮನಾದಳು, ಕೇಳಿ. ಏನು ಉತ್ತರ ಹೇಳಬೇಕು ? ನನ್ನ

ತಂಗಿ ಇವಳೆಂದು ಹೇಳಲಿ ? ಏನೆನ್ನಲಿ ?

"ನಿಮ್ಮ ಹೆಸರೇನ್ರಿ ?" ಶಂಕರ ಸುಮ್ಮನಿದ್ದುದರಿಂದ ಆಕೆ ಕೇಳಿದಳು.

"ಶಂಕರ !"

"ಓಹೋ ಶಂಕರಪ್ನೋರೋ ! ಯಾವಾಗ್ ಬಂದ್ರಿ ? ಇದೇ ತಾನೇ ಬಂದ್ರಾ ? ದೂರ್‌ದಿಂದ ಬಂದಿದೀರಿ ? ಸಾಮಾನೆಲ್ಲಾ ಎಲ್ಲಿಟ್ಟಿದೀರಿ ? ಪಾಪ ಲಲಿತಮ್ಮ ಒಳ್ಳೇ ಹೆಂಗ್ಸು. ನಿಮ್ಮನ್ನ ನೆನ್ಸೇ ನೆನ್‌ಸ್ತಾರೆ. 'ಬರ್‍ತಾರೆ ನಮ್ಮವರು' ಅಂತ ಹೇಳ್ತಿದ್ರು. ಒಂದು ವರ್ಷದ ಹಿಂದೆ ಬಂದಿದ್ರಂತೆ. ನೋಡಿರ್‌ಲಿಲ್ಲ ನಿಮ್ಮನ್ನ. ಪಾಪ ಈಗೊಂದೆಲ್ಡ್ ದಿನ್‌ದಿಂದ ಅವ್ರ ಮೈಯಾಗೆ ಯಾಕೋ ಚನ್ನಾಗಿಲ್ಲಾಂತ ಕಾಣ್ತದೆ. ಆಚೆಮೊನ್ನೆ ಅವ್ರ ಸ್ನೇಹಿತ್ರಂತೆ, ಅವ್ರ ಕರ್‍ಕೊಂಡ್ ಹೋಗಿದ್ರಂತೆ. ಒಳ್ಳೇರ್‍ನ ಯಾರಾದ್ರೂ ನೋಡ್ತಾರೆ, ಕರ್‍ಕೊಂಡ್ ಹೋಗ್ತಾರೆ...." ಎನ್ನುತ್ತ ಆಕೆಯೇ ಬಾಗಿಲು ತಟ್ಟುತ್ತ:

"ಲಲಿತಮ್ನೋರೇ, ಲಲಿತಮ್ನೋರೆ ! ಯಾರ್ ಬಂದಿದ್ದಾರೆ ನೋಡ್ಬನ್ರೀ !" ಎನ್ನುತ್ತ ಹಿಂದಿರುಗಿ ನಸುನಗುತ್ತ ನೋಡಿದಳು. ಶಂಕರನೂ ನಕ್ಕ. ಆದರೆ ಆ ನಗುವಿನಲ್ಲಿ ಕಂಪಿರಲಿಲ್ಲ. ಮಾರ್ದವತೆ ಇರಲಿಲ್ಲ. ಆಕೆ ಪ್ರಯಾಣದ ಬಳಲಿಕೆಯೆಂದು ತಿಳಿದುಕೊಂಡಳೇನೋ !

"ಸಾಮಾನೆಲ್ಲಾ ಎಲ್ಲಿಟ್ಟಿದೀರ್‍ರಿ ?" ಆಕೆ ಮತ್ತೆ ಕೇಳಿದಳು. ಆಕೆಯ ಪ್ರಶ್ನೆಗೆ ಉತ್ತರಿಸಲೇಬೇಕಾಗಿತ್ತು.

"ನನ್ನ ಸ್ನೇಹಿತ್ನ ರೂಂನಲ್ಲಿಟ್ಟು ಬಂದಿದೀನಿ. ಲಲಿತ ಬರ್‍ದಿದ್ಲು ಮನೆ ಬದ್ಲಿ ಮಾಡ್ಬಹುದೂ ಅಂತ. ಅದ್ಕೇ ನೋಡ್ಕೊಂಡು ಸಾಮಾನು ತರೋಣಾಂತ ಹೀಗೇ ಬಂದೆ !" ಸಂದರ್ಭಕ್ಕೆ ಬಂದ ಮಾತನ್ನಾಡಿ ಪಾರಾದೆನೆಂದುಕೊಂಡ.

ಹತ್ತಾರು ಬಾರಿ ಕೂಗಿದ ಮೇಲೆ ಬಾಗಿಲು ತೆರೆಯಿ
ಇಬ್ಬರಿಗೂ ದಿಗ್‌ಭ್ರಮೆಯಾಯ್ತು. ಲಲಿತಳ ಕಣ್ಣು ಕೆಂಪಾಗಿ
ಕೂದಲು ಚವರಿ ಚಲ್ಲಿವೆ. ಮಾಸಿದ ಬಟ್ಟೆ ಮೈಮೇಲೆ. ಆಕೆ
ಕಣ್ಣು ಎರಡು ಹನಿ ಕರೆಯಿತು. ಬೆಂದ ನೆಲ ಸುಂಯ್ ಎಂದಿತ

“ಯಾಕೆ ಲಲಿತಮ್ನೋರೆ, ಚೆನ್ನಾಗಿಲ್ವಾ ? ನನ್ ಕೇಳ್‌ಬಾ
ದಿತ್ತಾ ? ಔಷಧಿ ತರ್ಸಿಕೊಡ್ತಿದ್ದೆ. ಪಕ್ಕದ್ ಮನೆಯೋರೆ
ಇದ್‌ಮೇಲೆ ಇಷ್ಟೂ ಸಹಾಯ ಮಾಡ್‌ಲಾರ್ವೇನ್ರಿ ? ನೋ
ಶಂಕರಪ್‌ನೋರೆ, ಏನ್ನೂ ಕೇಳೊಲ್ಲ. ನಮ್ ಹುಡುಗರಿಗಾ
ಆಗಾಗ ತಿಂಡಿಕೊಟ್ಟೇಕೊಡ್ತಾರೆ. ಏನಾದ್ರೂ ಅಂಗಿ ಹೊಲ
ಕೊಡ್ತಾರೆ. ನಾವೇನಾದ್ರೂ ಮಾಡಿಕೊಟ್ರೆ ಬೇಡಾಂತ ಸಿಟ್
ಗ್ತಾರೆ” ಎಂದು ನಗುತ್ತ ದೂರಿಕೊಂಡಳು, ಆಕೆ. “ಊಟಾನ
ಮಾಡಿಲ್ಲ ? ನಿಮ್ ಯಜಮಾನ್ರು ಅಷ್ಟ್‌ದೂರ್ದಿಂದ ನೋಡ್ಲಿಕೆ
ಬಂದಾಗ್ಲೇ ಹೀಗಾಗ್ಬೇಕೇ ? ಅಥ್ವಾ ಬಾಳಾ ದಿನಾತೂ ಅಂ
ವೈಸನ ಹಚ್ಚಿಕೊಂಡು....” ಕಣ್ಣು ಪಿಳುಕಿಸಿ, ನಕ್ಕಳು.

“ಹ್ಞಾಂ ಕುಂತ್‌ಕೊಳ್ಳಿ ಒಳ್ಗೆ. ಮನಿಯಾಗಿಂದ ತಿಂಡಿ
ಮಾಡಿ ತರ್ತೀನಿ” ಎನ್ನುತ್ತ ತನ್ನ ಮನೆಗೆ ತಿರುಗಿದಳು, ಆಕೆ.
ಲಲಿತ, “ಏನೂ ಬೇಡೀಮ್ಮಾ” ಎನ್ನುವ ಮಾತು ಆಕೆಗೆ ಕೇಳಿಸಲೇ
ಇಲ್ಲ.

ಶಂಕರ ಯಂತ್ರವಾಗಿದ್ದ. ತಾನಿದ್ದೇನೆಂದೂ ಅವನಿಗರಿವಿರ
ಲಿಲ್ಲ. ವಿಚಾರ, ಪಶ್ಚಾತ್ತಾಪ, ವ್ಯಸನಗಳ ನಾನಾ ಈಟಿಗಳು
ಅವನನ್ನು ಇರಿದಿರಿದು ನೋಯಿಸುತ್ತಿದ್ದವು. ಅವನ ಭ್ರಮೆ
ಛಿದ್ರವಾಗಿತ್ತು. ಮತಿಗತವಾಗಿತ್ತು. ಅವನು ಒಳಹೊಕ್ಕ.

ಕೋಣೆಯಲ್ಲಿ ಕುಳಿತಾಗ ಕಾಣಿಸಿದುದು ಗೋಡೆಯ ತುಂಬ
ಸೀಸದ ಕಡ್ಡಿಯಿಂದ ಬರೆದ ಅಕ್ಷರಗಳು: ‘ನಾನು ಪಾಪಿ !
ನಾನು ಪತಿತೆ !!’ ಗಾಳಿಗೆ ಮಹಾದೇವಿಯಕ್ಕನವರ ಚಿತ್ರ ಅಲು

ಗಾಡುತ್ತಿತ್ತು. ಲಲಿತ ಹಾಗೆಯೇ ನಿಂತಿದ್ದಳು. ಮೌನ ಬೀಡು ಬಿಟ್ಟಿತ್ತು. ಎರಡು ಬೇಯುವ ಹೃದಯಗಳು ಮೌನದ ಮೂಸೆಯಲ್ಲಿಯೇ ಕುದಿಯುತ್ತಿದ್ದುವು.

"ಯಾಕೆ ಬಂದಿರಿ ?" ಲಲಿತ ತುಟಿ ತೆರೆದಳು.

"ಓ ನಿಮ್ಗೇನ್ ಬಾಳ ಸಿಟ್ಟಂತಾ ಕಾಣ್ತೈತೆ! ಒಳಾಕೆ ಬಿಟ್ಕೊಂಡಿದ್ದೇ ಕಷ್ಟಾಗೈತೆ ನೋಡ್ರಿ! ಇಷ್ಟುದಿನ ಬರ್ಲಿಲ್ಲಲ್ಲಾಂತ ಸಿಟ್ಟೋ !? ಕರಕೊಂಡೇ ಹೋಗ್ತಾರಂತೇಳ್ರಿ !" ನಗುತ್ತ, ಎರಡು ತಟ್ಟೆಯ ತುಂಬ ಉಪ್ಪಿಟ್ಟು ತುಂಬಿ, ತಂದಿಡುತ್ತ ನುಡಿದಳು, ನೆರೆಮನೆಯಾಕೆ.

"ಇದೆಲ್ಲಾ ಯಾಕೆ ಶಾರದಮ್ನೋರೆ ? ನಾನೇ ಮಾಡ್ತಿದ್ದೆ, ಈಗ." ತನ್ನ ದುಃಖವನ್ನು ಒತ್ತಿ ನುಡಿದಳು ಲಲಿತ.

"ಪರವಾಗಿಲ್ಲ ತಗೊಳ್ರಿ. ಪಾಪ, ನೀವು ಈಗ ಮಾಡ್ತೀರಿ. ಅಂದ್ಹಾಗೆ ನಮ್ಮನಿಗೇ ಬಂದ್ಬಿಡ್ರಿ ಊಟಕ್ಕೆ. ಆಂ! ಇಲ್ಲೇನೂ ಅಡ್ಗೆ ಗಿಡ್ಗೆ ಮಾಡ್ಬೇಡ್ರಿ !" ಎನ್ನುತ್ತ ಶಾರದಮ್ಮ ಹೊರ ಹೊರಟು; ಮುಂಬಾಗಿಲು ಮುಚ್ಚಿಕೊಂಡು ಹೋದರು.

"ಮತ್ತೆ ಈ ಪಾಪಿಯ ಮುಖ ನೋಡುವ ಮನಸ್ಸಾಯ್ತೆ ? ಯಾಕೆ ಬಂದ್ರಿ ?"

"ಲಲಿತ, ನಾನು ಪಾಪಿ; ನೀನಲ್ಲ! ನನ್ನ ಎದೆಯನ್ನು ಮತ್ತೆ ತಿವಿಯಬೇಡ! ನನ್ನ ಹೃದಯ ಬಹಳ ದುರ್ಬಲವಾದದ್ದು. ಅದಕ್ಕೆ ನಿಂತುಕೊಳ್ಳುವ ಶಕ್ತಿಯೂ ಇಲ್ಲ. ಗಾಳಿಗೆ ಸಿಕ್ಕ ಹಾರುವ ಬೀಜ. ಅದರಲ್ಲಿ ಮೊಳೆಯುವ ಒಂದು ಶಕ್ತಿ ಇದ್ದರೂ ಅದಕ್ಕೆ ಸರಿಯಾದ ನೆಲೆಯಿಲ್ಲ. ಒಮ್ಮೆ ಸುಂದರ ಫಲವತ್ತಾದ ಭೂಮಿ ಸಿಕ್ಕಿತ್ತು; ಆದರೆ ನಸುಗಾಳಿ ಸುಳಿದುದಕ್ಕೇ ತೂರಿಕೊಂಡು ದೂರ ಹೋಗಿ ಈಗ ಬರಡು ಭೂಮಿಯಲ್ಲಿ ಬಿದ್ದಿದೆ. ಅಲ್ಲಿ ಬಿಸಿಲು; ಸುಡುಬಿಸಿಲಲ್ಲದೆ ಬೇರೇನೂ ಇಲ್ಲ. ಬೀಜ ಬೆಂದು ಹೋಗುತ್ತೆ.

ಅದನ್ನು ಕೆದರಿ ಮತ್ತೆ ಕರಿಯಬೇಡ!" ಹುಚ್ಚನಂತೆ ಆಡಿ
ಶಂಕರ.

"ಅವಳ ಕುಯುಕ್ತಿ ನನಗೆ ಮೊದಲು ಗೊತ್ತಾಗಲೇ ಇಲ್ಲ
ಅವಳು ನಿಮಗೂ ದೋಷಾರೋಪಣೆ ಮಾಡಿದಳು. ಎಂದೂ
ಇಲ್ಲದ ಆದರದಿಂದ 'ಸಮಾಜ'ದಿಂದ ತನ್ನ ಮನೆಗೆಂದು ಕರೆ
ದೊಯ್ದಳು. ಇದರಲ್ಲಿ ಆ ಪದ್ಮಿನಿಯದೂ ಕೈಯಿದೆ ನನ್ನ
ಕರ್‍ಕೊಂಡೋಗಿದ್ದು ನಾಗ್ವೇಣಿದಲ್ಲ ಪದ್ಮಿನೀ ಮನೆಯಂತೆ. ಅಲ್ಲಿ
ಅಬ್ಬಾ...." ಲಲಿತ ಬಿಕ್ಕಿ ಬಿಕ್ಕಿ ಅತ್ತಳು. ನಿಲ್ಲಲಾರದೆ ಕುಳಿತೂ
ಬಿಟ್ಟಳು. ಬರಿಯ ನೆಲದ ಮೇಲೆ ಉರುಳಿ ಅತ್ತಳು.

"ಲಲಿತ ನೀನೂ ನಂಬಿದೆಯಾ ಅವಳ ಮಾತನ್ನು? ಆ
ನಾಗಿಣಿಯು ನನ್ನ ಪ್ರೇಯಸಿಯೆಂದು ಹೇಳಿದ್ದನ್ನು ನೀನೂ ನಂಬಿ
ದೆಯ? ಸ್ನೇಹಿತೆ ಅಂತ ಮರುಳು ನಟಿಸುತ್ತಿದ್ದ ಆ ಪದ್ಮಿನಿಯೂ
ಅಂಥವಳೇ?" ಮುಖ ಮುಚ್ಚಿ ಅಳುತ್ತಿದ್ದ ಶಂಕರ. ಉಪ್ಪಿಟ್ಟಿನ
ತಟ್ಟೆ ಹಾಗೆಯೇ ಇದ್ದವು. ಅದರ ವಾಸನೆ ಕೋಣೆಯ ತುಂಬ
ತುಂಬಿತ್ತು. ನೊಣಗಳಗುಂಪು ರುಚಿನೋಡುತ್ತಿತ್ತು. ಅತ್ತ
ಯಾರ ಗಮನವೂ ಇಲ್ಲ. ಇಬ್ಬರ ಸ್ಥಿತಿಯೂ ಒಂದೇ!

ಅವರ ಅಳು ನಿಂತುದು ಮತ್ತೆ ಶಾರದಮ್ಮ ಒಳಗೆ ಕಾಲಿ
ಟ್ಟಾಗಲೇ. ಅವಳಿಗೆ ಅಚ್ಚರಿಯಾಯ್ತು. ಯಾಕೆ ಹೀಗೆ ಅಳು
ತ್ತಿದ್ದಾರೆ? ಇಬ್ಬರ ಮುಖದಲ್ಲೂ ಕಳೆಯಿಲ್ಲ. ಏನೋ ವ್ಯಸನ,
ಏನೋ ವೇದನೆ, ಏನೋ ಚಿಂತೆ. ಅದು ಏನೋ! ತಿನ್ನದೆ
ಹಾಗೆಯೇ ಅಳುತ್ತಿದ್ದಾರೆ! ಕಾರಣವೇನಿರಬಹುದು?- ಎಷ್ಟು
ಯೋಚಿಸಿದರೂ ಅವಳಿಗೆ ಹೊಳೆಯಲಿಲ್ಲ.

"ಯಾಕ್ರೀ ಹೀಗಿದೀರಾ?" ಆಕೆ ಕೇಳಿಯೇ ಬಿಟ್ಟಳು.

ಶಂಕರನೇ ಎದೆ ಮಾಡಬೇಕಾಯ್ತು ಉತ್ತರಿಸಲು. ಪರರ
ಎದುರಿಗೆ ಹೀಗೆ ತನ್ನ ದೌರ್ಬಲ್ಯವನ್ನು ತೋರಿಸಿಕೊಳ್ಳುವುದು

ಹೇಯುವೆನಿಸಿತು. ಅವರಿಗೇಕೆ ನಮ್ಮ ಕಥೆ ?

"ಅವಳ ತಾಯಿ ನೆನಪಾಯ್ತು" ಚಿಕ್ಕದಾಗಿಯೇ ಉತ್ತರಿಸಿದ. ಶಾರದಮ್ಮನೂ ನಿಟ್ಟುಸಿರಿಟ್ಟರು.

"ಅಯ್ಯೋ ಪಾಪ. ಅಳಿಯನ್ನ ಹೇಗೆ ಉಪಚರಿಸುತ್ತಿದ್ರೋ ಅವ್ರಿದ್ದಿದ್ರೆ! ಅವ್ರು ಬಾಳ ಒಳ್ಳೇವ್ರಂತೆ, ನಮ್ಮ ಕಮಲಮ್ಮ ಹೇಳಿದ್ರು. ಅವ್ರಿಬ್ರೂ ಒಂದೇ ಸ್ಕೂಲಿನಲ್ಲಿದ್ರಂತೆ.... ಯಾಕಳ ಬೇಕು ಹೋದೋರು ಇನ್ಬರ್ತಾರ್ಯೇ ? ಹ್ಞೂಂ ಏಳ್ರಿ ಇಬ್ರೂ. ನೀರು ಕಾದೈತೆ. ಹಿಂಗೆಲ್ಲಾ ಕುಂತ್ರೆ ಹೆಂಗೆ ನೀವಂತೂ. ಏಳ್ರಿ ಲಲಿತಮ್ನೋರೆ. ಅಪರೂಪಕ್ಕೆ ಬಂದ್ ನಿಮ್ ಯಜಮಾನ್ರಿಗೆ ಒಳ್ಳೇ ರೀತಿ ಉಪಚರಿಸ್ತೀರಿ. ನಕ್ಕೋಂತ ಇರೋದ್ಬಿಟ್ಟು ಅತ್ಕೊಂತ ಇರೋದೆ ? ಹ್ಞೂಂ ಏಳ್ರಿ ಆಗ್ಲೇ ಒಂಬತ್ತಾತು. ನಮ್ಮೆಜಮಾನ್ರು ಆಫೀಸ್ಗೆ ಹೋದ್ರು. ನಿಮ್ ಜೊತ್ಗೇ ಊಟ ಮಾಡ್ಬೇಕಂತಿದ್ರು. ಏನೋ ಕೆಲ್ಸವಂತೆ ಹೊಂಟೋದ್ರು. ಈ ಪೋಲೀಸ್ ಕೆಲ್ಸಂತಂದ್ರೆ ಹಿಂಗೇನೇ ! ಜವಾನಾದ್ರೂ ಅಷ್ಟೇ ದಿವಾನಾದ್ರೂ ಅಷ್ಟೇ !" ಎನ್ನುತ್ತ ಮತ್ತೊಮ್ಮೆ 'ಬನ್ನಿ' ಎಂದು ಹೊರಟರು. ಇನ್ನು ಹೀಗೆಯೇ ಕುಳಿತಿರುವುದು ಸರಿಯಲ್ಲವೆಂದು ಇಬ್ಬರೂ ಯೋಚಿಸಿದರು. ಲಲಿತ ಎದ್ದು,

"ಶಾರದಮ್ನೋರೆ, ನೀವೇನೂ ತೊಂದ್ರೆ ತಗೊಳ್ಬೇಡಿ ! ನಾನಿಲ್ಲೇ ಅಡ್ಗೆ ಮಾಡ್ತೀನಿ. ಎಷ್ಟೊತ್ತು." ಎಂದಳು.

"ಅಯ್ಯೋ ನೀವು ಮಾಡೋದು ಇದ್ದೇ ಇದೆ. ಯಾಕೆ ನಮ್ಮನೆಯಾಗೆ ಊಟ ಮಾಡ್ಬಾರ್ದೂಂತ ಏನಾದ್ರೂ...."

"ಛೇ. ಹಾಗೇನಿಲ್ಲ. ನೀವು ನನ್ನ ತಾಯಿ ಸಮಾನ"

"ಹಾಗಾದ್ರೆ ಅಳಿಯ ಮಗಳಿಗೆ ಬೆಳಗಿನ ಊಟ ತಾಯಿಯೇ ನೀಡ್ತಾಳೆ." ಎಂದು ನಕ್ಕಳು ಶಾರದಮ್ಮ. "ಬನ್ನಿ" ಎಂದು ಅಲ್ಲಿಯೇ ನಿಂತಳು.

"ಬರ್ತೀವಿ ನಡೀರಿ. ಇದೋ ಬಟ್ಟೆ ಬದಲಿಸಬೇಕು" ಎಂದು ಲಲಿತ ಎದ್ದು ಅಡುಗೆ ಮನೆ ಕಡೆ ಹೊರಟಳು. ಶಂಕರನ ಎದ್ದುನಿಂತ. ಶಾರದಮ್ಮ ಮನೆಗೆ ಹೊರಟಳು.

ಶಂಕರ ನೀರವನಾಗಿದ್ದ. ಯಾರೋ ಆ ತಾಯಿ. ನಮ್ಮಿಬ್ಬ ಬಗೆಗೆ ಎಂಥ ಆದರ, ಪ್ರೀತಿ, ವಿಶ್ವಾಸ! ನಾವಿಬ್ಬರೂ ಗಂ ಹೆಂಡಿರೆಂದೇ ತಿಳಿದಿರುವರು. ಲಲಿತ ಹಾಗೆಯೇ ಹೇಳಿದ್ದುದ ಗಿಯೂ ಹೇಳಿದ್ದಳು. ಲಲಿತೆಯ ಮನಸಿನಲ್ಲಿ ಹಾಗೆಯೇ ಇದ್ದಿ ಬಹುದೆ? 'ನಿನ್ನ ತಬ್ಬಿದ ಈ ತೋಳು ಅನ್ಯರನು ತಬ್ಬದು... ನಿನ್ನನ್ನೂ ಕೂಡ!' ಎಂದೊಡನೆಯೇ ಅವಳು ಹೇಗೆ ಸಹಜವೋ ಎಂಬಂತೆ 'ನಿಮ್ಮ ವ್ರತಕ್ಕೆ ಅಡ್ಡಿಬಾರಿ'ನೆಂದು ಅಂದಿದ್ದಳು ಎಂದಿದ್ದರೂ ಶಂಕರ ನಿನ್ನವನೇ! ಎಂದು ತಾಯಿ ನುಡಿದಿದ್ದರೆಂದು ಲಲಿತ ಹೇಳಿದಾಗ ಅವಳ ಉದ್ದೇಶವೇನಿತ್ತೋ! 'ಒಂದಿಲ್ಲ ಒಂದು ದಿನ ನೀವು ಬರುತ್ತೀರಿ; ನನಗೆ ಸಿಗುತ್ತೀರಿ- ಎಂದು ನಾನು ನಂಬಿ ಕೊಂಡಿದ್ದೇ. ಅಂತೆಯೇ ಸಿಕ್ಕಿರಿ!' ಎಂದೂ ವರುಷದ ಹಿಂದೆ, ಇಲ್ಲಿ ಕುಳಿತಾಗ ಅನ್ನಲಿಲ್ಲವೆ? ತನ್ನ ಮನೆಗೆ 'ಶಂಕರ ಪ್ರಸಾದ' ವೆಂದು ಹೆಸರಿಡಲು ಕಾರಣವೇನು? ಲಲಿತಳ ಮನಸ್ಸು ಇನ್ನೂ ನನ್ನಲ್ಲಿದ್ದಿರಬಹುದೆ? ಇದ್ದಿರಬಹುದೆ? ಅವಳೊಬ್ಬ ಹೆಂಗಸು. ಹಲವರಂತೆ ತಾನೂ ಪತಿಯೊಡನೆ ಸುಖವಾಗಿರಬೇಕೆಂದು ಆಸಿಸ ಬಾರದೇಕೆ? ನಾನು ಹಾಗೆ ಅವಳನ್ನು ತೊರೆಯದಿದ್ದಿದ್ದರೆ ಇಂದಿನ ಸ್ಥಿತಿ ಅವಳಿಗೆ ಬರುತ್ತಿತ್ತೆ? ನಾನೆಂತಹ ಪಾಪಿ! ನೀಚ! ಅವಳಿ ಗೆಂತಹ ದ್ರೋಹ ಬಗೆದೆ? ಲಲಿತಳ ಜೀವನ ಹಾಳಾಯ್ತಲ್ಲವೆ? ಹಾಳಾಯ್ತೆ? ಅದನ್ನು ಹಾಳುಮಾಡಿದವರಾರು? ನಾಗವೇಣಿಯೆ? ನನ್ನಮೇಲಿನ ಕ್ರೋಧದಿಂದ ಲಲಿತಳನ್ನು ಹಾಳುಮಾಡಿದಳೆ? ಪದ್ಮಿನಿಯ ಸಹಕಾರವೂ ಇದ್ದಿತಂತೆ!

ಪದ್ಮಿನಿ!

ಅಂದು ಲಲಿತೆಯನ್ನು ಲಾ ಕಾಲೇಜಿನಲ್ಲಿ ಮೊದಲು ಕಂಡಂದು 'Who is he' ಎಂದು ಕೇಳಿದ ಆ ಪದ್ಮಿನಿ ! 'He is my brother' ಎಂದು ಲಲಿತ ನುಡಿದೊಡನೆಯೇ ಸಪ್ಪೆ ಮೋರೆ ಮಾಡಿಕೊಂಡು ಹೋದ ಪದ್ಮಿನಿ. ಎಂಥವಳು ಆಕೆ. ನನ್ನ ಸ್ನೇಹಿತರು ಅವಳ ಚರಿತ್ರೆ ಏನೇನೋ ಹೇಳುತ್ತಿದ್ದಾರೆ. ಆಕೆ ನಿಜ ವಾಗಿಯೂ ಅಂಥವಳಿದ್ದಿರಬಹುದೆ ? ಇಲ್ಲದಿದ್ದರೆ ನಾಗವೇಣಿಗೆ ಏಕೆ ನೆರವಾಗುತ್ತಾಳೆ ? ಲಲಿತೆಯನ್ನು 'ಅಕ್ಕನ ಬಳಗ'ಕ್ಕೆ ಸೇರಿಸಿ ದವಳೂ ಅವಳಂತೆ. ಕಾರ್ಯದರ್ಶಿನಿ ನಾಗವೇಣಿಗೆ ಪರಿಚಯ ಮಾಡಿಸಿಕೊಟ್ಟವಳೂ ಅವಳಂತೆ. ಕಡೆಗೆ ! ಅಯ್ಯೋ ಕಡೆಗೆ. ತನ್ನ ಮನೆಗೆ ಕರೆದೊಯ್ದು ಅಲ್ಲಿ.... ಶಂಕರನಿಗೆ ಮುಂದೆ ಯೋಚಿ ಸಲೂ ಆಗಲಿಲ್ಲ. ಅಲ್ಲಿ ಮತ್ತೆ ಭೀಕರ ಸ್ವಪ್ನ ಭೋರೆಂದು ಸುಳಿದಿರುಗುತ್ತಿತ್ತು. ಬಿರುಗಾಳಿಯಲ್ಲಿ ತರಗೆಲೆಯಾಗುತ್ತಿದ್ದ ಶಂಕರ; ಸುಳಿಯಲ್ಲಿ ಸಿಕ್ಕು ವಿಲಿ ವಿಲಿ ಒದ್ದಾಡುತ್ತಿರುವ ಮೂಕ ಪ್ರಾಣಿಯಾಗುತ್ತಿದ್ದ ಶಂಕರ. ಸುತ್ತುಮುತ್ತಿನಿಂದ ಗುಂಡುಗಳು ರುಳಿ ತನ್ನೆಡೆಗೇ ಧುಡುಂ ಧುಡುಂ ಎಂದು ಬರುವುದನ್ನು ನೋಡಿ ಅಯ್ಯೋ ಎಂದು ಚೀರುವ ಶಂಕರನಾಗುತ್ತಿದ್ದ; ಸಜೀವ ಹೆಣ ವಾಗುತ್ತಿದ್ದ.

ಆದರೆ.... ಆದರೆ.... ನಾಗವೇಣಿಯೂ ಅಲ್ಲ. ಪದ್ಮಿನಿಯೂ ಅಲ್ಲ. ಲಲಿತಳ ಜೀವನ ಹಾಳುಮಾಡಿದವರು. ನಾನು ! ನಾನು ! ನಾನು ಅವಳನ್ನು ದೂರಮಾಡದಿದ್ದರೆ ಹೇಗೆ ಈ ರೀತಿಯಾಗುತ್ತಿ ದ್ದಳು ? ಇಂತಹ ಕೆಲಸದಲ್ಲಿ ಕೈಯಿಡಲು ನಾಗವೇಣಿಗಾಗಲಿ, ಪದ್ಮಿನಿಗಾಗಲಿ ಅವಕಾಶವಿತ್ತೆ. ನಾನು ಅಂದೇ ಅವಳನ್ನೇಕೆ ಸ್ವೀಕರಿಸಬಾರದಾಗಿತ್ತು ? ಇಂದು ಇವಳು ಪತಿತಳಾಗಿದ್ದಾಳೆ. ಅದನ್ನು ಸರಿಪಡಿಸಲಾರೆನೆ ? ಸರಿಪಡಿಸಲು ಸಾಧ್ಯವಿಲ್ಲವೆ ? ನೀನು ತಂಗಿಯ ಸಮಾನವೆಂದು ಹೇಳಿ ಮತ್ತೆ ಈಗ ನನ್ನ ಹೆಣ್ಣಾಗಿ

ಗಣಿಸಲಿ ? ಹಾಗೆ ವರ್ತಿಸಿದರೆ ನೈತಿಕ ಪತನವಲ್ಲವೆ ? ಹ
ಮಾಡುವುದು ಪತನವೆ ? ನೈತಿಕ ಪತನವೆ ? ಇವಳ ಜೀವನವ
ಹಾಳು ಮಾಡಿದುದು ನೈತಿಕ ಪತನವಲ್ಲವೆ ? ಲಲಿತೆಯಂತ
ಹೆಣ್ಣೂ ಪತಿತವಾಯ್ತೆಂದರೆ !

ಲಲಿತೆಯ ಗುಣವೇನು ! ಸಂಯಮ, ಪ್ರೀತಿ, ವಿಶ್ವಾ
ನಿಯತಿಯೇನು ! 'ನಿಮ್ಮ ಹೆಂಡತಿಯನ್ನು ಬಿಡಬೇಡಿ ! ಅವಳಿಗಾ
ಯೂ ನೀವು ಬಾಳಬೇಕು !' ಎಂದಿದ್ದಳು. ಎಂತಹ ಉನ್ನ
ವ್ಯಕ್ತಿ ! ಅವಳಿದಿರು ನಾನೆಷ್ಟು; ಅಣು ! ಅವಳ ಮನಸ್ಸು ಎಷ
ಅಚಲ ! ಎಂಥ ನಿರ್ಧಾರದ ಅಡಿಗಲ್ಲ ಮೇಲೆ ನಿಂತಿದೆ ! ಅವ
ತಾಯಿ ಆ ಬನಶಂಕರಮ್ಮ !

ಬನಶಂಕರಮ್ಮ !

ಶಂಕರನ ಸ್ಮೃತಿ ಹಿಂದೆ ಹಿಂದೆ ಓಡಿತು. ಅಲ್ಲಿ ಅವನ
ನಡೆದ ಹಾದಿ ಹೂವು ಅಂತೆಯೇ ಮುಳ್ಳುಗಳಿಂದ ಕೂಡಿ ಬಿದ್ದಿತ್ತು
ಮುದಿಹಾವಿನಂತೆ.

ನಿರ್ಗತಿಕನಾಗಿ ಊರಕಡೆ, ತನ್ನ ತಾಯಿಯಕಡೆ ಹೆಜ್ಜೆ
ಇಟ್ಟಾಗ ಕೈಯಿತ್ತು ಕರೆದೊಯ್ದಳು ಲಲಿತ ಅವಳ ಮನೆಗೆ. ಆ ರಾತ್ರಿ
ಅವಳ ಮನೆಗೆ ಹೋದಾಗ ಆದ ಆ ಆದರದ ಸ್ವಾಗತವೆಂಥದು

ಚಿಕ್ಕ ಮನೆಯಾದರೂ ಸುಂದರವಾಗಿದೆ. ಗಲಿಬಿಲಿಯಿಲ್ಲದ
ಒಂಟಿಮನೆ. ಒಂದು ದಿನ್ನೆಯಮೇಲೆ ನಗುತ್ತಿತ್ತು ಆ ಮನೆ
ಲಲಿತ ಮೆಲ್ಲನೆ ಕಾಂಪೌಂಡ್ ಗೇಟು ತೆರೆದು, 'ಬನ್ನಿ' ಎಂದು
ಒಳನಡೆದಳು. ಶಂಕರ ಗೇಟನ್ನು ಮುಚ್ಚಿ ಅವಳನ್ನು ಹಿಂಬಾಲಿಸಿ
ದನು. ಲಲಿತ ಉತ್ಸಾಹದಿಂದಲೇ :

"ಅಮ್ಮ ಯಾರು ಬಂದಿದಾರೆ ನೋಡು ಬಾ !" ಎಂದು
ಕೂಗಿದಳು. ಅವಳ ತಾಯಿ ಬನಶಂಕರಮ್ಮ ಹೊರಬಂದರು.
ಶಂಕರ ಕೈ ಮುಗಿದ. ಅವರೂ ಪ್ರತಿಯಾಗಿ ಕೈಮುಗಿದರು.

ಶಂಕರನ ಬಾಡಿದ ಮುಖದಲ್ಲಿ ಅವರನ್ನು ಕಂಡ ಸಂತಸಕ್ಕೋ ಏನೋ ಕಳೆ ಮಿಂಚಿತು. "ಬನ್ನಿ" ಎಂದು ವೆರಾಂಡದಲ್ಲಿಯ ಕುರ್ಚಿಯೊಂದನ್ನು ಒಳಗೆ ತೆಗೆದುಕೊಂಡು ಪಡಸಾಲೆಯಲ್ಲಿಯ ಮೇಜಿನ ಹತ್ತಿರ ಇಟ್ಟು "ಕುಳಿತುಕೊಳ್ಳಿ" ಎಂದರು. ಶಂಕರ ಯಂತ್ರದಂತೆಯೇ ಕುಳಿತ. ಸುತ್ತಲೂ ಕತ್ತು ಹೊರಳಿಸಿ ನೋಡಿದ. ಅಲ್ಲಲ್ಲಿ ಕೆಲವು ವಚನ ಪಟಗಳು ನೇತಾಡುತ್ತಿದ್ದುವು. ಹತ್ತಿರ ದಲ್ಲಿಯೇ ಕಣ್ಣಿಗೆ ಬಿತ್ತು ಬಸವಣ್ಣನವರ ವಚನ: ಹದುಳವೆ? ಬನ್ನಿ ಕುಳ್ಳಿರಿ ಎಂದರೆ ನಿಮ್ಮ ನೆಲ ಕುಳಿಹೋಹುದೆ? ಹೌದು ವಚನದಲ್ಲಿಯ ಸಾರವನ್ನು ಗ್ರಹಿಸಿದ್ದಾರೆ ಈ ಜನ. ಎಂತಹ ಪ್ರೀತಿ ಈ ತಾಯ ಮುಖದಲ್ಲಿ ಕಾಣುತ್ತಿದೆ! ನಾನಾರು ಎಂಬುದು -ಹೆಸರಿನಲ್ಲಿಯಲ್ಲದೆ- ಗೊತ್ತಿಲ್ಲ. ಯಾರೆಂದು ವಿಚಾರಿಸದೇ ಹೀಗೆ ಆದರದಿಂದ ಕುಳ್ಳಿರಿಸಿದರಲ್ಲ? ನನಗೆ ಈ ಮನೆ ಹೊಸದೆಂದೇ ಕಾಣಿಸದು. ಎಲ್ಲಿಯದು? ಲಲಿತಳಂತಹ ಹೆಣ್ಣು ಈ ಮನೆಯ ವಳು. ಬನಶಂಕರಮ್ಮನವರು ಇವರೇ ಅಲ್ಲದಿನ್ನಾರು? ಲಲಿತ ಹೇಳಿದ್ದ ಎಲ್ಲ ಗುಣಗಳೂ ಈ ತಾಯಿಯಲ್ಲಿದ್ದಂತೆ ಒಡೆದು ಕಾಣು ತ್ತವೆ. ಶಂಕರ ಯೋಚನೆಯಲ್ಲಿಯೇ ಮಗ್ನನಾಗಿದ್ದ.

ತಲೆ ಎತ್ತಿದಾಗ ಲಲಿತ ಸಾಧಾರಣ ಸೀರೆ ಉಟ್ಟುಕೊಂಡು ಪಕ್ಕದ ಕುರ್ಚಿಯಲ್ಲಿ ಕುಳಿತಳು, ಬಂದು. ಬನಶಂಕರಮ್ಮನವರೂ ಇನ್ನೊಂದು ಕುರ್ಚಿಯಲ್ಲಿ ಕುಳಿತರು.

"ಯಾರು ಗೊತ್ತಾಯ್ತೇನಮ್ಮ?" ಲಲಿತ ಕೇಳಿದಳು. ಶಂಕರ ತಲೆ ತಗ್ಗಿಸಿದ್ದ. ಲಲಿತ ತಾಯಿಯನ್ನು ಪ್ರಶ್ನಾರ್ಥಕ ಮುಖದಿಂದ ನಿಟ್ಟಿಸುತ್ತಿದ್ದಳು, ನಗುತ್ತ.

"ಗೊತ್ತಾಯ್ತು. ಯಾರೆಂಬೋದು!" ಅವರು ನುಡಿದರು. ಶಂಕರನಿಗೆ ಸ್ವಲ್ಪ ಆಚ್ಚರಿಯೇ ಆಯ್ತು. ಅದು ಹೇಗೆ ಗೊತ್ತಾ ಯ್ತು? ಇದೇ ಮೊದಲ ಸಲ ತಾನು ಕಾಣುವುದು!

"ಹಂಗಾದ್ರೆ ಯಾರು ಹೇಳು ?" ಲಲಿತ ತಾಯಿಯ
ತಿವಿದು ಕೇಳಿದಳು.

"ಅಯ್ಯೋ ಬಿಡಮ್ಮ ಮುಖ ನೋಡಿದರೇ ಗೊತ್ತಾಗಲ್ವ
ಶಂಕರಪ್ಪನವರಲ್ವೆ !" ಲಲಿತೆಗೆ ಆಶಾಭಂಗವಾದಂತಾಯ್ತು. ತಾ
ಹೇಗೆ ತಿಳಿದಳು. ಈ ಮೊದಲೇ ನೋಡಿದ್ದಿರಬಹುದೆ ? ಬಹು
ನಾನು ಆಗಾಗ ಹೇಳುತ್ತಿದ್ದುದರ ಮೇಲೆ ಊಹಿಸಿ ಹೇಳಿರಬೇಕ
ಚೇಷ್ಟೆ ಮಾಡಬೇಕೆನ್ನಿಸಿತು. "ಅಲ್ಲಮ್ಮ ಇವರು ಶಂಕರಪ್ಪನವರ
ಮುದಕಪ್ಪನವರೂ ಅಂತ" ಎಂದು ಕಿಲಕ್ಕನೇ ನಕ್ಕಳು. ಶಂಕರನ
ಮೈಯೆಲ್ಲಾ ನಾಚಿಕೆಯಾಯ್ತು. ಲಲಿತ ಇಂತಹ ಹಾಸ್ಯಗಾ
ಳೆಂದು ಅರಿಯ. ಬರಿಯ ಬಣ್ಣದ ಚಿಟ್ಟೆ; ಅಹಂಕಾರದ ಮುದ್ದೆ
ಎಂದೇ ಬಗೆದಿದ್ದ. ತಗ್ಗಿಸಿದ ತಲೆಯನ್ನು ಮತ್ತೂ ತಗ್ಗಿಸಿದ.

"ಬಿಡಮ್ಮಾ ನಿನ್ನ ಹಾಸ್ಯ. ಪಾಪ. ನನ್ಗೆ ಗೊತ್ತು ನೀನ
ಯಾಕೆ ಹೀಗೆ ಅಂತೀ ಅಂತ !" ಎಂದು ಬನಶಂಕರಮ್ಮನವರು
ಶಂಕರನಕಡೆ ತಿರುಗಿ,

"ನೀವು ಅವತ್ತು ಭಾಷಣ ಮಾಡಿದ್ರಂತಲ್ಲ. ಇಂದಿನ ವಿದ್ಯಾ
ರ್ಥಿನಿಯರು ಎನ್ನೋ ಬಗ್ಗೆ" ಎನ್ನುತ್ತಿದ್ದಂತೆಯೇ ಶಂಕರನ ಮೈ
ನಡುಗಿತು. ಇದೆಂತಹ ಪ್ರಸಂಗ. ಈಗ ಈ ತಾಯಿ ನನ್ನನ್ನು
ಹೇಗನ್ನುತ್ತಾರೋ ! ಶಂಕರ ಉಡುಗಿಹೋದ. ಅವರು ಮಾತ
ನಾಡುತ್ತಲೇ ಇದ್ದರು :

"ಆಗ ಹಳೇ ಕಾಲ್ದ ಮಂದಿ ಮಾತನಾಡಿದಂತೇ ಮಾತಾಡಿದ
ರಂತೆ. ಎಲ್ಲೋ ಮುದ್ಕ ಎಂದು ಅಂದಿದ್ಲು ಲಲಿತ. ಅದ್ಕೆ
ಒಳ್ಳೇ ಹಾಸ್ಯ ಮಾಡೋಣಾಂತ ಈಗ ತೆಗೆದಿದ್ದಾಳೆ." ಎನ್ನುತ್ತ
ಲಲಿತೆಯ ಕಡೆ ತಿರುಗಿ,

ಅಂತೂ ಕರ್‍ಕೊಂಡು ಬಂದೆಯಲ್ಲ. ಈಗ ಕರ್‍ಕೊಂಡು
ಬಂದೋಳು ಅವರನ್ನ ಒಳ್ಳೇ ಚೆನ್ನಾಗಿ ಕಾಣ್ತಿದೀಯಾ ?" ಎಂದು

ನಕ್ಕರು. "ಹೋಗು ಒಳಗ್ಹೋಗಿ ತಟ್ಟೆ ಇಡು. ಇವತ್ತು ಇಲ್ಲೇ ಊಟ ಮಾಡ್ತಾರೆ ಇವ್ರು" ಎಂದು ಲಲಿತಳನ್ನು ಒಳಗೆ ಕಳಿಸಿದರು. ಲಲಿತ ನಗುತ್ತ ಎದ್ದುಹೋದಳು. ಶಂಕರನ ಎದೆ ಕಂಪಿಸಿತು. ನಾಲಗೆ ತೊದಲಿತು. ಇಂದೇ ಈಗಲೇ ಪರಿಚಯವಾದೊಡನೆಯೇ ಊಟ ಮಾಡಲಿಕ್ಕೆ ಕರೆಯುತ್ತಿದ್ದಾರೆ. ನಾನು ಈಗ ಇಲ್ಲಿ ಊಟ ಮಾಡಲೆ ? ಛೇ ! ನಾಚಿಕೆಗೆಟ್ಟ ಪ್ರಸಂಗ. ಬೇಡ, ಇದುವರೆವಿಗೂ ಯಾರ ಮನೆಗೂ ಹೋಗಿಲ್ಲ, ಉಂಡಿಲ್ಲ. ಇಂದು ಹೊಸಪರಿಚಿತರ ಮನೆಯಲ್ಲಿ ! ಬೇಡ; ಬೇಡ ! "ಇಲ್ಲ ತಾಯಿ ನಾನು ಊಟ ಮಾಡೋ ಹಾಗಿಲ್ಲ. ಸಾಯಂಕಾಲ ತಾನೇ ತಿಂಡಿ ಆಯ್ತು. ಅದರಲ್ಲಿ ಈಗ ಹಾಸ್ಟಲಿಗೆ ಹೋಗ್ಬೇಕು. ಊಟಕ್ಕೆ ಹೊತ್ತಾಯ್ತು. ಹೋಗದಿದ್ರೆ ಮೇನೇಜರರು...." ಶಂಕರ ತಾನು ಹೇಳುತ್ತಲೇ ಇದ್ದ. ಹೊಟ್ಟೆಯಲ್ಲಿ ಡೊಂಬರು ಗಣೆಯೇರಿ ಲಾಗಹಾಕುತ್ತಿದ್ದರು. ಈಗ ಹೋದರೂ ಹಾಸ್ಟಲಿನಲ್ಲಿ ಊಟವಿಲ್ಲವೆಂಬುದೂ ಗೊತ್ತು. ಸಂಜೆ ಯಾವ ತಿಂಡಿಯಾಯ್ತೆಂದೂ ಬಲ್ಲ. ಆದರೆ ಮಾನವಿದೆ ಯಲ್ಲ ! ಮುಚ್ಚಿ ಮಾತನಾಡುತ್ತಿದ್ದ.

"ಯಾವ ಹಾಸ್ಟಲಿನಲ್ಲಿದ್ದೀರಿ ?"

"ಕಲ್ಲೇಶ್ವರ ಸ್ವಾಮಿಗಳ ಹಾಸ್ಟಲಿನಲ್ಲಿ !"

"ಯಾರು. ನಮ್ ಸ್ವಾಮಿಗಳ ಹಾಸ್ಟಲಿನಲ್ಲೆ ? ಸಂತೋಷ. ಎಂಥಾ ಒಳ್ಳೆಯ ಸ್ವಾಮಿಗಳು ! ಎಷ್ಟು ಉದಾರ ಗುಣ ! ಎಷ್ಟೋ ಜನ ವಿದ್ಯಾರ್ಥಿಗಳು ಉದ್ಧಾರವಾಗಿ ಹೋಗಿದಾರೆ !"

ಶಂಕರ ಒಳಗೊಳಗೇ ನಕ್ಕ.

ಎಂಥಾ ಒಳ್ಳೆಯ ಸ್ವಾಮಿಗಳು !

ಎಷ್ಟು ಉದಾರ ಗುಣ !

ಎಷ್ಟೋಜನ ವಿದ್ಯಾರ್ಥಿಗಳು ಉದ್ಧಾರವಾಗಿ ಹೋಗಿದ್ದಾರೆ !

ಅಯ್ಯೋ ಪಾಪ. ನಿಜ ಸಮಾಚಾರ ಗೊತ್ತಿಲ್ಲ ಇವರಿಗೆ.

ಅಲ್ಲಿ ಒಬ್ಬ ವಿದ್ಯಾರ್ಥಿ ಹೇಗೆ ಕಷ್ಟಪಟ್ಟಿದ್ದಾನೆಂಬುದು ಇವರಿ ಗೊತ್ತಿಲ್ಲ. ಒಳ್ಳೆಯ ಗುಣವಂತೆ! ಉದಾರ ಗುಣವಂತೆ! ಒಳ್ಳೆಯ ವರ ಕಣ್ಣಿಗೆ ಎಲ್ಲರೂ ಒಳ್ಳೆಯವರೇ! ಉದಾರ ಗುಣದವ ಕಣ್ಣಿಗೆ ಎಲ್ಲರೂ ಉದಾರಿಗಳೇ! ಬನಶಂಕರಮ್ಮನವರಂತವ ಸುಹೃದಯದಲ್ಲಿ ನಿಷ್ಕಲ್ಮಷ ಹೃದಯದಲ್ಲಿ ಸ್ವಾಮಿಗಳ ನಿಜಗು ಹೇಗೆ ಪಡಿಮೂಡೀತು? ಹಾಗಾದರೆ ನಾನು ಕೆಟ್ಟವನೆ? ಸ್ವಾಮಿ ಗಳು ಕೆಟ್ಟವರೆಂದು ಕಾಣುವ ನಾನು ಕೆಟ್ಟವನೆ? ನನ್ನ ಕಣ್ಣು ಕೊಳಚೆಯೆ? ನನ್ನ ಹೃದಯ ಕಲ್ಮಷವೆ? ಹಾಗಾದರೆ ಸ್ವಾಮಿಗಳ ಎಂಥವರು? ನನಗೆ ಕೆಟ್ಟವರು; ಬನಶಂಕರಮ್ಮನವರಿಗೆ ಒಳ್ಳೆಯ ವರು. ಇಬ್ಬರೂ ಒಬ್ಬರಲ್ಲಿರಲು ಸಾಧ್ಯವೆ? ಒಂದು ವಸ್ತುವನ್ನು ಕಾಣುವ ಹಲವು ಕಣ್ಣುಗಳು ಹಲವಾರು ವಿಧ ಕಾಣುತ್ತವೆ ಹಾಗಾದರೆ ನಮ್ಮ ಸ್ವಾಮೀಜಿ ಎಂಥವರು? ಎಂಥವರು ನಮ್ಮ ಸ್ವಾಮೀಜಿ?

ಶಂಕರ ಸುಮ್ಮನೇ ಕೇಳುತ್ತಿದ್ದ.

“ಪರವಾಯಿಲ್ಲ. ಇವತ್ತು ಇಲ್ಲೇ ಊಟಮಾಡಿ. ಬೆಳಿಗ್ಗೆ ಹೋಗುವಿರಂತೆ.... ನಿಮ್ಮ ಕವಿತೆ ನೋಡ್ತಿರ್ತೀನಿ. ತುಂಬಾ ಚೆನ್ನಾಗಿರುತ್ವೆ. ಮೊನ್ನೆ ದಿವ್ಯ ಜ್ಯೋತಿಯ ವಿಶೇಷ ಸಂಚಿಕೆಯಲ್ಲಿ ಬಂತಲ್ಲ ‘ಕೊರತೆಯ ಕೂಗು?’ ಅದನ್ನ ನಮ್ಮ ಸ್ಕೂಲ್‌ನಲ್ಲಿ ಆಡ್ಸಿದ್ವಿ. ತುಂಬಾ ಚೆನ್ನಿತ್ತು.

“ಲಲಿತಮ್ಮನವರೂ ಹೇಳಿದ್ರು. ಅದೆಲ್ಲಾ ನಿಮ್ಮ ದೊಡ್ಡ ಗುಣ. ಏನೋ ಬರೀತೀನಿ ನಿಮ್ಮಂಥವರು ಮೆಚ್ಚಿಕೊಂಡ್ರೆ ಸಾಕು” ಎಂದ ಶಂಕರ. ಅವನಿಗೆ ರೋಮಾಂಚನ. ಹೀಗೆ ತನ್ನ ಕೃತಿಗಳ ಬಗ್ಗೆ ಪ್ರಶಂಸೆಯನ್ನು ಕೇಳಿದ್ದು ಇದೇ ಮೊದಲು.

“ನೀವೇನೂ ತಿಳ್ಕೋಬೇಡಿ. ನಮ್ಮ ಹುಡ್ಗಿ ಬಗ್ಗೆ. ಆಕೆ ಚಿಕ್ಕೋಳಿಂದ ಹಾಗೆಯೇ ಬೆಳ್ದು ಬಂದವಳು. ಅವ್ರ ತಂದೆ

ಇರೋವರ‍್ಗೂ ನನ್ನ ಹತ್ರ ಬರ‍್ತಿರ‍್ಲಿಲ್ಲ. ಅವ್ರು ಹೋದ್ಮೇಲೆ...."
ಎನ್ನುತ್ತ ಬನಶಂಕರಮ್ಮನವರು ಮುಖವತ್ತ ತಿರುಗಿಸಿದರು. ಅವರ ಕಂಠ ಗದ್ಗದಿಸುತ್ತಿರುವುದೂ ಶಂಕರನಿಗೆ ಕೇಳಿಸಿತು. ಬನಶಂಕರಮ್ಮನವರು ತನಗೆ ಕಾಣದಂತೆ ಕಣ್ಣೊರಸಿಕೊಂಡುದನ್ನೂ ಕಂಡ.

ಆಗ್ಲಿಂದ ಹೀಗೆ ಸಲಿಗೆಯಿಂದ ಬೆಳೆಸೀನಿ. ನೀವೇನೋ ಭಾಷಣದಲ್ಲಿ ಮಾತಾಡ್ತಾ ಅಂದ್ರಂತೆ, 'ನನ್ನೇ ಅಮ್ಮಾ, ಅವ್ರು ಕುರಿತು ಮಾತಾಡಿದ್ದು' ಅಂತ ಅಂದ್ಲು. ಹೌದಮ್ಮ ಹಾಗೆಲ್ಲಾ ಮಾಡ್ತಾರ‍್ದು. ಹೆಂಗ್ಸು ಅಂದ್ರೆ ಹೆಂಗ್ಸಾಗಿರ‍್ಬೇಕು!' ಅಂತ ನಾನೂ ಹೇಳ್ದೆ. ಆಗ್ನಿಂದ ನಿಮ್ಮನ್ನ ನೋಡ್ಬೇಕಂತ ಇದ್ದೆ. ಆಯ್ತಲ್ಲ. ನೀವು ಬೇರೇನೂ ತಿಳ್ಕೋಬೇಡಿ. ಮನೆಗೆ ಬರ‍್ತಾ ಇರಿ. ಲಲಿತ ಸ್ವಲ್ಪ ಮುದ್ದು. ಬರೀ ಮಾತಾಡ್ತಾಳೆ. ಓದು ಅಂದ್ರೆ ಅಷ್ಟು ಹಿಡಿಸೊಲ್ಲ" ಎನ್ನುತ್ತಿರುವಾಗ "ಅಮ್ಮಾ" ಎಂದು ಲಲಿತ ಒಳಗಿನಿಂದ ಕೂಗಿದಳು.

"ಹ್ಞೂಂ. ಏಳಿ. ಮುಖ ತೊಳ್ಕೊಳ್ಳಿ. ಶಿವಪೂಜೆ ಮಾಡ್ಕೋಬೇಕೇನೋ. ನಮ್ ಸ್ವಾಮಿಗಳ ಹಾಸ್ಟಲಿನಲ್ಲಿದ್ಮೇಲೆ ತುಂಬಾ ಶಿವಪೂಜೆ ಮಾಡ್ತಿರಬೇಕು"

ಶಂಕರನ ಎದೆ ಧಸಕ್ಕೆಂದಿತು. ಶಿವಪೂಜೆ! ಲಿಂಗ! ಕರಡಿಗೆ. ಅದಿಲ್ಲದುದಕ್ಕೇ ಅಲ್ಲವೇ ನಾನೀತೆರನಾದದ್ದು? ಈಗ ಏನು ಮಾಡುವುದು? ಇಲ್ಲ ಎನ್ನುವಂತಿಲ್ಲ. ಪೂಜೆ ಮಾಡಲು ಲಿಂಗವೇ ಇಲ್ಲ. ಬನಶಂಕರಮ್ಮನವರ ಒಂದೊಂದು ಮಾತೂ ಈಟಿಯಾಗುತ್ತಿತ್ತು. ತುಂಬಿದ ಹೃದಯದ ತಳಿರಮಾತು ತೇಲಿ ಬಂದು ಪಾಸಾಸುಕಳ್ಳಿಯಾಗುತ್ತಿತ್ತು; ಮುಳ್ಳು ನಿಮಿರಿ ಎದೆಗೆ ಚುಚ್ಚಿ ಚುಚ್ಚಿ ನೋಯಿಸುತ್ತಿತ್ತು. ಗಾಯ ಮಾಡಿ ರಕ್ತ ಸೋರಿಸುತ್ತಿತ್ತು. ಧಾರೆಯಾಗಿ ಹರಿಯುತ್ತಿತ್ತು. ತಾನು ಮಾಡಿದುದು ತಪ್ಪೆ? ಕರಡಿಗೆ ಮಾರಬಾರದಿತ್ತೆ? ಲಿಂಗ ಪೂಜೆ ಕಂದಾಚಾರ

ವಲ್ಲವೆ ? ಅಕ್ಕ ಮಹಾದೇವಿ ಹಾಗೆ ಯಾಕೆ ಅನ್ನುತ್ತಾಳೆ ? ಲಿಂ
ವಿದ್ದ ಭವಿಯಲ್ಲದಲ್ಲ; ಲಿಂಗವಿಲ್ಲದವನೇ ಭವಿಯಲ್ಲ! ಕಾ
ಕ್ರೋಧ ಮುಂತಾದ ಏಳು ಭವಿಗಳನ್ನು ಒಳಗಿಟ್ಟುಕೊಂಡವನ
ಭವಿ. ಲಿಂಗವಿಲ್ಲದಮಾತ್ರಕ್ಕೇ ಭವಿಯಾಗಲಿಲ್ಲ. ನಾನು ಈ
ಲಿಂಗ ಧರಿಸಿಲ್ಲವೆಂದು ಭವಿಯೇ ? ನಾನು ಭವಿಯೇ ? ನಾನ
ಲಿಂಗವಂತನಲ್ಲವೆ ? ನಾನು ಲಿಂಗವಂತ ! ನಾನು ಲಿಂಗವಂತ
ನನಗೆ ಯಾವ ಆ ಏಳು ಭವಿಗಳೂ ಇಲ್ಲ ! ಇಲ್ಲವೆ ? "ನಿನ
ಕಾಮವಿಲ್ಲವೆ ?"

"ಇಲ್ಲ ! ಇಲ್ಲ !"

"ಹಾಗಾದರೆ ಲಲಿತೆಯ ಹಿಂದೆ ಏಕೆ ಬಂದೆ ?"

"ಇದು ಕಾಮವೆ ? ತಾಯಿ ಕರೆಯುತ್ತಾರೆ. ನಿಮ್ಮ ತಂಗಿ
ಯೆಂದು ತಿಳಿದುಕೊಳ್ಳಿ ಎಂದುದಕ್ಕಲ್ಲವೇ ನಾನು ಹಿಂಬಾಲಿಸಿದ್ದು ?
ನನಗೆ ಕಾಮವಿತ್ತೆ ಲಲಿತೆಯಬಗ್ಗೆ ?" "ನಿಜವಾಗಿಯೂ ಹೇಳು !
ಆಲೋಚಿಸಿ ಹೇಳು. ಅದರ ಒಂದು ಕಣವೂ ಇಲ್ಲವೆ ? ಹೋಗಲಿ
ಕ್ರೋಧವಿಲ್ಲವೆ ?"

"ಇಲ್ಲ ! ನನಗೆ ಕ್ರೋಧವಿಲ್ಲ ! ನಾನು ಯಾರ ಮೇಲೆ
ಕ್ರೋಧವನ್ನು ತಾಳಲಿ ?" "ಯಾರಮೇಲೆ ?" ಅವನ ಮನಸ್ಸು
ಕಿಲಕಿಲನೆ ನಕ್ಕುಬಿಟ್ಟಿತು.

"ಯಾರಮೇಲೆಯೆ ? ನಿನಗೆ ಊಟ ಹಾಕದೆ ಕಳಿಸಿದುದಕ್ಕೆ
ಸ್ವಾಮಿಗಳ ಬಗ್ಗೆ ಕ್ರೋಧವಿಲ್ಲವೆ ? ಅವರ ಬಗ್ಗೆ ವಿಷಕಾರಲಿಲ್ಲವೆ ?
ಈಗ ಸ್ವಾಮಿಗಳ ಬಗೆಗೆ ಬನಶಂಕರಮ್ಮ ಒಳ್ಳೆಯವರೆಂದುದಕ್ಕೆ
ಎಂತಹ ಒಳ್ಳೆಯಗುಣ ಎಂದು ತಿರಸ್ಕಾರದಿಂದ ಮನದಲ್ಲಿ ನೆನೆಯ
ಲಿಲ್ಲವೆ ? ನಿನಗೆ ಕ್ರೋಧವಿಲ್ಲವೆ ? ಇಲ್ಲವೆ ?"

ಶಂಕರ ಸುಮ್ಮನಾದ. ಒಂದೊಂದಾಗಿ ಬೆವರು ಹಣೆಯಲ್ಲಿ
ಸರಗೈಯುತ್ತಿತ್ತು. "ನಿನಗೆ ಮೋಹವಿಲ್ಲವೆ, ಲಲಿತೆಯ ಬಗ್ಗೆ ?

ಮದವಿಲ್ಲವೆ ನಿನ್ನ ಸಾಹಿತ್ಯ ಶಕ್ತಿಗೆ? ಮತ್ಸರವಿಲ್ಲವೆ, ಸ್ವಾಮಿಗಳ ಬಗೆಗೆ? ಲೋಭವಿಲ್ಲವೆ? ಆಮಿಷವಿಲ್ಲವೆ? ನೀನು ಲೋಭಿಯಲ್ಲವೆ? ತಾಯಿಯನ್ನು ಅಲ್ಲಿ ದೂರದಲ್ಲಿ ದುಡಿಯಲು ಬಿಟ್ಟು ಬಂದು ಆಮಿಷಪೂರಿತನಾಗಿ ಇಲ್ಲಿರುವ ನೀನು ಲೋಭಿಯಲ್ಲವೆ? ಅಲ್ಲವೇನು? ನೀನು ಭವಿಯಲ್ಲವೆ? ಭವಿಯಲ್ಲವೇನೋ ಹೇ ಶಂಕರಾ!"

ಶಂಕರ ನಡುಗಿಬಿಟ್ಟ. ಬೆವರು ಧಾರಾಕಾರವಾಗಿ ಸೋರುತ್ತಿತ್ತು. ಕಣ್ಣು ತುಂಬಿತ್ತು. ಮಬ್ಬು ಮಬ್ಬಾಗಿ ತೇಲುತ್ತಿತ್ತು ಬನಶಂಕರಮ್ಮನವರ ಚಿತ್ರ. ಕೈಕಾಲು ನಡುಗಿತು. ನಾನು ಭವಿ. ನಾನು ಭವಿ! ನನಗಿಂತ ಅನ್ಯರು ಭವಿಯಿಲ್ಲ! ಲಿಂಗವಿಲ್ಲದ ಭವಿ. ಲಿಂಗವಿದ್ದ ಭವಿಯೂ ಅಲ್ಲ. ಲಿಂಗದಲ್ಲಿ ಅರ್ಥವಿಲ್ಲವೆಂದು ತಿರಸ್ಕರಿಸುವ ಒಂದು ಕಿಡಿಯಾದರೂ ನನ್ನಲ್ಲಿ ಕೆದರಿದೆ. ಕೆದರಿದೆ! ಅದೀಗ ಉರಿಯಾಗಿದೆ. ಬುಗಿ ಬುಗಿಲೆಂದು ಕೆನ್ನಾಲಗೆ ಚಾಚಿ ಚಾಚಿ ನೆಕ್ಕುತ್ತಿದೆ. ನಾನು ಲಿಂಗ ತ್ಯಜಿಸಲು ಅಕ್ಕಮಹಾದೇವಿಯೆ? ಅಲ್ಲಮಪ್ರಭುವೆ? ಅವರ ಹೆಸರು ಹೇಳಲೂ ನನಗೆ ಯೋಗ್ಯತೆಯಿಲ್ಲ. ನಾನು ಯೋಗ್ಯನಲ್ಲ. ನನಗೆ ಲಿಂಗವನ್ನೇ ಅರಿತುಕೊಳ್ಳುವ ಶಕ್ತಿಯಿಲ್ಲ. ತತ್ವ ಬೋಧಿಸ ಹೊರಟಿರುವೆನೇ? ಯಾವುದನ್ನೂ ಅರ್ಥಮಾಡಿಕೊಳ್ಳದ ನಾನು ಪ್ರವೀಣನಂತೆಯೇ ಮೆರೆಯುತ್ತಿಲ್ಲವೆ? ನನ್ನ ಸಮಸಾರಿಂದು ಮೆರೆಯುತ್ತಿಲ್ಲವೆ? ನಾನೆಷ್ಟು ಸಣ್ಣವನು! ನಾನೆಷ್ಟು ಕೀಳು! ನಾನೆಷ್ಟು ಅಣು! ಅಣು! ಅಣು! ಶರಣಾಗು! ಶರಣಾಗು! ಹ್ಞಾಂ ಶರಣಾಗು!

ಶಂಕರನ ಮೈಯೆಲ್ಲಾ ನಡುಗಿತು. ಕಣ್ಣು ತೆರೆದ. ಮುಂದೆಯೇ ಕುಳಿತುಕೊಂಡಿದ್ದರು ಬನಶಂಕರಮ್ಮ. ನನ್ನ ಏಳುವಿಕೆಗಾಗಿ ಕಾದು ಕುಳಿತಿದ್ದಾರೆ. ನಾನು ಏಳಲೆ? ನಾನು ಹೇಗೆ ಏಳಲಿ? ಥರ ಥರ ನಡುಗುತ್ತಿರುವ ನಾನು ಹೇಗೆ ಏಳಲಿ?

ಬನಶಂಕರಮ್ಮ ಎದ್ದರು. ಶಂಕರ ಹಾಗೆಯೇ ಕುಳಿತಿ
ಏನು ಮಾಡಬೇಕು ? ಹಸಿವಿಲ್ಲ, ಖಂಡಿತ ನಾನೊಲ್ಲೆ ! ಕ್ಷಮಿಸಿ
ಎನ್ನಲಿ ? ನನಗೆ ಹಸಿವೆಯಿಲ್ಲವೆ ? ಇದೆ ! ಅಜ್ಞಾನ, ಜ್ಞಾನ
ಹೊಟ್ಟೆಯ ಎಲ್ಲ ಹಸಿವೂ ಇದೆ. ಹಸಿವೆಯಿಲ್ಲ. ಹೊಟ್ಟೆತುಂಬಿ
ಯೆಂದು ಹೇಳಿದರೆ ಸುಳ್ಳಾಡಿದಂತಲ್ಲವೆ ? ಈ ಸುಳ್ಳು ಯಾ
ಪ್ರಾಕಾರದ್ದು ? ಹೇಡಿಯದು ! ನಾನು ಹೇಡಿ ! ಇಲ್ಲಿ ಕುಳಿತಿದ್ದೇ
ಮಹಾ ಕವಿಯಂತೆ ! ನನ್ನ ಲೇಖನಿ ತುಂಬು ಸಂಪದಯುಕ್ತವಂತೆ
ಲೇಖನಿ ಮಾತ್ರ ಸಂಪದಯುಕ್ತ. ನಾನು ? ನನ್ನ ಎದೆ ? ನನ
ಮನಸ್ಸು ? ಕಳ್ಳ ! ಹೇಡಿ ! ನೀಚ ! ಲೋಭಿ ! ಆದರೂ ಎ
ಶರಣಾಗಲೊಲ್ಲದು ಏನು ಮಾಡುವುದು ? ಏನು ಮಾಡುವುದು

ಬನಶಂಕರಮ್ಮನವರು ಬಾಗಿಲ ಬಳಿ ಸಾರಿದರು.

"ಹೋಗು. ಕ್ಷಮೆ ಕೇಳು. ಅವರು ಕ್ಷಮಿಸುತ್ತಾರೆ"

"ಯಾಕೆ ? ಅವರಾರು ಕ್ಷಮಿಸಲು ? ನಾನೇಕೆ ಕ್ಷಮೆ
ಕೇಳಬೇಕು ? ಬನಶಂಕರಮ್ಮ ಸ್ವಾಮೀಜಿಯೇನು ? ಇವರಿಗೆ
ನಾನೇಕೆ ಮಣಿಯಬೇಕು ? ಯಾಕೆ ?"

"ಯಾಕೆಂದು ಕೇಳುವೆಯಾ, ಕಳ್ಳ ? ಏ ಹೇಡಿ ! ಯಾಕೆಂದು
ಕೇಳುವೆಯಾ ? ಇದು ಮದವಲ್ಲವೆ ? ಅಲ್ಲವೇನು ? ಮದವಿಲ್ಲದ
ನಾಚಾನೋ ನೀನು ? ಸ್ವಾಮಿಯಾರು, ಬನಶಂಕರಮ್ಮ ಯಾರು ?
ಸ್ವಾಮಿ ಅನ್ನ ನೀಡುವವರು. ಇವರು ನಿನ್ನ ಕರೆದು ಸಹೃದಯ
ರಾದವರು. ಅವರಲ್ಲಿ ನೀನು ಹೆಚ್ಚು ಕಡಮೆಯನ್ನು ಎಣಿಸು
ತ್ತೀಯಾ ? ಬನಶಂಕರಮ್ಮ ಯಾರು ? ನಿನ್ನ ತಂಗಿ ಲಲಿತಳ
ತಾಯಿಯಲ್ಲವೆ ? ನಿನ್ನ ತಾಯಿ ಸಮಾನವಲ್ಲವೆ ? ನಿನ್ನ ತಾಯಿ
ಯಲ್ಲವೆ ? ಇವರನ್ನು ಯಾರೋ ಅನ್ನುವಿಯಾ ? ನಾನೇಕೆ ಶರಣಾ
ಗಲಿ ಎನ್ನುತ್ತೀಯಾ ? ಕ್ಷಮೆಯಾಚಿಸುವುದೇಕೆ ಎನ್ನುತ್ತೀಯಾ ?
ಆಂ ! ಹೆಣ್ಣಾಂ ನತಿ ! ಪವಿತ್ರನಾಗುತ್ತೀಯಾ ! ಹಸಿದವನಿಗೆ

ಅನ್ನವಿಡುವವಳು ! ಎಂಥ ಅನ್ನ ನೆನೆಸಿಕೋ! ಹ್ಞೂಂ ಏಳು. ಏಳು. ಎದ್ದೆಯಾ ? ಇನ್ನೂ ಇಲ್ಲೇ ನಿಂತಿದ್ದಾರೆ. ಓಡು. ಬೀಳು. ಹಣೆಯಿಡು. ಕಣ್ಣೀರ ಕರೆ ! ಕ್ಷಮೆಯಾಚಿಸು ! ಹ್ಞೂಂ ಏಳು !”

ಶಂಕರ ಎದ್ದುಬಿಟ್ಟ ! ಕುರ್ಚಿ ಸರಿಸುವುದೂ ತಡ, ಎದ್ದುಬಿಟ್ಟ .ಓಡಿ ಹೋಗಿ ಬನಶಂಕರಮ್ಮನವರ ಪಾದಕ್ಕೆ ಹಣೆಯಿಟ್ಟ. ಕಣ್ಣೀರು ಪಾದತೊಳೆಯಿತು, ಬನಶಂಕರಮ್ಮನವರಿಗೆ ಅಚ್ಚರಿಯಾಯ್ತು. ಪ್ರೀತಿಯೂ ಉಕ್ಕಿಬಂತು. ಹಡೆದಮ್ಮನಂತೆ ಬಾಗಿ ಎತ್ತಿದರು. ಎರಡು ತೋಳುಗಳನ್ನು ಹಿಡಿದು ನಿಲ್ಲಿಸಿ, ಶಂಕರನನ್ನು ನೋಡಿದರು. ಎರಡು ಕೆನ್ನೆಗಳ ತುಂಬ ನೀರು ಹರಿಯುತ್ತಿತ್ತು. ಅವರಿಗೆ ಏನೊಂದೂ ಹೊಳೆಯಲಿಲ್ಲ. ಯಾಕೆ ಹೀಗೆಂದೂ ಗೊತ್ತಾಗಲಿಲ್ಲ. ಅವರಿಗೂ ಎದೆ ಕಲಕಿತು. ಶಂಕರ ಉನ್ಮತ್ತ ಸಾಗರದಲ್ಲಿ ಮುಳುಗುವವನಂತೆ ಕಂಡು ಮುಖ ಕಂದಿತ್ತು. ಯೋಚನೆಯ ಪ್ರತೀಕವಾಗಿ ಕಂಬನಿ ಕೆರೆಯಾಗಿತ್ತು. ತೆರೆತೆರೆ ಬಡಿದು ಯಾಚಿಸುತ್ತಿತ್ತು. ಬನಶಂಕರಮ್ಮನವರ ಕೊರಳು ಬಿಗಿಯಿತು. ಕಣ್ಣು ಮಂಜಾಯ್ತು. ಹಸಿ ಇಳಿಯಿತು. ಎಡಗಡೆ ತಿರುಗಿದರು. ಒಳಮನೆಯ ಬಾಗಿಲಿಗೆ ಒರಗಿ ಲಲಿತ ಅಚ್ಚರಿಯಿಂದ ನೋಡುತ್ತಿದ್ದವಳು ಕಣ್ಣೀರಿಳಿಯುವುದರ ಅರಿವಿಲ್ಲದೆಯೇ ನಿಂತಿದ್ದಳು.

ಅಕ್ಕರೆ ತುಂಬಿಬಂದಿರಬೇಕು. ಹೊಳೆ ವಿಶಾಲವಾಗಿರಬೇಕು. ನೆರೆಯೂ ಬಂದಿರಬೇಕು. ಶಂಕರನನ್ನು ಮುಳುಗಿಸಿಕೊಂಡಿತು; ತನ್ನೊಡನೆಯೇ ತೇಲಿಸಿ ಕೊಂಡೊಯ್ದಿತು. ತಾಯಿಯ ಕೈ ಶಂಕರನ ಕಣ್ಣೀರನ್ನೊರೆಸಿತು. ಮೃದುವಾಗಿ ಕುರುಳನ್ನೂ ತಿದ್ದಿತು. ಹೀಗೂ ಉಂಟೆ ? ಎಂದು ಅಚ್ಚರಿಯು ಮಿಂಚಿತು, ಲಲಿತಳ ತೇವದ ಬಾನ ಕಣ್ಣಲ್ಲಿ. ಶಂಕರ ತನ್ನೆಲ್ಲ ಕತೆಯನ್ನೂ ಹೇಳಿದ. ಹೃದಯ ಬಿಚ್ಚಿ ಹೇಳಿದ. ತಾನು ಮರುದಿನ ಊರಿಗೆ

ಹೋಗುವುದಾಗಿಯೂ ಹೇಳಿದ. ಕರುಳು ಕರಗಿತ್ತು. ತಾಯಿ
ಎದೆತುಂಬ ಹಾಲು ತುಳುಕುತ್ತಿತ್ತು.

"ಬೇಡಪ್ಪಾ. ಹಾಗೆಲ್ಲಾ ಮಾಡಬೇಡ. ಎಷ್ಟೇ ಕಷ್ಟಬ
ಓದು ಬಿಡಬೇಡ. ನಿನ್ನಂಥವನು ಓದದಿದ್ದರೆ ಇನ್ನಾವನು ಓ
ಬೇಕು ? ಹಾಗೆಲ್ಲಾ ಯೋಚಿಸಬೇಡ. ಇಲ್ಲಿಯೇ ಇರು. ನ
ಮನೆಯಲ್ಲಿದ್ದು ಓದಿಕೋ. ಲಲಿತಳಿಗೂ ಜೊತೆಯಾಯಿತ
ಒಡಹುಟ್ಟಿದವನಂತೆ ಇದ್ದು ಬಿಡು.... ಇರಲಿ. ನಡಿ ಒಳಗ
ಲಲಿತ, ನೀರುಕೊಡಮ್ಮ" ಬನಶಂಕರಮ್ಮನವರು ಶಂಕರನ ಕ
ಹಿಡಿದು ಒಳಗೆ ಕರೆದೊಯ್ದರು. ತಾವೇ ಲಲಿತೆಯಿಂದ ನೀರ
ಕೊಂಡು ಅವನಿಗೆ ಕೊಟ್ಟು ಮುಖತೊಳೆಯಿಸಿದರು. ಲಲಿ
ಹಂತಿಚಾಪೆ ಹಾಸಿ, ಅಡ್ಡಣಿಗೆ ಇರಿಸಿ, ಮೇಲೆ ಗಂಗಳವನ್ನಿಟ್ಟಿ
ದ್ದಳು. ಪಕ್ಕದಲ್ಲಿ ವಿಭೂತಿಯ ಪೆಟ್ಟಿಗೆಯೂ ಇತ್ತು. ಊದಿನ
ಕಡ್ಡಿ ಮನೆತುಂಬೆಲ್ಲಾ ಗಂಧ ತುಂಬಿ ಆತ್ಮೀಯವಾಗಿತ್ತು. ಬನ
ಶಂಕರಮ್ಮನವರೇ ಟವಲನ್ನು ಕೊಟ್ಟರು. ಮುಖ ಒರಸಿಕೊಂಡು
ಚಾಪೆಯಮೇಲೆ ಕುಳಿತುಕೊಂಡು ವೀಭೂತಿ ಧರಿಸಿಕೊಂಡ. ಕಣ್ಣು
ಗಂಗಳದಲ್ಲಿತ್ತು. ಬಡಿಸುವ ಕೈಯಲ್ಲಿ ಬಳೆಯಿರಲಿಲ್ಲ. ಮುದಿ
ಚರ್ಮ ತನ್ನ ಸುಕ್ಕನ್ನು ನಸುತುಸು ತೋರಿಸುತ್ತಿತ್ತು. "ಚೆನ್ನಾಗಿ
ಹೊಟ್ಟೆತುಂಬಾ ಉಣ್ಣಪ್ಪ" ಎಂದಿತು ಕಂಠ.

"ಯಾಕೆ ಇನ್ನೂ ಬರ್ಲಿಲ್ಲ ?" ಬಾಗಿಲಲ್ಲೇ ಕೂಗಿದಳು,
ಶಾರದಮ್ಮ. "ಬನ್ನಿ ಹೊತ್ತಾಯ್ತು. ಪಾಪ ಕಾದಿದಾರೆ" ಎಂದು
ಶಂಕರನನ್ನು ಕೂಗಿದಳು. ಶಂಕರ ತಲೆ ಎತ್ತಿ ನೋಡಿದ. ಬಾಚಿ
ಮುಡಿಕಟ್ಟಿದ್ದ ಲಲಿತಳನ್ನು ಕಂಡ. ಮುಖ ತೊಳೆದು, ಹಣೆಗೆ
ವೀಭೂತಿಯನ್ನಿಟ್ಟು, ತಲೆತುಂಬ ಸೆರಗು ಹೊದ್ದು ನಿಂತಿದ್ದ ಮಂಗಳೆ
ಯನ್ನು ನೋಡಿ ಮನಸಿನಲ್ಲಿಯೇ ಸಮಸ್ಕರಿಸಿದ. ಅವನ ದಿಟ್ಟಿ
ಹಾಗೆಯೇ ನಿಂತಿತ್ತು; ಕದಲದೆ ನಿಂತಿತ್ತು.

ಹಳೆಯ ಚಾಟಿ ಹೊಸ ಏಟು ಕೊಟ್ಟಿತು.

೫

ಹಾಗೆಯೇ ಇತ್ತು ದಿಟ್ಟಿ. ಕದಲದೆ ನಿಂತಿತ್ತು. ಶಂಕರ ಹಾಗೆಯೇ ಒರಗಿದ್ದ. ಆ ಚಿತ್ರ ಅವನನ್ನು ಎಲ್ಲಿಯೋ ಒಯ್ದಿತ್ತು. ಇಲ್ಲಿ ಅದು ಹೇಗೆ ಬಂದಿತೆಂದೇ ಅವನಿಗೆ ಅರಿಯದಾಯ್ತು. ಅದೇ ಹೋಲಿಕೆ. ಅದೇ ವಿಶಾಲವಾದ ಕಣ್ಣು. ನೀಳವಾದ ಮೂಗು. ತುಂಬಿದ ಕೊರಳು. ಅವಳದೇ ಇರಬೇಕು. ಇಲ್ಲೇಕೆ ಬರುತ್ತದೆ ಅವಳ ಫೋಟೊ? ಇವರು ಅವಳ ಸಂಬಂಧಿಕರೇನು? ಶಂಕರನ ಅನುಮಾನ ಕುತೂಹಲಕ್ಕೆ ಎಡೆಮಾಡಿತು. ಕೆದರಿದ ಮನಸ್ಸು ಆ ಚೌಕಟ್ಟಿನಲ್ಲಿ ಬುಳು ಬುಳು ಹರಿದಾಡಿತು. ಆ ಚಿತ್ರ ನಕ್ಕಂತಾಯ್ತು. ಕಣ್ಣ ಮಿಟುಕಿಸಿ, ಕುಲು ಕುಲು ನಕ್ಕಂತಾಯ್ತು. ಆರಾಮ ಕುರ್ಚಿಯ ಮೇಲೆ ಒರಗಿದ್ದ ಅವನು ಹಾಗೆಯೇ ನೋಡುತ್ತಿದ್ದ. ಬಾಯ ತಂಬುಲವನ್ನು ನಾಲಗೆ ತಿರುವಿಹಾಕುತ್ತಿತ್ತು. ದಿಟ್ಟಿ ಚಿತ್ರದಲ್ಲಿ ನಟ್ಟಿತ್ತು. ನಟ್ಟ ಬರ್ಚಿಯ ಗಾಯದಿಂದಲೇ ಕಬ್ಬಿನ ರಸ ಚಿಳ್ಳೆಂದು ಚಿಮ್ಮಿಬಂದಿತ್ತು. ನಾಟಿದ ದಿಟ್ಟಿಗೆ ಆ ಕಣ್ಣ ನಗು ಮಲ್ಲಿಗೆಯಾಯ್ತು.

"ನಾನೂ ಬರೀತೀನಿ!" ಶಾಂತೆ ಹಾಗೆ ಅಂದಳು.

"ಹಾಗಾದರೆ ನೀವೂ ಬರೀತೀರಾ? ಏನೇನು ಬರೆದಿದ್ದೀರಿ
"ಹ್ಞಾಂ. ನಿಮಗಿನ್ನೂ ಹೋಗಲಿಲ್ಲೇನೋ ಈ ರೋಗ"
"ಯಾವುದ್ರಿ ರೋಗ ನೀವೆನ್ನುವುದು ?"
"ಅದೇ ಕಣ್ರೀ ನೀವೆನ್ನುವುದು !" ಕಣ್ಣು ನಸು ಮುನಿಸಿ ಕೋಪಕ್ಕೆ ತಿರುಗಿಸಿ, ಕೊರಳು ಕೊಂಕಿಸಿ ತುಟಿಯಲ್ಲಿ ಮಲ್ಲಿ ಚಲ್ಲಿದ್ದಳು.
"ನನಗರ್ಥವಾಗಲಿಲ್ಲ ! ಆಂ. ಪದ್ಯ ಬರೆಯುವ ರೋಗವೆ ?
"ಥೂ ಹೋಗೀಂದ್ರೆ. ಅದಕ್ಕೆಲ್ಲಾ ರೋಗ ಅಂತಿದ್ದಾರಾ ?
"ಹಾಗಾದ್ರೆ ಯಾವ್ದು ?"
"ನೀವು" ಅನ್ನೋದು. ನಾನೇನು ನಿಮಗಿಂತಾ ದೊಡ್ಡೋ ಳೇನು ? ಅದರಲ್ಲಿ...."
"ದೊಡ್ಡವರಿಗೆ ಮಾತ್ರ ನೀವು ಅನ್ಬೇಕೇನ್ರಿ ? ಹಾಗಾದರೆ ದೊಡ್ಡವರಾರು"
"ನೀವು !"
"ಯಾರಿಗೆ ?"
"ನನಗೆ !"
"ಓ ! ನಿಮಗೋ ! ನಿಮಗೂ ದೊಡ್ಡವನಲ್ಲ, ನಾನು ! ಮಹಾನುಭಾವ ಬಸವಣ್ಣನಂಥವರೇ 'ಎನಗಿಂತ ಕಿರಿಯರಿಲ್ಲ' ಅಂದಿರುವಾಗ ನನ್ನಂಥವನು....!"
"ಹೋಗಲಿ ಬಿಡಿ ಅಂದ್ರೆ. ನೀವು ಯಾವ ಮಾತು ತೆಗೆ ದರೂ ಅಲ್ಲಿಗೇ ಹೋಗ್ತೀರಾ ?"
"ಎಲ್ಲಿಗೆ ?"
"ಪಾಪ. ಎಳೆ ಮಗು. ಇನ್ನೆಲ್ಲಿಗೆ, ತತ್ವಕ್ಕೆ. ನಮ್ಮ ಕಲ್ಲಳ್ಳಿ ಮಠಕ್ಕೆ ಪಟ್ಟ ಕಟ್ಬೇಕಾಗಿತ್ತು !"
"ಆಗ ದೊಡ್ಡವನಾಗ್ತಿದ್ದೆ ! ಎಲ್ರು ಕಾಲಿಗೆ ಬೀಳ್ತಿದ್ರು.

ನನಗೂ ಗರ್ವ ಬರ್‍ತಿತ್ತು. ಐಶ್ವರ್ಯ ಇರ್‍ತಿತ್ತು. ಕೀರ್ತೀನೂ ತುಂಬಿ ಇರ್‍ತಿತ್ತು"

"ಕೀರು ತೀರ್ಥ ಮಲ್ತು !"

"ಕೀರು ಅಲ್ಲರೀ, ಕೀರ್ತಿ !"

"ಅದೇ ಕೀರ್ತಿನೇ ಕೀರು !"

"ಸರಿ, 'ಮಾತಿಂಗೆ ಮಾತುಗಳು ಓತು ಸಾಸರವುಂಟು', ಹೋಗಲಿ. ನೀವೇನೋ ಬರೀತೀರೆಂದು ಹೇಳಿದಿರಲ್ಲಾ; ಕೊಡಿ !"

"ರೋಗ ಹೋಗೋವರಿವಿಗೂ ಮದುವೆ ಆಗೊಲ್ಲ!"

"ಏನ್ರಿ ಈ ಮಾತಿನ ಅರ್ಥ ? ಯಾವ ರೋಗ ? ಯಾರಿಗೆ ಮದುವೆ ?"

"ಓ ನೀವೊಬ್ರು ಕವಿಗಳು ! ಬರೀ ನಾಲ್ಕು ಪದ ಜೋಡಿಸಿ ಬಿಟ್ರಾಯ್ತು ! ಎಂಥೆಂಥಾವ್ರೋ 'ಟಟಕಿಟ ಟರ್‍ರ, ಟರಟಟ್ಟರತೋ ಣ್ಮುಖ'ನೆಲ್ಲಾ ಬಿಡಿಸಿ ಅರ್ಥ ಹೇಳ್ತೀರಂತೆ. ನನ್ ಮಾತು ಅರ್ಥ ಆಗಲ್ವೋ ?" ಕುರ್ಚಿಯಲ್ಲಿ ಕುಳಿತವಳು ಬಾಗಿ ತಲೆ ಅಲ್ಲಾಡಿಸಿ ಪ್ರಶ್ನಿಸಿದಳು.

"ಆನೆಯನ್ನು ಹಿಡಿಯಬಹುದು; ಮೀನ ಹೆಜ್ಜೆ ಹಿಡಿಯು ವುದು ಕಷ್ಟ !" ಸೋಲನ್ನೊಪ್ಪಿಕೊಂಡ.

"ಹೆಂಗ್ಸರ ಬುದ್ಧಿ ಮೊಣಕಾಲ್ಕೆಳ್ಗೆ; ಮೀನ ಹೆಜ್ಜೆ ಕಂಡು ಹಿಡೀಬಹುದು, ಹೆಂಗ್ಸರ ಗುಣ ಕಂಡುಹಿಡಿಯೋಕಾಗೊಲ್ಲ.... ಅಂತಾ ಗಾದೆ ಸುರುವು ಮಾಡಲು ಇದು ನಾಂದಿಯೇನೋ !"

ಛೇ, ಛೇ ! ಹಾಗೇನಲ್ಲ ! ಹೆಣ್ಣಿನ ಬಗ್ಗೆ ಆ ಅಭಿಪ್ರಾಯ ನನಗಿಲ್ಲ. ಆದರೆ ಸೂಕ್ಷ್ಮಕ್ಕೂ ಸ್ಥೂಲಕ್ಕೂ ಇರುವ ವ್ಯತ್ಯಾಸ ಹೇಳಿದೆ. ಅಷ್ಟೇ ! ಬೇರೇನೂ ತಿಳಿದುಕೊಳ್ಳಬೇಡಿ !"

"ಹೋಗೀಂದ್ರೆ. ಮತ್ತೆ ಅದೇ ! ನೀವು ನನ್ನ ಹಾಗೆಲ್ಲಾ ನೀವು, ನಿಮಗೆ ಅಂತ ಕರೆದರೆ...."

"ತಪ್ಪೇನು ? ಗೌರವಿಸಿ ಮಾತನಾಡುವುದೂ ತಪ್ಪೇ ?"

"ಅದೆಲ್ಲಾ ಬೇರೆಯವರಿಗೆ; ನನಗೇಕೆ ? ಏನೂ ತಿಳೀದ ರಂತೆ ಮಾತಾಡ್ತಾರೆ. ಬೆಕ್ಕು ಕಣ್ಮುಚ್ಚಿಕೊಂಡು ಹಾಲ್ ಕುಡ್ದಂಗೆ !

ಶಂಕರ ತಲೆ ಕೆರೆದುಕೊಂಡ. ಪರಿಚಯವಾಗಿ ಎಂಟುದಿ ವಾಗಿತ್ತು. ಮೊದಲು ಎಂಟು ದಿನಗಳ ಹಿಂದೆ, ಶಿವಯ್ಯನವ ಮನೆಗೆ ಬಲವಂತವಾಗಿ ಕರೆದುದಕ್ಕೆ ಹೋಗಿ ಊಟಮಾಡಬೇಕ ಗಿತ್ತು. ಆಗ ಊಟಕ್ಕೆ ನೀಡುವಾಗ ಈಕೆ ತನ್ನ ನೋಡಿದ ರೀತಿ ಊಟವಾದಮೇಲೆ ಈಕೆಯ ತಂದೆ ತನಗೆ ಪರಿಚಯಿಸಿಕೊಟ್ಟದ್ದು ಇದು ಎರಡನೆಯಸಲ. ಇಂದಾದರೂ ಯಾವುದೋ ಹಬ್ಬವೆಂದು ಮತ್ತೆ ಕರೆದಿದ್ದರು. ಊಟ ಮಾಡಿ ಶಾಂತಳ ಓದುವ ಕೋಣೆ ಯಲ್ಲಿ ತಮ್ಮಿಬ್ಬರನ್ನು ಕುಳ್ಳಿರಿಸಿ, ಶಾಂತಾಗೆ 'ನಿನ್ನ ಕವನಗಳನ್ನು ತೋರಿಸು' ಎಂದು ಶಿವಯ್ಯನವರು ಹೋಗಿದ್ದರು. ಹೊಸ ಹೆಣ್ಣಿ ನೊಡನೆ ಹೇಗೆ ಮಾತನಾಡುವುದು ? ಏನಂತ ಮಾತನಾಡುವುದು ? ಹೈಸ್ಕೂಲಿನಲ್ಲಿ, ಎಸ್. ಎಸ್. ಎಲ್. ಸಿ. ಯಲ್ಲಿದ್ದಾಳಂತೆ. ಸಾಹಿತ್ಯ ದಲ್ಲಿ ಅಭಿರುಚಿ ಇದೆಯೋ ಇಲ್ಲವೋ ! ಏನೆಂದು ಹೇಗೆ ಮಾತ ನಾಡಿಸುವುದು ? ಶಂಕರ ಸುಮ್ಮನೇ ಕುಳಿತುಬಿಟ್ಟಿದ್ದ. ಶಾಂತಳೇ ತುಟಿ ತೆರೆದಿದ್ದಳು.

"ಎಲ್ಲಿ ನಿಮ್ಮ ಕವನ ಓದಿ !"

ಶಂಕರ ಅನಿವಾರ್ಯವಾಗಿ ಮಾತನಾಡಲೇಬೇಕಾಯ್ತು.

"ಅಷ್ಟೇನೂ ಚೆನ್ನಾಗಿಲ್ಲ !"

"ಪರವಾಯಿಲ್ಲ. ಓದಿ !"

ಓದಲೇಬೇಕಾಗಿತ್ತು. ಆಡುವ ಮಾತಿಗಿಂತ ಓದುವ ಕವಿತೆಯು ಕಾಲ ಸುಖ ಎನ್ನಿಸಿತ್ತು. ಅಂತೆಯೇ ಓದಿದ್ದ.

ಇಬ್ಬಗೆ.

ಎಳೆದಳಿರ ಚೆಲುಗೆಂಪಿನರುಣಸುರೆ ಚಿಮ್ಮಿದನು

ಬಾನು ಬುವಿ ನವ್ಯತೆಯ ರಾಗದಲಿ ಮುಳುಗಿಹುದು
ಹೂವುಗಳ ಪರಿಷತ್ತಿನೊತ್ತರದ ಬನವಿಹುದು.
ವೈವಿಧ್ಯರಾಗದಲಿ ಮಧುರಾಜ ರಂಜಿಪನು.
ಮಧುಕರನ ಮೃದುಸ್ಪರ್ಶಕತಿನಾಚಿ, ಬಾಗಿ,
ಪದುಳ ದಳ ಕೆನ್ನೆಯಲಿ ಸ್ವೇದಮಣಿ ಹೊರಚೆಲ್ಲಿ
ಲಲ್ಲೆಯಲಿ ಜೇನಿಕ್ಕಿ ಮೆಲುನಗೆಯ ಸೊಗದಲ್ಲಿ
ಪ್ರೇಮಲೋಕದಿ ಕಮಲೆ ನಲಿಯುವಳು ತಾ ಬೀಗಿ!
ಸುತ್ತಲಿನ ಚೇತನದಿ ನೈರಾಶ್ಯ ಮೂರುತಿಯು
ಬಾಡಿರ್ದ ಮೊಗವಲ್ಲಿ, ಕಂದಿರ್ದ ಮನದಲ್ಲಿ
ಕಂಪಿಸುವ ಎದೆಯಲ್ಲಿ ತುಂಬಿರ್ದ ಕಣ್ಣಲ್ಲಿ
ಅಲ್ಲಲ್ಲಿ ಕುಳಿತತ್ತು ಚರಿಸುವಳು ವಿರಹಿಣಿಯು
ಕಮಲಿನಿಯು ಪರಮೆಯಲಿ ಸುಖಿಸುತ್ತ ನಲಿಯುವಳು
ವಿರಹಿಣಿಯು ಎದೆಯನ್ನನರಸರಸಿ ದುಃಖಿಪಳು.

"ಓ ಎಷ್ಟು ಚೆನ್ನಾಗಿದೇರಿ! ಅಪ್ಪ ಹೇಳ್ತಿದ್ರು. ಅವ್ರಿಗೂ ಓದಿ ಹೇಳಿದ್ದಿರಂತೆ"

ಶಂಕರನ ಎದೆ ತುಂಬಿಬಂದಿತ್ತು; ಹಿಗ್ಗಿ ಬಂದಿತ್ತು. ಲಲಿತಳೂ ತನ್ನ ಕವಿತೆಯ ಬಗ್ಗೆ ಅಷ್ಟು ಆಸಕ್ತಿ ವಹಿಸುತ್ತಿದ್ದುದಿಲ್ಲ. ಯಾವುದಾದರೂ ಓದಿದರೆ, ಸ್ಥಿತಪ್ರಜ್ಞೆಯಂತೆ ಕುಳಿತು ಕೇಳುತ್ತಿದ್ದಳು. ಹೇಗಿದೆಯೆಂದು ನಾಲ್ಕಾರುಬಾರಿ ಕೇಳಿದರೆ 'ನನಗೇನು ತಿಳೀತ್ತೈತೆ, ನೀವಂತೂ!' ಎಂದುಬಿಡುತ್ತಿದ್ದಳು. ಆದರೆ ಈ ಶಾಂತ! ತಾನು ಹೇಗಿದೆ ಎಂದು ಕೇಳದಿದ್ದರೂ 'ಓ ಎಷ್ಟು ಚನ್ನಾಗಿದೇರಿ!' ಎಂದಳು! ನನ್ನನ್ನೂ, ನನ್ನ ಕವಿತೆಯನ್ನೂ ಅರ್ಥಮಾಡಿಕೊಂಡು ಉಂಡು ಸವಿವ ಒಂದು ಹೃದಯವಾದರೂ ನಾಡಿನಲ್ಲಿ ಇದೆಯಲ್ಲ-ಎನ್ನಿಸಿತ್ತು ಶಂಕರನಿಗೆ. ತಾನಾಗ ಸ್ವರ್ಗದಲ್ಲಿಯೇ ಇದ್ದ. ಇಂದ್ರ ನಾನೆಯನೇರಿ ತಲೆ ಎತ್ತಿ ಸವಾರಿ ಹೊರಟಿದ್ದ. ಸುತ್ತು ಮುತ್ತು

ಜೈ ಪರಾಕು ಧ್ವನಿ ಜೇನಸುರಿಸುತ್ತಿತ್ತು, ಕಿವಿಗೆ. ಬಣ್ಣ ಬಣ
ಮೋಡ ತೇಲಿ ತೇಲಿ ಬರುತ್ತಿತ್ತು; ಮೈಮೇಲೆಲ್ಲಾ ಹರಿದ
ಮುಳ್ ನವಿರಾಗಿಸುತ್ತಿತ್ತು. ಕಾಮನಬಿಲ್ಲು ಕುಣಿಯುತ್ತಿತ
ತಾನು ನಿಜವಾಗಿಯೂ ಕವಿ. ತನ್ನ ಕವಿತೆ ನಾಡಿನಲ್ಲಿ ಖ
ಯನ್ನು ಗಳಿಸುತ್ತೆ- ಎಂದೆನ್ನಿಸಿತ್ತು. ಮಹಾಕವಿಯಾದ ತ
ಅಪಾರ ಮನ್ನಣೆ ಸಲ್ಲುತ್ತಿತ್ತು. -ಅಲ್ಲಿ- ಸ್ವರ್ಗದಲ್ಲಿ.

"ನಿಮಗೆ ಕವಿ ಹೃದಯವನ್ನು ಅರ್ಥಮಾಡಿಕೊಳ್ಳ
ಹೃದಯವಿದೆ !"

"ಹ್ಞೂಂ ! ಇದೆ ! ಇದೆ ! ಅದನ್ನು ತುಂಬಿಕೊಳ್ಳ
ಆಸೆಯೂ ಇದೆ; ಶಕ್ತಿಯೂ ಇದೆ !"

ಶಂಕರ ಸುಮ್ಮನೇ ಇದ್ದ. ಆ ಮಾತಿಗೆ ಏನುತ್ತರಿಸ
ಕೆಂದೂ ಅನ್ನಿಸಿರಲಿಲ್ಲ. ಮಾತು ಅತಿಯಾಗಬಾರದು. ಫಕ್ಕ
ಶಿವಯ್ಯನವರು ಬಂದರೆ ? ಮೂರು ವರ್ಷಗಳಿಂದ ಮಗನ
ನೋಡಿಕೊಂಡು ಬಂದಿದ್ದಾರೆ ! ಯಾವುದೋ ಒಂದು ಸಂದರ್ಭ
ದಲ್ಲಿ ಪರಿಚಯವಾದದ್ದು ಇಷ್ಟು ಗಾಢವಾಗಿ ಬಂಧುತ್ವವೆಂ
ರೀತಿಯಲ್ಲಿ ಮೈತ್ರಿ ಬೆಳೆದದ್ದನ್ನು ನೆನೆದು ಶಂಕರನಿಗೆ ಆಗಲ
ವಿಸ್ಮಯವಾಗಿತ್ತು. ಅವರ ಅಂತಸ್ತೇನು ! ತನ್ನದೇನು ! ಯಾರ
ಮಾತನಾಡಿಸದ ಭಿಕಾರಿಯನ್ನು ಕೈಹಿಡಿದು ಎತ್ತಿದ್ದಾರೆ ! ಸ್ಕಾಲರ
ಷಿಪ್ ಕೊಡಿಸಿದ್ದಾರೆ. ನನ್ನ ಓದು, ಆರೋಗ್ಯದ ಬಗ್ಗೆ ತುಂಬಿ
ಕಳಕಳಿಯನ್ನುಳ್ಳವರಾಗಿದ್ದಾರೆ ! ಎಂದೂ ಮನೆಗೆ ಕರೆಯದವ
ಈ ವಾರವೊಂದರಲ್ಲೇ ಎರಡುಸಲ ಕರೆದುದೇಕೆಂದು ಶಂಕರನಿ
ಅನುಮಾನವಾದರೂ ಅವರ ಮೈತ್ರಿ ಆಳವಾದದ್ದು; ವಿಶಾಲವ
ದದ್ದು ಎನ್ನಿಸಿತ್ತು. ಅಂಥವರ ಮನೆಯ ಕೂಳುಂಡು, ಏನೋ
ಪರಿಚಯ ಮಾಡಿಸಿಕೊಟ್ಟರೇ ಲಲ್ಲೆಹೊಡೆಯುತ್ತ ಕುಳಿತರೆ ಅವರ
ನಂದುಕೊಂಡಾರು ? ಏನಂದುಕೊಂಡಾರು ? ಛೇ ಸಾಕು ಮಾತ

ಕವಿತೆಯೂ ಸಾಕು. ತಾನಿನ್ನು ಇಲ್ಲಿರಬಾರದು. 'ಶಿವಯ್ಯನವರಿಗೆ ಹೇಳಿರಿ ನಾನು ಹೋದುದಾಗಿ'- ಎಂದು ಹೇಳಿ ಹೋಗಬೇಕು. ಶಂಕರ ನಿರ್ಣಯದ ಉಯ್ಯಾಲೆಯಲ್ಲಿದ್ದ. ಗಾಳಿ ಬೀಸಿಬಂತು.

"ಹೈದರಾಬಾದಿನಲ್ಲಿ ಬಹುಮಾನ ಬಂದಿತ್ತಲ್ಲ ಆ ಕವನ ಓದಿ!" ಶಾಂತಳೇ ತನಗಿಂತ ಮೊದಲು ನುಡಿದಿದ್ದಳು. ಹೋಗುವುದಾಗಿ ಹೇಳಲು ತುಟಿ ತೆರೆಯುತಿದ್ದವನಿಗೆ ಈ ಕೇಳಿಕೆ ಬಂದಿತ್ತು.

"ನಿಮಗೆ ಹೇಗೆ ಗೊತ್ತು, ನನಗೆ ಬಹುಮಾನ ಬಂದಿರುವುದು?"

"ಅಪ್ಪಾಜಿ ಹೇಳಿದ್ದರು. ಅದು ತುಂಬಾ ಚೆನ್ನಾಗಿದೆಯೆಂದೂ ಹೇಳಿದ್ದರು. ನೀವೊಮ್ಮೆ ಅವರ ಮುಂದೆ ಓದಿದ್ದಿರಂತೆ. ನಿಮ್ಮ ಸಾಹಿತ್ಯವನ್ನು ಬಹಳ ಮೆಚ್ಚಿಕೊಂಡಿದ್ದಾರೆ.... ಎಲ್ಲಿ ಆ ಪದ್ಯ ಓದಿ!"

"ಆ ಪದ್ಯ ಇಲ್ಲಿಲ್ಲ. ಕ್ಷಮಿಸಬೇಕು!"

"ಎಲ್ಲಿ ಆ ನಿಮ್ಮ ಪುಸ್ತಕ ಕೊಡಿ!" ಕೈ ಚಾಚಿದ್ದಳು, ಶಾಂತ. ಮುಖದಲ್ಲಿ ಯಾಚನೆಯ ನಗುವಿತ್ತು; ಕೈ ನೀಳವಾಗಿ ನೀಡಿ ಬಳುಕುತ್ತಿತ್ತು, ಹಾಗೆ, ಹೀಗೆ. ಕೈ ಚಾಚಿದಾಗ ಸೆರಗು ಜಾರಿ ಕೆಳಗೆ ಬಿದ್ದಿತ್ತು. ಶಂಕರನಿಗೆ ಸಂಕೋಚವಾಯ್ತು. ತನ್ನೆಲ್ಲ ಕವಿತೆಗಳನ್ನು ಬರೆದಿಟ್ಟುಕೊಂಡಿದ್ದ ನೋಟು-ಪುಸ್ತಕವನ್ನು ತರಲು ಶಿವಯ್ಯನವರು ಹೇಳಿದ್ದರು. ಅಂತೆಯೇ ತಂದಿದ್ದ. ಶಾಂತಳ ಇಷ್ಟದಂತೆ ಒಂದು ಸುನೀತವನ್ನು ಓದಿಯೂ ಆಗಿತ್ತು. ಈಗ ಕೈನೀಡಿ ತನ್ನ ಪುಸ್ತಕವನ್ನು ಕೇಳುತಿದ್ದಾಳೆ. ಪುಸ್ತಕದ ಮೊದಲ ಪುಟವಲ್ಲಿಯೇ ತನ್ನ ಗೆಳೆಯ ತರುಣ ಕಲಾವಿದ ರಂಗಸ್ವಾಮಿ ಚಿತ್ರಿಸಿದ್ದ ಚಿತ್ರವೊಂದಿದೆ; ಗಾಳಿಗೆ ತೊನೆದಾಡುವ ಸುಂದರ ರೆಂಬೆ. ಹಸುರು ಎಲೆಯೊಡೆದು ಹರಡಿದೆ. ಚಂದಿರ ಆ ರೆಂಬೆಯಲ್ಲಿ ಕುಳಿತಂತೆ ದುಂಡುಗೆರೆ. ಅಲ್ಲಿಯೇ ಎರಡು ಪಕ್ಕಿಗಳು ಕೊಕ್ಕಿನಲಿ ಕೊಕ್ಕಿಡಲು ಕಾತುರವಾಗಿ ಕುಳಿತಿವೆ. ಪ್ರೇಮಪೂರ್ಣ ಸರಸ್ಸು

ಆ ನಾಲ್ಕು ಕಣ್ಣುಗಳಲ್ಲಿ ತುಳುಕಾಡುತ್ತಿದೆ. ಆ ಚಿತ್ರವ
ಶಾಂತಾ ನೋಡಿ ಬಿಟ್ಟರೆ ? ಏನೂ ಅರಿಯದ ಹೆಣ್ಣೆಂದು ಕಾಣು
ದಿಲ್ಲ. ತುಂಬಾ ಬುದ್ಧಿವಂತೆ. ಮಾತಿನ ಮಲ್ಲಿಯೆಂದೂ ತೋ
ತ್ತದೆ. ಅಂಥವಳು ಆ ಚಿತ್ರವನ್ನು ನೋಡಿದರೆ ? ನೋಡಿಬಿಟ್ಟರೆ

ಶಂಕರ ಪುಸ್ತಕವನ್ನು ಕೊಡಲು ಹಿಂಜರಿದ. ಶಾಂತಳ ನೀಡಿ
ಕೈ ಹಾಗೆಯೇ ತೂಗುತ್ತಿತ್ತು; ಕಣ್ಣು ಹಾಗೆಯೇ ಮಿನುಗುತ್ತಿತ್ತು

"ಯಾಕೆ ? ಕವಿಗಳ ಪುಸ್ತಕವನ್ನು ನಾನು ಮುಟ್ಟಿದರೆ ಕು
ಗೆಡು..!!"

"ಛೇ ! ಹಾಗೇನಿಲ್ಲ. ತೆಗೆದುಕೊಳ್ಳಿ" ಎಂದು ಪುಸ್ತಕವನ
ಕೈಗಿತ್ತ.

ಕುತೂಹಲದಿಂದ ನೋಡುತ್ತಿದ್ದಳು, ಆಕೆ. ಚಣಹೊ
ನಲ್ಲೆ ತಲೆ ನಸುಮೇಲೆತ್ತಿ ಕಳ್ಳ ನಗು ನಕ್ಕಳು.

"ಸುಳ್ಳು ಬರುತ್ತದೆ !"

ಶಂಕರ ಸುಮ್ಮನೇ ಸೋಲಿನ ಕಿರುನಗೆ ನಕ್ಕ. ಬಹುಮಾ
ಬಂದ ಕವಿತೆಯೂ ಅದರೊಳಗಿತ್ತು, ಅಂತೆಯೇ ಆ ಕವನದ ಅ
ಯಲ್ಲಿ ಹಾಗೆ ಬರೆಯಲಾಗಿತ್ತು. ಈಗ ಹಾಡು ಎಂದರೆ ? ಅದನ್ನು
ಸಾರ್ವಜನಿಕವಾಗಿ ಹಾಡಬಹುದು. ಆದರೆ ಇಲ್ಲಿ ಒಬ್ಬ ತರುಣಿಯ
ಮುಂದೆ, ಏಕಾಂತದಲ್ಲಿ !- ಛೇ ! ಏನು ಮಾಡುವುದು ? ಶಂಕರ
ಯೋಚನೆಯಲ್ಲಿ ಮುಳುಗಿದ್ದ.

"ನಾನೇ ಹಾಡಲೆ ?" ಶಾಂತ ತಲೆ ಎತ್ತಿ ಕೇಳಿದ್ದಳು. ಈ
ಹಿಂದೆ ತನ್ನ ಕವಿತೆಗಳನ್ನು ಲಲಿತೆಯಿಂದ ಹಾಡಿಸಬೇಕೆಂದು ಎಷ್ಟು
ಪ್ರಯತ್ನ ಪಟ್ಟಿದ್ದರೂ ಸಾಧ್ಯವಾಗಿರಲಿಲ್ಲ. ಲಲಿತಳಿಗೆ ಹಾಡಲು
ಬಾರದೆಂದು ಗೊತ್ತಿದ್ದರೂ ಆಕೆ ಹಾಡಬೇಕೆಂದು ಶಂಕರನಿಗೆ ಆಸೆ.
ಆ ಲಲಿತೆಗೂ, ಈ ಶಾಂತಾಗೂ ಎಷ್ಟು ವ್ಯತ್ಯಾಸ ! ಯಾವೊಂದು
ಸರಳ ಹೃದಯದಿಂದ ಮಾತನಾಡುತ್ತಿದ್ದಾಳೆ. ತಂದೆಯಂತೆಯೇ

ಮಗಳು! ಪರಿಚಯವನ್ನೇ ಸ್ನೇಹದಂತೆಂದು ಭಾವಿಸುವ ಇವಳ ಸರಳ ಹೃದಯವೆಷ್ಟು ಚೆನ್ನು!.... ಆದರೆ ಈಕೆಗೆ ಹಾಡಲು ಹೇಳಲೆ? ಹೇಳಲೇನು?

"ಹಾಡ ಬಹುದೆ?" ಮತ್ತೆ ಕೇಳಿದ್ದಳು. "ಭಾವನೆಗೆ ಭಂಗ ಬಂದೀತೆಂದು ಹೆದರುತ್ತೀರೇನೋ" ಎಂದೂ ರಾಗವೆಳೆದಿದ್ದಳು.

"ಇಲ್ಲ. ಹ್ಞೂಂ. ಹಾಡಿ!"

ಯಾವುದೋ ರಾಗದಲ್ಲಿ ಗಂಟಲನ್ನೊಮ್ಮೆ ತಿದ್ದಿಕೊಂಡಿದ್ದಳು. ಆ ನಗರದ ಅನೇಕ ಮನೆಗಳಲ್ಲಿ ಸಂಗೀತಾಭ್ಯಾಸ ನಡೆಯಿಸುತ್ತಿರುವ ಹೆಂಗಳ ಕೊರಳ ದನಿಯನ್ನು ಕೇಳಿದ್ದ, ಶಂಕರ. ಶಾಂತಾಳೂ ಅಭ್ಯಾಸ ಮಾಡಿದ್ದಿರಬೇಕು ಅನ್ನಿಸಿತ್ತು.

ಉಷಾ

೧

ಚಂದ್ರಬಿಂಬ ಮಂದವಾಗಿ
ಪಡುವಲಿಂಗೆ ಜಾರಿರೆ;
ಮಬ್ಬು ಬಾನ ಬಯಲನಪ್ಪಿ
ಮೌನವನ್ನು ಬೆಳೆಸಿರೆ,
ತರುಗಳೆಡೆಯ ಮಲೆಯ ತಲೆಗೆ
ಹೊರಟು ಮಬ್ಬಿನಿಂಪಿನೊಳಗೆ
ತೊಳಲಿ ಬಳಲಿ ಸೇರಿ ತುದಿಗೆ
ಕತ್ತಲೊಡನೆ ಜಾರಿತು,
ಮೌನವಿರದೆ, ಓಡಿತು.

೨

ತಣ್ಣನೆಲರ ತೀಟದೊಳಗೆ
ಅಡವಿ ನಿದ್ದೆ ಗೈದಿರೆ,
ಮಂದಗಾಳಿ ತಿಂದು ತೇಗಿ

ಹುಲ್ಲು ಸುಯ್ಲು ಬೀರಿರೆ,
ಏನಿದೇನು ಬಲು ವಿಚಿತ್ರ
ಪಸರಿಸಿಹುದು ಉಷೆಯ ಕ್ಷೇತ್ರ
ಬಾನ ಬಯಲು ಚಿತ್ರ ಚಿತ್ರ
ಹಕ್ಕಿಗಾನ ತುಂಬಿತು
ಜಗದಿ ಹರುಷ ತುಳುಕಿತು.

೩

ಬೆಳ್ಳಿಮೋಡ ಬಣ್ಣ ಬಳಿದು
ನಭದಿ ಚಿತ್ರ ಗೈದಿರೆ,
ಉಷೆಯು ಗಗನ ಪಂಚಿನಲ್ಲಿ
ನಾಟ್ಯಗೈದು ಮೆರೆದಿರೆ,
ಸೊಗಸದೆನಿತು ಉಷೆಯ ಸೆಳೆತ,
ಸೋಗೆ ಮೀರಿದವಳ ಕುಣಿತ,
ಜಗವ ನಲಿಸಿತವಳ ಮೆರೆತ
ಅಡವಿ ಕಣ್ಣ ತೆರೆಯಿತು,
ಉಷೆಯನಿದಿರು ಗೊಂಡಿತು.

ನಯವಾಗಿ ಹಾಡುತ್ತಿದ್ದಳು ಶಾಂತ. ಎಳೆದೆಳೆದು ಕವನ ಪ್ರಕೃತಿಯಾಗುವಂತೆಯೇ ಹಾಡುತಿದ್ದಳು. ಮುಂದಿನ ಸಾಲುಗಳನ್ನು ಹಾಡಲು ಎತ್ತಿಕೊಂಡಾಗ ಶಂಕರನ ಎದೆ ಡವ್‌ಡವ ಎನ್ನುತ್ತಿತ್ತು. ಕವನ ರಾಗಪೂರ್ಣವಾಗಿ ಕೋಣೆಯಲ್ಲಿ ಹರಡಿ ತುಂಬಿದೆ. ಕವಿಯೂ ಕುಳಿತಿದ್ದಾನೆ. ಸರಸತಿಯ ವೀಣೆಯಂತೆ ತುಂಬು ತರುಣಿ ಹಾಡುತಿದ್ದಾಳೆ. ಶಂಕರನಿಗೆ ಈ ಸಂದರ್ಭ ಬರಬಾರದೆನ್ನಿಸಿತ್ತು. ನಾನಿಂದೇಕೆ ಇಲ್ಲಿಗೆ ಬಂದೆ? ಏಕೆ ಬಂದೆ? ನನ್ನ ದುರ್ಬಲ ಹೃದಯಕ್ಕೆನಾಶವೆಂದು? ಅಂದು ರಾಮಾಶ್ವಮೇಧದ ಪ್ರಸಂಗದಲ್ಲಿ ಲಲಿತೆಯೊಡನೆ ಹಾಗೆ ನಡೆದುಕೊಂಡೆ. ಹಾಗೇನಾದರೂ

ಪ್ರತಿಕ್ರಿಯೆ ಈಗ ಆದರೆ. ಹೃದಯ ಹೊಡೆದುಕೊಳ್ಳು ತಿತ್ತು. ತಲೆ ಬಿಸಿಯಾಯ್ತು. ಹಳೆಯ ಗಾಳಿ ಸುಯ್ಯನೇ ಬೀಸಿ ಬಂದಿತ್ತು. ಹಿಂದಿನ ನೆನಪಿನ ಕಮರು ಕಂಪು ಸೂಸಿ ಬಂದಿತ್ತು. ಮನಸ್ಸು ದೂರ ಓಡಿತ್ತು. ಅಲ್ಲಿ ಲಲಿತೆಯ ಮೂರ್ತಿ ನೀಡಿ ನಿಂತಿತ್ತು.

"ಓ ಶಾಂತಾಳ ಕಂಠದಿಂದ ಕವನ ಬರುತ್ತಿದೆ! ನೀನೇ ಸರ್ದಾರಪ್ಪಾ. ನಾವೆಷ್ಟು ಕೇಳಿದ್ರೂ ಕವನ ಹಾಡ್ತಿರಲಿಲ್ಲ. ನೀನೇನು ಒಂದು ಗಂಟೆಯೊಳಗೇ ಬಲೆಗೆ ಹಾಕಿಕೊಂಡಿದ್ದೀಯೆ ?" ಎನ್ನುತ್ತ ಶಿವಯ್ಯನವರು ಒಳಗೆ ಕಾಲಿಟ್ಟಿದ್ದರು. ಸದ್ಯ ಬಡ ಜೀವ ಬದುಕಿತು ಎಂದುಕೊಂಡಿದ್ದ ಶಂಕರ. ಶಾಂತಾ ಅಲ್ಲಿಗೇ ನಿಲ್ಲಿಸಿ "ಹ್ಹೂ. ಹೋಗಪ್ಪಾ. ನೀವ್ಯಾವಾಗ್ಲೂ ಹೀಗೇ!" ಎಂದು ನಸುಮುನಿದಿದ್ದಳು.

"ಹಾಡು ಹಾಡು. ನಾ ಹೋಗ್ತೀನಿ. Why should I disturb you, the young" ಎನ್ನುತ್ತ ನಕ್ಕು ಹೊರಟೂ ಹೋಗಿಬಿಟ್ಟಿದ್ದರು. ಶಂಕರನ ಸ್ಥಿತಿ ವಿಸ್ಮಯಕ್ಕೂ ಏರಿತ್ತು. ನಸು ಹೆದರಿಕೆಗೂ ಈಜಿ ಹೋಗಿತ್ತು. ಸ್ವಲ್ಪ ಹೊತ್ತು ಮೌನ ವಾವರಿಸಿತ್ತು. ಶಾಂತ ಮತ್ತೆ ದನಿ ಎತ್ತಿದ್ದಳು.

೪

ವನದಿ ಬನದಿ ಪಕ್ಕಿಬಳಗ
  ತೋಷದಿಂದ ಹಾಡಲು,
ತುಂಬಿಬಳಗ ಪೂವನರಸಿ,
ಮಧುವ ಕುಡಿಯೆ ಹಾರಲು,
ತಳಿತ ತರುಗಳಿಂಪಿನಲ್ಲಿ
ಮಲರಿದಲರ ಕಂಪಿನಲ್ಲಿ
ಉಷೆಯು ಬಳಿದ ಕೆಂಪಿನಲ್ಲಿ
  ನಲ್ಲ, ನಲ್ಲೆ ಕೆನ್ನೆಗೆ,
  ಮುತ್ತನಿಡೆ ಮೆತ್ತಗೆ!

೫

ಅಹ ! ಏನುರಮ್ಯ ಬೆಳಗಿದು,
ಮನಕೆ ಹರುಷವಿತ್ತಿದೆ !
ಕಬ್ಬವೆಣ್ಣ ಕುಡಿಯ ನೋಟ
ಹೃದಯದೊಳಗೆ ನಾಟಿದೆ !
ಹೃದಯ ದೊಲವನೆಲ್ಲ ಸೆಳೆದು,
ಬಾಳ ಬೆಳಗ ಜಗದಿ ಬೆಳಗಿ,
ನೆಗೆದು ಉಷೆಯು ಬರುವಳದೋ,
ಬುವಿಗೆ ಹರುಷ ವೀಯುತ
ನಭಕೆ ಮುತ್ತನೊತ್ತುತ.

ನಾದ ಮೆಲ್ಲನೆ ಕರಗುತಿತ್ತು. ಯಾರೊಬ್ಬರೂ ನುಡಿ ಲಿಲ್ಲ. ಶಾಂತಳ ಕಣ್ಣು ಆರ್ದ್ರವಾಗಿತ್ತು ಯಾಚನೆ ತುಂಬಿತ್ತು ಅಲ್ಲಿ ಆ ಶಾಂತಳ ಕಣ್ಣಂಗಳದಲ್ಲಿ ಲಲಿತಳ ಕಣ್ಣು ಮಿನುಗುತ್ತಿತ್ತು ನೋಟ ತುಳುಕುತಿತ್ತು. ಹಳೆಯ ರಸ ತುಳುಕಾಡಿತ್ತು. ಶಂಕ ಮೆಲ್ಲನೆ ತಲೆ ಎತ್ತಿದ್ದ, ಬಹಳ ದಿನಗಳ ಹಿಂದೆ ಆ ದೃಶ್ಯ ಹಾ ಹೀಗೆ ಸರಿದಾಡಿತು. ಮುಂದುವರಿಯಿತು. :–

ನಿರ್ಗತಿಕನಾಗಿ ಊರಕಡೆ, ತನ್ನ ತಾಯಕಡೆ, ಹೆಜ್ಜೆ ಇಟ್ಟಾ ಕೈಯಿತ್ತು ನೆರವಾದ ಲಲಿತಳ ಮನೆ ತನ್ನದಾಯ್ತು. ಪರಿಚಯ ಸಲುಗೆಗೂ ವಿಸ್ತರಿಸಿತು. ಬನಶಂಕರಮ್ಮನವರ ಪ್ರೀತಿ, ಕರುಣ ಔದಾರ್ಯ ಶಂಕರನ ಸಂಪತ್ತೇ ಆಯ್ತು. ಅವರಿಂದ ಮತ್ತೆ ಕಾಲೇಜು ಸೇರಿದ. ಹಾಸ್ಟಲನ್ನೂ ಹೊಗಿಸಿದರು ಸ್ವಾಮಿಗಳು ಆಗ ಅವರು ಕರುಣಾಪೂರ್ಣರಾಗಿ ಅವನನ್ನು ಒಳಕರೆದುಕೊಂಡಿ ದ್ದರು. ಶಂಕರನ ಹೃದಯ ಕನಲಿದ ಹೊಲಸಿನಿಂದ ಪಶ್ಚಾತ್ತಾಪ ತಿಳಿಯಾಗಿ ನಗುತ್ತಿತ್ತು.

ಅವನ ಓದು ಮುಂದುವರಿಯಿತು. ಬಾಡುವ ಬಳ್ಳಿಗೆ ಸಿ

ನೀರು ಸುರಿದು ಬಂತು. ನೀರುಂಡ ಬಳ್ಳಿ ದಾಂಗುಡಿ ಇಟ್ಟಿತು. ಹಬ್ಬಿ ಹರಡಿತು. ಕುಡಿ ಕುಡಿ ಚಾಚಿ ಮುಂದು ಮುಂದುವರಿಯಿತು. ಕುಸುರು ಕುಸುರಾಯ್ತು; ಹಸುರು ಹಸುರಾಯ್ತು. ಇಂಟರ್ ಮೀಡಿಯೆಟ್ ಪರೀಕ್ಷೆಯೂ ಆಯ್ತು. ಆ ವೇಳೆಗೆ ಶಿವಯ್ಯನವರ ಪರಿಚಯವಾಯ್ತು. ಅವರ ಸಹಾಯದಿಂದ ಶಂಕರನಿಗೆ ಸ್ಕಾಲರ್‌ಷಿಪ್ ಸಿಕ್ಕಿತ್ತು. ಆ ಹಿರಿಯ ವ್ಯಕ್ತಿ ಸಮಾಜದಲ್ಲಿಯ ಗಣ್ಯ ಸ್ಥಾನವನ್ನೇ ಗಳಿಸಿದವರು. ಅವರ ಕರುಣೆಯ ತೊಟ್ಟಿಲ ಶಿಶುವೂ ಆದ, ಶಂಕರ.

ಧೈರ್ಯ, ಶಂಕರನ ಮನಸ್ಸನ್ನು ಹೊಕ್ಕು ಆವರಿಸಿ ತುಂಬಿಕೊಳ್ಳತೊಡಗಿತು. ಬಾಳು ಬೆಳಗಲು ತೊಡಗಿತೆಂದೂ ಅನ್ನಿಸಿತು. ಶಂಕರನ ಸ್ಥಾನ ಒಂದು ಸ್ಥಿತಿಮುಟ್ಟಿತು. ತಾನೊಬ್ಬ ವ್ಯಕ್ತಿಯಾದ. ಒಂದು ಶಕ್ತಿಯೂ ತಾನೆಂದು ತಿಳಿದುಕೊಂಡ. ಆದರೆ ತನ್ನ ದುರ್ಬಲ ಮನಸ್ಸು ಅವರಿವರ ನೆರವಿನಿಂದಲೇ ಧೈರ್ಯದ ಗಿಡವಾಗಿದೆಯೆಂದು ಅವನಿಗೆ ಆಗ ಅರಿವಾಗಿದ್ದಿಲ್ಲ. ಅವರ ಸಹಕಾರದ, ಸಹಾಯದ, ಮೈತ್ರಿಯ ಕಟ್ಟೆ ಬಿರಿದರೆ, ಬುಡಸಹಿತ, ಬೇರು ಕಿತ್ತು, ನೆಲವನಪ್ಪುವೆನೆಂದೂ ಅವನರಿಯ.

ಕಾಲ ಉರುಳುತ್ತಿತ್ತು ವಿದ್ಯುತ್ತಿನ ವಾಹನದ ಚಕ್ರದ ಮೇಲೆ. ಕಾಲ ಬೀಸಿ ಬೀಸಿ ಈಸಿ ಹೋಗುತ್ತಿತ್ತು. ಶಂಕರ ಹೆಚ್ಚು ಬದಲಿಸಲಿಲ್ಲ. ಆದರೂ ಬದಲಿಯಾಗಿದ್ದ. ಬಲಿಯುತ್ತಿದ್ದ.

ಲಲಿತ ಫೇಲಾದಾಗ ಶಂಕರನಿಗೆ ವ್ಯಥೆಯಾಗಿತ್ತು. ಲಲಿತಳಿಗೆ ಶಂಕರ ಫಸ್ಟ್‌ಕ್ಲಾಸಿನಲ್ಲಿ ಪಾಸಾದನೆಂದು ಸಂತಸವಾಗಿತ್ತು. ಶಂಕರ ಅರ್ಥಶಾಸ್ತ್ರದ ಆನರ್ಸ್‌ಗೆ ಸೇರಿದ. ಲಲಿತ ಸೆಪ್ಟೆಂಬರ್ ಪರೀಕ್ಷೆಗಾಗಿ ಮನೆ ಹಿಡಿದುಬಿಟ್ಟಳು. ಶಂಕರನ ನೆರವಿನಿಂದ ಆಕೆ ಪಾಸೂ ಆದಳು. ಆ ವರುಷವೂ ಈಜಿ ಹೋಯ್ತು; ಸಾಗಿಹೋಯ್ತು.

ಮರುವರ್ಷ ಲಲಿತ ಬಿ. ಎ. ಗೆ ಸೇರಿದಳು. ಇದುವರಿವಿಗೂ

ಶಂಕರ ಲಲಿತೆಯರ ಸಲಿಗೆ ಬಿಗಿಯಾಗಿಯೇ ಇತ್ತು ಗಂಭೀರವಾಗಿಯೇ ಇತ್ತು. ಲಲಿತಳ ನಡತೆಯಲ್ಲಿ ತುಂಬ ಗರ ವಿತ್ತು; ಗಾಂಭೀರ್ಯವಿತ್ತು. ಶಂಕರ ವಾರಕ್ಕೊಮ್ಮೆ ಅವರ ಮನೆಗ ಹೋಗಿ ಬರುವುದು ವಾಡಿಕೆ. ಅಂದಿನ ದಿನ ಅಲ್ಲಿಯೇ ಊಟ ಬನಶಂಕರಮ್ಮನವರ ಆದರದ ಪ್ರೀತಿ ತುಂಬಿದ ಊಟ. ತಾಯ ಮರೆಸುತ್ತಿದ್ದರು, ಅವರು.

ಬಿ. ಎ. ಗೆ ಮುದ್ದಣನ ರಾಮಾಶ್ವಮೇಧವನ್ನಿಟ್ಟಿದ್ದರು. ಅಲ್ಲಿಯ ಹಳಗನ್ನಡ ಲಲಿತಳಿಗೆ ತುಸು ಬಿಗಿಯಾಗಿಯೇ ಇತ್ತು. "ನೀರಿಳಿಯದ ಗಂಟಲೊಳ್ ಕಡುಬಂ ತುರುಂಕಿದೊಲಾಯ್ತು" ಎಂದು ಮನೋರಮೆ ಸರಿಯಾಗಿಯೇ ಹೇಳಿದ್ದಾಳೆ, ಮುದ್ದಣನಿಗೆ. ಯಾರಪ್ಪಾ ಇಂಥಾ ಭಾಷೆ ಅರ್ಥಮಾಡಿಕೊಳ್ತಾರೆ !" ಎಂದು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಳು, ಲಲಿತ.

"ಹೃದ್ಯಮಪ್ಪ ತಿಳಿಗನ್ನಡದ ಗದ್ಯದಲ್ಲಿಯೇ ಮುದ್ದಣ ಹೇಳಿ ದ್ದಾನೆ" ಶಂಕರ ಉತ್ತರಿಸಿದ್ದ.

"ಅದೇನೋಪ್ಪಾ ನನಗೆ ಅರ್ಥ ಆಗೊಲ್ಲ. ನೀವು ಸ್ವಲ್ಪ ಹೇಳಿಕೊಡಿ !"

"ಆಗಲಿ !"

ಆ ವಾರದಿಂದ ಭಾನುವಾರ 'ರಾಮಾಶ್ವಮೇಧ' ಪ್ರಾರಂಭ ವಾಯ್ತು. ಶಂಕರನ ಪಾಠ ನಿರರ್ಗಳವಾಗಿ ಸಾಗುತ್ತಿತ್ತು. ಬನ ಶಂಕರಮ್ಮನವರೂ ಆಗಾಗ ಕುಳಿತು ಕೇಳುತ್ತಿದ್ದರು. ಅಲ್ಲಲ್ಲಿಯ ಕ್ಲಿಷ್ಟ ಪದಗಳ ಅರ್ಥವನ್ನು ಹೇಳುತ್ತ, ರಸಿಕವಾಗಿ, ಲಲಿತವಾಗಿ ಓದುತ್ತಿದ್ದ. ಚಂಬವಳದಂತಹ ಮುದ್ದಣ ಮನೋರಮೆಯರ ಸಂವಾದ ಬಂದಾಗ ಸುತ್ತಣ ಪರಿಸರಣದ ಅರಿವು ಅವರಿಬ್ಬರಿಗಿರು ತ್ತಿರಲಿಲ್ಲ.

ಈ ಕಾವ್ಯವನ್ನು ಅರಮನೆಯಲ್ಲಿ ರಚಿಸಿ ಹೇಳಿದರೆ

ರನ್ನಗಡಗವನ್ನು ಮೆಚ್ಚು ಕೊಡುತ್ತಾರೆ; ನೀನೇನು ಕೊಡುತ್ತೀ? ಎಂಬ ಮುದ್ದಣನ ಪ್ರಶ್ನೆಗೆ ಕತೆಯನ್ನು ನೋಡಿಯಾದಮೇಲೆ ಅದಕ್ಕೆ ತಕ್ಕ ಮೆಚ್ಚನೀವೆನೆಂದು ಮನೋರಮೆ ವಾಗ್ದಾನ ಮಾಡುತ್ತಾಳೆ. ಮುಂದೆ ರತಿಕಾಮರು ಅವರಿಬ್ಬರಾದಾಗ ಹೋಳಿಗೆ ಕಡುಬು ಗಾರಿಗೆ ಕಬ್ಬು ಎಲ್ಲವೂ ಬೇಕೆಂದು ಮುದ್ದಣ ಕೇಳಿದಾಗ, ಮನೋರಮೆ ನೀನದೆಲ್ಲವನ್ನೂ ತಿನ್ನುತ್ತೀಯಾ ಹೊಟ್ಟೆಬಾಕ! ಎನ್ನುತ್ತಾಳೆ. ಇಲ್ಲ ಇಲ್ಲ ನನ್ನೊಬ್ಬನಿಗೇ ಅಲ್ಲ; ಆದರೆ ಕಾಮದೇವನಿಗೆ, ಮುದ್ದಣನಿಗೆ, ತನಗೆ- ಎಂದು ರಸಿಕವಾಗಿ ಉತ್ತರಿಸುತ್ತಾನೆ. ಲೇಖಕರ ದಿವ್ಯ ಮಂತ್ರ 'ಭಿಕ್ಷಾಂ ದೇಹಿ'ಯ ಪ್ರಸಂಗ ಬಂದಾಗ ಶಂಕರನ ಕಣ್ಣು ತೇವವಾಗಿದ್ದನ್ನು ನೋಡಿ, ನಗು ತುಂಬಿದ ಲಲಿತೆಯ ಕಣ್ಣಲ್ಲಿ ಎರಡು ಹನಿ ದುಃಖವಾಗಿ ಉದುರಿದ್ದವು.

ಕತೆ ಮುಗಿಯಿತು. ಮಂಗಳ ಹಾಡಬೇಕು. ಮುಂಚೆ ಮೆಚ್ಚು ಬೇಡವೆ? 'ನೀನೀಗ ಮೆಚ್ಚನ್ನು ಕೊಡು!' ಎಂದು ಮನೋರಮೆಯನ್ನು ಪೀಡಿಸುತ್ತಾನೆ.

"ನನ್ನನ್ನೇ ಕೊಟ್ಟೆ!" ಮನೋರಮೆ ಕಿಲ ಕಿಲನೆ ನಗುತ್ತಾಳೆ.

"ಓಹೋ ಬಲ್ ಮಾತುಗಾತಿ. ನೀ ಕೊಟ್ಟುದೇನು? ನಿನ್ನ ತಂದೆ ಮೊದಲೇ ನನಗೆ ಕೊಟ್ಟಿದ್ದಾನೆ. ಈಗ ನೀನು ನನ್ನ ಕತೆಗೆ ತಕ್ಕ ಮೆಚ್ಚನ್ನು ಕೊಡು!" ಮುದ್ದಣ ಸುಮ್ಮನೇ ಬಿಡುವ ಆಸಾಮಿಯೇ ಅಲ್ಲ. ಮನೋರಮೆಯ ಕಣ್ಣು ಕಳ್ಳಾಟವಾಡುತ್ತಿವೆ. ತುಟಿ ಹಲ್ಲಿನ ಸಂದಿಯಲ್ಲಿ ಸಿಕ್ಕಿದೆ. ಮೂಗರಳಿದೆ. ಕೆನ್ನೆ ಕೆಂಪಾಗಿವೆ. ಸಿಡುಕು ಕುಲು ಕುಲು ನಗುತ್ತಿದೆ. ಶಂಕರ ಬಾಯಿ ತುಂಬಾ ಬಣ್ಣವಾಗಿ ಶತಮಾನಗಳ ಸಂಧಿಯ ದಂಪತಿಗಳ ಸರಸ ದೃಶ್ಯವನ್ನು ಚಿತ್ರಿಸುತ್ತಿದ್ದ. ಮುಂದುವರಿದು, ಬಹುಶಃ ಮನೋರಮೆ, ಮುದ್ದಣನಿಗಿತ್ತ ಮೆಚ್ಚು ಒಂದು ಚೆಂದುಟಿಯ ಮುತ್ತು, ಎಂದು ಹಾಗೆ ತಲೆ ಎತ್ತಿ ಲಲಿತಳ ಮೊಗವನ್ನು ಶಂಕರ ದಿಟ್ಟಿಸಿದ.

ಲಲಿತೆಯ ಮುಖ ಕೆಂಪೇರಿತ್ತು. ತುಟಿ ರಕ್ತವನ್ನು ಕಾ
ತಿದ್ದುವು. ಆ ದಂಪತಿಗಳು ಅವರ ಮನಸಿನಿದಿರು ಸರಸವಾ
ತಿದ್ದರು. ಶಂಕರನ ಮನಸ್ಸು ಹೊಯ್ದಾಡಿತು. ಎದೆ ಹಾರುತಿತ
ಲಲಿತೆ ತಗ್ಗಿದ ತಲೆಯಿಂದಲೇ ಕಣ್ಣು ಹೊರಳಿಸಿ, ಶಂಕರನ
ನೋಡಿದಳು. ಆ ಕಣ್ಣಿನಲ್ಲಿ ಸುಸ್ವಾಗತದ ಹಲಗೆ ನೇತಾಡುತಿತ್ತು
ಶಂಕರನ ಕಣ್ಣಿಗೆ. ಮೈ ಮಿಂಚಿನ ಬಳ್ಳಿಯಲ್ಲಿ ಕಟ್ಟಿ, ಹಿಗ್ಗಿ
ಮುಳ್ಳಿನಮೇಲೆ ಮಲಗಿಸಿದಂತಾಗಿತ್ತು, ಅವನ ಸ್ಥಿತಿ; ಅವನ ಸ್ಥಿ
ಅಸ್ಥಿರವಾಗಿತ್ತು, ತಡೆಯಲಾರದಾದ ಶಂಕರ. ಎದ್ದು, ಲಲಿ
ಯನ್ನು ಬರಸೆಳೆದು ಗಾಢವಾಗಿ ಅಪ್ಪಿ ಮುತ್ತಿಟ್ಟ. ಲಲಿ
ಚಂಗನೆ ಎದ್ದುನಿಂತಳು. ಕೊಡವಿಕೊಂಡು ನಾಗರ ಹಾವಿನಂ
ಸಿಡಿದು ನಿಂತಳು. ಅವಳ ಎದೆ ಏರಿಳಿಯುತಿತ್ತು. ಬಿಸಿಯುಸಿ
ತಿದಿಯೊತ್ತುತಿತ್ತು. ಕೋಪ ಕಣ್ಣಲ್ಲಿ ಕುಣಿಯುತಿತ್ತು. ತಿರಸ್ಕಾ
ಹೇಸಿಕೆ ಆ ಮುಖದಲ್ಲಿ ಎದ್ದು ಕಾಣುತಿದ್ದುವು. ರೌದ್ರ ಭೀಕರವಾ
ನೆರೆತುಂಬಿ ಕಾಡಹೊಳೆ ಹುಚ್ಚಾಗಿ ಹರಿಯಿತು. ತೆರೆ ತೆರೆ ಹೆ
ಬಿಚ್ಚಿ ಹೊಯ್ದಾಡಿ ತೂಗಿ ಹೋಯ್ತು. ಶಂಕರನ ಮೈ ತೊಯು
ಹೋಯ್ತು. ಅಧೈರ್ಯ, ಭಯ, ಹೆದರಿಕೆ ತೊತ್ತಳ ತುಳಿದವು
ಸಿಡಿಲು ಬಡಿದು ನಿಷ್ಪಂದನಾಗಿದ್ದ. ಮಾಡಬಾರದುದನ್ನು ಮಾ
ಪಾತಾಳಕ್ಕೆ ಬಿದ್ದಿದ್ದ. ಅಲ್ಲಿ ಹಾವು, ಮೊಸಳೆ, ಚೇಳು ಬಾಯಿ
ತೆರೆದು, ಕೊಂಡಿ ಎತ್ತಿ ಸಾಲಿಟ್ಟಿದ್ದುವು. ಶಂಕರ ಮೇಲಿನಿಂ
ಬೀಳ್ಳುತಿದ್ದ, ಕೆಳಗೆ ನೋಡಿದ, ಆಳವಾಗಿ ಕಾಣುತಿತ್ತು ಕಂದರ
ಬೆವರು ಧಾರೆ ಧಾರೆಯಾಗಿತ್ತು. ಸಿಡಿಲಾದ ಶಂಕರನ ಜಟೆಯಿಂ
ಗಂಗೆ ಬಿಸಿನೀರ ಬುಗ್ಗೆಯಾಗಿ ಉಕ್ಕಿ ಹರಿಯುತಿದ್ದಳು. ಶಂಕರನ
ಮೈಯೆಲ್ಲ, ಮನವೆಲ್ಲ ಬೇಯುತಿತ್ತು. ಹುಗಿಯಾಗಿ 'ಟಸ್ ಪಸ್'
ಬೇಯುತಿತ್ತು.

ಅಲ್ಲಿ ನಿಲ್ಲದೆ ಅದುರುವ ಅಡಿಯಿಂದಲೇ ಮನೆ ಬಿಟ್ಟು

ಹೊರಟ. ಓಡಿ ಓಡಿ ತನ್ನ ಕೋಣೆಗೆ ಹೋಗಿ ಅಗುಳಿ ಹಾಕಿ ಮಲಗಿಬಿಟ್ಟ.

ಎರಡು ವಾರಗಳು ಸಾಗಿ ಹೋದುವು. ಅವರ ಮನೆಯ ಕಡೆ ಸುಳಿಯಲಿಲ್ಲ, ಶಂಕರ. ಕಾಲೇಜಿನಲ್ಲಿ ಲಲಿತೆಯ ಮುಖ ಕಂಡರೆ ಸಾಕು ಮರೆಯಾಗುತಿದ್ದ. ಬೆಂದ ಬದನೇಕಾಯಿಯಾಗು ತಿದ್ದ. ಕರ ಕರಗಿ ಹೋಗುತಿದ್ದ – ಆವಿಯಾಗಿ ಹೋಗುತಿದ್ದ. ದೂರದಲ್ಲಿ ಮೋಡವಾಗಿ ಕುಳಿತು ಮಳೆ ಕರೆಯುತಿದ್ದ. ಬಿಸಿ ಯುಸಿರ ಗಾಳಿ ಸುಯ್ಯುಗುಡುತಿತ್ತು.

ಒಮ್ಮೆ ಲಲಿತಳೇ ಪ್ರಯತ್ನಪಟ್ಟು ಅವನನ್ನು ಹಿಡಿಯ ಬೇಕಾಯ್ತು.

"ರಾಯರ ಸವಾರಿ ಬಡವರ ಮನೆಗೆ ದಯಮಾಡಿಸಲಿಲ್ಲ!" ಆ ಮಾತಿಗೆ ಶಂಕರ ಸತ್ತುಹೋದ. ಮೌನ ಅಲ್ಲಿ ಮನೆ ಮಾಡಿ ಕೊಂಡಿತ್ತು.

ದಾರಿಯಲ್ಲಿ :

"ಲಲಿತ, ನಾನು ಬಹಳ ತಪ್ಪು ಮಾಡಿದೆ. ಕ್ಷಮಿಸಿರಿ. ನಿಮಗೆ ಮುಖ ತೋರಿಸಲೂ ನನಗೆ ಹೇಸಿಕೆಯಾಯ್ತು. ಅದ ಕ್ಕಾಗಿ ಮನೆಯಕಡೆ ಬರಲಿಲ್ಲ. ಕಾಲೇಜಿನಲ್ಲೂ ದೂರ ದೂರವೇ ಇರುತಿದ್ದೆ. ನನ್ನ ಮನಸ್ಸು ಬಹಳ ದುರ್ಬಲ. ಅದಕ್ಕೊಂದು ಸ್ಥಿರತೆಯಿಲ್ಲ. ವಿವೇಚನೆಯಿಲ್ಲ. ನೀತಿ ನಿಯಮವಿಲ್ಲ. ಕಂಡ ಹಾದಿ ಹಿಡಿದು ಹೊರಟುಬಿಡುತ್ತದೆ. ಹಿಡಿದ ದಾರಿ ತಪ್ಪು ಎಂದು ತಡವಾಗಿ ಅರಿತುಕೊಂಡು ಮರುಗುತ್ತದೆ. ಮತ್ತೆ ಹಾಗೆಯೇ ಸಾಗುತ್ತದೆ. ನಿಮ್ಮ ಮನೆಯಲ್ಲಿ ನಾನು ಹಾಗೆ ವರ್ತಿಸಿದ್ದನ್ನು ಕ್ಷಮಿಸಿ. ನಾನು ದ್ರೋಹಿ; ದ್ರೋಹ ಬಗೆದೆ!"

ಶಂಕರನ ಕಂಠ ಕಟ್ಟಿಬಿಟ್ಟಿತು. ಲಲಿತ ಹಿಂದಿರುಗಿದಾಗ ಶಂಕರನ ತಲೆ ತಗ್ಗಿತ್ತು. ತುಟಿ ಅದುರುತಿದ್ದುವು. ಕಣ್ಣೀರು

ಧಾರೆಯಾಗಿ ಸೋರುತಿತ್ತು.

"ಕಣ್ಣೊರಸಿಕೊಳ್ಳಿ, ಮೊದಲು. ಕಂಡವರೇನೆಂದಾರು ಮನೆಯಲ್ಲಿ ಮಾತನಾಡೋಣ. ಆಗ ಕ್ಷಮೆಕೇಳುವಿರಂತೆ ಲಲಿತಳ ಮಾತಿನಲ್ಲಿ ಸರಳತೆಯಿತ್ತು; ತುಂಟತನವಿತ್ತು.

ಕ್ಷಮಿಸುವುದು ಬನಶಂಕರಮ್ಮನವರವರಿವಿಗೂ ಹೋಯಿತ ನೀವಿಬ್ಬರೂ ಒಂದಾಗಿ ಬಾಳುವುದಾದರೆ ತುಂಬಾ ಸಂತೋಷವೆಂ ಎರಡು ಹಸಿ ಹಾಕಿ ಹರಸಿದರು. ಶಂಕರನ ಎದೆಯಲ್ಲಿ ಮಧು ಸೋವು ಕಡಲಾಗಿ ಕಲಕಿತು. ತೆರೆ ತೆರೆಯೆಬ್ಬಿಸಿ ದಡಕ ಬಡಿ ಬಡಿದು ನೊರೆಗರೆಯಿತು. ನವಜೀವನದ ನೇಸರಿನ ಹೊನ ಬಿಸಿಲಿಗೆ ಕಡಲು ಮಿನ ಮಿನ ಮಿಂಚಿತು. ಮೇರೆಯಿಲ್ಲದ ಕಡಲ ಅನಂತಾಕಾಶದಲ್ಲಿ ಲೀನವಾಗಿ ಹೋಯ್ತು. ಅಂದೇ ನಿಶ್ಚಯ ವಾಯ್ತು, ತಮ್ಮ ಮದುವೆ ಓದು ಮುಗಿದೊಡನೆಯೇ ಎಂದು.

ತಾನು ಎಂತಹ ಸುಕೃತಿಯುಳ್ಳವನು! ಎಂಥ ಪುಣ್ಯಶಾಲಿ ಲಲಿತಳ ಸ್ನೇಹ ಲಲ್ಲೆ ತನ್ನ ಬಾಳಿಗೆ ಹಬ್ಬುತ್ತದೆಯೆ? ಬಿಳಿ ಬೀ ಯ ಬೆಳ್ಳಿಯ ಹೂ ಮಘ ಮಘಿಸುತ್ತವೆಯೆ?

ಆ ವೊಳಗೆ ಲಲಿತಳ ಒಳಬಾಳು ಹೊರಗೂ ಮಿನುಗುತಿತ್ತು. ಅವಳ ಮುಂಚಿನ ಬಿಂಕ ಕರಗಿಹೋಗಿತ್ತು. ಅವಳ ಆ ಸ್ನೋ ಪೌಡರ್‌ಗೆ ಹೋಗುತಿದ್ದ ಹಣ ಪುಸ್ತಕವಾಗಿ ಮನೆ ತುಂಬುತಿತ್ತು ಸೆರಗು ಕುತ್ತಿಗೆಯಿಂದ ಮೇಲೇರೇರಿ, ತಲೆಯನ್ನು ಆವರಿಸಿ ಮುಚ್ಚಿಕೊಂಡಿತ್ತು. ಎತ್ತಿದ ತಲೆ ತಗ್ಗಿತ್ತು. ನೋಟ ಕಾಲ ಹೆಬ್ಬೆರಳ ನೋಡುತಿತ್ತು. ಸೌಮ್ಯ ಹೂವಾಗಿ ಪರಿಮಳಿಸಿತ್ತು.

ಹೀಗೆ ಪರಿವರ್ತನೆಯಾಗುತ್ತಾಳೆಂದು ಶಂಕರನಿಗೆ ಅನ್ನಿಸಿರ ಲಿಲ್ಲ. ಒಂದೊಂದನ್ನೂ ತಿದ್ದಿಕೊಳ್ಳಲು ಅವನು ನಸು ಅಧೈರ್ಯ ದಲ್ಲೇ ಹೇಳುತಿದ್ದ. ಆ ಅವನ ಮಾತು ಮರುದಿನ ಕೃತಿಯಾಗಿ ಲಲಿತಳ ಬಾಳಿನಲ್ಲಿ ಪರಿಣಾಮವಾಗಿರುತಿತ್ತು.

ಲಲಿತಳ ಸ್ನೇಹಿತೆಯರಿಗೆ ಅಚ್ಚರಿ, ಲೇಡೀಸ್ ಕ್ಲಬ್ ಕಾರ್ಯದರ್ಶಿನಿಯಾಗಿ ಮೆರೆದವಳು, ಲಲಿತೆ. ಯಾವಾಗಲೂ ತಲೆ ಎತ್ತಿ ನಡೆಯುತ್ತಿದ್ದವಳು. ಸ್ನೋ, ಪೌಡರ್ ಇಲ್ಲದೆ ಮನೆ ಬಿಡದಿದ್ದವಳು. ಹೇಗೆ ಬದಲಿಸಿದಳು ? ಅವರಿಗದು ಬಿಡಿಸಲಾಗದ ಜಟಿಲ ಸಮಸ್ಯೆ. ಕೇಳಿದರೆ, "ಯಾಕೋ ಬೇಡವಾಯ್ತು ಬಿಟ್ಟೆ!" ಅಷ್ಟೇ ಲಲಿತಳಿಂದ ಉತ್ತರ. ತನ್ನ ಪಾಡಿಗೆ ತಾನಿರಲು ಮೊದಲಿಸಿದಳು, ಆಕೆ.

ಲಲಿತ ಬದಲಿಸಿದಳು. ಶಂಕರನ ಎದೆ ತಳಿರೊಡೆಯಿತು. ಹೂವೂ ಮೂಡಿತು. ಒನವೆಲ್ಲ ಹೊಸ ತಳಿರುಟ್ಟು, ಮೊಗ್ಗನುಟ್ಟು, ಕಣ್ಣಿಗೆ ಅಂದವಾಯ್ತು; ಮನಕ್ಕೆ ಆಹ್ಲಾದವಾಯ್ತು. ಆತ್ಮಕ್ಕೆ ಶಾಂತಿಯನ್ನಿತ್ತಿತು.

"ನಿಮ್ಮ ಹೃದಯದೊಳಗೆ ನಿಜವಾಗಿಯೂ ಕಬ್ಬವೆಣ್ಣಿನ ಕುಡಿಯು ನೋಟ ನಾಟಿದೆ. ಅವಳು ಆ ಮೃದು ಹೃದಯಕ್ಕೆ ಮುತ್ತನೂ ಒತ್ತಿದ್ದಾಳೆ !"

ಕಣ್ಣುಜ್ಜಿಕೊಂಡ, ಶಂಕರ. ಲಲಿತಳು ಮಾಯವಾಗಿ, ಅಲ್ಲಿ ಶಾಂತ ನಗುತ್ತಿದ್ದಳು. ತಾನು ಶಾಂತಳ ಇದಿರು ಕವಿಯಾಗಿ ಕುಳಿತಿರುವುದು ಮೈ ಎಚ್ಚರಕ್ಕೆ ಬಂದಿತು. ಮನ ಹುಚ್ಚು ಹುಚ್ಚಾಯ್ತು. ಹಾಗೆ ಅಂದು ಲಲಿತೆಯೊಡನೆ ಆದಂತೆ ಈಗ ಆದರೆ !.... ಅಯ್ಯೋ ಆದರೆ !

ಎದೆ ಡವ್ ಡವ ಬಡಿದುಕೊಳ್ಳುತಿತ್ತು. ನೀರವದ ಕಡಲಲ್ಲಿ ಶಂಕರ ಬೆಂಡಾಗಿದ್ದ. ಮುಗ್ಧ ಹೆಣ್ಣು ಇದಿರು ಕುಳಿತು ಮಾತನಾಡುತ್ತಿದೆ, ಹಣ್ಣಾಗಿ. ಶಂಕರನು ಎದ್ದು ಹೋಗುವುದೇ ಉಚಿತವೆಂದರಿತುಕೊಂಡ.

"ಸರಿ, ನಾ ಬರ್‍ತೀನ್ರಿ. ಯಾರೋ ಸ್ನೇಹಿತರಲ್ಲಿಗೆ ಹೋಗಬೇಕಾಗಿದೆ !" ಎಂದು ಮೇಲೆದ್ದ.

"ನಾನೂ ಬರೀತೀನಿ!" ಆಗಲೇ ಶಾಂತ ಹೇಳಿದ್ದು.

ತನಗೆ ಬಹುವಚನ ಉಪಯೋಗಿಸದಿದ್ದರೆ ಮಾತ್ರ ತ
ಕೃತಿಗಳನ್ನು ತೋರಿಸುವ ನಿಯಮವನ್ನು ಹೇಳಿದಳು.

"ಹಾಗೆ ಆಗಲಿ, ತನ್ನಿ!"

"ಮತ್ತೆ ಅದೇ ರೋಗ!"

"ಸರಿ. ತಂದು ಕೊಡು" ಕಷ್ಟಪಟ್ಟು ಉಸಿರಬೇಕಾಯ್ತು
ಶಾಂತ ನಗುತ್ತಲಿದ್ದು, ಅಲ್ಲಿಯೇ ಇದ್ದ ಕಪಾಟಿನೊಳಗಿಂದ ಒಂದ
ಬೈಂಡ್ ಪುಸ್ತಕ ತೆಗೆದು ಶಂಕರನ ಕೈಗಿತ್ತಳು.

ದುಂಡಗೆ ಬರೆದಿತ್ತು "ಎಸಳು" ಎಂದು. ಅದರ ಕೆಳಗ
"ಶಾಂತಾ" ಎಂದೂ ಬರೆದಿತ್ತು. ಅದೊಂದು ಕತಾ ಸಂಗ್ರಹ
ಅಲ್ಲಲ್ಲಿಯ ಹಲವು ವಾಕ್ಯಸಮುದಾಯಗಳನ್ನೂ, ಸಂವಾದಗಳನ್ನೂ
ಓದಿನೋಡಿದ. ಶಂಕರನಿಗೆ, ಮಾತಿನಲ್ಲಿ ಹೇಗೋ ಹಾಗೆ ಬರ
ವಣಿಗೆಯಲ್ಲೂ ಚದುರೆ ಈ ಶಾಂತಾ- ಎನ್ನಿಸಿತು.

"'ಚಿಗುರು' ಬರೆದು ಬೆಳಕಾದ ದಿವಂಗತ ಕೊಡಗಿನ
ಗೌರಮ್ಮನವರಿಗೆ, 'ಎಸಳನ್ನು' ರಚಿಸಿ, ಅವರ ತಂಗಿ..."

"ಅಯ್ಯೋ ಅವರಿಗೂ ನನಗೂ ಎಲ್ಲಿಗೆಲ್ಲಿ! ಅವರ ಪಾದ
ಧೂಳಿ..."

"ಹೌದು ಬಸವಣ್ಣನವರೂ ಹಾಗನ್ನುತಿದ್ದರು, ಜಂಗಮರ
ಕುರಿತು: ನಿಮ್ಮ ಪಾದದ ಉಗುರಿನ ಧೂಳಿಯೇ ನನ್ನ ಬಾಯಿಯ
ಬೆಣ್ಣೆ. ನಿಮ್ಮ ಲೆಂಕರರ ಲೆಂಕರ ನಾನು" ಎನ್ನುತ್ತ ಶಂಕರ ತಲೆ
ಎತ್ತಿದಾಗ ಶಾಂತಾ ಮಗ್ಗುಲಲ್ಲೇ ಭಕ್ತಳಾಗಿ ನಿಂತಿದ್ದಳು.

"ತುಂಬಾ ಚೆನ್ನಾಗಿವೆಯೆಂದು ಕಾಣುತ್ತವೆ. ಯಾವ
ಪತ್ರಿಕೆಗೂ ಕಳಿಸಿಲ್ಲವೆ?"

"ಇಲ್ಲ. ನಮ್ಮ ಹೈಸ್ಕೂಲ್‌ನಲ್ಲಿ ಸ್ಪರ್ಧೆಗೆ ಮಾತ್ರ ಕಳಿಸಿದ್ದೆ.
ಫಸ್ಟ್ ಪ್ರೈಜ್ ಬಂದಿತ್ತು: ಆ 'ಒಲಿದ ಕೊರಳು' ಕತೆಗೆ."

ಮಾತು ಹೀಗೇ ಸಾಗಿತ್ತು. ಕಾಲ ನಿಮಿಷ ನಿಮಿಷವಾಗಿ ಸಾಗುತಿತ್ತು. ಶಂಕರ ಯಾವುದೋ ಲೋಕದಲ್ಲಿದ್ದ. ಕೈಯಲ್ಲಿ ಹರಿಯದ ಹೆಣ್ಣು ಬರೆದ ಪುಸ್ತಕವಿದೆ. ಬರೆದ ಹೆಣ್ಣೂ ಮಗ್ಗು ಲಲ್ಲಿ ನಿಂತುಕೊಂಡಿದೆ. ಅವನೂ ಕವಿ. ಆ ಕವಿಯ ಎದೆ ತುಳುಕು ತಿತ್ತು.

"ಶಾಂತೂ ಬಾ" ಒಳಗಿನಿಂದ ದನಿ ಬಂತು. ಶಾಂತಾ "ಬಂದೇಮ್ಮಾ" ಎಂದು ಅಲ್ಲೇ ನಿಂತಳು. ಸ್ವಲ್ಪ ಸಮಯದ ನಂತರ "ಬಂದೇನೇ ?" ಓಹೋ ! ನಿನ್ನ್ನ ಕತೆ ತೋರ್‌ಸ್ತೀಯಾ ? ಆಯ್ತು ನೀನೂ ಒಬ್ಬ ಸಾಹಿತಿ !" ಶಂಕರ ತಲೆ ಎತ್ತಿದಾಗ ಮಂಗಳಮ್ಮಸವರು ಬಾಗಿಲಲ್ಲಿ ನಿಂತಿದ್ದರು.

"ನೋಡಿಯಪ್ಪ. ಈಕೀಗೆ ಇನ್ನೇನಿಲ್ಲ. ಕತೆ, ಕಾದಂಬರಿ, ಕವಿತೆ ಅಂದ್ರಾಯ್ತು ಇನ್ನೊಂದು ಬೇಡ. ಕ್ಲಾಸು ಪುಸ್ತಕ ಗಳನ್ನೂ ಓದೋದಿಲ್ಲ. ಅದ್ಹೆಂಗೆ ಪಾಸಾಗ್ತಾಳೋ ! ಯಾವಾಗ್ಲೂ ಫಸ್ಟ್ ಕ್ಲಾಸ್‌ನಲ್ಲೇ ಪಾಸಾಗ್ತಾಳೆ. ನಾನೂ ಹೇಳ್ತೀನಿ: 'ಇವೆಲ್ಲಾ ನಿನಗ್ಯಾಕೆ ಬಿಟ್‌ಬಿಡು; ಹೆಂಗ್ಸಗ್ಯಾಕೆ ಗಂಡಸ್ರ ಕೆಲ್ಸ' ಅಂತ, ಕೇಳ್ಳೇವಲ್ಲು !" ಎಂದು ಹೆಮ್ಮೆ, ಮಮತೆಯಿಂದ ನುಡಿದರು.

"ಇಲ್ಲಾ ತಾಯಿಯವ್ರೆ. ಚೆನ್ನಾಗಿ ಬರೀತಾರೆ. ಗಂಡಸ್ರೇನು, ಹೆಂಗಸ್ರೇನು ವಿದ್ಯಕ್ಕೆ. ಈ ಕತೆಗಳನ್ನು ನೀವೂ ಓದಿರಬೌದು. ತುಂಬಾ ಉತ್ತಮವಾಗಿವೆಯಂತ ಕಾಣ್ತವೆ. ?" ಶಂಕರ ಸಹೃದಯ ನಾಗಿಯೇ ಆಡಿದ.

"ಏನೋಪ್ಪಾ ನೀವೆ ನೋಡ್ಕೊಳ್ಳಿ. ಆಕಿ ದೊಡ್ಡೋಕಾಗಿ ಒಳ್ಳೇ ರೀತಿ ಸಂಸಾರ ಮಾಡಿದ್ರಾಯ್ತು" ಎನ್ನುತ್ತ ಬಾರೆ, ಕಾಫಿ ಮಾಡಿದೀನಿ ತಂದು ಕೊಡು" ಎಂದು ಶಾಂತಾಳನ್ನು ಕರೆದು, ಮಂಗಳಮ್ಮ ಒಳನಡೆದರು.

ಶಂಕರನಿಗೆ ಅವರ ಮಾತಿನ ಗೂಢಾರ್ಥ ಹೊಳೆಯಲಿಲ್ಲ.

ಶಾಂತಳನ್ನು ನೋಡಿದ. ಆಕೆ ನಸುನಗೆ ನಕ್ಕು ಒಳಓಡಿದ್ದ
ಶಂಕರನಿಗೆ ಸಮಸ್ಯೆಯಾಯಿತು. ಯಾಕೆ ಆ ಮಾತೆಂದರ
ಅದರ ಅರ್ಥವೇನು ? 'ನೀವೇ ನೋಡ್ಕೊಳ್ಳಿ' ಎಂದುದರ
ತಿರುಳೇನು ? ಏನಿರಬಹುದು ?.... ಸಮಸ್ಯೆಯು ಹುಳು ಬೈ
ಕೊರೆಯುತ್ತಿತ್ತು. ವೃತ್ತವಾಗಿ ಸುತ್ತಿ ಸುತ್ತಿ ಕೊರೆಯುತ್ತಿ
ಬಗೆ ಹರಿಯದ ಸಮಸ್ಯೆ ಭೂತವೂ ಆಯ್ತು.

ಕಾಫಿಯನ್ನು ಹಿಡಿದುಕೊಂಡು ಒಳಬಂದ ಶಾಂತಾಳ ಗ
ಕೆಂಪಾಗಿತ್ತು. ತುಟಿ ತೊಂಡೆಯ ಹಣ್ಣಾಗಿತ್ತು. ಮುಸು
ಮುಖವನ್ನು ಮುಚ್ಚುತಿತ್ತು. ಏನೋ ಮಾರ್ಪಾಡು ಅಲ್ಲಿ ಕಾ
ಸಿತು. ಕಾಫಿ ಕುಡಿಯುವಾಗ ಆಗಾಗ ಕತ್ತು ಕೊಂಕಿಸಿ, ಕ
ಕುಡಿಯಲ್ಲಿ ನಗುತ್ತಿದ್ದಳು. ಅಲ್ಲಿಂದ ಮಲ್ಲಿಗೆಯನ್ನು ಚೆಲ್ಲುತಿದ್ದ

ಮರುದಿನವೇ ಶಿವಯ್ಯನವರು ತಮ್ಮ ಆಫೀಸಿನಲ್ಲಿ ವಿಷ
ಪ್ರಸ್ತಾಪ ಮಾಡಿದರು.

"ನೋಡಪ್ಪಾ. ನಿನ್ನ ನೋಡಿದಾಗಿನಿಂದಲೂ ಏನೋ ಒಂ
ವಿಧವಾಗುತ್ತೆ.. ನಾನೂ ಮುದುಕನಾದೆ. ಅಷ್ಟಿಷ್ಟು ಆಸ್ತಿ ಮಾ
ದ್ದೇನೆ.... ಸುತ್ತು ಬಳಸಿ ಮಾತನಾಡುವುದೇನು. ಶಾಂತಾ
ನಿನಗೇ ಕೊಡಬೇಕೆಂದು ಆಸೆ. ನೀನು ನಡೆಸಿಕೊಡಬೇಕು."

ಅಂದು ಅವರಿಂದ ಬಂದ ಸ್ವರ ಅಷ್ಟು ಮೃದು; ಅಷ
ಕಂಪನಕಾರಿ. ಶಂಕರನಿಗೆ ಏನೂ ಉತ್ತರಿಸಲಾಗಲಿಲ್ಲ. ಅವನ
ಕುಳಿತ ಆಸನದ ಮೇಲೆ ಮೂರು ವರ್ಷಗಳಲ್ಲಿ ಆಗಾಗ ಕುಳಿ
ಕೊಂಡಿದ್ದ. ಅಂದಿನ ದಿನದ ಹಿಂದಿನೆಲ್ಲ ಸಮಯದಲ್ಲಿ ಏನೋ
ಒಂದು ವಿಧ ಭಯ; ಏನೋ ಒಂದು ಗಂಭೀರ ಇದ್ದಿತ್ತು. ಆದ
ಅಂದು ಹಾಗಲ್ಲ. ಅಪರಿಚಯಸ್ಥರಾಗಿದ್ದ ಶಿವಯ್ಯನವರು
ಮುಂಚೆ ಅವನಿಗೆ ಸಹಾಯ ಮಾಡಿದ್ದರು. ಆದರೆ ಅಂದು
ತಮ್ಮ ಮಗಳನ್ನು ಕೊಡಲು ಬಂಧುವಾಗಿ ಕುಳಿತಿದ್ದಾರೆ ! ನಾನ

ಬಡವನೆಂದೂ ಅವರಿಗೆ ಗೊತ್ತು. ಯಾವುದಾದರೂ ಕೆಲಸ ಸಿಕ್ಕದಿದ್ದರೆ, ಉಪವಾಸವೇ ನನ್ನ ಸಂಪತ್ತೆಂದೂ ಅವರಿಗೆ ಗೊತ್ತು. "He is starving" ಎಂದು ನನ್ನ ಬಗೆಗೆ ಅವರಿವರಮುಂದೆ ಆಗೀಗ ಹೇಳುತ್ತಿದ್ದುದುಂಟು. ಅಂಥಾದ್ದರಲ್ಲಿಯೂ ನನಗೇ ತಮ್ಮ ಪ್ರೀತಿಯ ಮಗಳನ್ನು, ಆ ಚದುರಿಯನ್ನು ಕೊಡಬೇಕೆಂದೂ; ಅದನ್ನು ನಡಸಿಕೊಡಬೇಕೆಂದೂ ಕೇಳುತಿದ್ದಾರೆ! ಆದರೆ! ಅಯ್ಯೋ ಆದರೆ!

ಶಂಕರನ ತಲೆ ಕಾಯ್ದಿತ್ತು. ಲಲಿತಳ ನೆನಪು ತೂರಿ ಬಂದಿತ್ತು. ಬನಶಂಕರಮ್ಮನವರಿಗೆ ಮಾತು ಕೊಟ್ಟಾಗಿದೆ. ಲಲಿತಳನ್ನು ತಾನೇ ಪ್ರೀತಿಸಿ, ಒಲಿದುದಾಗಿದೆ. ಈಗ ಇವರಿಗೇನೆಂದು ಉತ್ತರಿಸಲಿ? ಇಲ್ಲ. ನನಗಿಲ್ಲಿಯೇ ಬೇರೊಂದು ಹುಡುಗಿಯ ಮೇಲೆ ಪ್ರೀತಿಯಿದೆಎಂದು ಹೇಳಲೆ? ಹುಚ್ಚು ಆದೀತು! ಆದರೆ ದ್ರೋಹ ಬಗೆದಂತೆ ಆಗುವುದಿಲ್ಲವೆ, ತಾನು ಒಪ್ಪಿಗೆಯಿತ್ತರೆ. ತನ್ನನ್ನೇ ನಂಬಿಕೊಂಡಿರುವ ಆ ತಾಯಿ-ಮಗಳು! ಅವರದೆಷ್ಟು ಆದರ, ಪ್ರೀತಿ! ನಾನು ಸಿರಿವಂತನಲ್ಲವೆಂದೂ ಗೊತ್ತು. ಕಾಲೇಜ್ ಫೀಜು ಕೊಡಲೂ ಗತಿ ಇರದಿದ್ದ ತನ್ನನ್ನು ಎತ್ತಿದ್ದಾರೆ, ಅವರು. ನನ್ನಂತಹ ನಿರ್ಗತಿಕನನ್ನು ನಂಬಿರುವವರನ್ನು ನಿರ್ಗತಿಕರನ್ನಾಗಿ ಮಾಡಲೆ? ನನ್ನ ಅಭಿಪ್ರಾಯಕ್ಕೆ ಬಗ್ಗಿ ನಡೆಯುತ್ತಿರುವ ಲಲಿತ! ಆಹಾ ಲಲಿತ! ಹೇಗಿದ್ದವಳು ಹೇಗಾಗಿದ್ದಾಳೆ! ಜೇನು ಹುಳುಗಳನ್ನು ಬೇರ್ಪಡಿಸಿದ ಜೇನಂತಿದ್ದಾಳೆ. ಆ ಆಡಂಬರ, ಆ ಅಲಂಕಾರ, ಆ ಬಿಂಕ ಯಾವುವೂ ಅವಳಲ್ಲಿ ಈಗ ಇಲ್ಲ. ನಿಶ್ಚಲ ಮನಸ್ಸು, ಶುದ್ಧ ಭಾವನೆ, ಅಮರ ಪ್ರೇಮ - ಅವಳ ಆಸ್ತಿ ಈಗ. ಅಕ್ಕಮಹಾದೇವಿ ಆರಾಧ್ಯ ದೇವತೆ. ಆಕೆಯನ್ನು ತನಗೆ ಪರಿಚಯ ಮಾಡಿಸಿಕೊಟ್ಟು, ಉಪಕಾರ ಮಾಡಿದಿರೆಂದು ದಿನಕ್ಕೊಮ್ಮೆಯಾದರೂ ಅನ್ನುತ್ತಿದ್ದಾಳೆ. ನನ್ನ ಬಾಳಿನ ನಿಜಗೆಳತಿಯಾಗಿ ಸಾಗಲು ಒಪ್ಪಿ

ಬಂದಿದ್ದಾಳೆ. ಅಂಥವಳಿಗೆ ದ್ರೋಹ ಬಗೆಯಲೆ? ಅಲ್ಲಿ ದ
ದಲ್ಲಿ ನನ್ನ ಕಡೆಗೇ ಕಣ್ಣು, ಪ್ರಾಣವನ್ನಿರಿಸಿ ಜೀವಿಸುತ್ತಿರು
ತಾಯಿ! ಅವಳ ಇಷ್ಟವೇನಿದೆಯೊ? ಇದುವರಿವಿಗೂ ಒ
ಯಾದರೂ ಆ ಸುದ್ದಿ ತೆಗೆದವಳಲ್ಲ. ಆದರೆ ಆಗೀಗ ಅಕ್
ಮಗಳ ಸುದ್ದಿಯನ್ನು ಹೇಳುತ್ತಿದ್ದುದುಂಟು. ಆದರೆ ತಾಯಿಯನ
ಲಲಿತಳ ವಿಷಯವಾಗಿ ಒಪ್ಪಿಸಬಹುದು. ಒಮ್ಮೆ ಲಲಿತಳನ್
ಊರಿಗೆ ಕರೆದೊಯ್ದರೆ ತಾಯಿ ನಿಜವಾಗಿಯೂ ಒಪ್ಪಿಯೇ ಒ
ತ್ತಾಳೆ. ಆದರೆ ಇಲ್ಲಿ ಇವರಿಗೆ ಏನೆಂದು ಉತ್ತರಿಸಲಿ? ಇಲ್ಲ
ಸಾಧ್ಯವಿಲ್ಲ! ಎಂದು ನಿರಾಕರಿಸಲೆ? ನಾನು ಇಷ್ಟು ಮುಂದುವ
ಯಲು ಸಾಧ್ಯವಾದುದು ಇವರಿಂದಲೂ ಹೌದು. ಈ ನನ್ನದೆನ್ನು
ದೇಹ, ಮನಸ್ಸು ಹಲವರಿಂದ ಪರಿಪೋಷಿತವಾದುದಾಗಿ
ಅವರೆಲ್ಲ ಈಗ ಇದರಿಂದ ಉಪಯೋಗ ಪಡೆಯಲು ಆಶಿಸ
ತ್ತಿದ್ದಾರೆ!

ಛೀ! ನಾನೀರೀತಿ ಯೋಚಿಸಬಾರದು! ನನ್ನನ್ನು ಕರೆದೊಯ್
ಲಲಿತೆಗೆ ಆ ಇಷ್ಟವಿದ್ದಿತ್ತೆ? ಇಲ್ಲ! ನಾನೇ ಅವಳನ್ನು ಒಲಿದದ್ದು
ಯಾರೋ ಭಿಕಾರಿಯಾದ ನನ್ನನ್ನು ಕರುಣೆಯಿಂದ ಕಂಡ ಶಿವಯ
ನವರಿಗೆ ಈ ಹಂಚಿಕೆ ಇದ್ದಿತ್ತೆ? ಇಲ್ಲ! ನಾನೇ ಇವರಿಗೆ ನನ
ಕಷ್ಟಗಳನ್ನೆಲ್ಲಾ ಹೇಳಿಕೊಂಡಿದ್ದೆ. ಇದರಲ್ಲಿ ಯಾರ ತಪ್ಪೂ ಇಲ್ಲ
ನಾನು ಬಡವನಾಗಿ ಹುಟ್ಟಿದುದು ಮೊದಲ ತಪ್ಪು; ಓದಲು ಮುಂದ
ವರಿದು ಬಂದುದು ಎರಡನೆಯ ತಪ್ಪು; ಓದು ನಿಲ್ಲಿಸಲು ಅನೇ
ತೊಂದರೆಗಳು ಬಂದರೂ ನಿಲ್ಲಿಸದಿದ್ದುದು ಮೂರನೆಯ ತಪ್ಪು
ಎಲ್ಲದೂ ನನ್ನ ತಪ್ಪೇ! ಇವರ ತಪ್ಪಲ್ಲ! ಖಂಡಿತವಾಗಿಯೂ ಅಲ್ಲ
ನನ್ನನ್ನು ಆಳಕ್ಕೆ ತಳ್ಳುವ ಕುಯುಕ್ತಿ ಇವರಲ್ಲಿಲ್ಲ.

ಎಷ್ಟು ಪ್ರೀತಿ, ಕರುಣೆ ತುಂಬಿದೆ, ಇವರ ಮಾತಿನಲ್ಲಿ
ಇವರ ಈ ಮೃದು ಮಾತಿನಂತೆಯೇ ಇದ್ದಾಳೆ, ಶಾಂತ

ಅವಳೊಂದು ಮಲ್ಲಿಗೆ. ಅವಳ ಕೈ ಹಿಡಿದರೆ ನಾನೇ ಧನ್ಯ! ನನ್ನ ಧ್ಯೇಯಕ್ಕೆ ಹೊಂದಿಕೊಂಡು ಹೋಗುವ ಗೆಳತಿ ಆಗಬಲ್ಲಳು ಶಾಂತ! ಲಲಿತಳೇನು ಕಡಮೆ? ಆದರೆ ಆಕೆ ಶಾಂತಳಷ್ಟು ಅಳ್ಳಕ ವ್ಯಕ್ತಿಯಲ್ಲ. ಏನೋ ಒಂದು ಬಿಗಿ; ಏನೋ ಒಂದು ವೈಶಿಷ್ಟ್ಯ. ಅವಳಲ್ಲಿ ಗರುವಿದ್ದರೆ; ಇವಳಲ್ಲಿ ಸರಳತೆ ಇದೆ. ಇಬ್ಬರೂ ಜೇನೇ!

ಶಂಕರನ ತಲೆ ಕಾಯುತಿತ್ತು. ಅವನ 'ಮಿದುಳು ಬಚ್ಚಲ ಹಂಡೆಯಲ್ಲಿ ಬೇಯುವ ಆಮೆ. ಎದ್ದೆದ್ದು ಬಿದ್ದು ಒದ್ದಾಡುತ್ತಿತ್ತು'

"ಯಾಕಪ್ಪಾ ಶಾಂತಾ ನಿನ್ನ ಮನಸಿಗೆ ಬರಲಿಲ್ಲವೆ?"

ಫಕ್ಕನೆ ಎಚ್ಚರವಾಯ್ತು, ಶಂಕರನಿಗೆ. ದೀನತೆ ಶಿವಯ್ಯ ನವರ ಮುಖವಾಗಿತ್ತು.

"ಛೇ! ಛೇ! ಹಾಗೇನಿಲ್ಲ. ಒಳ್ಳೆಯವರೇ! ಆದರೆ ನಾನು ಮದುವೆಯ ಯೋಚನೆಯಲ್ಲೇ ಇಲ್ಲ, ಸದ್ಯ"

"ಆಗಲಿ. ಈಗಲೇ ಆಗಬೇಕೆಂದೇನು ಇಲ್ಲ. ಈ ವರ್ಷ ನಿನಗೂ ಆನರ್ಸ್ ಮುಗಿಯುತ್ತೆ, ಶಾಂತಾಗೂ ಎಸ್. ಎಸ್. ಎಲ್. ಸಿ. ನೂ ಆಗುತ್ತೆ. ಚೈತ್ರಕ್ಕೋ ಅಥವಾ ಕಾರಹುಣ್ಣಿಮೆಗೋ ಲಗ್ನ ಇಟ್ಟುಕೊಂಡರಾಯ್ತು."

"ಅಲ್ಲದೆ ನಮ್ಮ ತಾಯಿಯವರಿನ್ನೂ ಏನೂ ಹೇಳಿಲ್ಲ"

"ನೀನೊಪ್ಪಿದರೆ ಅವರು ಬೇಡವೆನ್ನುತ್ತಾರೆಯೆ? ಅಲ್ಲಿ ಒಬ್ಬರೇ ಕಷ್ಟಪಡುತಿದ್ದಾರೆ ಅಂತ ಕಾಣುತ್ತೆ. ಅವರನ್ನು ಇಲ್ಲಿಗೇ ಕರೆಸಿಬಿಡು. ಅಂದಹಾಗೆ ನೀನು ನಾಳೆಯಿಂದ ನಮ್ಮ ಮನೆಗೇ ಊಟಕ್ಕೆ ಬಂದುಬಿಡು. ಮನೆ ಇದ್ದೂ ಹಾಸ್ಟಲ್ ಊಟಯಾಕೆ ಮಾಡ್ತಿಯಾ!'

ಮಾತು ಸ್ಥಿರವಾಗುತ್ತಾ ಹೋಗುತ್ತಿತ್ತು; ವಿಷಯವೂ ಗಟ್ಟಿಯಾಗುತಿತ್ತು. ಶಂಕರನಿಗೆ ಶಕ್ತಿಯೇ ಇರಲಿಲ್ಲ. ಒಂದೊಂದು ಮಾತೂ ಬಲೆಯ ಎಳೆಯಾಗುತಿತ್ತು; ಒಂದೊಂದು ನಿಮಿಷದಲ್ಲೂ

ಬಲೆ ಗಂಟಾಗುತಿತ್ತು; ಗಟ್ಟಿಯಾಗುತಿತ್ತು. ಬಾಯಿ 'ಆ' ಎಂದ
ತೆರೆಯುತಿತ್ತು.

"ಬೇಡಿ ಸಾರ್. ನನಗೆ ಹಾಸ್ಟಲಿನಲ್ಲೇ ಚೆನ್ನಾಗಿದೆ. ಸ್ವಾಮಿ
ಗಳು ಒಳ್ಳೆಯವರು. ಅಲ್ಲಿಯೇ ಕೋಣೆ ಕೊಟ್ಟಿದ್ದಾರೆ. ನಾನೀಗ
ಹಾಸ್ಟಲ್ ಬಿಟ್ಟರೆ, ಅವರ ಮನಸ್ಸಿಗೆ ಬಹಳ ಬೇಸರವಾಗುತ್ತೆ

"ಅದೇನು ಸ್ವಾಮಿಗಳ ಬಗ್ಗೆ ಹಿಂದೊಮ್ಮೆ ನೀನೇ ದೂರಿದ್ದೆ
ನಿನ್ನನ್ನು ಹಾಸ್ಟಲ್ ಬಿಡಿಸಿದ್ದರೆಂದು" ಕೆಣಕುವ ರೀತಿಯಲ್ಲಿ ನಕ್ಕು
ನುಡಿದರು, ಶಿವಯ್ಯನವರು.

"ಆಗ ಅಜ್ಞಾನದಲ್ಲಿದ್ದೆ ಸಾರ್. ಅವರಂಥ ಒಳ್ಳೆಯವರೇ
ಇಲ್ಲ. ಹುಡುಗರನ್ನು ಕಂಡರೆ ಪ್ರೀತಿ ವಿಶ್ವಾಸ ತುಂಬಿರುತ್ತದೆ.
ಅವರು ಹಗಲೂ ರಾತ್ರಿ ಹುಡುಗರ ಹಿತಚಿಂತನೆಯಲ್ಲೇ ಕಾಲ
ಕಳೆಯುತ್ತಾರೆ. ಇಂಥಾ ಕಷ್ಟ ಕಾಲದಲ್ಲಿ ನೂರಾರು ಹುಡುಗರಿಗೆ
ಊಟ ಹಾಕುವುದೆಂದರೇನು, ಸುಲಭವಾಯ್ತೆ ? ಅವರೊಬ್ಬ
ಬಸವಣ್ಣ ಸಾರ್. ಹಿಂದೊಮ್ಮೆ ಅವರ ಬಗ್ಗೆ ಅನ್ಯಾಯವಾಗಿ
ಆಡಿದ್ದೆ. ಆಗ ಹಾಗೆ ಅನ್ನಿಸಿತ್ತು. ಯಾವುದನ್ನಾದರೂ ಕೂಲಂಕಷ
ವಾಗಿ ಪರಿಶೀಲಿಸದೆ ಆಡಿದರೆ ಆಗುವ ಅನಾಹುತ ಬಹಳ...."

ಶಂಕರ, ತನ್ನ ಅನ್ನದಾತಾರ ಶ್ರೀ ಸ್ವಾಮಿಗಳ ಬಗೆಗೆ ಎದೆ
ತುಂಬಿ ನುಡಿದ. ತನಗೆ ಜ್ವರ ಬಂದಿದ್ದಾಗ ಸ್ವತಃ ಸ್ವಾಮಿಗಳೇ
ಕೋಣೆಗೆ ಬಂದು ವಿಚಾರಿಸಿ, ಉಪಚರಿಸಲು ಅಡಿಗೆಯವರಿಗೆ
ಹೇಳಿ ಹೋಗಿದ್ದುದು ಮಿಂಚಿಬಂತು ಆಗ. ತಾನು ಹಿಂದೆ
ಮಾಡಿದ್ದ ತಪ್ಪನ್ನು ನೆನೆದು ಪಶ್ಚತ್ತಾಪಪಟ್ಟ. ಅದನ್ನು ಹೋಗ
ಲಾಡಿಸಿಕೊಳ್ಳಲು ಶಿವಯ್ಯನವರ ಮುಂದೆ ನಿರರ್ಗಳವಾಗಿ ಆಡಿ
ಹೊಗಳಿದ. ಸಮಾಜದಲ್ಲಿಯ ಯಾವ ನಿಯಮವೇ ಆಗಲಿ- ಅದು
ಸರಿಯಿರಲಿ, ಇಲ್ಲದಿರಲಿ - ಸ್ವಾಮಿಗಳಂಥವರೇ ಮೀರುವುದು ಕಷ್ಟ.
ಹಾಗೆ ಮೀರಿದರೆ ಸಮಾಜದಲ್ಲಿ ನಗೆಗೀಡಾಗಬೇಕಾಗುತ್ತದೆ. ತಮ್ಮ

ಹಿರಿಯ ಉದ್ದೇಶಕ್ಕೆ ಕೊಡಲಿ ಏಟಾಗುತ್ತದೆ.- ಎಂದೂ ಶಂಕರ ಅರಿತುಕೊಂಡಿದ್ದ. ಕರಡಿಗೆಯ ಪ್ರಕರಣ ಅಂಧಶ್ರದ್ಧೆಯ ಪ್ರತೀಕ ವಾದರೂ ಅದನ್ನು ಸ್ವಾಮಿಗಳೂ ತಪ್ಪಿಸರೆಂದೂ ಅವನಿಗೆ ನಂತರ ಅರ್ಥವಾಗಿತ್ತು. ಅವರ ಘನೋದ್ದೇಶ, ಹಿರಿಯ ವ್ಯಕ್ತಿತ್ವ, ಕ್ರಮ ಕ್ರಮವಾಗಿ ಅರ್ಥವಾಗಿದ್ದುವು. ಅವನ ಮನಸ್ಸು ಕಾಯಿಯಿಂದ ಹಣ್ಣಿಗೇರಿತ್ತು, ಆ ವಿಷಯದಲ್ಲಿ. ಸ್ವಾಮಿಗಳ ಚಿತ್ರವೊಂದನ್ನು ತಂದು ತನ್ನ ಕೋಣೆಯಲ್ಲಿಯ ವಿವೇಕಾನಂದ, ಗಾಂಧೀಜಿಯವರ ಚಿತ್ರಗಳ ಜೊತೆಗೆ ತೂಗು ಹಾಕಿದ್ದ.

"ಸರಿ, ಆಗಾಗ ಮನೆಗೆ ಬರುತ್ತಿರು. ಅಂತೂ ಒಪ್ಪಿದೆ ಯೆಂದು ಅಂದುಕೊಳ್ಳಬಹುದೋ ?" ಕಾತರ, ನಗು ಬೆರೆತ ದನಿ ಯಲ್ಲಿ ಶಿವಯ್ಯನವರು ಕೇಳಿದರು.

ಅದಕ್ಕೆ ಉತ್ತರವನೀಯದವನಾಗಿದ್ದ, ಶಂಕರ. ಕತ್ತು ತಗ್ಗಿಸಿ ಕುಳಿತಿದ್ದ. ಶಾಂತಾಳ ಕಣ್ಣು ಮಿನುಗುತಿತ್ತು; ಚಾಚಿದ ಕೈ ತೂಗುತಿತ್ತು. ನಗುತ್ತಿರುವ ತುಟಿಯಿಂದ ಲಾಸ್ಯವಾಗಿ ತೇಲಿ ಬರುತ್ತಿತ್ತು ಮಾತು. "ಹ್ಞಂ. ಅದನ್ನು ತುಂಬಿಕೊಳ್ಳುವ ಆಸೆಯೂ ಇದೆ; ಶಕ್ತಿಯೂ ಇದೆ !" ಶಂಕರನ ತುಟಿ 'ನಾನೊಪ್ಪ ಲಾರೆ' ಎಂದು ನುಡಿಯಲು, ತೆರೆಯುತಿತ್ತು ಆದರೆ, ಆಗ ಶಾಂತಾಳ ತಳಿರ ಬೆರಳು ಬಂದು ಮುಚ್ಚುತ್ತಿತ್ತು. ದಿನವೊಂದರಲ್ಲಿಯೇ ನನ್ನನ್ನು ಗೆದ್ದಿದ್ದಾಳೆ, ಎಂಥಹ ಹುಡುಗಿ !

ಮೌನವಾಗಿಯೇ ಎದ್ದು ಹೋದ. ಅಂದು ಭಾನುವಾರ ವಾಗಿದ್ದರೂ ಲಲಿತಳ ಮನೆ ಕಡೆ ಸುಳಿಯಲಿಲ್ಲ. ಆ ಯೋಚನೆಗೆ ಮನಸಿನಲ್ಲಿ ಎಡೆ ಇರಲಿಲ್ಲ. ಲಲಿತಳ ಆಸನದಲ್ಲಿ ಶಾಂತಾ ಕುಳಿತು ಕವಿತೆ ಹಾಡುತಿದ್ದಳು. ಲಲಿತಳಲ್ಲಿ ಏನೋ ಒಂದು ಕೊರತೆ. ನನ್ನ ಎದೆಗೆ ಶಾಂತಾ ಬಂದರೆ ! ಬಂದರೆ !! ಬಂದರೇನು, ಬಂದೇ ಬರುತ್ತಾಳೆ ! ನನ್ನ ಆಯ್ಕೆಯಲ್ಲಿಯೇ ಇದ್ದಾಳೆ !! ಎಂತಹ

ಪ್ರಸಂಗ! ಎಂತಹ ಸ್ಥಿತಿ!!

ಆ ವರುಷವೆಲ್ಲಾ ಅವನ ಯೋಚನೆ ತುಂಬಿತುಳುಕುತ್ತಿದ್ದ ಅಲ್ಲಿಯೇ ಆ ಪ್ರೇಮದ ಕಡಲಿನಲ್ಲಿಯೇ! ಎದ್ದೆದ್ದುಬಿದ್ದು ತೂಗು ತೆರೆಯ ಎರಡು ಅಂಚುಗಳಲ್ಲಿ ಎರಡು ಹೆಣ್ಣುಗಳು; ನಡು ತಾನು! ಅತ್ತ ಹೊರಳಿದರೆ ಲಲಿತ; ಇತ್ತ ತಿರುಗಿದರೆ ಶಾಂತ ಹಾಗೆ ಹೀಗೆ ತೇಲುತಿದ್ದ. ಇಬ್ಬರಲ್ಲಿಗೂ ಹೋಗುತಿದ್ದ. ಇಬ್ಬ ರಲ್ಲಿಯೂ ಪ್ರಿಯನಾಗಿ ನಡೆಯುತಿದ್ದ. ಇಬ್ಬರಿಗೂ ಕಳ್ಳನಾ ಸಾಗುತಿದ್ದ. ಒಂದು ಮನೆಗೆ ಹೋದಾಗ ಇನ್ನೊಂದರ ನೆನಪ ಬಂದರೂ ಮರೆಯುತಿದ್ದ. ಶಾಂತ-ಗಂಭೀರದ ಲಲಿತಳಲ್ಲಿ ಏನೋ ಪರವಶತೆಯಾದರೆ, ಕುಣಿವ ಹುಲ್ಲೆ ಶಾಂತಾಳಲ್ಲಿ. ಶಾಂತಾಳ ಕಣ್ಣು ಅಂಥವು.

ಹೌದು ಶಾಂತಾಳ ಕಣ್ಣು ಅಂಥವು. ಅವು ಹಾಗೆಯೇ ಮಿನುಗುತ್ತಿವೆ. ಹಾಗೆಯೇ ಕುಲು ಕುಲು ನಗುತ್ತವೆ. ಕೆಣಕಿ ಕುಹಕದಿಂದ ನಗುತ್ತವೆ. ಮಲ್ಲಿಗೆಯನ್ನು ಚೆಲ್ಲುತ್ತವೆ.

ಶಂಕರನು ಹಾಗೆಯೇ ನೋಡುತ್ತಿದ್ದಾನೆ. ಆರಾಮು ಕುರ್ಚಿ ಯಲ್ಲಿ ಒರಗಿ ಆ ಚಿತ್ರವನ್ನು ನೋಡುತ್ತಿದ್ದಾನೆ. ಆ ಚಿತ್ರದಲ್ಲಿಯ ಆ ಹೆಣ್ಣು ಕಣ್ಣಾಗಿ ನಗುತ್ತಿದೆ. ಶಾಂತಾಳ ನೆನಪನ್ನು ಕೆದರುತ್ತಿದೆ. ಹಿಡಿದು ತಂದು ಹರಡಿ ಹಸುರಾಗಿಸುತ್ತದೆ; ಜೇನ ಮಳೆ ಕರೆ ಯುತ್ತದೆ.

"ಹೋಗೋಣವೇನ್ರಿ ಮನೆಗೆ. ಏನು ಹಾಗೆ ನೋಡ್ತಿ ದ್ದೀರಿ?" ಲಲಿತ ಮಾತನಾಡಿಸಿದಾಗಲೇ ಸುತ್ತಲಿನ ಎಚ್ಚರ. ಶಂಕರನಿಗೆ ತಾನೆಲ್ಲಿದ್ದೇನೆಂಬುದರ ಅರಿವಾದುದು ಆಗ. ಪ್ರೀತಿ ಯಿಂದ ಬಡಿಸಿದ ಶಾರದಮ್ಮನವರ ಕೈತುತ್ತು ಹೊಟ್ಟೆಯೊಳಗಿತ್ತು. ಬಾಯಿ ತಂಬುಲ ಮೆಲ್ಲುತ್ತಿತ್ತು. ಹಾಗೆಯೇ ಹಾಯಾಗಿ ಆರಾಮು ಕುರ್ಚಿಯಲ್ಲಿ ಒರಗಿಕೊಂಡು ನೋಡುತ್ತಿರುವಾಗ ಆ ಚಿತ್ರ ಬೇರೆಯ

ಲೋಕಕ್ಕೆ ಕರೆದೊಯ್ದಿತ್ತು.

"ಓ ಶಾಂತಾ ಫೋಟೋ ನೋಡ್ತಿದ್ದೀರಾ ? ನನ್ಮಗ್ಳೇ ! ನಮ್ಮೋರ ಅಣ್ಣ, ಶಿವಯ್ಯನೋರಿಗೆ ಮಕ್ಳಿರ್ಲಿಲ್ಲ, ಆಕೀನ ಸಾಕಿಕೊಂಡು, ತಮ್ ಮಗಳಂಗೇ ಕಾಣ್ತಿದಾರೆ. ಈಗ ಕಾಲೇಜಿನಲ್ಲಿ ಓದ್ತಿದಾಳೆ. ಮೊನ್ನೆತಾನೆ ಬಂದು ಹೋದ್ಲು !! ಶಾರದಮ್ಮನವರು ನುಡಿದರು.

ಶಂಕರನಿಗೆ ಅಲ್ಲಿ ಕುಳಿತುಕೊಳ್ಳಲಾಗಲಿಲ್ಲ. ಕುರ್ಚಿ ಬೆಂಕಿಯಾಯ್ತು. ಎಲ್ಲಿ ಹೋದರೂ ಅಲ್ಲಿ ಔದಾರ್ಯ ನನಗೆ. ಅದಕ್ಕೆ ತಾಸೀಯುವುದು ವ್ಯಥೆ, ದುಃಖ. ಮೈ ಬಿಸಿಯಾಯ್ತು. ತಲೆ ಸಿಡಿಯುವಂತೆ ಕಾದುಹೋಯ್ತು.

"ಬರ್ತೀವಿ ಶಾರದಮ್ನೋರೇ, ಲಲಿತೆಗೆ ತಾಯಿ ಇದ್ಹಾಗಿದೀರಿ" ಶಂಕರನ ಗಂಟಲು ಕಟ್ಟಿದ್ದರೂ ನುಡಿ ಹೊರಬಂತು. ಕಣ್ಣಂಚಿನಲ್ಲಿ ನೀರು ಬಿಂದುವಾಗಿ ತುಳುಕಲು ಮಿನುಗಿತು.

"ಏನೋಪ್ಪಾ. ಒಳ್ಳೆಯವ್ರಿಗೆ ಒಳ್ಳೇಯವರೇ ಆಗಿ ಕಾಣ್ತಾರೆ, ಎಲ್ರೂ. ನಿಮ್ಮ ಲಲಿತಮ್ನೋರಿಲ್ಲಿರೋದು ನಮ್ ಭಾಗ್ಯ. ನೀವು ಇನ್ನೂ ಒಂದು ವಾರ ಇಲ್ಲೇ ಇರ್ತೀರೇನೋ. ಹೋಗೋಕಾರ ಕರ್ಕ್ಕೊಂಡೇ ಹೋಗ್ತೀರೇನೋ, ಕರ್ಕ್ಕೊಂಡೇ ಹೋಗ್ರಪ್ಪ. ಏನೋದು, ಸುಡ್ಗಾಡು. ಗಂಡ ಒಂದ್ಕಡೆ, ಹೆಣ್ತಿ ಇನ್ನೊಂದ್ಕಡೆ. ಇಲ್ಲೇ ನೀವೇ ವರ್ಗ ಮಾಡ್ಸಿಕೊಳ್ರಿ. ಅಂತೂ ಹೋದ್ಮೇಲೆ ನಮ್ಮನ್ನ ಮರೀಬ್ಯಾಡ್ರಿ. ನಮ್ ಶಾಂತಾ ಮದುವೆಗೆ ಬರಬೇಕ್ ನೀವು. ಆಕೀ ಮದುವೇನೇ ಬೇಡ ಅನ್ತಾಳೆ. ಶಿವಯ್ಯನೋರೂ ಯಾಕೋ ಸುಮ್ನೇ ಇದಾರೆ. ಅಂತೂ ಇವ್ರೊರ್ಷ, ಇಲ್ಲಾ, ಮುಂದಿನೊರ್ಷ ಆಗ್ತಾದೆ. ನೀವು ಖಂಡಿತಾ ಬರ್ಬೇಕು" ಶಾರದಮ್ಮನವರ ಕಣ್ಣೂ ತುಂಬಿತ್ತು. ಲಲಿತ ಶಂಕರ ಹೊರಟರು.

ಎಂತಹ ಹೃದಯ ಶಾರದಮ್ಮನವರದು ! ನನ್ನಂತಹ ಕೃತಘ್ನ

ನಿಗೆ ಅವರು ತೋರುವುದೆಂತಹ ಔದಾರ್ಯ! ಅವರ ಶಾಂತ
ಕೈಕೊಟ್ಟು ಬಂದ ದ್ರೋಹಿ ನಾನು! ಅವರಿಗದು ಗೊತ್ತಿ
ಶಾಂತಾ ಮೊನ್ನೆ ಬಂದು ಹೋದಳಂತೆ! ಅವಳು ಮದುವೆ ಬೇ
ವೆನ್ನುತಿದ್ದಾಳಂತೆ! ಶಿವಯ್ಯನವರೂ 'ಯಾಕೋ' ಸುಮ್ಮನಿದ
ರಂತೆ! ಲಲಿತೆ, ಶಾಂತಾ ಇಲ್ಲಿಗೆ ಬಂದಿದ್ದಾಗ ನೋಡಿದ್ದಿರಬಹುದ
ಮಾತನಾಡಿದ್ದಿರಬಹುದು. ಶಾಂತಾ ತೆಪ್ಪಗೆ ಕುಳಿತಿರುವವಳ
ಹರಿಯುವ ಹೆಣ್ಣು. ಅಪರಿಚಯಸ್ಥರೂ ಸ್ನೇಹಿತರಾಗುತ್ತಾ
ಆಕೆಗೆ. ಲಲಿತಳೂ ಸ್ನೇಹಿತೆ ಆಗಿದ್ದಿರಬಹುದು. ಕೇಳಲೆ?

ಶಂಕರನ ತಲೆಯಲ್ಲಿ ಅದೇ ಗುಂಗು. ಅದೇ ಕೊರ
ಶಾಂತಾ ನನ್ನ ವಿಷಯವನ್ನು ಲಲಿತೆಗೆ ಹೇಳಿದ್ದಿರಲಿಕ್ಕಿಲ್ಲವೆ
ನನ್ನನ್ನು ಮರೆತಿದ್ದಿರಬಹುದೆ? ಈಗ ಶಾಂತಾ ಹೇಗಿದ್ದಾಳೋ
ಅದೇ ಹಾಗೆಯೇ ನಗುತ್ತಿದ್ದಾಳೋ! ತುಂಬಿ ತುಳುಕಿ ಚಲ್ಲು
ದ್ದಾಳೋ! ಹೇಗಿದ್ದಾಳೋ! ಲಲಿತೆಯನ್ನು ಕೇಳಲೆ? ಅವ
ವಿಷಯ ನಿನಗೇಕೆ- ಎಂದರೆ? ಏನೆಂಥ ಸಿಡಿಲು ಬರುತ್ತದೋ
ಕೆದಕದಿದ್ದರೇ ಒಳಿತು. ಒಳಗೇ ಬೆಂದರೆ ಬೇಯಲಿ. ಅ
ಹೊರ ತೋರಲಿ. ಅಲ್ಲಿಯವರಿವಿಗೆ ಹಾಗೆಯೇ ಇದ್ದರಾಯ್ತು
ಸಿಡಿದೊಡೆದು ಬುಗ್ಗೆಯಾಗಲಿ.

ಶಾರದಮ್ಮ! ಬನಶಂಕರಮ್ಮ! ತಾಯಿ!; ಶಾಂತಾ
ಲಲಿತಾ! ಗೌರಾ! ಕೋಣೆಯಲ್ಲಿಯ ಹಾಸುಗೆಯಮೇಲೆ ಶಂಕ
ಉರುಳಿಕೊಂಡ. ಶಂಕರನೀಗ ಶೂನ್ಯದಲ್ಲಿ ನಿಶ್ಶೂನ್ಯನಾಗಿದ್ದಾನೆ
ಸುತ್ತು ಮುತ್ತಲು ಕತ್ತಲೆ ತೊರೆ, ನೆರೆಯಾಗಿ ಧುಮುಕುತ್ತಿದೆ
ಒಂದೊಂದು ಯೋಚನೆಯೂ ಒಂದರಮೇಲೊಂದು ಏರಿ ಏ
ಬರುತ್ತವೆ. ಮಿಶ್ರವಾಗಿ ಬರುತ್ತವೆ. ಮುಸುಕಿನಲ್ಲಿ ಪಿಸುಗುಟ
ತ್ತಿವೆ. ಒಮ್ಮೊಮ್ಮೆ ಸಿಡಿಲಾಗುತ್ತವೆ.

ಈ ಎರಡು ದಿನಗಳು ಶಂಕರನ ಬಾಳಿನಲ್ಲಿ ಬೆಂಕಿಯ ಹೊ

ಯಾಗಿವೆ. ನಿನ್ನೆ ಬೆಳಗಿನಿಂದ ಇಂದಿನೀಹೊತ್ತಿನವರಿವಿಗೂ ಶಾಂತಿ ಇಲ್ಲ. ಒಂದೊಂದು ಹೆಜ್ಜೆಯನ್ನು ಕಿತ್ತು ಎತ್ತಿ ಇಟ್ಟರೆ, ಅಲ್ಲಲ್ಲಿಯೇ ಹಿಂದಿನೊಂದು ವಿಷಸರ್ಪ ಬುಸ್ ಎಂದು ಹೆಡೆಬಿಚ್ಚಿ 'ರಪ್' ಎಂದು ಅಪ್ಪಳಿಸುತ್ತದೆ. ಚೇಳು, ಮಂಡರಗಪ್ಪೆ ಕೊಂಡಿ ಎತ್ತಿ ಸಾಲು ಸಾಲಾಗಿ ಸಾಗಿಬರುತ್ತವೆ.

ಅವನು ಹಾಗೆಯೇ ನಿಶ್ಶೂನ್ಯನಾಗಿ ಜಂತೆಯನ್ನು ನೋಡುತ್ತ ಮಲಗಿದ. ಅಲ್ಲಿ ಹಲ್ಲಿಯೊಂದು ನೊಣಕ್ಕೆ ನಾಲಗೆ ನೀಡಿತ್ತು. ಲಲಿತ ಹೊರ ಕದ ಮುಚ್ಚಿ ಬಂದು ಅವನ ಹತ್ತಿರದ ಗೋಡೆಗೆ ಒರಗಿ ಕುಳಿತುಕೊಂಡಳು. ಮನೆಯ ಬಾಗಿಲು ಮುಚ್ಚಿತ್ತು; ನಿರವತೆ ಸಾಮ್ರಾಟನಾಗಿತ್ತು.

ಗಾಯದ ಮೇಲೆ ಬರೆ ಬಿತ್ತು.

೭.

ಕದವನ್ನು ತೆರೆದ ಶಂಕರನ ಕಣ್ಣು ಅಚ್ಚರಿಯ ನೋಟವನ್ನ
ತುಂಬಿಕೊಂಡಿತು. ತೆರೆದ ತುಟಿ ಅಲುಗಾಡಲಿಲ್ಲ. ಕಣ್ಣ ರೆಪ್ಪೆ
ಮಿಸುಕಲಿಲ್ಲ. ತನ್ನ ತಾಯಿ ಜಟಕಾದಿಂದ ಒಂದೊಂದೇ ಸಾಮಾ
ನನ್ನು ಕೆಳಗಿಳಿಸುತ್ತಿದ್ದಳು. ಸಾಬಿ ಎತ್ತಿ ತಂದಿಡುತ್ತಿದ್ದನು
ಅಲ್ಲಿಯೇ ಮೌನವಾಗಿ ತಲೆ ತಗ್ಗಿಸಿ ಅವಳು ನಿಂತಿದ್ದಳು. ಒಮ್ಮೆ
ತಲೆ ಎತ್ತಿ ಬಾಗಿಲಕಡೆ ನೋಡಿ, ಮತ್ತೆ ತಲೆ ತಗ್ಗಿಸಿದಳು. ಶಂಕರ
ವಿಸ್ಮಿತನಾಗಿ ಸುಮ್ಮನೇ ನಿಂತ. ಬರಿಯ ಡ್ರಾಯರಿನಲ್ಲಿರುವುದನ್ನೂ
ಅವನು ಗಮನಿಸಲಿಲ್ಲ. ಅವನ ಕೆಂಪು ಕಣ್ಣಲ್ಲಿ ವಿಸ್ಮಯದ
ಮಿಂಚು ತುಳುಕಿ, ಸೆಳೆದು ಹಾದು ಹೋಯ್ತು. ಅದರ ನಸು
ಬೆಳಕು ಹಾಗೆಯೇ ಮಿನುಗುತಿತ್ತು.

'ಒಳಗ್ಹೋಗು ಗೌರವ್ವಾ; ಇದೇನು ಹೊಸಬರ ಮನಿಯೇ ?'
ಕೈಚೀಲವನ್ನು ಕೊಡುತ್ತ ನಿಂತ ತರುಣಿಗೆ, ತಾಯಿ ಹೇಳಿದರು.
ಆದರೆ ಆಕೆ ನಿಂತಲ್ಲಿಂದ ಕದಲಲಿಲ್ಲ. ದಿಟ್ಟಿ ಪಾದದಲ್ಲಿಯೇ
ನಟ್ಟಿತ್ತು. ಕಣ್ಣು ಏಕೋ, ಏನನ್ನೋ ತುಂಬಿಕೊಂಡಂತ್ತಿತ್ತು.
ಮತ್ತೊಮ್ಮೆ ತಾಯಿ ಮಾತನಾಡಿಸಿದಳು :

"ಗೌರವ್ವಾ....!"

ಹೌದು ಗೌರವ್ವಾ ! ಗೌರಾ !

ಶಂಕರನ ಮನಸ್ಸು ಹಳೆಯದನ್ನು ನೆಕ್ಕುತ್ತಿತ್ತು. ಅದೇ ವಿಸ್ಮಯ, ಅದೇ ಕಹಿ, ಅದೇ ವ್ಯಥೆ. ಗಾಯ ಒಣಗುವಾಗಲೇ ಬರೆ ಬಿತ್ತು. ಬರೆ ಬಿದ್ದ ಗಾಯವನ್ನು ಈಗ ಗೀರಿ ಗೀರಿ ಹರಿ ಹರಿಯುತ್ತಿತ್ತು, ಯಾವುದೋ ಮುಳ್ಳ ಸ್ಮೃತಿಯ ನಾಲಗೆ ಚಾಚಿ ಚಾಚಿ ನೆಕ್ಕುತಿತ್ತು, ಬಾಚಿ ಬಾಚಿ ಮುಕ್ಕುತ್ತಿತ್ತು.

ಅವಸರವಸರದಿಂದ ಶಂಕರ ರೈಲನ್ನೇರಿ ತನ್ನೂರಿಗೆ ತೆರಳಿದ್ದ. ಪರೀಕ್ಷೆ ಮುಗಿದು, ಎಲ್ಲಿಗಾದರೂ ಪ್ರವಾಸ ಹೋಗಿ ಬರೋಣ ವೆಂದು ನೆನೆಯುತಿದ್ದವನಿಗೆ ಇದ್ದಕ್ಕಿದ್ದಹಾಗೆಯೇ ಆ ತಂತಿ ಬಂದಿತ್ತು. "ತಕ್ಷಣ ಹೊರಟು ಬಾ!" ತನ್ನ ತಾಯಿಯಿಂದ ತಂತಿ! ಶಂಕರನಿಗೆ ಏನೇನೋ ಯೋಚನೆ. ಯಾಕೆ ಈ ತಂತಿ? ತಾಯಿಗೆ ಏನಾದರೂ ಆಗಿದೆಯೇ? ಯಾರಿಂದ ಈ ತಂತಿ ಹೊಡೆಯಿಸಿದಳು. ಅಂತಹ ಅವಸರವೇನು? ಏನು ಕಾರಣ? ಕಾರಣವೇನು.?

ಕಾರಣ ಗೊತ್ತಾಗಲೇ ಇಲ್ಲ. ಹೋಗಲೇ ಬೇಕಿತ್ತು. ಅವನೆದೆ ಧಡಧಡಿಸುತ್ತಿತ್ತು. ಅವನ ಮನಸ್ಸು ತಕಪಕ ಕುದಿಯು ತಿತ್ತು; ಮಿದುಳು ಬೇಯುತ್ತಿತ್ತು. ಕಾಲಿಗೆರಗಿದ ಲಲಿತಳನ್ನೆತ್ತಿ ಜಾಗ್ರತೆ ಬರುವುದಾಗಿ ಹೇಳಿ, ಮುತ್ತನಿತ್ತು, ವೇಗವಾಗಿ ಹೊರಟು ಹೋಗಿದ್ದ. ರೈಲಿನ ವೇಗ ಮಂದ ಮಂದವಾಗಿತ್ತು. ನಿಂತು ಬಿಟ್ಟಿದೆಯೇನೋ ಎಂದೂ ಭಾಸವಾಗಿತ್ತು. ನನಗೆ ರೆಕ್ಕೆ ಇದ್ದಿದ್ದರೆ!

ಆ ಮಿಡಿತ! ಯಾಕೆ? ಯಾಕೆ?

ಊರಿಗೆ ತೆರಳಿದ್ದಾಗ ಮದುವೆಯ ಚಪ್ಪರ ಮನೆಯಮುಂದೆ ಮೆರೆಯುತಿತ್ತು. ಅವಸರದಿಂದ ವಿಸ್ಮಯ ಪೂರಿತನಾಗಿ ಮನೆಯ ನುಗ್ಗಿ ತಾಯಿಯನ್ನು ಕಂಡಿದ್ದ. ಶಂಕರ ಅಂದು ಮಿಂಚಾಗಿದ್ದ. ಮಿಂಚಿಗೆ ಸಿಡಿಲು ಬಡಿಯುವುದರಲ್ಲಿತ್ತು; ಬಡಿದೂ ಆಯ್ತು.

ಸಿಡಿಲು ಬಡಿಯಿತೆ? ಅಲ್ಲದಿನ್ನೇನು?

"ಯಾಕಮ್ಮ ಹಾಗೆ ನನಗೆ ವೈಯರ್ ಮಾಡಿಸಿದ್ದು?"

"ಯಾಕಂತೆ ಮುದುಕನಾದ್ರೂ ಹುಡುಗಾಟ ಹೋಗಲಿಲ್ಲ ತಾಯಿಯ ಹಲ್ಲಿಲ್ಲದ ಬಾಯಿ, ನಕ್ಕು ನುಡಿದಿತ್ತು.

"ಏನಮ್ಮ ಹಾಗಂದ್ರೆ ?"

"ಮನೆ ಮುಂದೆ ಚಪ್ಪರ ನೋಡ್ಲಿಲ್ವೆ ?

"ಹ್ಞೂಂ. ನೋಡ್ದೆ."

"ನಿನ್ನ್ ಮದ್ವೆ !"

ನನ್ನ್ ಮದುವೆ ! ನನಗೆ ಮದುವೆ !

ಶಂಕರನ ಎದೆ ಧಸಕ್ಕೆಂದಿತ್ತು. ಯಾರೊಡನೆ ನನ್ನ ಮದುವೆ ಯಾರೊಡನೆ ? ಯಾರು ? ಯಾರು ?

"ಗೌರವ್ವನ್ನೇ ನಿನ್ಗೆ ತಂದೀನಿ !"

ತನಗೆ ಗೌರಿ ! ಅಕ್ಕನ ಮಗಳು ಗೌರಿ ! ತಾಯಿ ಈ ಆರು ತಿಂಗಳಲ್ಲಿ ನಾಲ್ಕಾರುಬಾರಿ ಪತ್ರ ಬರೆಯಿಸಿದ್ದಳು. ಊರ ಹಿರಿಯರೂ ಒತ್ತಿಯೊತ್ತಿ ಬರೆದಿದ್ದರು. ತನಗೆ ಇಷ್ಟವಿಲ್ಲ ? ಇಷ್ಟ ವಿಲ್ಲವೆಂದೇನಲ್ಲ. ಆದರೆ ಲಲಿತ ? ಲಲಿತಳ ಗತಿ ? ಅವಳನ್ನು ನಂಬಿಸಿ ಈಗ ಬೆಂಕಿಗೆ ಕೆಡವಲೆ ? ನನ್ನ ಈ ಮದುವೆಯ ಕುಂಡ ಆಕೆಗೆ ಮಸಣದ ಚಿತೆಯಲ್ಲವೆ ? ಅಲ್ಲವೇನು ? ಹೌದು ! ಹೌದು !! ನನಗಿದು ಬೇಡ ! ಹಾಗೆ ಎಷ್ಟೋಸಾರಿ ಪತ್ರ ಬರೆದಿದ್ದ. ತನಗೆ ಆ ಗೌರಿ ಬೇಡ. ಇಷ್ಟವಿಲ್ಲ.

ಆದರೆ ಅನಿರೀಕ್ಷಿತವಾಗಿ ಎಲ್ಲವೂ ನಡೆದುಹೋಗಿತ್ತು. ಗೌರಿಯನ್ನು ತಂದ ತಾಯಿ ಮುಂದೆ ಕುಳಿತಿದ್ದಳು. ತುಡಿಯುವ ಎದೆ, ಕುದಿಯುವ ಮನಸ್ಸು, ಕಂಪಿಸುವ ದೇಹ, ತುಂಬಿದ ಕಣ್ಣು.- ಶಂಕರ ಕುಳಿತಿದ್ದ. ಬೇಡ ! ತನಗೆ ಆ ಗೌರಿ ಬೇಡ !

"ಅವ್ವಾ ನಾನೊಲ್ಲೆ !" ಶಂಕರ ರೊಪ್ಪನೆ ತಾಯ ಪಾದದ ಮೇಲೆ ಬಿದ್ದಿದ್ದ. ತಾಯಿ ಸುಮ್ಮನೇ ಕುಳಿತಿದ್ದಳು. ಅವಳ ನಿಶ್ಚಯ ದೃಢವಾಗಿತ್ತು. ಅವಳ ಮನಸ್ಸು ಭದ್ರವಾಗಿತ್ತು. ಯಾಕೆ

ಹೀಗೆ ಹುಚ್ಚಾಗಿದ್ದಾನೆಂದು ಆಕೆಗೆ ಅರಿಯದು. ಮದುವೆ ಎಂದರೆ ಯಾಕೆ ಮೂಗು ಮುರಿಯಬೇಕು ?

"ಯಾಕೆ ತಮ್ಮಾ ಗೌರಿ ಚಂದಾಗಿಲ್ಲೇನು ?"

ಗೌರಿ ಚೆನ್ನಾಗಿಲ್ಲೇನು ? ಚಿಕ್ಕಂದಿನಿಂದಲೂ ನೋಡಿದ್ದಾನೆ ಶಂಕರ. ಹೊಳೆವ ಸಣ್ಣಕಣ್ಣುಗಳು. ತುಂಬಿದ ಗಲ್ಲ- ಗೌರಿ ಸುಂದರಿ. ತುಂಬಿ ತುಳುಕುವ ಸುಂದರಿ. ವರುಷವೊಂದರ ಹಿಂದೆ ಅಕ್ಕನೂರಿಗೆ ಹೋಗಿದ್ದಾಗ ನೋಡಿದ್ದ. ಅವಳೂ ಅವನನ್ನು ನೋಡಿದ್ದಳು. ಆದರೆ ಆ ನೋಟದಲ್ಲಿ ಯಾವ ಮಾರ್ದವತೆಯೂ ಇದ್ದಿರಲಿಲ್ಲ. ಅಕ್ಕನ ಮಗಳು, ಅಷ್ಟೇ !

ಶಂಕರ ಉತ್ತರಿಸಿರಲಿಲ್ಲ. ಸುಮ್ಮನೇ ತಲೆತಗ್ಗಿಸಿ ಕುಳಿತಿದ್ದ.

"ಓದು ಕಲ್ತಿಲ್ಲಾ ಅಂತೇನೋ ?"

ಹೌದು ಗೌರಿ ನಿರಕ್ಷರ ಕುಕ್ಷಿ. ಅವಳಿಗೆ ಏನೆಷ್ಟೂ ಓದಲು ಬಾರದು. ಅವಳತಂದೆ ಮಿಡ್ಲ್‌ಸ್ಕೂಲ್ ಉಪಾಧ್ಯಾಯನಾಗಿದ್ದರೂ ಮಗಳು ಅನಕ್ಷರಸ್ಥೆ. ಅವಳು ಮನೆ ಮುಸುರೆ ತಿಕ್ಕುವ ಗೌರವ್ವನಾಗಿಯೇ ಉಳಿದಿದ್ದಳು. ಗೌರಿ ಓದು ಕಲಿತಿದ್ದರೆ ತಾನು ಮದುವೆಯಾಗಲು ಇಚ್ಛಿಸುತ್ತಿದ್ದನೆ ? ಇಲ್ಲ, ಇಲ್ಲ. ಓದು ಶಂಕರನ ಮದುವೆಗೆ ಸಾಧನವಾಗಿದ್ದಿರಲಿಲ್ಲ. ಅಲ್ಲಿ ಲಲಿತ ಮನೆ ಮಾಡಿದ್ದಳು. ಆ ಆಸನ ಭದ್ರವಾಗಿತ್ತು. ಶಾಂತಾ ಕೂಡ ಅಲ್ಲಿಂದ ಕರಗಿದ್ದಳೆಂದೇ ಹೇಳಬೇಕು. ಹಾಗೆ ತಾಯಿಗೆ ಹೇಳಲಾರ ! ಕಾಲೇಜಿನಲ್ಲಿ ಓದುವ ಹುಡುಗರೆಲ್ಲಾ ಹೀಗೆಯೇ ಎಂಬ ಹಳ್ಳಿಗರ ಮಾತನ್ನು ತಾನು ನಿಜವಾಗಿಸಿದಂತಾಗಲಿಲ್ಲವೆ ? ನಿಜ ! ಸಾವಿರ ಬಾರಿಗೂ ನಿಜ. ಆ ನಿಜವನ್ನೇ ತಾನೇಕೆ ತನ್ನ ತಾಯಿಗೆ ಹೇಳಬಾರದು ? ಚಿಕ್ಕಂದಿನಿಂದಲೂ ತನ್ನನ್ನೆತ್ತಿ ಈ ಸ್ಥಿತಿಗೆ ತಂದಿದ್ದಾಳೆ. ನನ್ನ ಹಿತಚಿಂತನೆ ಅವಳಿಗಿಲ್ಲವೇನು ? ಇಲ್ಲವೆ ? ಇರದೆ ಏನು ! ಇದ್ದೇ ಇದೆ !! ತಾಯಿ ಒಪ್ಪುತ್ತಾಳೆ. ಹಾಗೆ ಹೇಳಲೆ ? ಹೇಳ

ಲೇನು ?.... ಬೇಡ ! ಆಕೆಗೆ ಸಿಡಿಲುಬಡಿದಂತಾದೀತು ! ಯಾ
ಳನ್ನೋ ಪ್ರೀತಿಸಿದ್ದೀಯಾ ? ಇದೇ ಕೆಲಸವನ್ನೇನೋ ನೀನ
ಮಾಡಿದ್ದು, ಅಲ್ಲಿ ? ನಾನಿಲ್ಲಿ ಸಾಯುತ್ತ ಬಿದ್ದಿರುವುದನ್ನು ಗಮನಿಸದೆ
ಯಾವಳನ್ನೋ ಪ್ರೀತಿಸಿದನಂತೆ ! ಅವಳನ್ನೇ ಮದುವೆಯಾಗುತ್ತಾ
ನಂತೆ. ಹೆತ್ತ ಕರುಳಿಗೆ ಅಲ್ಲಿ ಸ್ಥಾನವಿಲ್ಲವೆ ?- ತಾಯಿ ಹೀಗ
ಅನ್ನುವುದಿಲ್ಲವೆ ?

ಅವನು ಸುಮ್ಮನೇ ತಲೆ ತಗ್ಗಿಸಿ ಕುಳಿತಿದ್ದ. ತಾಯಿ ಹೇಳು
ತಿದ್ದಳು: "ಮಗು ಸುಮ್ಮನೇ ನಾ ಹೇಳಿದಂಗೆ ಕೇಳು. ಗೌರಿ
ಚಂದಾಗವ್ಳೆ. ಓದು ಕಲಿಸ್ಕೋ. ಪೇಟೆ ಹುಡುಗೇರ ಸವಾಸ
ಬ್ಯಾಡ ! ಅವ್ರೆಲ್ಲಾ ನಿನ್ನ ಮುಕ್ತಾರೆ. ನಿನ್ಗೆ ಒಳ್ಳೇದಾಗ್ತದೆ
ನಾ ಹೇಳ್ದಂಗೆ ಕೇಳು.... ಹ್ಞೂಂ. ಮೈತೊಳ್ದು ಉಣ್ ನಡಿ.
ಇನ್ನೂ ಬಾಳಾ ಕೆಲ್ಸ ಅಯ್ತಾವೆ" ತಾಯಿ ಎದ್ದು ಹೋಗಿದ್ದಳು.

ಶಂಕರನೂ ಎದ್ದಿದ್ದ. ಮೈ ತೊಳೆಯುವುದೂ ಬೇಡವಾಗಿತ್ತು;
ಉಣ್ಣುವುದೂ ಬೇಡವಾಗಿತ್ತು. ತಾನು ಚಿಕ್ಕಂದಿನಿಂದಲೂ ಆಡು
ತ್ತಿದ್ದ ಮಾದೇವೇಶ್ವರ ಗುಡಿಗೆ ಹೋಗಿದ್ದ. ಅಲ್ಲಿಯ ಮುರುಕು
ಗೋಡೆಯ ಮೇಲೆ ಕುಳಿತುಕೊಂಡಿದ್ದ. ಆ ಮುರಿದ ಗೋಡೆಯೇ
ತನ್ನ ಮನಸ್ಸೆಂದುಕೊಂಡಿದ್ದ. ಆಯ್ತು ನನ್ನ ಬಾಳು ಹಾಳಾಯ್ತು.
ನನ್ನ ಗತಿ ಗತವಾಯ್ತು. ಇನ್ನೇಕೆ ಬಾಳು ? ಅಗೋ ಅಲ್ಲಿದ್ದಾಳೆ
ನನ್ನ ನಿರೀಕ್ಷಣೆಯಲ್ಲಿಯೇ ಲಲಿತ. ಮತ್ತೆ ಆ ಶಾಂತಾ ! ಅ
ಚದುರೆ ! ಆ ಬಳುಕುವ ಹೆಣ್ಣು ! ಅಲ್ಲಿ ಎರಡು ಹೃದಯಗಳು
ನನಗಾಗಿ ಕಾದು ಕುಳಿತಿವೆ. ಅವರು ಯಾರೋ ! ಎಲ್ಲಿಯ
ವರೋ ! ನಿರ್ಗತಿಕನಾಗಿದ್ದ ನನ್ನನ್ನೆತ್ತಿದ ಬನಶಂಕರಮ್ಮನವರ
ಮಗಳು ಲಲಿತ ! ಸಹಾಯ ಮಾಡಿದ ಶಿವಯ್ಯನವರ ಮಗಳು
ಶಾಂತಾ ! ಎರಡೂ ಹಾಗೆಯೇ ! ಒಂದು ಸ್ಥಿರ; ಒಂದು ಚಂಚಲ.
ಒಂದು ಗಂಭೀರ, ಒಂದು ಸರಳ ! ಅಲ್ಲಿ ಎರಡೂ ಇವೆ ! ಅವು

ಗಳಲ್ಲಿ ನನಗೆ ಯಾವುದು ? ಯಾವುದು ನನಗೆ ? ಯಾವುದೂ ಅಲ್ಲ ! ಆದರೆ, ಗೌರಿ !

ಹೌದು ಗೌರಿ. ತುಂಬಿದ ಗೌರಿ ! ತಾಯಿ ಹೇಳುವಂತೆ ನನ್ನ ಬಾಳು ಒಳ್ಳೆಯದಾಗುತ್ತದೆಯೆ ? ಗೌರಿ ಸುಂದರಿ. ಕುಲು-ಕುಲು ನಗುವ ಹೆಣ್ಣು. ಮುಗ್ಧ ಹೆಣ್ಣು. ಹಳ್ಳಿಯ ಹೆಣ್ಣು. ಅಲ್ಲಿ ರುಚಿಯಿದೆ; ಶಾಂತಿಯಿದೆ. ತಂಪಿನ ವನ ಕುಲು ಕುಲು ನಗುತ್ತಿದೆ. ನನ್ನ ಬಾಳು ಚೆನ್ನಾಗುತ್ತೆ. ಗೌರಿ ಕುಂಟಿಯಲ್ಲ, ಕುರುಡಿಯಲ್ಲ ಸುಂದರಿ. ನನಗಿಂತಲೂ ಸುಂದರಿ. ನಾನೇಕೆ ಅವಳನ್ನು ಮದುವೆಯಾಗಬಾರದು ? ನನ್ನ ಹಡೆದಮ್ಮ ನನಗೆ ದ್ರೋಹ ಬಗೆಯುತ್ತಾಳೆಯೆ ? ಈ ಊರ ಜನ ನನಗೆ ಕೇಡು ಬಗೆಯುತಿದ್ದಾರೆಯೆ ? ಬಡತನದಲ್ಲಿ ಬಳಲಿ, ವಿಧವೆಯಾಗಿದ್ದಿದ್ದರೂ ನನ್ನನ್ನು ಮುಂದೆ ತಂದ ಆಕೆಗೆ ಇಷ್ಟೊಂದು ಸಂತಸವನ್ನೀಯಲಾರೆನೆ ? ಈಯ ಬಾರದೆ ?

ಗೋಡೆಯಲ್ಲಿನ ಕಲ್ಲುಗಳನ್ನು ದಿಟ್ಟಿಸುತ್ತ ಯೋಚಿಸುತ್ತಿದ್ದ. ಅವನ ಮನಸ್ಸು ಕಾವಲಿಯಾಗಿತ್ತು. ಮರುಭೂಮಿಯಾಗಿತ್ತು. ಅದನ್ನು ಸುಂದರವಾಗಿಸಲು ಮೂರು ಹೆಣ್ಣುಗಳು ನಗುತ್ತಿದ್ದುವು. ಒಂದೊಂದೂ ಮಧುರ ಹಣ್ಣು. ಯಾವುದನ್ನಾಯಲಿ ? ಯಾವುದನ್ನು ಬಿಡಲಿ ? ಮೂರೂ ಒಂದರಲ್ಲಿ ಕೂಡುವುದಾಗಿದ್ದಿದ್ದರೆ ! ಆಗಿದ್ದಿದ್ದರೆ ! ಹಾಗಾಗದು. ಇಲ್ಲ. ಅದು ಅಲೌಕಿಕ. ನಾನು ಒಂದನ್ನಾರಿಸಿಕೊಳ್ಳಬೇಕು ! ಲಲಿತಳನ್ನೆ ? ಶಾಂತಾಳನ್ನೇ ? ಗೌರಿಯನ್ನೆ ? ಯಾರನ್ನು ? ಈಗ ಯಾರನ್ನು ? ಗೌರಿಯನ್ನು !!!

ತಾಯಿ ಮದುವೆ ಕಾರ್ಯದಲ್ಲಿ ತೊಡಗಿದ್ದಾಳೆ. ಗೌರಿ ಹರಿಷಿಣ ಬಳಿದುಕೊಳ್ಳಲು ಸಿದ್ಧವಾಗಿದ್ದಾಳೆ. ನಾನು ಸಿದ್ಧನಾಗಬೇಕು. ಆಗಬೇಕೆ ? ಆಗಬೇಕೇನು ?

ಹೌದು ಆಗಲೇ ಬೇಕಾಗಿತ್ತು. ಎಂತಹ ದ್ರೋಹ ಬಗೆ

ಯುತ್ತಿದ್ದೇನೆ! ನನ್ನದೆಂತಹ ಪ್ರೇಮ! ಒಂದು ಕಡೆ ನಿಲ್ಲ
ತುಂಬಿಯಾಟ! "ಗಂಡಸಿನ ನೀತಿ ಆರಡಿಯ ರೀತಿ! ಅವನಿ
ನೀತಿ ನಿಯಮ!"

ಓ! ಶಂಕರನ ಸ್ಥಿತಿ ಕಲಸಿಹೋಗಿತ್ತು. ಕಲಸು-ಹೊಲಸ
ಅಲ್ಲೋಲ ಕಲ್ಲೋಲ. ವೀಚಿ ವೀಚಿ ಧಡಾರೆಂದು ಏರಿ ಏ
ಬಂದು ದಡಕ್ಕೆ ಧಿಮ್ಮನೆ ಬಡಿಯುತ್ತಿದ್ದವು. ಎದೆ, ಮನಸ್ಸು ಚೂ
ಚೂರಾಗಿದ್ದವು. ಗಟ್ಟಿಯೆಂಬುದಿರಲಿಲ್ಲ. ನೀರು, ನೀರು ದ್ರ
ಅಳ್ಳಕ; ಚಂಚಲ! ಗಾಳಿ! ಹರಿದಮೋಡ ಗಾಳಿಗೆಓಡುತ್ತಿತ್ತು

ತೂರಾಡಿತ್ತು ಮನಸ್ಸು; ಹೋರಾಡಿತ್ತು ಮನಸ್ಸು. ತ
ಸಿಡಿದು ಹೋಗಿತ್ತು. ಸಾಧ್ಯವಿಲ್ಲವೆಂಬುವ ನಿಶ್ಚಯ ಬಿರುಗಾ
ಯಲ್ಲಿ ತರಗೆಲೆಯಾಗಿತ್ತು. ಗಾಳಿ ನಸು ಮಂದವಾದಾಗ ತರಗೆ
ತೇಲುತ್ತಿತ್ತು ನಿಧಾನವಾಗಿ. ಮತ್ತೆ ಗಾಳಿ ಭೋರೆಂದಾಗ ಗಿ
ಗಿ ತಿರುಗುತಿತ್ತು. ತಿರ್ರನೆ, ಗಿರ ಗಿರನೆ ತಿರುಗುತಿತ್ತು.

ಈ ಮದುವೆ ನಿಲ್ಲಿಸಲು ತಾಯಿಗೆ ಹೇಳಿಬಿಡುತ್ತೇನೆ. ನಾನ
ತಯಾರಿಲ್ಲವೆಂದೂ ಹೇಳಿ ಬಿಡುತ್ತೇನೆ! ಹಾಗೆಂದುಕೊಂಡೇ ಗು
ಬಿಟ್ಟು ಮನೆಗೆ ತೆರಳಿದ್ದ. ದಾರಿಯಲ್ಲಿ ಯಾರಾರೋ ಅವನನ್ನ
ಮುತ್ತಿಕೊಂಡಿದ್ದರು.

"ಏನ್ ಸ್ವಾಮಿ. ನೀವೇನ್ ಕಲೆಕ್ಟ್ರಾಗ್ತೀರಂತೆ! ನಮ್ಮನ್ನ
ಮರೀಬ್ಯಾಡ್ರಿ!"

"ಇಂತಾರಿರ್ಬೇಕಪ್ಪ. ಓದಿದ್ರೆ ಬಂತೆ? ಏಟು ಕಲ್ತಾನ
ಮಾರಾಯ. ಒಂದಿಷ್ಟು ಗರ್ವ? ಛೇ ಎಲ್‌ಬಂತು, ನೀನಂತೂ
ಅಕ್ಕನ ಮಗಳನ್ನೇ ಮದ್ವೆ ಆಗ್ತಾನಂತೆ. ಎಂತಾ ಒಳ್ಳೇ ಗುಣ
ಎಂತಾ ಮನ್‌ಸ್ಸ್ಯಾ!!"

ಹೌದು ಸಾನೆಂಥ ಮನುಷ್ಯ! ಒಳ್ಳೆಯ ಗುಣ! ಬಹಳ
ಓದಿದವನು!!!

ಹಳ್ಳಿಗರ ಮೌಢ್ಯಕ್ಕೆ ಸಕ್ಕುಬಿಟ್ಟಿದ್ದ ಶಂಕರ, ಮನಸ್ಸಿನಲ್ಲಿ. ಜನ ಹೇಗೆ ಮೋಸ ಹೋಗುತ್ತಾರೆ! ನಾನು ಒಳ್ಳೆಯವನಂತೆ! ನೀಚ! ಪರಮ ಪಾತಕ! ದ್ರೋಹಿ! ಕೃತಘ್ನ! ಆದರೂ ನಾನು ಓದಿದವನು. ಇನ್ನೇನು ತಿಂಗಳೊಂದೆರಡರಲ್ಲಿ ಬಿ. ಎ. ಆನರ್ಸ್ ಆಗುತ್ತೇನೆ. ಮುಂದೆ ಎಂ. ಎ. ನೂ ಆಗಬಹುದು. ಇಂಥವನು ಯಾರೋ ಅನ್ನುತ್ತಾರೆಂದು ಹಾಗೆ ವರ್ತಿಸಲಿ? ಸಾಮಾನ್ಯ ಜನ. ಬುದ್ಧಿ ಇಲ್ಲದವರು. ಸಂಸ್ಕೃತಿಯಿಲ್ಲ. ನಾಗರಿಕತೆಯಿಲ್ಲ. ಇಂಥವರ ಮಾತಿಗೆ ನನ್ನಂಥವನು 'ಹೂಂ' ಗುಡಲೆ? ನನಗೆ ಸ್ವತಂತ್ರವಾಗಿ ವಿಚಾರಿಸಲು ಯೋಗ್ಯತೆಯಿಲ್ಲವೆ? ನನ್ನ ಬಾಳಗೆಳತಿ ಎಂಥವಳಿರ ಬೇಕೆಂದು ನನಗೆ ಗೊತ್ತಿಲ್ಲವೆ? ನೂರು ಏರಿ ಬರಬಹುದು. ಆದರೆ ಒಂದು ಸ್ಥಿರ. ಅದೇ, ಅದೇ, ಅದೇ ಲಲಿತ! ನನಗೆ ಆ ಶಾಂತಳೂ ಬೇಡ, ಈ ಗೌರಿಯೂ ಬೇಡ! ಬೇಡ! ನಾನಿನ್ನು ಈ ವಿಚಾರವನ್ನೇ ಬಿಡಬೇಕು. ನನ್ನ ಸುಖ ನನ್ನ ವಿಚಾರದ ಮುಷ್ಟಿಯಲ್ಲಿ. ಅಲ್ಲಿ ತಾಯಿಯೂ ಇಲ್ಲ. ಯಾರೂ ಇಲ್ಲ. ನನಗೆ ನಾನೇ! ಗೋಪಾಲಕೃಷ್ಣ ಅಡಿಗರು ಹೇಳಿಲ್ಲವೆ: "ನಿನಗೆ ನೀನೇ ಗೆಳೆಯ ನಿನಗೆ ನೀನೇ!" ಹೌದು ನನಗೆ ನಾನೇ! ನನಗಾರೂ ಇಲ್ಲ. ತಾಯಿಯನ್ನೂ ಮೀರಬೇಕು!

ಹೌದು ಮೀರುವಂಥ ಮಾತನ್ನೇ ಆಡಿದ, ಮನೆಗೆ ಹೋಗಿ: "ಇಲ್ಲವ್ವಾ, ನಾನು ಗೌರಿಯನ್ನು ಮದುವೆಯಾಗೊಲ್ಲ!" ಮನೆಗೆ ಸುಣ್ಣ ಬಳಿಯುತ್ತಿದ್ದ ತಾಯಿ ದಿಗ್ಭ್ರಮೆಯಿಂದ ನೋಡಿದ್ದಳು. ಹರಿದ ಸೀರೆಯನ್ನುಟ್ಟು, ಅದನ್ನೇ ತಲೆಗೆ ಸುತ್ತಿಕೊಂಡು, ಬತ್ತಿದ ಕೈಯನ್ನೇ ಎತ್ತಿ ಉತ್ಸಾಹದಿಂದ ಸುಣ್ಣ ತೊಡೆಯುತ್ತಿದ್ದ ತಾಯಿಯ ಮುಖ ವಿವರ್ಣವಾಗಿತ್ತು. ಹಿಂಡಿಕೆ ಕೈಯಿಂದ ಕಳಚಿ ಬಿದ್ದಿತ್ತು ಏಣಿಯ ಹಲ್ಲಿನ ಮೇಲೆ ನಿಂತಿದ್ದ ಅವಳ ಕಾಲು ನಡುಗುತ್ತಿತ್ತು. ಹಾಗೆಯೇ ಇಳಿದು ಸುಮ್ಮನೇ ನಿಂತು ಬಿಟ್ಟಿದ್ದಳು. ಮೂಕ

ವಿಸ್ಮಯ ಅವಳ ಕಣ್ಣುಗಳಲ್ಲಿ ಕರುವಾಡುತ್ತಿತ್ತು.

"ಇಷ್ಟು ದೊಡ್ಡೋನ್ ಮಾಡಿದ್ದಕ್ಕೆ ಇದೇನಪ್ಪಾ ನೀ
ಕೊಡೋದು ?" ಅಷ್ಟೇ ತಾಯಿ ನುಡಿದದ್ದು. ಅವಳ ಮಂ
ಕಣ್ಣಲ್ಲಿ ನೀರು ಧುಮ್ಮಿಕ್ಕಿತ್ತು. ತುಂಬಿ ಹರಿದಿತ್ತು. ಶಂಕ
ಮನಸ್ಸು ವಿಹ್ವಲವಾಗಿತ್ತು. ಅವಳ ಕಣ್ಣೀರಲ್ಲಿ ಇವನ ಸ್ಥಿ
ಕರ ಕರಗಿ ಹೋಗಿತ್ತು. ಸುಮ್ಮನಾಗಿಬಿಟ್ಟ.

ಮದುವೆಯ ಮೇಳ ಕಿವಿಯಲ್ಲಿ ಕರ್ಕಶವಾಗಿ ಸುರಿಯ
ತ್ತಿತ್ತು. ಟಕೂರಿಯ ಒಂದೊಂದು ಹೊಡೆತವೂ ಅವನ ಎದೆ
ಲ್ಲಿಯ ಲಲಿತಳಿಗೆ ಒಂದೊಂದು ಬರೆಯಾಗುತ್ತಿತ್ತು. ಆದರೆ ಅ
ಹೋಗುತಿತ್ತು ಶಾಸ್ತ್ರಿಗಳ ಮಂತ್ರ ನಿರಂತರವಾಗಿ ಸಾಗಿತ್ತು
"ಸುಲಗ್ನಸ್ಸಾವಧಾನ" "ತಾರಾಬಲಂ ಚಂದ್ರ ಬಲಂತುದೇವಾ
"ಬಲದೇವ ಪುತ್ರೀಃ ಬಸವೇಶಪತ್ನಿ, ವಧೂವರಾಭ್ಯಾಂ ವರಲಾ
ಬಂತು !" ಅಕ್ಕಿಕಾಳು ಹಾಕಿರಿ.

ತಾಳಿಯನ್ನು ಪಕ್ಕದಲ್ಲಿ ಕುಳಿತಿದ್ದ ಗೌರಿಯ ಕೊರಳಿ
ತಗಲಿಸಿಯಾಗಿತ್ತು. ನಂತರ ಯಾರೋ ಕಟ್ಟಿದ್ದೂ ಆಗಿತ್ತು
ಬೆವರು ಚಿಮ್ಮುತಿತ್ತು. ಅಕ್ಕಿಕಾಳು ಕಿಡಿಗೆಂಡವಾಗಿ ತೂರಿ ಹಾ
ಬೀಳುತಿದ್ದವು. ಆಯ್ತು ಅಂತೂ ಮದುವೆ ಆಗಿಹೋಯ್ತು
ಹಸೆಯ ಮೇಲೆ ಕುಳಿತಿದ್ದ ಶಂಕರನಿಗೆ ತನ್ನ ಪಕ್ಕದಲ್ಲಿ ಉಸಿರಿಡುವ
ಪ್ರಾಣಿಯೊಂದಿದೆಯೆಂದೂ ಅರಿಯದೆ ಕುಳಿತಿದ್ದ. ಆದರೆ ಹಾಗೆಯೆ
ಕುಳಿತಿದ್ದನೇ ?

ಇಲ್ಲ. ಎದ್ದು ಹೊರಗೂ ಬಂದಿದ್ದ. ತಾಳಿ ಬಿಗಿದಾಗಿತ್ತು
ಸೇಸೆಯನ್ನಿಟ್ಟು ಹರಸಿದ್ದರು. ನಕ್ಕು ನಲಿದಿದ್ದರು. ಅದೊಂದೂ
ಶಂಕರನಿಗಿಲ್ಲವಾಗಿತ್ತು. ಆ ಆನಂದ ಅವನಪಾಲಿಗೆ ದುಃಖವಾಗಿತ್ತು.
ಅವನು ಹೊರಬಂದು ನಿಂತಾಗ ತಂಗಾಳಿ ತೀಡಿಬರುತಿತ್ತು.
ತಾನೊಬ್ಬ ಕೊಲೆಮಾಡಿದವನಂತಿದ್ದ. ಹರಿಷಿಣವೆಲ್ಲ ರಕ್ತವಾಗಿ

ತೋರುತಿತ್ತು. ಮನಸ್ಸು ಛಿದ್ರವಿಛಿದ್ರವಾಗಿತ್ತು. ಆ ಬೀಸಿದ ತಂಗಾಳಿ ಅವನೆದೆಗೆ ತಂಪನ್ನೆರೆಯದೆ, ತನಿಗೆಂಡವನ್ನೇ ಕೆದರುತಿತ್ತು. ಅಲ್ಲಿ ಲಲಿತ ಹೂವಾಗಿ ಕಮರುತಿದ್ದಳು. ಬಳ್ಳಿಯೊಂದು ಬೇಯುತಿತ್ತು, ಬಿಸಿಗೆ. ಆ ಬಳ್ಳಿಯಾರು? ಅಗೋ ಅವರೇ ಬನಶಂಕರಮ್ಮ!

ಅಲ್ಲಿ ನಿಲ್ಲಲಾರದವನಾಗಿದ್ದ, ಶಂಕರ. ಒಳಕೋಣೆಗೆ ಹೋಗಿದ್ದ. ಅಲ್ಲಿ ತಲೆತುಂಬ ಹೊಸ ಸೀರೆಯನ್ನು ಹೊದ್ದುಕೊಂಡು, ಗೌರಿ ಮೂಲೆಯೊಂದರಲ್ಲಿ ಕುಳಿತಿದ್ದಳು. ಒಂದುಕಡೆ, ಹಲವು ಗಡಿಗೆಗಳಿಗೆ ಸುಣ್ಣ ಕೆಮ್ಮಣ್ಣು ಬಳಿದು ಜೋಡಿಸಿಟ್ಟಿದ್ದರು. ಅಲ್ಲಿಯೇ ಅಕ್ಕಿಯನ್ನು ಸಿಧಿ ಹೊಯ್ದಿದ್ದರು. ಎರಡು ದೀಪಗಳು ಉರಿಯುತಿದ್ದವು. ಗಾಳಿ ಸುಳಿದಾಗ ಹೊಯ್ದಾಡುತಿದ್ದವು. ಅಲ್ಲೊಂದು ಕಳಸ ಮಿನುಗುತಿತ್ತು. ಮದುವೆಯ 'ಮಣ್ಣಿನವಾಸನೆ' ಮೂಗಿಗೆ ಬಡಿಯುತಿತ್ತು. ಅಲ್ಲಿ ಕುಳಿತಿದ್ದಳು ತನ್ನ ಗೆಳತಿ! ಬಾಳ ಗೆಳತಿ. ಗಳಿಗೆಯೊಂದರ ಹಿಂದೆ ಬರಿಯ ಅಕ್ಕನಮಗಳಾಗಿದ್ದವಳು ಈಗ ಹೆಂಡತಿ! ತನ್ನ ಗೌರಿ! ತನ್ನ ಬಾಳ ಗೆಳತಿ! ಅಗೋ ಅಲ್ಲಿ ಕುಳಿತಿದ್ದಾಳೆ, ಮುಗ್ಧಹೆಣ್ಣು ಮುದ್ದೆಯಾಗಿ, ಮುಸುಗಿಕ್ಕಿ. ನನ್ನ ಎದೆಯ ತುಡಿತ ಅವಳಿಗೇನು ಗೊತ್ತು? ನನ್ನ ಪ್ರೇಮದ ಚರಿತೆ ಅವಳಿಗೇನು ಗೊತ್ತು? ಅವಳು ನನ್ನನ್ನು ಪ್ರೀತಿಸುತ್ತಾಳೆಯೆ? ಅದನ್ನು ಅವನರಿಯ. ಸುತ್ತಲೂ ನೋಡಿದ್ದ. ಯಾರೂ ಅಲ್ಲಿದ್ದಿರಲಿಲ್ಲ. ಹೋಗಿ ಮುಸುಗು ತೆಗೆದು ಕೇಳಲೇನು! 'ನನ್ನ ಮೇಲೆ ನಿನಗೆ ಪ್ರೇಮವಿದೆಯೆ?' ಎಂದು? ಏನೊಂದೂ ಅರಿಯದ ಹೆಣ್ಣು. ತನಿಗೆಂಡ!

ಶಂಕರನ ಹೆಜ್ಜೆ ಅಲ್ಲಿಯೇ ಅಲುಗಾಡುತಿತ್ತು. ಅವನ ಮನಸ್ಸು ತುಯ್ದಾಡುತಿತ್ತು. ಆ ಮುಂಚೆ ಸರಳವಾಗಿ ಮಾತನಾಡುತಿದ್ದ ಅವನಿಗೆ ಅಂದು ಗೌರಿಯೊಡನೆ ಆಡಬೇಕೆಂದರೆ ಏನೋ

ಅಡ್ಡಿಯಾಗುತ್ತಿತ್ತು. ಅದು ಏನೋ! ನಾಚಿಕೆಯೆ? ಛೇ ನಾಚಿಕೆಯಲ್ಲಿಯದು!

ಹೌದು ನನಗೆಲ್ಲಿಯದು ನಾಚಿಕೆ? ನನ್ನನ್ನೇ ನಂಬಿದ ತಾಯಿ ಹೊಸ ಹೆಂಡತಿಯನ್ನು ಬಿಟ್ಟು ಮುಂಜಾವಿನಲ್ಲಿ ಓಡಿಹೋಗಿದ್ದ ನನಗೆಲ್ಲಿಯ ನಾಚಿಕೆ! ಅಲ್ಲಿ ಮದುವೆಯ ಮನೆಯಲ್ಲಿ ಬೆಂಕಿಯನ್ನು ಚೆಲ್ಲಿ ಓಡಿಹೋಗಿದ್ದ, ಶಂಕರ. ದೂರ ದೂರ ಓಡಿಹೋಗಿದ್ದ. ಅಲ್ಲಿಂದ ಎಷ್ಟುದೂರ ಹೋಗಬಹುದೋ ಅಷ್ಟುದೂರ ಹೋಗಿದ್ದ. ರೈಲನ್ನೇರಿ ಮನಬಂದೆಡೆಗೆ ಹೋಗಿದ್ದ. ಕಾಲು ಕರೆದೊಯ್ದೆಡೆಗೆ ಹೋಗಿದ್ದ. ಆದರೆ ಮನಸ್ಸು ಕ್ಷುಬ್ಧವಾಗಿತ್ತು. ಗೌರಿಯನ್ನೇ ನೆನೆಯುತ್ತಿತ್ತು. ಪಾಪ. ಅವಳು ಮಾಡಿದ್ದ ತಪ್ಪೇನು? ತನ್ನ ತಾಯಿ, ತಂದೆ, ಅಜ್ಜಿ ಒಪ್ಪಿ ತನ್ನ ಮಾವನಿಗೆ ಧಾರೆಯೆರೆಯುತ್ತೇವೆಂದರೆ ಬೇಡವೆನ್ನುತ್ತಾಳೆಯೆ? ಆಕೆಯೇನು ಕಾಲೇಜು ಓದಿದವಳೆ? ಇಂಥವನನ್ನೇ ವರಿಸಬೇಕೆಂಬ ಇಷ್ಟ ಅವಳಿಗಿದ್ದಿತ್ತೆ? ಛೇ! ಎಲ್ಲಿಯದು! ಅವಳದು ಎಂಥ ಹೃದಯ! ಅಯ್ಯೋ ಗೌರಿಗೆ ನಾನು ದ್ರೋಹ ಬಗೆದೆನೆ? ಹಿಂದಿರುಗಿ ಹೋಗಲೆ? ಮುದಿತಾಯ ಹೃದಯ ಈಗ ಬೆಂಕಿಯಲ್ಲಿ ಬೇಯುತ್ತಿದ್ದಿರಬಹುದು. ನೆರೆದ ನೆಂಟರಿಗೆಲ್ಲ ಕಾತರ, ದುಃಖ, ವ್ಯಥೆ, ‘ಸಂತಸ’ ಆಗಿದ್ದಿರಬಹುದು. ಬೇಯುವ ತಾಯಿಯನ್ನು, ಹಿಂದಿರುಗಿ ಹೋಗಿ, ಎತ್ತಿ ಹೂವಿನ ಹಾಸುಗೆಯ ಮೇಲೆ ಮಲಗಿಸಲೆ?

ಆದರೆ ಅವನು ಹಾಗೆಯೇ ಸಾಗುತ್ತಿದ್ದ ದೂರ ದೂರ. ಅವನು ದೂರ ದೂರ ಸಾಗಿದಂತೆಲ್ಲಾ ಅವನ ಮನಸ್ಸು ಮನೆಯಲ್ಲೇ ಸುಳಿಯುತಿತ್ತು, ಸ್ಥಿರವಾಗಿ. ಅಲ್ಲಿ ಗೌರಿ ಮುಗ್ಧೆಯ ಮುದ್ದೆಯಾಗಿ ಕುಳಿತಿದ್ದಾಳೆ. ಅಗೋ ಅಲ್ಲಿ ಕುಳಿತಿದ್ದಾಳೆ! ಕುಳಿತಿದ್ದಾಳೆಯೆ?

ಇಲ್ಲ ನಿಂತಿದ್ದಾಳೆ, ತಲೆತಗ್ಗಿಸಿ, ಕೈಯಲ್ಲಿ ಕೈಚೀಲ ಹಿಡಿದು

ಕೊಂಡು. ಅವಳು ತನ್ನ ಪಾದವನ್ನೇ ನೋಡುತಿದ್ದಾಳೆ. ತಾಯಿ ಸಾಮಾನು ಇಳಿಸುತ್ತ ಮತ್ತೆ ಹೇಳಿದಳು.

"ಹೋಗು ಗೌರಾ ಒಳ್ಗೆ !"

ಗೌರಿ ತಗ್ಗಿದ ತಲೆಯನ್ನು ತಗ್ಗಿಸಿಯೇ ಶಂಕರನೆಡೆಗೆ ನಡೆದು ಬಂದಳು. ಶಂಕರ ಬಾಗಿಲಿನಲ್ಲಿಯೇ ನಿಂತುಕೊಂಡಿದ್ದ ಹಾಗೆಯೇ! ಕಡೆದ ಹಾಗೆಯೇ! ಒಂದೊಂದು ಹೆಜ್ಜೆಯನ್ನು ಭಾರವಾಗಿ ಎತ್ತಿಡುತ್ತ ಬರುತಿದ್ದಳು, ಗೌರಿ. ಬರಿಯ ಡ್ರಾಯರನ್ನೇ ತೊಟ್ಟಿದ್ದ ಶಂಕರ ಅರಿವಿಲ್ಲದೆಯೇ ನಿಂತುಕೊಂಡಿದ್ದ. ಆಕೆ ಬರುತಿದ್ದಾಳೆ. ಅವನ ಗೌರಿ ಅವನೆಡೆಗೆ ಬರುತಿದ್ದಾಳೆ. ಎಷ್ಟು ಮುದ್ದಾಗಿದ್ದಾಳೆ ಗೌರಿ! ತನ್ನ ಗೌರಿ! ಗೌರಾ!

ಗೌರಿ ಬಂದು ಸ್ವಲ್ಪಹೊತ್ತು ಬಾಗಿಲಲ್ಲಿ ನಿಂತಳು. ತಾಯಿ ಜಟಕಾ ಸಾಬಿಗೆ ಹಣ ಕೊಡುತ್ತ "ಸಂಜೆಗೆ ಬಾರೋ ೫ ಗಂಟೆಗೆ" ಎಂದು ಹೇಳುತ್ತಿದ್ದಳು. ಗೌರಿ ತಕ್ಷಣ ಶಂಕರನ ಪಾದಕ್ಕೆ ಹಣೆ ಇಟ್ಟಳು. ಚಂಗನೆ ಹಾರಬೇಕೆಂದಿದ್ದ ಶಂಕರನ ಮನಸ್ಸಿಗೆ ಅವನ ಪಾದ ತಾಳಹಾಕಲಿಲ್ಲ. ಗೌರಿಯ ಕಣ್ಣು ನೀರ ಕರೆಯುತಿತ್ತು. ಶಂಕರನ ಪಾದ ತೊಯ್ದು ಹೋಯ್ತು. ಅವನ ಕೈ ಅವನಿಗರಿವಿಲ್ಲದಂತೆಯೇ ಅವಳ ತಲೆಯ ಮುಟ್ಟಿತು. ಅವನ ದಿಟ್ಟಿ ಅವಳ ತಲೆಯ ಮೇಲಿತ್ತು. ಕಪ್ಪನೆಯ ಕೂದಲು ಮೃದುವಾಗಿ ನೀಳವಾಗಿದ್ದುವು. ತಲೆ ಎತ್ತಿದಾಗ ಎದುರು ನಿಂತ ತಾಯಿ ತೃಪ್ತಿಯಿಂದ ನಗುತ್ತಿದ್ದಳು.

ಶಂಕರ ಫಕ್ಕನೆ ಒಳನಡೆದು ಕೋಣೆಯೊಳಗೆ ಹೋಗಿ ಬಾಗಿಲಿಟ್ಟುಕೊಂಡ. ಅದನ್ನು ತಾಯಿ ಗಮನಿಸಲಿಲ್ಲ. ತನ್ನನ್ನು ನೋಡಿದ ಗೌರಿಯ ದೀನವದನವನ್ನು ಎದೆಯಲ್ಲಿ ಅಡಗಿಸಿಕೊಂಡು, "ದೇವರಿದ್ದಾನೆ; ಸುಮ್ಮನಿರವ್ವಾ !" ಎಂದಷ್ಟೇ ಹೇಳಿದಳು. ತನ್ನ ಕೋಣೆಗೆ ಕರೆದೊಯ್ದು ಗೌರಿಯನ್ನಲ್ಲಿ ಕುಳ್ಳಿರಿಸಿ, ಊರಿನಿಂದ

ತಂದ ಸಾಮಾನುಗಳನ್ನು ಜೋಡಿಸಲು ಆಚೆ ಹೋದಳು. ಅ
ಎರಡು ಕೋಣೆಗಳಲ್ಲಿ ಎರಡು ಹೃದಯಗಳು ಮಿಡಿಯುತ್ತಿದ್ದವು.

"ನಡಿ, ಅಡಿಗೆಮಾಡು. ನಾನು ತರಕಾರಿ ತರ್ತೀನೆ. ನೀರ
ಕಾಸು. ಶಂಕರು ತಲೆಗೆ ಎಣ್ಣೆ ಹಾಕ್ಕೊಳ್ಳಿ. ನೀನೂ ಎಣ್ಣೆ
ಹಾಕ್ಕೊಳ್ವಂತೆ" ಎಂದು ತಾಯಿ ಗೌರಿಯನ್ನು ಅಡುಗೆ ಮನೆಗ
ಕರೆದೊಯ್ದಳು. ಅಲ್ಲಿಯ ಪರಿಕರಗಳನ್ನು ತೋರಿಸಿದಳು. ಮೊನ್ನೆ
ರಾತ್ರಿ ಮಾಡಿಟ್ಟ ಅಡುಗೆ ಹಾಗೆಯೇ ತಂಗಳಾಗಿತ್ತು. ತಾಯಿಗೆ
ಅಚ್ಚರಿಯಾಯ್ತು. ಯಾಕೆ ಉಣ್ಣಲಿಲ್ಲ ? ಸಿಟ್ಟೆ ? ಉಪವಾಸ
ವಿದ್ದನೆ ?

ಧೂಳು ಅಲ್ಲೆಲ್ಲಾ ತುಂಬಿತ್ತು. ಹೋಗಿ ಶಂಕರನನ್ನು
ಹೀಗೇಕೆ ? ಎಂದು ಕೇಳಲೆ ? ಬೇಡವೆಂದು ಸುಮ್ಮನಾದಳು.

"ಕಸ ಒಡ್ದು ನೀರ್ ಚಿಮ್ಕ್ಸು. ನಾನಂಗೇ ನಾಗ್ವೇಣಿ
ಹತ್ರ ಹೋಗಿ ಬರ್ತೀನಿ" ಎಂದು ತಾಯಿ ಹೊರ ಹೊರಟಳು.
ಗೌರಿ ಹಾಗೆಯೇ ಸ್ವಲ್ಪ ಹೊತ್ತು ನಿಂತು, ಮೂಲೆಯಲ್ಲಿದ್ದ
ಪೊರಕೆಯನ್ನು ತೆಗೆದುಕೊಂಡು ಅಲ್ಲಲ್ಲಿಯ ಧೂಳು ಕೊಡವಿ,
ನೆಲವನ್ನು ಗುಡಿಸಿ, ಶಂಕರನ ಕೋಣೆಯ ಕಡೆ ಭಯದಿಂದ
ನೋಡಿದಳು.

—೦—

ಶೀಘ್ರದಲ್ಲಿಯೇ ಹೊರಬೀಳಲಿದೆ !

ಶ್ರೀ ಕೋ. ಚೆನ್ನಬಸಪ್ಪನವರ,

"ನೊಗದ ನೇಣು"

(ಕಾದಂಬರಿ)

—: ಮುಂದಿನ ಪ್ರಕಟಣೆಗಳು :—

"ಹೊತ್ತು ಮುಳುಗಿತು" – ಶ್ರೀ ಹಿರಿಯೂರು ಕೃಷ್ಣಮೂರ್ತಿ.
(ಕಾದಂಬರಿ)

? –ಶ್ರೀ ಬಸವರಾಜ ಕಟ್ಟೀಮನಿ.

"ಸುಳಿಗೆ ಸಿಕ್ಕ ಸಂಸಾರ" – "ತ್ರಿಮೂರ್ತಿಕೃಪಾ"
(ಕಾದಂಬರಿ)

ಪ್ರಕಾಶಕರು:

ಶ್ರೀ ಸಂಗಮೇಶ ಪ್ರಕಾಶನ, ಹರಿಹರ.